
ಜಿ. ನಾರಾಯಣ



ಅಭಿನಂದನ ಸಂಚಿಕೆ



ಜಿ. ನಾರಾಯಣ
ಅಭಿನಂದನ ಸಂಚಿಕೆ

ಸಂಪಾದಕ : ಗೊ. ರು. ಚನ್ನಬಸಪ್ಪ

G. NARAYANA ABHINANDANA SANCHIKE—Brought out on the occasion of the felicitation of Sri G. Narayana. Ex-President of Kannada Sahithya Parishat, Bangalore on 26th October 1984. Edited by Go. Ru. Channa Basappa.

Pages : 34+104+16

ಮುಖಪುಟ ವಿನ್ಯಾಸ: **ಕಮಲೇಶ್,** ಬೆಂಗಳೂರು

ಪಡಿಯಚ್ಚುಗಳು: **ಡಂಕಣ ಬ್ಲಾಕ್ಸ್,** ಬೆಂಗಳೂರು

ಬೆಲೆ : ೫ ರೂ.

Printed at :

S. J. M. Mudrana (P) Limited
6/3, 8th Main Road
Sampangiramanagar
Bangalore-560 027
Phone : 226469



ಪ್ರಸಿದ್ಧ ವ್ಯಂಗ್ಯಚಿತ್ರಕಾರ ಶ್ರೀ ಆರ್. ಮೂರ್ತಿ ಅವರ ದೃಷ್ಟಿಯಲ್ಲಿ ಜಿ. ನಾರಾಯಣ

ಬಿನ್ನಹ

ಇಂತಹ ಸಂದರ್ಭ ಸಂಚಿಕೆಗಳನ್ನು ಹೊರತರುವ ಹೊಣೆ ನನ್ನ ಮೇಲೆ ಆಗಿಂದಾಗ ಬೀಳುವುದು ನಿಜ. ಆದರೆ ಶ್ರೀ ಜಿ. ನಾರಾಯಣ ಅವರಂತಹ, ಹತ್ತು ಜನಕ್ಕೆ ಬೇಕಾದ ವ್ಯಕ್ತಿಯ, ಅಭಿನಂದನ ಸಂಚಿಕೆಯ ಹೊಣೆ ಹೊರುವುದು ಅಭಿಮಾನದ ವಿಷಯ. ಅಭಿನಂದನ ಸಮಿತಿಯ ಪದಾಧಿಕಾರಿಗಳು, ಶ್ರೀ ನಾರಾಯಣ ಅವರ ಬಗೆಗೆ ನನಗಿರುವ ವಿಶ್ವಾಸದ ಅಭಿವ್ಯಕ್ತಿಗೆ ಒಂದು ಅವಕಾಶ ಕಲ್ಪಿಸಿಕೊಟ್ಟಿದ್ದಾರೆಂದು ನಾನು ಭಾವಿಸಿದ್ದೇನೆ.

ಜಿ. ನಾರಾಯಣ ಅವರನ್ನು ಕುರಿತು ನಾಲ್ಕು ಮಾತು ಬರೆದು ಕಳುಹಿಸಬೇಕೆಂಬ ನನ್ನ ಮನವಿಯನ್ನು ಬಹುತೇಕ ಲೇಖಕರು ಮನ್ನಿಸಿದ್ದಾರೆ. ಅವರಿಗೆ ನಾನು ಋಣಿಯಾಗಿದ್ದೇನೆ. ಸುಮಾರು ನಾಲ್ಕೈದು ತಿಂಗಳಷ್ಟು ಹಿಂದೆಯೇ ನಡೆಯಬೇಕಾಗಿದ್ದ ಅಭಿನಂದನ ಸಮಾರಂಭ ಅನಿವಾರ್ಯ ಕಾರಣಗಳಿಂದ ಮುಂದೂಡಲ್ಪಟ್ಟು ಈಗ ನಡೆಯುತ್ತಿದೆ.

ಸಮಾರಂಭವೂ ಅಷ್ಟೆ ; ನಾರಾಯಣ ಅವರ ಸ್ವಭಾವಕ್ಕೆ ತಕ್ಕಂತೆ ಸದ್ದು ಗದ್ದಲವಿಲ್ಲದ ಸಿದ್ಧತೆಯಿಂದ ನಡೆಯುತ್ತಿದೆ. ಈ ಸಮಾರಂಭಕ್ಕೆ ನಾರಾಯಣ ಅವರನ್ನು ಒಪ್ಪಿಸಲೇ ತಿಂಗಳುಗಟ್ಟಲೆ ಆಯಿತೆಂದು ಹೇಳಬಹುದು. ಇಂದಿನ ಪರಿಸರದಲ್ಲಿ ಇಂತಹ ವ್ಯಕ್ತಿಗಳು ನಿಜಕ್ಕೂ ಅಪರೂಪ.

ನಾರಾಯಣ ಅವರ ಆತ್ಮೀಯ ಅಭಿಮಾನಿಗಳು ಈ ಅಭಿನಂದನ ಸಂಚಿಕೆಗೆ ಹೃದಯ ತುಂಬಿ ಬರೆದಿದ್ದಾರೆ. ಅವರವರು ಕಂಡಂತೆ ನಾರಾಯಣ ಅವರ ನಡೆ-ನುಡಿಗಳನ್ನು ಬಣ್ಣಿಸಿದ್ದಾರೆ. ಇದಾವುದಕ್ಕೂ ಹಿಗ್ಗಿ-ಕುಗ್ಗುವ ವ್ಯಕ್ತಿಯಲ್ಲ ಜಿ. ನಾರಾಯಣ. ಹೊಗಳಿಕೆಯೆಂದರೆ ಅವರಿಗೆ ತುಸು ಮುಜಗರವೇ.

ಈ ಅಭಿನಂದನ ಸಂಚಿಕೆಯ ಹೂರಣ ಜಿ. ನಾರಾಯಣ ಅವರ ಕೇವಲ ಹೊಗಳಿಕೆಯೇನಲ್ಲ ; ವಸ್ತುಸ್ಥಿತಿಯ ಸಹಜ ಹಾಗೂ ಸ್ವಾರಸ್ಯಕರ ನಿರೂಪಣೆಯನ್ನು ಎಲ್ಲರ ಬರಹಗಳಲ್ಲೂ ಕಾಣಬಹುದು. ವಾಸ್ತವವಾಗಿ, ನಾರಾಯಣ ಅವರ ಬಗೆಗೆ ಯಾರು ಎಷ್ಟು ಬರೆದರೂ ಸಾಲದು. ಅವರ ಒಂದು ವಿಶಿಷ್ಟ ಗುಣಸಂಪನ್ನತೆ ಎಂದರೆ ನೆಲದ ಮೇಲೆ ನಿಂತೇ ಎತ್ತರವನ್ನು ಮುಟ್ಟುವ, ಎತ್ತರವನ್ನು ಮುಟ್ಟಿದಾಗಲೂ ನೆಲವನ್ನು ಮರೆಯದ ಸಾಹಸ-ಸಜ್ಜನಿಕೆ. ಹಾಗಾಗಿ ಅವರು ಎಲ್ಲರಿಗೂ ಸೇರಿದವರು.

ಲೇಖನಗಳು ಕೈಸೇರಿ ತಿಂಗಳುಗಟ್ಟಲೆ ಆದರೂ ಮುದ್ರಣ ಆರಂಭವಾದದ್ದು ಸಮಾರಂಭಕ್ಕೆ ಐದು ದಿನ ಇದ್ದಾಗ. ಹೇಗೋ ವಿಳಂಬವಾಗೇ ಹೋಯಿತು. ಆದರೂ ಸಕಾಲಕ್ಕೆ ಹೊರತರಲು ಸಾಧ್ಯವಾದುದೊಂದು ಸಮಾಧಾನದ ಸಂಗತಿ. ಅವಸರದಲ್ಲಾದರೂ ಅಚ್ಚುಕಟ್ಟಾಗಿ ಮುದ್ರಿಸಿಕೊಟ್ಟ ಎಸ್. ಜೆ. ಎಂ. ಮುದ್ರಣದ ನಿರ್ವಾಹಕ ನಿರ್ದೇಶಕ ಶ್ರೀ ಬಿ. ಬಸವಯ್ಯನವರನ್ನು ವಂದಿಸುತ್ತೇನೆ.

ಭಾವಚಿತ್ರಗಳು ಹಾಗೂ ಲೇಖನಗಳ ಸಂಗ್ರಹದಲ್ಲಿ ನೆರವಾದ ಶ್ರೀ ಜಿ. ಕೆ. ಗುಂಡೂರಾವ್, ವಿಶೇಷವಾಗಿ ಆರ್. ಹೆಚ್. ರಾಜು ಅವರನ್ನು ನೆನೆಯುತ್ತೇನೆ. ಮುಖಪುಟ ವಿನ್ಯಾಸ ಆತ್ಮೀಯ ಶ್ರೀ ಕಮಲೇಶ್ ಅವರದ್ದು. ಅವರಿಗೂ ವಂದನೆಗಳು.

ಜಾಹಿರಾತುಗಳನ್ನು ನೀಡಿದ ಸರ್ಕಾರೀ ಇಲಾಖೆಗಳು, ಸಾರ್ವಜನಿಕ ಮತ್ತು ಖಾಸಗಿ ಉದ್ಯಮಿಗಳಿಗೂ ಹೃತ್ಪೂರ್ವಕ ವಂದನೆಗಳು.

ಗೊ. ರು. ಚನ್ನಬಸಪ್ಪ
ಸಂಪಾದಕ

ಶ್ರೀ ಜಿ. ನಾರಾಯಣ ಅಭಿನಂದನ ಸಮಾರಂಭ

ದಿನಾಂಕ : 26-10-1984 ಶುಕ್ರವಾರ ಸಂಜೆ 6 ಘಂಟೆಗೆ

ಸ್ಥಳ : **ಶ್ರೀ ಚಂದ್ರಶೇಖರ ಭಾರತಿ ಕಲ್ಯಾಣ ಮಂದಿರ**
ಪಂಪಮಹಾಕವಿ ರಸ್ತೆ, ಶಂಕರಪುರಂ, ಬೆಂಗಳೂರು-560 004

ಅಧ್ಯಕ್ಷತೆ	:	**ಡಾ॥ ಬಸಪ್ಪ ದಾನಪ್ಪ ಜತ್ತಿ**
" ಜಿ. ನಾರಾಯಣ ವಿಚಾರ " ಗ್ರಂಥ ಬಿಡುಗಡೆ	:	**ಡಾ॥ ರಂ. ಶ್ರೀ. ಮುಗಳಿ**
" ಜಿ. ನಾರಾಯಣ ಅಭಿನಂದನ ಸಂಚಿಕೆ " ಬಿಡುಗಡೆ	:	**ಪ್ರೊ॥ ಎಲ್. ಎಸ್. ಶೇಷಗಿರಿರಾವ್**
ಅಭಿನಂದನ ಭಾಷಣ	:	**ಡಾ॥ ಹಾ. ಮಾ. ನಾಯಕ**
		ಡಾ॥ ಸಿದ್ಧಯ್ಯ ಪುರಾಣಿಕ
		ಶ್ರೀಮತಿ ಟಿ. ಸುನಂದಮ್ಮ

ಶ್ರೀ ಜಿ. ನಾರಾಯಣ ಅಭಿನಂದನ ಸಮಿತಿ

ಅಧ್ಯಕ್ಷರು :
ವಿ. ಎಸ್. ಕೃಷ್ಣಯ್ಯರ್

ಕಾರ್ಯಾಧ್ಯಕ್ಷರು :
ಎಚ್. ಬಿ. ಜ್ವಾಲನಯ್ಯ
ಹಿ. ಮ. ನಾಗಯ್ಯ
ಹೊ. ಶ್ರೀನಿವಾಸಯ್ಯ

ಕಾರ್ಯದರ್ಶಿಗಳು :
ಆರ್. ಎಚ್. ರಾಜು
ಜಿ. ಕೆ. ಗುಂಡೂರಾವ್
ಎಂ. ನರಸಿಂಹ
ಎಚ್. ಎಸ್. ಪಾರ್ವತಿ

ಕೋಶಾಧ್ಯಕ್ಷರು :
ಕೆ. ಟಿ. ಬನಶಂಕರಮ್ಮ

ಸಮಿತಿ ಸದಸ್ಯರು :
ಗೊ. ರು. ಚನ್ನಬಸಪ್ಪ
ಎನ್. ಎಸ್. ರಾಮಪ್ರಸಾದ್
ಆರ್. ಎಸ್. ರಾಮರಾವ್
ರಾಮೇಗೌಡ
ಎನ್. ರಾಜಶೇಖರಯ್ಯ
ಅನಂತಪದ್ಮನಾಭರಾವ್
ಎನ್. ನಂಜಪ್ಪ
ಎಚ್. ಪಿ. ನರಸಿಂಹಮೂರ್ತಿ

ಅಭಿನಂದನೆ

ಸವಿ ನೆನಪು

ಜಿ. ನಾರಾಯಣ ಬದುಕಿನ ಬಳ್ಳಿ

1923 ಜನನ; ಮಂಡ್ಯ ಜಿಲ್ಲಾ ಮದ್ದೂರು ತಾಲ್ಲೂಕು ದೇಶಹಳ್ಳಿಯಲ್ಲಿ.

1929 ದೇಶಹಳ್ಳಿಯ ಪ್ರಾಥಮಿಕ ಶಾಲಾ ಪ್ರವೇಶ.

1933 ಮದ್ದೂರಿನಲ್ಲಿ ಮಾಧ್ಯಮಿಕ ಶಾಲಾ ಪ್ರವೇಶ.

1937 ಚನ್ನಪಟ್ಟಣದಲ್ಲಿ ಪ್ರೌಢಶಾಲಾ ಪ್ರವೇಶ.

1938 ಶಿವಪುರದಲ್ಲಿ ಕಾಂಗ್ರೆಸ್ ಅಧಿವೇಶನ; ಟಿ. ಸಿದ್ಧಲಿಂಗಯ್ಯನವರು ಮತ್ತು ಹೆಚ್. ಕೆ. ವೀರಣ್ಣಗೌಡರ ಪರಿಚಯ.

1940 ಪ್ರೌಢಶಾಲಾ ಶಿಕ್ಷಣಕ್ಕೆ ವಿದಾಯ.

1942 ಬೆಳಗಾವಿ ಜಿಲ್ಲಾ ಹುದಲಿಯಲ್ಲಿರುವ ಜಮನಾಲಾಲ್ ಖಾದಿವಿದ್ಯಾಲಯ ಪ್ರವೇಶ; 'ಕ್ವಿಟ್ ಇಂಡಿಯಾ' ಚಳುವಳಿಯಲ್ಲಿ ಪಾಲು; ಪೋಲೀಸರಿಂದ ಬಂಧನ; ಬೆಳಗಾಂ ಜೈಲಿನಲ್ಲಿ 3 ತಿಂಗಳ ಕಠಿನ ಶಿಕ್ಷೆ ಅನುಭವ.

1943 ಹುಟ್ಟೂರಿಗೆ ಮರುಪಯಣ; ಊರಿನಲ್ಲಿ ವಯಸ್ಕರ ಶಿಕ್ಷಣ ತರಗತಿ ಆರಂಭ; "ಅಕ್ಷರವ ನೀವ್ ಕಲಿಯಿರಿ" ಮತ್ತಿತರ ಪ್ರಚಾರ ಕೃತಿಗಳ ರಚನೆ.

1944 ಮುಂಬಯಿ ಬಿರ್ಲಾ ಭವನದಲ್ಲಿ ಮಹಾತ್ಮ ಗಾಂಧೀಜಿ ದರ್ಶನ; ಅವರ ವಿಚಾರ ಧಾರೆಯಿಂದ ಪೂರ್ಣ ಪ್ರಭಾವ.

1946 ಮೈಸೂರು ಪ್ರದೇಶ ಕಾಂಗ್ರೆಸ್ ಕಾರ್ಯಾಲಯಕ್ಕೆ ಪ್ರವೇಶ; ನಾಡಿನ ಪ್ರಮುಖ ರಾಜಕೀಯ ಮುಖಂಡರ ಪರಿಚಯ.

1947 'ವಾರ್ತಾ' ಪತ್ರಿಕೆ ಮತ್ತು ಮುದ್ರಣಾಲಯ ವ್ಯವಸ್ಥಾಪಕ ಹುದ್ದೆ.

1949 'ಚಿತ್ರಗುಪ್ತ' ಪತ್ರಿಕೆಯ ವ್ಯವಸ್ಥಾಪಕ ಹುದ್ದೆ.

1950 'ಸ್ವತಂತ್ರ ಮುದ್ರಣಾಲಯ'ದ ಸ್ಥಾಪನೆ.

1951 "ವಿನೋದ" ಮಾಸ ಪತ್ರಿಕೆಯ ಪ್ರಾರಂಭ; ಕರ್ನಾಟಕದ ನಾನಾ ಭಾಗದ ಅನೇಕ ಸಾಹಿತಿಗಳ ಸಂಪರ್ಕ.

1956 ದಾಂಪತ್ಯ ಜೀವನದ ದೀಕ್ಷೆ; ಸಂಗಾತಿ ಶ್ರೀಮತಿ ಯಶೋದಮ್ಮ ಅವರೊಂದಿಗೆ ಹೊಸ ಜೀವನದ ಆರಂಭ.

1957 ಮೊದಲ ಬಾರಿಗೆ ಬೆಂಗಳೂರು ನಗರ ಸಭೆಯ ಸದಸ್ಯರಾಗಿ ಚಾಮರಾಜಪೇಟೆ ಕ್ಷೇತ್ರದಿಂದ ಆಯ್ಕೆ; ಆರೋಗ್ಯ ಸಮಿತಿ ಅಧ್ಯಕ್ಷತೆ.

1958 'ಶಶಿಕಲಾವಿದರು' ಸಾಂಸ್ಕೃತಿಕ ಸಂಸ್ಥೆಯ ಅಧ್ಯಕ್ಷತೆ.

1960 ಎರಡನೆಯ ಬಾರಿಗೆ ಬೆಂಗಳೂರು ನಗರ ಸಭೆಗೆ ಅದೇ ಕ್ಷೇತ್ರದಿಂದ ಆಯ್ಕೆ; ಕಾಮಗಾರಿ ಸಮಿತಿ ಅಧ್ಯಕ್ಷತೆ; ಮೈಸೂರು ಹಿಂದಿ ಪ್ರಚಾರ ಪರಿಷತ್ತಿನ ಕಾರ್ಯದರ್ಶಿತ್ವ.

1964 ಬೆಂಗಳೂರು ನಗರ ಸಭೆಯ ಮೇಯರ್ ಸ್ಥಾನದ ಗೌರವ; ರಸ್ತೆಗಳ ಸಮೀಕ್ಷೆ—ಸುಧಾರಣೆ; 'ಕಾಮುಗಾರಿ ಕಾರ್ಯಕ್ರಮ' ಜಾರಿ; ಕಾವೇರಿ ನೀರು ಸರಬರಾಜು ಯೋಜನೆಗೆ ವ್ಯವಸ್ಥೆ; ಕೆಂಪೇಗೌಡ ಪ್ರತಿಮೆ ಸ್ಥಾಪನೆ; ಗಣ್ಯರಿಗೆ ಸತ್ಕಾರ-ಸನ್ಮಾನ; ನಗರಾಭಿವೃದ್ಧಿಗೆ ಬೃಹತ್ ಯೋಜನೆ ರಚನೆ.

1965 'ಶ್ರೀಮದ್ರಾಮಾಯಣ ಮಹಾಭಾರತಾದಿ ಪ್ರಕಟನಾ ಸಮಿತಿ' ಕಾರ್ಯದರ್ಶಿತ್ವ; 'ಶಾರದಾ ವಿದ್ಯಾಪೀಠ'ದ ಸ್ಥಾಪನೆ; 'ವಿನೋದ'ದ 15ನೆಯ ವಾರ್ಷಿಕೋತ್ಸವ.

1967 ಕನ್ನಡ ರಾಜ್ಯೋತ್ಸವ ಆಚರಣೆಗೆ ಹೊಸ ರೂಪು—'ಕನ್ನಡ ರಾಜ್ಯೋತ್ಸವ ಸಾಹಿತ್ಯ ಪ್ರಚಾರ ಸಮಿತಿ' ರಚನೆ; ಸಮಿತಿಯ ಕಾರ್ಯಾಧ್ಯಕ್ಷತೆ.

1969 ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷತೆ; ಪರಿಷತ್ತಿನ ತ್ರೈವಾರ್ಷಿಕ ಯೋಜನೆಯ ಸಿದ್ಧತೆ.

1970 ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಸಮಿತಿಗಳ ರಚನೆ; ಪರಿಷತ್ತಿನ ಸುವರ್ಣ

ಮಹೋತ್ಸವ ಆಚರಣೆ; ನಲವತ್ತೇಳನೆಯ ಕನ್ನಡ ಸಾಹಿತ್ಯ ಸಮ್ಮೇಳನ.

1971 ಜಿಲ್ಲಾ ಸಾಹಿತ್ಯ ಸಮ್ಮೇಳನಗಳ ವರ್ಷ; ರಾಷ್ಟ್ರದ ರಕ್ಷಣಾನಿಧಿಗಾಗಿ ಪರಿಷತ್ತಿನಿಂದ ನಿಧಿ ಸಂಗ್ರಹ-ಕಾಣಿಕೆ ಸಲ್ಲಿಕೆ.

1972 ಪ್ರಥಮ ಬಾರಿಗೆ ಅಖಿಲ ಕರ್ನಾಟಕ ಗಮಕ ಸಮ್ಮೇಳನ; ಗಡಿನಾಡು ಕನ್ನಡಿಗರ ಸಮ್ಮೇಳನ; ಕೀರ್ತನಕಾರರ ಸಮ್ಮೇಳನ; ರಾಜ್ಯಕ್ಕೆ 'ಕರ್ನಾಟಕ' ನಾಮಕರಣವಾದ ವರ್ಷ; 'ಅಂತರ ರಾಷ್ಟ್ರೀಯ ಪುಸ್ತಕ ವರ್ಷಾ'ಚರಣೆ.

1973 ಮುಂಬೈ ಕನ್ನಡಿಗರ ಸಮ್ಮೇಳನ; ಅಖಿಲ ಕರ್ನಾಟಕ ನಾಟಕ ಸಮ್ಮೇಳನ-ಸ್ಪರ್ಧೆಗಳು; ಪ್ರಾಚೀನ ಕಾವ್ಯಗಳ ಕನ್ನಡಾನುವಾದ ಕಾರ್ಯಾರಂಭ; ಪುಸ್ತಕದಾನ ಚಳುವಳಿ ಆರಂಭ; ಪರಿಷತ್ತಿನ ಸುವರ್ಣ ಮಹೋತ್ಸವ ಕಟ್ಟಡದ ಪ್ರಾರಂಭೋತ್ಸವ; ಪರಿಷತ್ತಿನ ಪಂಚವಾರ್ಷಿಕ ಯೋಜನೆ ರಚನೆ.

1974 ಪ್ರಥಮ ಬಾರಿಗೆ ಮಹಿಳಾ ಸಾಹಿತಿ (ಶ್ರೀಮತಿ ಜಯದೇವಿತಾಯಿ ಲಿಗಾಡೆ) ಅಧ್ಯಕ್ಷತೆಯಲ್ಲಿ, ಮಂಡ್ಯದಲ್ಲಿ 48ನೆಯ ಕನ್ನಡ ಸಾಹಿತ್ಯ ಸಮ್ಮೇಳನ; ಪರಿಷತ್ತಿನಲ್ಲಿ ಸ್ಥಿರಪುಸ್ತಕ ಪ್ರದರ್ಶನ; ಸಾಂಸ್ಕೃತಿಕ ಮತ್ತು ವಸ್ತುಸಂಗ್ರಹಾಲಯ ಸ್ಥಾಪನೆ.

1975 ಪರಿಷತ್ತಿನ ಕಾರ್ಯಚಟುವಟಿಕೆಗಳ ಸಾಕ್ಷ್ಯಚಿತ್ರೀಕರಣ ಆರಂಭ; ಅಂತರ ರಾಷ್ಟ್ರೀಯ ಮಹಿಳಾ ವರ್ಷಾಚರಣೆ; ಲೇಖಕಿಯರ ಕೃತಿಗಳ ವಿಶೇಷ ಪ್ರಕಟಣೆ; 'ವಿನೋದ'ದ ರಜತ ಮಹೋತ್ಸವ.

1976 ಶಾಸನ ಶಾಸ್ತ್ರ ತರಗತಿಗಳ ಆರಂಭ; ಕನ್ನಡ ನಿಘಂಟಿನ ಎರಡನೆಯ ಸಂಪುಟ ಬಿಡುಗಡೆ; ಲೇಖಕಿಯರ ಶಿಬಿರ; ಜಿಲ್ಲಾ ಹಾಗೂ ರಾಜ್ಯ ಮಟ್ಟದ ಜಾನಪದ ಕಲಾ ಮಹೋತ್ಸವಗಳು; ಶಿವಮೊಗ್ಗದಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ.

1977 ಪರಿಷತ್ತಿನ ವಜ್ರಮಹೋತ್ಸವ ಆಚರಣೆ; ವಜ್ರಮಹೋತ್ಸವ ನೆನಪಿನ ಕಟ್ಟಡದ ಶಂಕುಸ್ಥಾಪನೆ; ಜ್ಞಾನಪೀಠ ಪ್ರಶಸ್ತಿ ವಿಜೇತರಿಗೆ ಸನ್ಮಾನ; 'ಕನ್ನಡ ಸಾಹಿತ್ಯ ಪರಿಷತ್ತು' 'ಕರ್ನಾಟಕ ಜನಪದ ಕಲೆಗಳು' ಸಾಕ್ಷ್ಯಚಿತ್ರಗಳ ಬಿಡುಗಡೆ.

1978 ದೆಹಲಿಯಲ್ಲಿ 50ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ಪರಿಷತ್ತಿನ ಅಧ್ಯಕ್ಷತೆಯಿಂದ ನಿವೃತ್ತಿ.


1980 ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡಮಿ ಸದಸ್ಯತ್ವ.


1982 ಕರ್ನಾಟಕ ಜಾಗೃತಿ ಪರಿಷತ್ ಸ್ಥಾಪನೆ; ಅಧ್ಯಕ್ಷತೆ.

1883 ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡಮಿಗೆ ಮರು ನಾಮಕರಣ; ಕಳೆದ ಹತ್ತಾರು ವರ್ಷಗಳಿಂದ ಸರ್ಕಾರದ ಅನೇಕ ಸಮಿತಿಗಳಲ್ಲಿ ಸದಸ್ಯತ್ವ; ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಗೆ ಸಂಬಂಧಿಸಿದ ಅನೇಕ ಸಂಘ ಸಂಸ್ಥೆಗಳ ಪದಾಧಿಕಾರ ಸ್ಥಾನ; ಕನ್ನಡ ನುಡಿ-ನಡೆಗಳ ರಕ್ಷಣೆಗಾಗಿ ನಡೆಯುವ ಚಳುವಳಿಗಳಲ್ಲಿ ಕ್ರಿಯಾತ್ಮಕ ಪಾಲು.

ಸಂಗ್ರಹ: ಗೊ. ರು. ಚ

ಶ್ರೀಮತಿ ಯಶೋದಮ್ಮ ನಾರಾಯಣ - ಶ್ರೀ ಜಿ. ನಾರಾಯಣ






ಶ್ರೀ ಜಿ. ನಾರಾಯಣ ಅವರ ತಂದೆ
ಶ್ರೀ ಗಿರಿಗೌಡ




ಶ್ರೀ ಜಿ. ನಾರಾಯಣ ಅವರ ತಾಯಿ
ಶ್ರೀಮತಿ ಸಣ್ಣಮ್ಮ




ಸಕುಟುಂಬ: ಕುಳಿತಿರುವವರು - ಮಗಳು ಶ್ರೀಮತಿ ಎಸ್. ಸುಜಾತ (ಮೊಮ್ಮಗಳು ಧರ್ಮಶ್ರೀಯೊಡನೆ), ಪತ್ನಿ ಶ್ರೀಮತಿ ಯಶೋದಮ್ಮ, ಶ್ರೀ ಜಿ. ನಾರಾಯಣ, ಅಳಿಯ ಶ್ರೀ ಎಂ. ವಿ. ಶ್ರೀಧರ್. ನಿಂತಿರುವವರು - ಮೊದಲ ಮಗ ಚಿ|| ಎಸ್. ರಾಘವೇಂದ್ರ, ಎರಡನೆಯ ಮಗ ಚಿ|| ಎಸ್. ಜಗದೀಶ ಮತ್ತು ಕೊನೆಯ ಮಗ ಚಿ|| ಎಸ್. ಗೋಪಾಲಕೃಷ್ಣ




ಜಿ. ನಾರಾಯಣ
ಗೃಹಕಾರ್ಯಾಲಯದಲ್ಲಿ



ಜಿ. ನಾರಾಯಣ
ನಗರ ಪಾಲಿಕೆ ಕಾರ್ಯಾಲಯದಲ್ಲಿ




ಜಿ. ನಾರಾಯಣ
ಕನ್ನಡ ಸಾಹಿತ್ಯ ಪರಿಷತ್ತಿನ
ಕಾರ್ಯಾಲಯದಲ್ಲಿ



ಶ್ರೀ ವೀರಣ್ಣಗೌಡ
ಅವರೊಡನೆ

ಬೆಂಗಳೂರು ನಗರಸಭಾ ಸದಸ್ಯರಾಗಿದ್ದಾಗ ತ್ರೈಮಾಸಿಕ ಜನಸಂಪರ್ಕ ಸಭೆ





ಬೆಂಗಳೂರು ನಗರ ಪಾಲಿಕೆಯ ಮೇಯರ್ ಆಗಿ ಆಯ್ಕೆಗೊಂಡಾಗ ಹಿಂದಿನ ಮೇಯರ್ ಶ್ರೀ ಕೆ. ಎಂ. ನಂಜಪ್ಪ ಅವರಿಂದ ಅಭಿನಂದನೆ



ಮೇಯರ್ ಆದ ಸಂದರ್ಭದಲ್ಲಿ ಮುಖ್ಯ ಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರಿಂದ ಅಭಿನಂದನೆ; ಜೊತೆಯಲ್ಲಿ ಉಪಮೇಯರ್ ಶ್ರೀ ಎಸ್. ಸುಂದರರಾಜ್



ಬೆಂಗಳೂರು ನಗರಕ್ಕೆ ಕಾವೇರಿ ನೀರು ಸರಬ ರಾಜು ಯೋಜನೆಯ ಪ್ರಥಮ ಹಂತಕ್ಕೆ ಶಂಕುಸ್ಥಾಪನೆ - ಕೇಂದ್ರ ಸಚಿವ ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿ ಅವರಿಂದ. ಜೊತೆಯಲ್ಲಿ ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲ ಮತ್ತು ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷ ಶ್ರೀ ಕಾಮರಾಜ ನಾಡಾರ್



ಬೆಂಗಳೂರು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಉದ್ಘಾಟನಾ ಸಮಾ ರಂಭದಲ್ಲಿ ಮೇಯರ್ ಅವರಿಂದ ಸ್ವಾಗತ ಭಾಷಣ



ಬೆಂಗಳೂರು ಮಹಾ ನಗರಪಾಲಿಕೆಯ ಕೇಂದ್ರ ಕಾರ್ಯಾಲಯದ ಮುಂದಿರುವ ಕೆಂಪೇಗೌಡ ಪ್ರತಿಮೆಯ ಮಾದರಿಯ ಪರಿಶೀಲನೆ.




ಬೆಂಗಳೂರು ನಗರ ಮಹಾನಗರ ಪಾಲಿಕೆ ಕಾರ್ಯಾಲಯದ ಮುಂದೆ ಕೆಂಪೇಗೌಡ ಪ್ರತಿಮೆ ಸ್ಥಾಪನೆ ಸಂದರ್ಭ — ಶ್ರೀಮನ್ಮಹಾರಾಜ ಜಯಚಾಮರಾಜ ಒಡೆಯರ್ ಅವರಿಂದ ಜನತೆಯ ಜಯಘೋಷ ಸ್ವೀಕಾರ.




ಮೈಸೂರು ಶ್ರೀಮನ್ಮಹಾರಾಜ ಶ್ರೀ ಜಯಚಾಮರಾಜ ಒಡೆಯರ್ ಅವರೊಂದಿಗೆ



ಬೆಂಗಳೂರು ನಗರಕ್ಕೆ ನೀರು ಸರಬರಾಜು ವ್ಯವಸ್ಥೆಯನ್ನು ಜಲಮಂಡಳಿ ಅಧ್ಯಕ್ಷರಾದ ಶ್ರೀ ಕೆ. ನಾರಾಯಣಸ್ವಾಮಿ ಅವರಿಗೆ ವಹಿಸಿಕೊಟ್ಟಾಗ.




ಬೆಂಗಳೂರು ನಗರದ ಶ್ರೀರಾಂಪುರ ನಾಗಪ್ಪ ಪಾರ್ಕಿನಲ್ಲಿ ನಾಟಕ ರತ್ನ ಶ್ರೀ ಗುಬ್ಬಿವೀರಣ್ಣ ಅವರಿಂದ ಮಹಮದ್ ಪೀರ್ ಬಯಲು ರಂಗಮಂಟಪದ ಉದ್ಘಾಟನೆ. ಜೊತೆಯಲ್ಲಿ ನಗರಸಭಾ ಸದಸ್ಯ ಶ್ರೀ ಜಿ. ದೇವಯ್ಯ.




ಕನ್ನಡ ಸಾಹಿತ್ಯ ಪರಿಷತ್ತಿನ ಸುವರ್ಣ ಮಹೋತ್ಸವ ಕಟ್ಟಡದ ಶಂಕುಸ್ಥಾಪನೆ— ಮುಖ್ಯಮಂತ್ರಿ ಶ್ರೀ ವೀರೇಂದ್ರಪಾಟೀಲ ಅವರು ನೆರವೇರಿಸಿದಾಗ.



ಬೆಂಗಳೂರು ಮಹಾನಗರ ಪಾಲಿಕೆ ಲೋಕ ನಾಯಕ ಶ್ರೀ ಜಯಪ್ರಕಾಶ್‌ನಾರಾಯಣ್ ಅವರನ್ನು ಸತ್ಕರಿಸಿದಾಗ. ಜೊತೆಯಲ್ಲಿ ಶ್ರೀ ಕೆ. ಹನುಮಂತಯ್ಯ ಅವರು.




ಕನ್ನಡ ಸಾಹಿತ್ಯ ಪರಿಷತ್ತಿನ ಸುವರ್ಣ ಮಹೋತ್ಸವದಲ್ಲಿ ಪರಿಷತ್ತಿನ ಅಧ್ಯಕ್ಷರಿಂದ ಸ್ವಾಗತ ಭಾಷಣ.



ಕನ್ನಡ ಸಾಹಿತ್ಯ ಪರಿಷತ್ತಿನ ಸುವರ್ಣ ಮಹೋತ್ಸವ ಸಂದರ್ಭದಲ್ಲಿ ರಾಜ್ಯದ ಅರ್ಥಸಚಿವ ಶ್ರೀ ರಾಮಕೃಷ್ಣ ಹೆಗಡೆ ಅವರಿಂದ ಕನ್ನಡ-ಕನ್ನಡ ನಿಘಂಟಿನ ಬಿಡುಗಡೆ. ವೇದಿಕೆಯಲ್ಲಿ ಮುಖ್ಯಮಂತ್ರಿ ಶ್ರೀ ವೀರೇಂದ್ರಪಾಟೀಲ ಅವರು.



ನಲವತ್ತೇಳನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಪರಿಷತ್ತಿನ ಅಧ್ಯಕ್ಷರಿಂದ ಸ್ವಾಗತ ಭಾಷಣ. ವೇದಿಕೆಯಲ್ಲಿ ಶ್ರೀ ಸಿದ್ಧ ಗಂಗಾ ಕ್ಷೇತ್ರದ ಪೂಜ್ಯ ಡಾ॥ ಶ್ರೀ ಶ್ರೀ ಶಿವಕುಮಾರ ಸ್ವಾಮಿಗಳವರು, ಸಮ್ಮೇಳನಾಧ್ಯಕ್ಷ ಶ್ರೀ ಜವರೇಗೌಡ, ಡಾ॥ ದ. ರಾ. ಬೇಂದ್ರೆ ಮತ್ತಿತರರು.



ಕನ್ನಡ ಸಾಹಿತ್ಯ ಪರಿಷತ್ತಿನ ಸುವರ್ಣ ಮಹೋತ್ಸವದ ಉದ್ಘಾಟನಾ ಸಮಾರಂಭ ದಲ್ಲಿ ಡಾ॥ ಡಿ. ವಿ. ಗುಂಡಪ್ಪ ಅವರು. ವೇದಿಕೆಯಲ್ಲಿ ರಾಜ್ಯಪಾಲ ಶ್ರೀ ಧರ್ಮ ವೀರ, ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲ, ಅರ್ಥಮಂತ್ರಿ ಶ್ರೀ ರಾಮ ಕೃಷ್ಣ ಹೆಗಡೆ. ಮತ್ತು 47ನೆಯ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷ ಶ್ರೀ ದೇ. ಜವರೇಗೌಡ ಅವರು.



ನಲವತ್ತೇಳನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ನಡೆದ ಅಂತರ ಭಾರತಿ ವಿಚಾರ ಗೋಷ್ಠಿಯಲ್ಲಿ ರಾಷ್ಟ್ರಕವಿ ಡಾ॥ ಕುವೆಂಪು. ವೇದಿಕೆಯಲ್ಲಿ ಅಖಿಲಭಾರತ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್. ನಿಜ ಲಿಂಗಪ್ಪ, ಶ್ರೀ ದೇ.ಜ.ಗೌ. ಮತ್ತಿತರರು.



ಅಂತರ ರಾಷ್ಟ್ರೀಯ ಪುಸ್ತಕ ವರ್ಷಾಚರಣೆ ಸಂದರ್ಭದಲ್ಲಿ ಮಹಿಳೆಯರಿಂದ ಪುಸ್ತಕ ಪ್ರಸಾರ ಪಾದಯಾತ್ರೆ–ಕೇಂದ್ರ ಸಚಿವೆ ಶ್ರೀಮತಿ ಸರೋಜಿನಿ ಮಹಿಷಿ ಅವರಿಂದ ಉದ್ಘಾಟನೆ. ಡಾ॥ ಅನುಪಮ ನಿರಂಜನ, ಶ್ರೀಮತಿ ಚಿ. ನ. ಮಂಗಳಾ ಮತ್ತಿತರರು.



ಕನ್ನಡ ಸಾಹಿತ್ಯ ಪರಿಷತ್ತು
ಅಂತರ ರಾಷ್ಟ್ರೀಯ ಪುಸ್ತಕ ವರ್ಷಾಚರಣೆಯ ಅಂಗವಾಗಿ ವಿಧಾನಸೌಧದ ಔತಣ ಭವನದಲ್ಲಿ ಏರ್ಪಡಿಸಿದ ಬೃಹತ್ ಗ್ರಂಥ ಪ್ರದರ್ಶನದ ಒಂದು ನೋಟ



ವಿಧಾನ ಸೌಧದಲ್ಲಿ ಏರ್ಪಡಿಸಿದ್ದ ಅಂತರ ರಾಷ್ಟ್ರಿಯ ಪುಸ್ತಕ ವರ್ಷಾಚರಣೆಯ ಗ್ರಂಥ ಪ್ರದರ್ಶನದ ಯಶಸ್ಸಿಗೆ ನೆರವಾದ ಕಾರ್ಯ ಕರ್ತರ ಬಳಗದೊಂದಿಗೆ




ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ಅಖಿಲ ಕರ್ನಾಟಕ ಗಮಕ ಕಲಾ ಸಮ್ಮೇಳನ. ಪರಿಷತ್ತಿನ ಅಧ್ಯಕ್ಷರಿಂದ ಸ್ವಾಗತ ಭಾಷಣ. ಡಾ॥ ಡಿ. ವಿ. ಗುಂಡಪ್ಪ ನವರಿಂದ ಉದ್ಘಾಟನೆ. ಜೋಳದ ರಾಶಿ ದೊಡ್ಡನಗೌಡರ ಅಧ್ಯಕ್ಷತೆ; ಶ್ರೀ ಹು. ಮಾ. ರಾಮರಾಧ್ಯರ ನಿರ್ದೇಶನ.



ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ರಾಜ್ಯದ ಕೈಗಾರಿಕಾ ಸಚಿವ ಶ್ರೀ ಎಸ್. ಎಂ. ಕೃಷ್ಣ ಅವರಿಂದ ಕನ್ನಡ ಬೆರಳಚ್ಚು ತರಗತಿಗಳ ಉದ್ಘಾಟನೆ.



ಡಾ॥ ಎಂ. ವೀ. ಸೀತಾರಾಮಯ್ಯ ಅವರಿಗೆ ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಸನ್ಮಾನ. ಡಾ॥ ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಅವರ ಅಧ್ಯಕ್ಷತೆ.



ಡಾ॥ ದ. ರಾ. ಬೇಂದ್ರೆ ಅವರಿಗೆ ಜ್ಞಾನಪೀಠ ಪ್ರಶಸ್ತಿ ಬಂದಾಗ ಕನ್ನಡ ಸಾಹಿತ್ಯ ಪರಿಷತ್ತಿನ ಸನ್ಮಾನ. ಡಾ॥ ಮಾಸ್ತಿ ಅವರ ಅಧ್ಯಕ್ಷತೆ.



ಡಾ॥ ಶಿವರಾಮ ಕಾರಂತರ ಹಿರಿತನದಲ್ಲಿ ನಡೆದ ಮುಂಬಯಿ ಕನ್ನಡಿಗರ ಸಾಹಿತ್ಯ ಸಮ್ಮೇಳನದಲ್ಲಿ. ವೇದಿಕೆಯಲ್ಲಿ ಸ್ವಾಗತ ಸಮಿತಿ ಅಧ್ಯಕ್ಷ ಶ್ರೀ ಸುಬ್ಬರಾಯನ್, ಶ್ರೀ ಜೆ. ಎಸ್. ಅಯ್ಯರ್, ಡಾ॥ ಶ್ರೀನಿವಾಸ ಹಾವನೂರ, ಮತ್ತು ಶ್ರೀ ಅ. ಸು. ಕೃಷ್ಣರಾವ್.




'ವಿನೋದ' ಮಾಸಪತ್ರಿಕೆಯ 15ನೆಯ ವಾರ್ಷಿಕೋತ್ಸವ ಸಂದರ್ಭ—ಡಾ॥ ಮಾಸ್ತಿ ಅವರಿಂದ ಅಭಿನಂದನೆ.



'ವಿನೋದ' ಮಾಸಪತ್ರಿಕೆಯ 15ನೆಯ ವಾರ್ಷಿಕೋತ್ಸವ ಸಂದರ್ಭದಲ್ಲಿ ವಿನೋದ ಸಾಹಿತ್ಯ ಪ್ರದರ್ಶನ. ಡಾ॥ ರಂ. ಶ್ರೀ ಮುಗಳಿ, ಡಾ॥ ರಾ. ಶಿ. ಮತ್ತಿತರರೊಡನೆ.



ಮಂಡ್ಯದಲ್ಲಿ ನಲವತ್ತೆಂಟನೆಯ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷೆ ಶ್ರೀಮತಿ ಜಯದೇವಿತಾಯಿ ಲಿಗಾಡೆ ಅವರ ಮೆರವಣಿಗೆ. ಜೊತೆಯಲ್ಲಿ ಸಾಹಿತ್ಯ ಸಮಿತಿ ಅಧ್ಯಕ್ಷ ಶ್ರೀ ಎಂ. ಲಿಂಗಯ್ಯ.




ಕನ್ನಡ ಸಾಹಿತ್ಯ ಪರಿಷತ್ತಿನ ವಜ್ರಮಹೋತ್ಸವ. ರಾಜ್ಯದ ಮುಖ್ಯ ಮಂತ್ರಿ ಶ್ರೀ ಡಿ. ದೇವರಾಜ ಅರಸ್ ಅವರ ಪರವಾಗಿ ವಜ್ರ ಮಹೋತ್ಸವ ನೆನಪಿನ ಕಟ್ಟಡಕ್ಕೆ ಸಚಿವ ಶ್ರೀ ಎಸ್. ಹುಚ್ಚಮಾಸ್ತಿಗೌಡ ಅವರಿಂದ ಶಂಕುಸ್ಥಾಪನೆ.



ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ರಾಜ್ಯಮಟ್ಟದ ಪ್ರಥಮ ಜಾನಪದ ಕಲಾ ಮಹೋತ್ಸವ. ರಾಜ್ಯದ ಮುಖ್ಯಮಂತ್ರಿ ಶ್ರೀ ಡಿ. ದೇವರಾಜ ಅರಸ್ ಅವರಿಂದ ಉದ್ಘಾಟನೆ. ಜೊತೆಯಲ್ಲಿ ಪರಿಷತ್ತಿನ ಕಾರ್ಯದರ್ಶಿ ಶ್ರೀ ಜಿ. ಕೆ. ಗುಂಡುರಾವ್ ಮತ್ತು ಸಂಚಾಲಕ ಶ್ರೀ ಹೆಚ್. ಆರ್. ರಾಜು.



ಕನ್ನಡ ಸಾಹಿತ್ಯ ಪರಿಷತ್ತಿನ ಪಂಚವಾರ್ಷಿಕ ಯೋಜನೆಯ ಉದ್ಘಾಟನೆ - ಅರ್ಥಸಚಿವ ಶ್ರೀ ಎಂ. ವೈ. ಘೋರ್ಪಡೆ ಅವರಿಂದ. ವೇದಿಕೆಯಲ್ಲಿ : ಡಾ|| ವಿ. ಕೃ. ಗೋಕಾಕ್ ಮತ್ತು ಡಾ|| ವಿ. ಕೆ. ಆರ್. ವಿ. ರಾವ್.



ಆಂಧ್ರದ ಶಿಕ್ಷಣ ಸಚಿವ ಶ್ರೀ ಪಿ. ವಿ. ನರಸಿಂ
ರಾವ್ ಅವರು ಕನ್ನಡ - ಕನ್ನಡ ನಿಘಂಟು
ಕಾರ್ಯಾಲಯಕ್ಕೆ ಭೇಟಿ ನೀಡಿದಾಗ



ಶ್ರೀ ಕೆಂಗಲ್ ಹನುಮಂತಯ್ಯನವರ ಜನ್ಮದಿನೋತ್ಸವ ಸಂದರ್ಭದಲ್ಲಿ ಸ್ವಾಗತ ಸಮಿತಿ ಪರವಾಗಿ ವಿಧಾನಪರಿಷತ್ತಿನ ಮಾಜಿ ಅಧ್ಯಕ್ಷ ಶ್ರೀ ಎಸ್. ಶಿವಪ್ಪ ಅವರೊಡನೆ ಅಭಿಮಾನದ ಕಾಣಿಕೆಯ ಅರ್ಪಣೆ.




ಬೆಂಗಳೂರು ನಗರದ ಹನುಮಂತ ನಗರ ಬಡಾವಣೆಯಲ್ಲಿರುವ ಜಿ. ನಾರಾಯಣ ಅವರ ಮನೆ 'ವಿನೋದ ನಿಲಯ'.



ಬೆಂಗಳೂರು ನಗರ ಪಾಲಿಕೆಯ ವತಿಯಿಂದ ಗೃಹರಕ್ಷಕದಳ ರಚಿಸುವ ಬಗ್ಗೆ ಜನರಲ್ ಕಾರಿಯಪ್ಪ ಅವರೊಂದಿಗೆ ಸಮಾಲೋಚನೆ.



ಗಾಂಧಿ ಜಯಂತಿಯಂದು ನಗರ ನಿರ್ಮಲೀಕರಣ ಸಪ್ತಾಹದ ಉದ್ಘಾಟನೆ. ಸ್ವಯಂ ಸೇವಕರ ಸಮವಸ್ತ್ರದಲ್ಲಿ ಜಿ. ನಾರಾಯಣ.



ಕನ್ನಡ ಸಾಹಿತ್ಯ ಪರಿಷತ್ತಿನ ಎದುರಿನ ಹಾರ್ಡಿಂಜ್ ರಸ್ತೆಗೆ 'ಪಂಪಮಹಾಕವಿ ರಸ್ತೆ' ಎಂಬ ನಾಮಕರಣ ಸಂದರ್ಭ. ಜೊತೆಯಲ್ಲಿ ಪರಿಷತ್ತಿನ ಅಧ್ಯಕ್ಷ ಪ್ರೊ. ಜಿ. ವೆಂಕಟಸುಬ್ಬಯ್ಯ, ನಗರ ಪಾಲಿಕೆ ಸದಸ್ಯ ಡಾ|| ಡಿ. ರಾಮರಾವ್ ಮತ್ತು ಕಮಿಷನರ್ ಶ್ರೀ ವೈ. ರೂಪ್ಲಾ ನಾಯಕ್.



ಕನ್ನಡ ಸಾಹಿತ್ಯ ಪರಿಷತ್ತಿನ ಸುವರ್ಣ ಮಹೋತ್ಸವ ಕಟ್ಟಡದ ಉದ್ಘಾಟನೆ-ರಾಷ್ಟ್ರಪತಿ ಶ್ರೀ ವಿ. ವಿ. ಗಿರಿ ಅವರಿಂದ. ಜೊತೆಯಲ್ಲಿ ಶ್ರೀ ಕೆ. ಹನುಮಂತಯ್ಯ.



ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ನಡೆದ ಅಂತರ ಭಾರತಿ ಪುಸ್ತಕ ಪ್ರದರ್ಶನದ ಮುಕ್ತಾಯ ಸಮಾರಂಭ. ವೇದಿಕೆಯಲ್ಲಿ ರಾಜ್ಯಪಾಲ ಶ್ರೀ ಮೋಹನಲಾಲ್ ಸುಖಾಡಿಯ ಮುಖ್ಯಮಂತ್ರಿ ಶ್ರೀ ಡಿ. ದೇವರಾಜ ಅರಸು, ಡಾ॥ ವಿ. ಕೃ. ಗೋಕಾಕ್ ಮತ್ತು ಡಾ॥ ಹೆಚ್. ನರಸಿಂಹಯ್ಯ



ಕೆಂಪೇಗೌಡ ಪ್ರತಿಮೆ ಅನಾವರಣ ಮಹೋತ್ಸವ ಕಾರ್ಯಕ್ರಮ. ಮೇಯರ್ ಅವರಿಂದ ಸ್ವಾಗತ ಭಾಷಣ. ವೇದಿಕೆಯಲ್ಲಿ: ಮದ್ರಾಸಿನ ರಾಜ್ಯಪಾಲ ಶ್ರೀ ಜಯಚಾಮರಾಜ ಒಡೆಯರ್, ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪ ಮತ್ತು ಶ್ರೀ ಕೆ. ಹನುಮಂತಯ್ಯ.




ಕನ್ನಡ ಸಾಹಿತ್ಯ ಪರಿಷತ್ತಿನ ವಜ್ರ ಮಹೋತ್ಸವ ಸಂದರ್ಭದಲ್ಲಿ ಜ್ಞಾನ ಪೀಠ ಪ್ರಶಸ್ತಿ ವಿಜೇತರಿಗೆ ಕನ್ನಡ ಸಾಹಿತ್ಯ ಪರಿಷತ್ತಿನ ಸನ್ಮಾನ.



ಪತ್ರಿಕೆಯೊಂದರ ಬಿಡುಗಡೆ ಸಮಾರಂಭದಲ್ಲಿ. ಜೊತೆಯಲ್ಲಿ ಹಾಸ್ಯ ಸಾಹಿತಿ ಶ್ರೀ ನಾಡಿಗೇರ ಕೃಷ್ಣರಾಯ ಅವರು.



ನವದೆಹಲಿಯಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ದಲ್ಲಿ ಜ್ಞಾನಪೀಠ ಪ್ರಶಸ್ತಿ ವಿಜೇತೆ ಪಂಜಾಬಿನ ಶ್ರೀಮತಿ ಅಮೃತ ಪ್ರೀತಂ ಅವರಿಗೆ ಕೇಂದ್ರ ಶಿಕ್ಷಣ ಸಚಿವ ಶ್ರೀ ಪಿ. ಸಿ. ಚಂದರ್ ಅವರಿಂದ ಸನ್ಮಾನ.



ನವದೆಹಲಿಯಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಉದ್ಘಾಟನಾ ಸಮಾರಂಭ. ವೇದಿಕೆಯಲ್ಲಿ ಸ್ವಾಗತ ಸಮಿತಿ ಅಧ್ಯಕ್ಷ ಶ್ರೀ ಎಚ್. ಬಿ. ದಾತಾರ್, ಸಮ್ಮೇಳನಾಧ್ಯಕ್ಷ ಶ್ರೀ ಜಿ. ಪಿ. ರಾಜರತ್ನಂ, ಉದ್ಘಾಟಕರಾದ ಪ್ರಧಾನಿ ಶ್ರೀ ಮೊರಾರ್ಜಿ ದೇಸಾಯಿ, ನೆನಪಿನ ಸಂಚಿಕೆ ಬಿಡುಗಡೆ ಮಾಡಿದ ರಾಜ್ಯದ ಮುಖ್ಯಮಂತ್ರಿ ಶ್ರೀ ಡಿ. ದೇವರಾಜ ಅರಸು ಅವರೊಡನೆ.



ಬೆಂಗಳೂರು ನಗರದ ವುಡ್‌ಲ್ಯಾಂಡ್ಸ್ ಹೋಟೆಲ್‌ನಲ್ಲಿ ಅಭಿಮಾನಿಗಳ ಪರವಾಗಿ ಡಾ॥ ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಅವರಿಂದ ಅಭಿನಂದನೆ. ವೇದಿಕೆಯಲ್ಲಿ ಶ್ರೀಮತಿ ಯಶೋದಮ್ಮ ಜಿ. ನಾರಾಯಣ.

ಅಭಿನಂದನೆ

ನಮ್ಮ ನಾರಾಯಣ

ಡಾ. ಹಾ. ಮಾ. ನಾಯಕ

ನಾರಾಯಣರಂತಹ ಸಜ್ಜನ ಅನುಭವಿ ನಿಷ್ಠಾವಂತ ಕನ್ನಡದ ಕೆಲಸಗಾರರಿಗೆ ನಮ್ಮ ಸಾರ್ವಜನಿಕದಲ್ಲಾಗಲಿ ಸರ್ಕಾರದ ವ್ಯವಸ್ಥೆಯಲ್ಲಾಗಲಿ ಸಮರ್ಪಕವಾದ ಅಧಿಕಾರ ಸ್ಥಾನ ಸಿಕ್ಕದೇ ಹೋಗಿರುವುದು ವ್ಯಸನದ ಸಂಗತಿ. ಇಂಥ ದೂರದೃಷ್ಟಿಯ ದುಡಿಮೆಗಾರರು ನಮಗೆ ಸುಲಭವಾಗಿ ಸಿಕ್ಕುವುದಿಲ್ಲ. ಇದು ಅಧಿಕಾರಸ್ಥರಿಗೆ ಯಾಕೆ ತಿಳಿಯುವುದಿಲ್ಲವೊ ?

ಪ್ರಿಯಮಿತ್ರರಾದ ನಮ್ಮ ಜಿ. ನಾರಾಯಣರಂಥವರನ್ನು ಕುರಿತು ಬರೆಯುವುದು ಒಂದು ಉಭಯಸಂಕಟದ ಕೆಲಸ. ನಮಗೆ ತಿಳಿದಿರುವುದನ್ನು ಬರೆದರೆ ಅತಿಪ್ರಶಂಸೆ ಎನ್ನಿಸಬಹುದು; ಬರೆಯದೆ ಹೋದರೆ ಅವರಿಗೆ ನ್ಯಾಯ ದೊರಕಿಸಿದಂತೆ ಆಗುವುದಿಲ್ಲ!

ನಾರಾಯಣ ಅವರನ್ನು ನಾನು ಮೊದಲು ಕಂಡದ್ದು ಅರುವತ್ತರ ದಶಕದ ಕೊನೆಯ ಹೊತ್ತಿನಲ್ಲಿ—ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷತೆಗೆ ಸ್ಪರ್ಧಿಸಿದ್ದಾಗ. ಒಂದು ಮುಂಜಾನೆ ನಾನು ನನ್ನ ಕಛೇರಿ ಕೆಲಸದಲ್ಲಿ ತೊಡಗಿದ್ದಾಗ ಅವರು ಬಂದರು; ಬಂದವರು ಒಬ್ಬರೇ. "ನಾನು ಜಿ. ನಾರಾಯಣ" ಎಂದು ತಮ್ಮ ಪರಿಚಯ ಮಾಡಿಕೊಂಡರು. ಚುನಾವಣೆಗೆ ನನ್ನ ಬೆಂಬಲ ಕೋರಿದರು. ಅದಕ್ಕಿಂತ ಮೊದಲು ನಾನು ಅವರನ್ನು ಕಂಡಿರಲಿಲ್ಲ. ಅವರು ಬೆಂಗಳೂರು ನಗರಪಾಲಿಕೆಯ ಮಹಾಪೌರರಾಗಿ ಒಳ್ಳೆಯ ಕೆಲಸ ಮಾಡಿದ್ದರೆಂದು ಕೇಳಿದ್ದೆ; ಅದರ ಸ್ವರೂಪ ನನಗೆ ತಿಳಿದಿರಲಿಲ್ಲ. ಆದರೆ ಅವರನ್ನು ಕುರಿತು ಒಂದು ಸುದ್ದಿಯನ್ನು ಪತ್ರಿಕೆಗಳಲ್ಲಿ ಓದಿದ್ದು ನೆನಪಿನಲ್ಲಿತ್ತು. "ಮಹಾಪೌರರಾಗಿ ಅಧಿಕಾರ ಬಿಟ್ಟುಕೊಡುವಾಗ ನಗರಪಾಲಿಕೆಯ ಕಛೇರಿಗೆ ಕಛೇರಿಯ ವಾಹನದಲ್ಲಿ ಬಂದರು; ಹೋಗುವಾಗ ಒಂದು ಆಟೋರಿಕ್ಷಾ ಹತ್ತಿ ಹೊರಟರು; ಅಧಿಕಾರಿಗಳು ಕಾರಿನಲ್ಲಿ ಹೋಗಬೇಕೆಂದು ಎಷ್ಟು ಪ್ರಾರ್ಥಿಸಿದರೂ ಅವರು ಕೇಳಲಿಲ್ಲ"—ಎಂಬುದೇ ಆ ಸುದ್ದಿ. ಇಂಥ ಪ್ರಸಂಗವನ್ನು ನಾನು ದಿವಾನ್ ವಿಶ್ವೇಶ್ವರಯ್ಯನವರ ವಿಷಯದಲ್ಲಿ ಮಾತ್ರ ಕೇಳಿದ್ದೆ. ಕೆಲವರಿಗಾದರೂ ಇದೆಲ್ಲ ಅತಿ ಎನ್ನಿಸಬಹುದು; ಆದರೆ ಇದರಲ್ಲಿ ಪರಿಶುದ್ಧತೆಯ ಹಠಮಾರಿತನ ಇರುತ್ತದೆಂಬುದನ್ನು ನಾವು ಮರೆಯಬಾರದು. ಇಂಥವರು ಹೆಚ್ಚು ಜನ ಇಲ್ಲದಾಗ ಈ ಬಗೆಯ ನಡವಳಿಕೆ ಅತಿ ಎನ್ನಿಸುವುದು ಸಹಜ; ಆದರೆ ಅದೇ ನಿಜವಲ್ಲ.

ನಾರಾಯಣ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಹತ್ತಿರ ಹತ್ತಿರ ಒಂದು ದಶಕದ ಕಾಲ ಕೆಲಸ ಮಾಡಿದರು. ಪರಿಷತ್ತಿನ ಚಿನ್ನದ ಹಬ್ಬ, ವಜ್ರದ ಹಬ್ಬಗಳೆರಡನ್ನೂ ನಡೆಸಿದರು. ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ನಡೆಸಿದರು. "ಕನ್ನಡಿ

ಗರು ಮಾತ್ರ ಇಂಥ ಕೆಲಸ ಮಾಡಬಹುದೆಂದು'' ಮೊರಾರ್ಜಿ ದೇಸಾಯಿಯವರ ಪ್ರಶಂಸೆ ಪಡೆದರು. ಕನ್ನಡ ಸಾಹಿತ್ಯ ಪರಿಷತ್ತನ್ನು, ರಾಷ್ಟ್ರದ ಸಾಹಿತ್ಯ ಪರಿಷತ್ತುಗಳಲ್ಲಿಯೇ ಅತ್ಯಂತ ಬಲಿಷ್ಠವಾದ, ವಿಪುಲ ವ್ಯಾಪ್ತಿಯ, ಕೀರ್ತಿವಂತ ಸಂಸ್ಥೆಯನ್ನಾಗಿ ಬೆಳೆಸಿದರು. ಇದು ಎಲ್ಲರಿಗೂ ತಿಳಿದಿರುವ ವಿಚಾರವೆ.

ಅವರು ಅಧ್ಯಕ್ಷರಾದಾಗ ''ಅಸಾಹಿತಿ'' ಎಂದು ಸಾಹಿತಿಗಳೆನಿಸಿಕೊಂಡ ಕೆಲವರು ಗೊಣಗಿದ್ದುಂಟು. ಆಗ ನಾನೊಂದು ಲೇಖನ ಬರೆದು ''ಪರಿಷತ್ತಿಗೆ ಈಗ ಬೇಕಾಗಿರುವುದು ಸಾಹಿತಿಯಲ್ಲ, ಕೆಲಸಗಾರ'' ಎಂದಿದ್ದೆ. ನನ್ನ ಮಾತು ಹುಸಿಯಾಗಲಿಲ್ಲ. ಯಾವ ಸಾಹಿತಿಯೂ ಮಾಡದಿದ್ದ ಕೆಲಸವನ್ನು ಈ 'ಅಸಾಹಿತಿ' ಮಾಡಿ ತೋರಿಸಿದರು. ವಾಸ್ತವವಾಗಿ ನಾರಾಯಣರಿಗೆ ಸಾಹಿತ್ಯ ಪರಿಷತ್ತಿನಲ್ಲಿ ಇರಲು ತಮ್ಮದೇ ಆದ ಹಕ್ಕುಂಟು. ಪಿ ಇ ಎನ್ ಎಂಬ ಅಂತರರಾಷ್ಟ್ರೀಯ ಸಾಹಿತಿಗಳ ಮಹಾ ಸಂಸ್ಥೆಯೊಂದಿದೆ. ಅದರಲ್ಲಿ ಪಿ ಎನ್ನುವುದು ಕವಿಗಳನ್ನು, ನಾಟಕಕಾರರನ್ನು (ಪೊಯಟ್ಸ್, ಪ್ಲೇರೈಟ್ಸ್) ಇ ಎನ್ನುವುದು ಪ್ರಬಂಧಕಾರರನ್ನು, ಸಂಪಾದಕರನ್ನು (ಎಸ್ಸೇಯಿಸ್ಟ್ಸ್, ಎಡಿಟರ್ಸ್), ಎನ್ ಎನ್ನುವುದು ಕಾದಂಬರಿಕಾರರನ್ನು (ನಾವೆಲಿಸ್ಟ್ಸ್) ಪ್ರತಿನಿಧಿಸುತ್ತದೆ. ನಾರಾಯಣ ಸಂಪಾದಕರಾಗಿ ಕಾಲುಶತಮಾನದಿಂದ 'ವಿನೋದ' ಎಂಬ ಮಾಸಪತ್ರಿಕೆಯನ್ನು ಸಮರ್ಥವಾಗಿ ನಡೆಸುತ್ತಿದ್ದಾರೆ. ಇದನ್ನು ಗಮನಿಸುವ ಗೋಜಿಗೆ ಯಾರೂ ಹೋಗಲಿಲ್ಲ! ಏಕೆಂದರೆ ಗೋವಿಂದಪೈಗಳ ಗಾದೆಯೇ ಇದೆಯಲ್ಲ: ''ತನ್ನವರು ಬಂದರೆ ಒಳಗಾಡು ಸಟ್ಟುಗವೇ, ಹೆರವರು ಬಂದರೆ ಮೇಲಾಡು ಸಟ್ಟುಗವೇ!''

ನಾರಾಯಣ ಗುಣಗಳ ಗಣಿ. ಈ ಗುಣಗಳೇ ಅವರ ದೌರ್ಬಲ್ಯವೂ ಆಗುವುದುಂಟು, ಆ ಮಾತು ಬೇರೆ. ಆಡಳಿತ ಪಕ್ಷದವರು, ವಿರೋಧಪಕ್ಷದವರು ಇಬ್ಬರೂ ಚುನಾವಣೆಗಳಲ್ಲಿ ''ನಮ್ಮ ಅಭ್ಯರ್ಥಿಯಾಗಿ'' ''ನಮ್ಮ ಅಭ್ಯರ್ಥಿಯಾಗಿ'' ಎಂದು ಗೋಗರೆದು ಕೇಳಿಕೊಳ್ಳುತ್ತಿದ್ದುದು ನಮಗೆ ತಿಳಿದಮಟ್ಟಿಗೆ ಕರ್ನಾಟಕದಲ್ಲಿ ನಾರಾಯಣ ಒಬ್ಬರನ್ನೇ. ಭಾರತದಲ್ಲಿಯೂ ಇಂಥವರ ಸಂಖ್ಯೆ ಹಲವು ಇರಲಾರದೆಂದೇ ನನ್ನ ನಂಬಿಕೆ. ಇಂಥ ಅವಕಾಶಕ್ಕಾಗಿ ''ದೊಡ್ಡ'' ವರೆನ್ನಿಸಿದವರು ''ಸಣ್ಣ'' ವರಾದುದನ್ನು ನಾನೇ ಕಂಡಿದ್ದೇನೆ. ಆದರೆ ನಾರಾಯಣ ಕಾಲಬಳಿ ಬಂದದ್ದನ್ನು ತಿರಸ್ಕರಿಸಿ ಇನ್ನೂ ದೊಡ್ಡವರಾದರು. ''ಯಾಕೆ ಹೀಗೆ?'' ಎಂದು ನಾನು ಒಮ್ಮೆ ಅವರನ್ನು ಕೇಳಿದ್ದುಂಟು. ಆದಕ್ಕೆ ಅವರು ಹೇಳಿದ್ದರು:

''ನಮ್ಮಂಥವರಿಗೆ ರಾಜಕೀಯದಲ್ಲಿ ಬೆರೆಯಲು ಇದು ಕಾಲವಲ್ಲ. ನನಗೂ ಆ ಮಾತು ನಿಜವೆನಿಸಿದೆ. ನಾರಾಯಣರಂಥವರ ದನಿ ಈಗ ಅರಣ್ಯರೋದನ; ಇಂದಿನ ರಾಜಕೀಯದಲ್ಲಿ ಪರಿಶುದ್ಧರಾಗಿರಲು ಸಾಧ್ಯವಿಲ್ಲ; ಸಾಧ್ಯವಾದರೂ ಪರಿಣಾಮಕಾರಿ ಎನ್ನಿಸಲಾಗುವುದಿಲ್ಲ. ಇದು ನಮ್ಮ ಸಾರ್ವಜನಿಕದ ದುರವಸ್ಥೆ. ನಾರಾಯಣರಂಥವರ ಸಂಖ್ಯೆ ಬೆಳೆದರೆ ಮಾತ್ರ ಈ ಪರಿಸ್ಥಿತಿ ಕೊನೆಯಾಗಬಹುದು. ಇಲ್ಲದಿದ್ದರೆ ಭವಿಷ್ಯವಿಲ್ಲ.

ನಾರಾಯಣ ಅವರ ಮನೋಧರ್ಮಕ್ಕೆ ಕನ್ನಡಿ ಹಿಡಿಯುವ ಇನ್ನೊಂದು ಪ್ರಸಂಗವನ್ನು ನಾನು ಇಲ್ಲಿ ಹೇಳಬೇಕು. ದೇವರಾಜ ಅರಸು ಮುಖ್ಯಮಂತ್ರಿಯಾಗಿದ್ದಾಗ ನಾರಾಯಣರನ್ನು ವಯಸ್ಕರ ಶಿಕ್ಷಣ ಸಂಸ್ಥೆಯ ಅಧ್ಯಕ್ಷರನ್ನಾಗಿ ಮಾಡಬೇಕೆಂದು ನಾವು ಕೆಲವರು ಸ್ನೇಹಿತರು ಅಪೇಕ್ಷಿಸಿದ್ದೆವು. ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾಗಿದ್ದ ಡಿ. ವಿ. ಅರಸು ಮುಖ್ಯಮಂತ್ರಿಗಳನ್ನು ಒಪ್ಪಿಸಿಯೂ ಇದ್ದರು. ಆಗ ನಾರಾಯಣ ಹೇಳಿದ್ದು: ''ಇದು ನನಗೆ ಪ್ರಿಯವಾದ ಕೆಲಸವೇ ಹೌದು. ಆದರೆ ಸಂಸ್ಥೆಯ ಕಛೇರಿ ಮೈಸೂರಿನಲ್ಲಿದೆ; ನಾನು ಬೆಂಗಳೂರಿನಲ್ಲಿದ್ದೇನೆ. ಇದರಿಂದ ಕೆಲಸ ನಡೆಯುವುದಿಲ್ಲ. ನಾನು ಬೆಂಗಳೂರು ಬಿಡುವುದು ಸಾಧ್ಯವಿಲ್ಲ; ಸಂಸ್ಥೆಯ ಕಛೇರಿ ಬೆಂಗಳೂರಿಗೆ ಬರಲಿ ಎನ್ನುವುದು ಸಾಧುವಲ್ಲ. ದಯವಿಟ್ಟು ನನ್ನನ್ನು ಬಿಟ್ಟುಬಿಡಿ.'' ಎಷ್ಟು ಸರಿಯಾದ ಧೋರಣೆ ಇದು!

ನಾನು ನಾರಾಯಣರಲ್ಲಿ ಅನೇಕ ಗುಣಗಳನ್ನು ಮೆಚ್ಚಿದ್ದೇನೆ; ಆದಕ್ಕಾಗಿಯೆ ಅವರನ್ನು ಗೌರವಿಸುತ್ತೇನೆ. ಅವರು ಯಾರೊಬ್ಬರ ಮನಸ್ಸನ್ನೂ ನೋಯಿಸದೆ, ತಮ್ಮ ಅಭಿಪ್ರಾಯಗಳನ್ನೇ ಗೆಲ್ಲಿಸಿಕೊಳ್ಳುವ ವಿಶೇಷ ಸಾಮರ್ಥ್ಯ ಪಡೆದಿದ್ದಾರೆ. ಹಾಗೆಂದರೆ ಇತರರ ಅಭಿಪ್ರಾಯಗಳಿಗೆ ಕಿವುಡರಾಗಿರುತ್ತಾರೆಂದಲ್ಲ. ಒಳ್ಳೆಯದೆನಿಸಿದ್ದನ್ನು ಅವರು ಯಾರಿಂದಲೂ ಸ್ವೀಕರಿಸುತ್ತಾರೆ. ಅಭಿಪ್ರಾಯ ಭೇದ

ಗಳನ್ನು ಅವರು ದ್ವೇಷವನ್ನಾಗಿ ಮಾರ್ಪಡಿಸುವುದಿಲ್ಲ. ನನಗೂ ಅವರಿಗೂ ಅನೇಕ ವಿಷಯಗಳಲ್ಲಿ, ಅನೇಕರ ವಿಷಯದಲ್ಲಿ ಭಿನ್ನ ಅಭಿಪ್ರಾಯಗಳಿವೆ. ನಾನು ಕೆಲವು ಸಲ ಅವರೊಂದಿಗೆ ದನಿಯೇರಿಸಿ ಮಾತಾಡಿದ್ದೇನೆ; ಮೂದಲಿಕೆ ದನಿಯಲ್ಲಿ ಚರ್ಚಿಸಿದ್ದೇನೆ. ಆದರೆ ನಮ್ಮ ಸ್ನೇಹ ವಿಶ್ವಾಸಗಳಿಗೆ, ಪರಸ್ಪರ ಗೌರವ ಆದರಗಳಿಗೆ ಸ್ವಲ್ಪವೂ ಭಂಗಬಂದಿಲ್ಲ. ನಾರಾಯಣರಿಗೆ ಅವರಿಗೆ ಸರಿಯೆನಿಸಿದ್ದನ್ನು ಆಡುವ ಮಾಡುವ ಸ್ವಾತಂತ್ರ್ಯವುಂಟು; ಅದೇ ಸ್ವಾತಂತ್ರ್ಯ ನನಗೂ ಉಂಟು. ಇದನ್ನು ಇಬ್ಬರೂ ಮಾನ್ಯ ಮಾಡಿದಾಗ ಅಸಮಾಧಾನಕ್ಕೆ ಎಡೆ ಎಲ್ಲಿ?

ನಾರಾಯಣರಂಥ ಸಜ್ಜನ ಅನುಭವಿ ನಿಷ್ಠಾವಂತ ಕನ್ನಡದ ಕೆಲಸಗಾರರಿಗೆ ನಮ್ಮ ಸಾರ್ವಜನಿಕದಲ್ಲಾಗಲಿ, ಸರ್ಕಾರದ ವ್ಯವಸ್ಥೆಯಲ್ಲಾಗಲಿ ಸಮರ್ಪಕವಾದ ಅಧಿಕಾರಸ್ಥಾನ ಸಿಕ್ಕದೇ ಹೋಗಿರುವುದು ನನಗೆ ವ್ಯಥೆಯನ್ನುಂಟುಮಾಡಿದೆ. ಇಂಥ ದೂರದೃಷ್ಟಿಯ ದುಡಿಮೆಗಾರರು ನಮಗೆ ಸುಲಭವಾಗಿ ಸಿಕ್ಕುವುದಿಲ್ಲ. ಇದು ಅಧಿಕಾರಸ್ಥರಿಗೆ ಯಾಕೆ ತಿಳಿಯುವುದಿಲ್ಲವೋ? ಕನ್ನಡದ ಸ್ಥಿತಿಗತಿಗಳು ದೂಳಾಗುತ್ತಿರುವ ಇಂದಿನ ದಿನಗಳಲ್ಲಿ ಕನ್ನಡಕ್ಕೆ ಬಾಯೆತ್ತದವರು, ಕನ್ನಡ ಸಮಸ್ಯೆಗಳ ತಲೆಬುಡ ತಿಳಿಯದವರು, ಎರಡೇ ವರ್ಷಗಳ ಹಿಂದೆ ಎಲ್ಲೂ ಇಲ್ಲದವರು ಈಗ ನಾಯಕರೆನಿಸಿದ್ದಾರೆ; ಅಧಿಕಾರಸ್ಥರಾಗಿದ್ದಾರೆ; ಸಮಿತಿಗಳನ್ನು ಅಲಂಕರಿಸಿದ್ದಾರೆ. ಇದು ನಮ್ಮ ವ್ಯವಸ್ಥೆಯ ವಿಪರ್ಯಾಸ, ನಮ್ಮ ನಷ್ಟ.

ನಮ್ಮ ನಾರಾಯಣರಿಗೂ ಈಗ ಅರುವತ್ತಾಯಿತಂತೆ; ಕಾಲ ಯಾರನ್ನು ಬಿಡುತ್ತದೆ? ಅವರ ಆರೋಗ್ಯ ಉತ್ಸಾಹಗಳು ಬತ್ತದಿರಲಿ ಎಂಬುದೇ ಅವರ ಹಿತೈಷಿಗಳೆಲ್ಲರ ಈ ಹೊತ್ತಿನ ಹಾರೈಕೆ.

ಕನ್ನಡದ ಕೆಲಸ

ಶ್ರೀ ನಾರಾಯಣರು ರಾಜಕೀಯದಲ್ಲಿ ಅಂದು ಪ್ರತಿಷ್ಠಿತ ವ್ಯಕ್ತಿ. ಅವರ ಭಾಷಾಪ್ರೇಮ-ಕನ್ನಡ ಅಭಿಮಾನ ಅಂದಿನಿಂದ ಬೆಳೆದು ಬಂದದ್ದು. ಅವರ ರಾಜಕೀಯ ಚಟುವಟಿಕೆಗಳ ಆಪ್ತರಾದ ಶ್ರೀ ಚನ್ನಪ್ಪನವರು, ಶ್ರೀ ಸುಬ್ಬರಾಯರು, ಶ್ರೀ ಲಕ್ಷ್ಮೀನಾರಾಯಣರಾಯರು ಇವರೊಡನೆ ಒಂದು ರಾಜ್ಯೋತ್ಸವ ಸಮಾರಂಭದ ದಿನ ಕನ್ನಡ ರಾಜ್ಯ ಭಾಷೆಯಾಗಬೇಕು, ಶಿಕ್ಷಣ ಕನ್ನಡದಲ್ಲಿ ದೊರೆಯಬೇಕು ಎಂಬ ಫಲಕಗಳನ್ನು ಪ್ರದರ್ಶಿಸಿ ಕನ್ನಡದ ಸ್ಥಾನ ಮಾನದ ಬಗ್ಗೆ ಕರಪತ್ರ ಹಂಚಿ ರಾಜ್ಯೋತ್ಸವ ಆಚರಿಸಿದ ಹಿರಿಮೆ-ನಾರಾಯಣರದು.

ವಿದ್ವಜ್ಜನಪ್ರಿಯ ಜಿ. ನಾರಾಯಣ

ಎಂ. ವಿ. ಸೀತಾರಾಮಯ್ಯ

ಅಖಿಲ ಕರ್ನಾಟಕ ವ್ಯಾಪ್ತಿಯ ಯಾವುದೇ ಕನ್ನಡದ ಕೆಲಸ ಆಗಲಿ, ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ನಾರಾಯಣ ಅವರ ನಿಕಟ ಸಂಬಂಧ ಇದ್ದೇ ಇರುತ್ತದೆ. ಗೋಕಾಕ್ ವರದಿ ಸಂಬಂಧವಾಗಿ ಭಾಗವಹಿಸದಿರಬಹುದು. ಆದರೆ ಕನ್ನಡ ಜಾಗೃತಿ ಪರಿಷತ್ತಿನ ಮೂಲಕ ಸಮ್ಮೇಳನ ನಡೆಸಿ ಚಳವಳಿಗೆ ಬೀಜಾಂಕುರ ಹುಟ್ಟು ಹಾಕಿದವರು ನಾರಾಯಣ.

ಶ್ರೀಮಾನ್ ಜಿ. ನಾರಾಯಣ ಅವರನ್ನು ಅವರು ಬೆಂಗಳೂರು ಕಾರ್ಪೊರೇಷನ್ನಿನ ಮೇಯರ್ ಆದಂದಿನಿಂದಲೂ ಕಂಡಿದ್ದೇನೆ. ಅವರ ವಿಚಾರವಾಗಿ ಕೇಳಿ ತಿಳಿದು ಅವರ ಅಭಿಮಾನಿಯಾಗಿದ್ದೇನೆ.

ಅವರು ಮೇಯರ್ ಆದ ವರ್ಷ ; ನಾನು ಬೆಂಗಳೂರು ಇಂಟರ್‌ಮೀಡಿಯಟ್ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕ. ಅಂದಿನ ದಿನಗಳಲ್ಲಿ ಕಾಲೇಜು ಅಸೋಸಿಯೇಷನ್‌ಗಳು ಇನ್ನೂ ರಾಜಕೀಯದಿಂದ ಕಲುಷಿತವಾಗಿರದಿದ್ದರೂ ವ್ಯವಹಾರಗಳೆಲ್ಲವನ್ನೂ ಇಂಗ್ಲೀಷಿನಲ್ಲೇ ನಡೆಸುತ್ತಿದ್ದೆವು. ಆರಂಭ ಭಾಷಣ ಮುಕ್ತಾಯ ಭಾಷಣಗಳಿಗೆ ಮುಖ್ಯ ಅತಿಥಿಗಳಾಗಿ ಆಹ್ವಾನಿತರಾದವರು ಇಂಗ್ಲೀಷಿನಲ್ಲೇ ತಮ್ಮ ಭಾಷಣಗಳನ್ನು ಬಿಗಿಯುತ್ತಿದ್ದರು. ಈಗ ನಾನು ಪ್ರಸ್ತಾಪಿಸುತ್ತಿರುವ ವರ್ಷದಲ್ಲಿ, ಎಂದರೆ 1964 ರಲ್ಲಿ, ಶ್ರೀ ಜಿ. ನಾರಾಯಣ ಅವರು ಕಾಲೇಜು ಸಂಘದ ವರ್ಷಾಂತ್ಯ ಭಾಷಣ ಮಾಡಲು ಮುಖ್ಯ ಅತಿಥಿಯಾಗಿ ದಯಮಾಡಿಸಿದ್ದರು. ಅವರ ಭಾಷಣದ ವಿಷಯ ಏನು ಇದ್ದಿತು ಎನ್ನುವುದು ನನಗೆ ನೆನಪಿನಲ್ಲಿ ಉಳಿದಿಲ್ಲ. ಆದರೆ ಅವರ ಸೌಮ್ಯಮೂರ್ತಿ ಸ್ವರೂಪ, ಖಾದಿ ಉಡುಪುತೊಡುಪು, ಇವು ಇಂದಿನ ಕನ್ನಡಿಗರಿಗೆ ಪರಿಚಿತವಾಗಿರುವ ರೀತಿಯಲ್ಲಿಯೇ ಇದ್ದವು. ಇಂದು ಮಾಡುವ ಹಾಗೆ ಅಂದೂ ಅವರು ತಮ್ಮ ಭಾಷಣವನ್ನು ಬರೆದು ತಂದಿದ್ದರು ; ತಿಳಿಯಾದ ಅಚ್ಚಗನ್ನಡದಲ್ಲಿ ಬರೆದಿದ್ದ ಭಾಷಣವನ್ನು ಉದ್ವೇಗವಿಲ್ಲದೆ ಓದಿದರು.

ನಾರಾಯಣ ಅವರಿಗೆ ಇಂಗ್ಲೀಷ್ ಬರುವುದಿಲ್ಲ, ಆದ್ದರಿಂದ ಕನ್ನಡದಲ್ಲಿ ಭಾಷಣ ಮಾಡಿದರು ಎಂದು ಒಬ್ಬಿಬ್ಬರು ಅಧ್ಯಾಪಕರೇ ಆಡಿಕೊಂಡರು. ಒಬ್ಬ ಕನ್ನಡ ಸೇನಾನಿ ಕಾರ್ಯರಂಗಕ್ಕೆ ಇಳಿದಿದ್ದಾನೆ ಎನ್ನುವುದನ್ನು ಅವರು ಅರಿಯದೆ ಹೋದರು. ಆದರೆ ವಿದ್ಯಾರ್ಥಿ ಸಮುದಾಯ ಅವರ ಭಾಷಣವನ್ನು ಮೆಚ್ಚಿಕೊಂಡಿತ್ತು. ಅದೇ ದಿನ ಸಂಜೆ ನಾನು ಕಾರ್ಪೊರೇಷನ್ ಮಾರ್ಗವಾಗಿ ಮನೆಗೆ ಹಿಂದಿರುಗುವಾಗ ಕಾರ್ಪೊರೇಷನ್ನಿನ ಕಟ್ಟಡದ ಮುಖಮಂಟಪದ ಮೇಲ್ಭಾಗದಲ್ಲಿ ನಿಯಾನ್ ಬೆಳಕಿನ ನಾಮಫಲಕ ಕನ್ನಡದಲ್ಲಿ ಇದ್ದುದನ್ನು—ಎಷ್ಟೋ ಸಲ ಗಮನಿಸಿದ್ದುದನ್ನು—ಮೊದಲ ಬಾರಿಗೆ ಮೆಚ್ಚಿಗೆಯಿಂದ ದೃಷ್ಟಿಸಿ ನೋಡಿದೆ. ನಾರಾಯಣರ ಕನ್ನಡ ಅಭಿಮಾನವೇ

ಬೆಳ್ಳಿಬೆಳಕಿನಲ್ಲಿ ಮೂಡಿದೆ ಎನ್ನುವುದು ಆಗ ಮನವರಿಕೆಯಾಯಿತು.

ನಾರಾಯಣ ಅವರು ಗಾಂಧಿ ಭಕ್ತರು, ಕಾಂಗ್ರೆಸ್ ಅನುಯಾಯಿಗಳು, ಪರಿಶುದ್ಧ ರಾಜಕೀಯದಲ್ಲಿ ಆಸಕ್ತರು ಎಂದು ಕೇಳಿ ತಿಳಿದಿದ್ದೆ. ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿಯೇ ಆಗಲಿ ಮೈಸೂರಿನ ಜವಾಬ್ದಾರಿ ಸರ್ಕಾರದ ಹೋರಾಟದಲ್ಲಿಯೇ ಆಗಲಿ ಅವರು ಯಾವುದೇ ಪಾತ್ರವನ್ನು ವಹಿಸಿರಲಿ ಬಿಟ್ಟಿರಲಿ, ಅದು ಅಷ್ಟು ಮುಖ್ಯವಲ್ಲ. ವಾಸ್ತವವಾಗಿ ಆ ಸಂಗತಿಯನ್ನು ಕೇಳಿ ತಿಳಿದುಕೊಳ್ಳಲು ನಾನು ಪ್ರಯತ್ನಪಟ್ಟಿಲ್ಲ. ಸ್ವತಂತ್ರ ಭಾರತದ ಒಂದು ಪ್ರಮುಖ ಭಾಗವಾದ ಕರ್ನಾಟಕ ಏಳಿಗೆ ಹೊಂದಬೇಕಾದರೆ ಕನ್ನಡ ಸಾಹಿತ್ಯ ಸಾಮಾನ್ಯ ಜನತೆಗೆ ತಲುಪಬೇಕು ; ಕನ್ನಡಿಗರು ಪ್ರಜ್ಞಾವಂತರಾಗಬೇಕು, ಸ್ವಾಭಿಮಾನಶೀಲರಾಗಬೇಕು, ಸುಸಂಸ್ಕೃತರಾಗಬೇಕು, ಪ್ರಾಚೀನ ಸಂಸ್ಕೃತಿಯ ಪಾಠವನ್ನು ಹೀರಿ ಕಾಲಕ್ಕೆ ತಕ್ಕಂತೆ ಪ್ರಗತಿಪಥದಲ್ಲಿ ಮುನ್ನಡೆಯಬೇಕು ; ಕನ್ನಡಿಗರ ಸರ್ವಾಂಗೀಣ ಪ್ರಗತಿಗೆ ಕನ್ನಡದ ಮೂಲಕವೇ ಎಲ್ಲ ವಿದ್ಯೆಯೂ ಅವರಿಗೆ ದೊರಕಬೇಕು ಎಂಬ ಧ್ಯೇಯ ಸಾಧನೆಯನ್ನು ತಮ್ಮ ಬದುಕಿನ ಪವಿತ್ರ ವ್ರತವನ್ನಾಗಿ ಸ್ವೀಕರಿಸಿರುವ ಮಹನೀಯರು, ಕಟ್ಟಾ ದೇಶಾಭಿಮಾನಿಗಳು, ನಮ್ಮದೇಶಹಳ್ಳಿಯ ನಾರಾಯಣರು ಎಂದು ನಾನು ತಿಳಿದುಕೊಂಡಿದ್ದೇನೆ.

ಈ ನಿಟ್ಟಿನಲ್ಲಿ ಅವರು ಕೈಕೊಂಡ ಒಂದು ಪ್ರಮುಖ ಕಾರ್ಯ ಎಂದರೆ, ಕರ್ನಾಟಕ ರಾಜ್ಯೋತ್ಸವ ಸಂದರ್ಭದಲ್ಲಿ ಮನೆಮನೆಗೆ ಸರಸ್ವತಿಯನ್ನು ಕೊಂಡೊಯ್ಯುವ ಪವಿತ್ರ ಕಾರ್ಯ. ಅನೇಕಾನೇಕ ಕಾರ್ಯಕರ್ತರು, ಸಾಹಿತಿಗಳು, ಮಹಿಳಾ ಲೇಖಕಿಯರು, ಶ್ರೀ ನಾರಾಯಣರನ್ನು ಮುಂದಿಟ್ಟುಕೊಂಡು ಬೀದಿ ಬೀದಿಗಳಲ್ಲಿ ಪಾದಯಾತ್ರೆ ಮಾಡಿ, ಲೇಖಕರಿಂದ ಸಂಗ್ರಹಿಸಿದ ಪುಸ್ತಕಗಳನ್ನು ಮನೆ ಮನೆಗೂ ಹೋಗಿ ಮಾರಾಟ ಮಾಡಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಮೇಲೆ ಅವರು ಯೋಜನಾಬದ್ಧವಾಗಿ ಮಾಡಿದ ಕಾರ್ಯವನ್ನು ಕನ್ನಡಿಗರೆಲ್ಲರೂ ಬಲ್ಲರು. ಪರಿಷತ್ ಪತ್ರಿಕೆಯ ಸಂಪುಟಗಳನ್ನೂ ಹಿಂದಿನ ವಾರ್ಷಿಕ ವರದಿಗಳನ್ನೂ ಸಮ್ಮೇಳನಾಧ್ಯಕ್ಷರುಗಳ ಭಾಷಣಗಳನ್ನೂ ಓದಿ, ಪರಿಷತ್ತಿನ ಧ್ಯೇಯಗಳನ್ನು ಸಾಧಿಸಲು ತ್ರೈಮಾಸಿಕ ಪಾಂಚವಾರ್ಷಿಕ ಯೋಜನೆಗಳನ್ನು ಹಾಕಿಕೊಂಡು, ಎಲ್ಲ ಕನ್ನಡ ಅಭಿಮಾನಿಗಳನ್ನೂ ಸಾಹಿತಿಗಳನ್ನೂ ವಿದ್ವಾಂಸರನ್ನೂ ಬರಮಾಡಿಕೊಂಡು, ಸಭೆ ಸೇರಿಸಿ, ತಾವು ಆಳವಾಗಿ ಆಲೋಚಿಸಿ ರೂಪಿಸಿದ ಯೋಜನೆಗಳನ್ನು ಅವರ ಮುಂದಿಟ್ಟು, ಅವರ ಸಲಹೆ ಸೂಚನೆಗಳನ್ನು ಪಡೆದುಕೊಂಡು, ಅವರ ನೆರವಿನಿಂದಲೇ ಯೋಜನೆಗಳ ಬಹ್ವಂಶಗಳನ್ನು ಯಶಸ್ವಿಯಾಗಿ ಕಾರ್ಯರೂಪಕ್ಕೆ ತಂದರು.

ಒಂದು ನಿರ್ದಿಷ್ಟಕಾರ್ಯವನ್ನು ನಿರ್ವಹಿಸಲು ಇವರೇ ಸಮರ್ಥರು ಎಂದು ಅಂಥವರನ್ನು ಗುರುತಿಸಿ, ಆ ಕಾರ್ಯದ ನಿರ್ವಹಣೆಗೆ ಅವರನ್ನು ಒಪ್ಪಿಸಿ, ಅವರನ್ನು ಆ ಕಾರ್ಯಕ್ಕೆ ಹೂಡುತ್ತಿದ್ದರು. ಅವರಿಗೆ ಬೇಕಾದ ಎಲ್ಲ ಸೌಕರ್ಯಗಳನ್ನೂ ಹಣವನ್ನೂ ಹಿಂದು ಮುಂದು ನೋಡದೆ ಒದಗಿಸಿ ಕೊಡುತ್ತಿದ್ದರು. ಇದಕ್ಕಿಂತ ಮುಖ್ಯವಾಗಿ ಅವರಿಗೆ ಸಂಪೂರ್ಣ ಕಾರ್ಯಸ್ವಾತಂತ್ರ್ಯವನ್ನು ಕೊಟ್ಟುಬಿಡುತ್ತಿದ್ದರು. ನಾರಾಯಣರ ಆಡಳಿತದ ಯಶಸ್ಸಿನ ಗುಟ್ಟು ಇದು. ಸಾಹಿತಿಯಾಗಲಿ, ವಿದ್ವಾಂಸರಾಗಲಿ ಅಲ್ಲದ ನಾರಾಯಣ ಅವರು ತಮ್ಮ ಸಾಮರ್ಥ್ಯದ ಇತಿಮಿತಿಗಳನ್ನು ಬಲ್ಲವರು. ಆದರೆ, ಸಾಹಿತ್ಯಪ್ರೇಮಿಯಾದ್ದರಿಂದ, ಸಾಹಿತ್ಯಾಭಿಮಾನಿ ಆದ್ದರಿಂದ, ನಿಃಸ್ವಾರ್ಥಸೇವಾ ಮನಸ್ಕರಾದ್ದರಿಂದ, ಪ್ರಾಮಾಣಿಕರಾದ್ದರಿಂದ, ಬಿ. ಎಂ. ಶ್ರೀ ಅವರು ಕನಸು ಕಂಡು ಹಾಕಿದ ಅಸ್ತಿವಾರದ ಮೇಲೆ ಕನ್ನಡ ಸಾಹಿತ್ಯ ಪರಿಷತ್ತನ್ನು ವಾಸ್ತವವಾಗಿ ಅಖಿಲ ಕರ್ನಾಟಕ ವ್ಯಾಪ್ತಿಯ ಸಂಸ್ಥೆಯನ್ನಾಗಿ ಕಟ್ಟಿದರು. ಕನ್ನಡ ಸಾಹಿತ್ಯ ಪರಿಷತ್ತು ಎಂಬ ವಟವೃಕ್ಷ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿಯೂ ಬಿಳಲುಬಿಟ್ಟಿದ್ದು ನಾರಾಯಣ ಅವರ ಕಾಲದಲ್ಲೇ.

ಪರಿಷತ್ತಿನ ಸುವರ್ಣಮಹೋತ್ಸವ, ವಜ್ರಮಹೋತ್ಸವ ನಾರಾಯಣ ಅವರು ಅಧ್ಯಕ್ಷರಾಗಿದ್ದ ಕಾಲದಲ್ಲಿ ಒದಗಿ ಬಂದದ್ದು ಒಂದು ಸುಯೋಗ. ಇವುಗಳ ಸ್ಮಾರಕಗಳಾಗಿ ನೂರಾರು ಬೆಲೆಬಾಳುವ ಕನ್ನಡಗ್ರಂಥಗಳು ಹೊರಬಂದಿವೆ ; ಎರಡು ಭವ್ಯ ಭವನಗಳು ನಿರ್ಮಾಣಗೊಂಡಿವೆ. ದಿಳ್ಳಿ ನಮಗೆ ದೂರ, ನಮ್ಮ ಹಳ್ಳಿ ನಮಗೆ ಸಾಕು ಎಂದು ಬಿ. ಎಂ. ಶ್ರೀ ತೃಪ್ತಿಪಟ್ಟಿದ್ದರು.

ನಾರಾಯಣರು ದಿಳ್ಳಿಗೂ ಧಾವಿಸಿ ಕನ್ನಡದ ಪತಾಕೆಯನ್ನು ಅಲ್ಲಿ ಹಾರಿಸಿದರು.

ಪರಿಷತ್ತಿನ ಅಧ್ಯಕ್ಷರಾಗಿದ್ದ ಕಾಲದಲ್ಲಿ ಗಮಕ ಕಲೆಗೂ, ಜಾನಪದ ಕಲೆಗಳಿಗೂ ಅವರು ಕೊಟ್ಟ ಅಭೂತಪೂರ್ವ ಉತ್ತೇಜನದ ಫಲವಾಗಿಯೇ ಗಮಕಕಲಾ ಪರಿಷತ್ತೂ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯೂ ಜನ್ಮ ತಳೆದವು ಎಂದರೆ ಅತ್ಯುಕ್ತಿ ಆಗಲಾರದು.

ಇದೀಗ ಬಿ. ಎಂ. ಶ್ರೀ ಸ್ಮಾರಕ ಪ್ರತಿಷ್ಠಾನ ಆಚರಿಸುತ್ತಿರುವ ಬಿ. ಎಂ. ಶ್ರೀ ಜನ್ಮಶತಮಾನೋತ್ಸವ ಸಮಿತಿಯ ಕಾರ್ಯಾಧ್ಯಕ್ಷರಾಗಿ ಅದನ್ನು ಅಖಿಲ ಕರ್ನಾಟಕ ವ್ಯಾಪ್ತಿಯ ಮಟ್ಟದಲ್ಲಿ ಮಾತ್ರವಲ್ಲದೆ ಭಾರತದ ಪ್ರಮುಖ ನಗರಗಳಲ್ಲೂ ನಡೆಸಿ, 'ಶ್ರೀ' ಯವರು ಕಂಡು ನನಸಾಗದೆ ಉಳಿದಿರುವ ಕನಸುಗಳನ್ನು ನನಸಾಗಿಸುವ ಕಾರ್ಯದಲ್ಲಿ ಉದ್ಯುಕ್ತರಾಗಿದ್ದಾರೆ. ಈ ವರ್ಷಾದಿಯಲ್ಲಿ (3-1-1984) ಬಿ. ಎಂ. ಶ್ರೀ ಅವರ ಸ್ಥಳವಾದ ಬೆಳ್ಳೂರಿನಲ್ಲಿ ನಡೆದ ಪ್ರಪ್ರಥಮ ಉತ್ಸವಾಚರಣೆಯ ಯಶಸ್ಸಿನ ಬಹುಪಾಲು ನಾರಾಯಣರ ಕಾರ್ಯಕ್ಷಮತೆಯ, ಸಂಘಟನಾ ಸಾಮರ್ಥ್ಯದ ಸುಫಲ.

ಒಂದು ಮಾತಿನಲ್ಲಿ, ಅಖಿಲ ಕರ್ನಾಟಕ ವ್ಯಾಪ್ತಿಯ ಯಾವುದೇ ಕನ್ನಡ ಕೆಲಸ ಆಗಲಿ, ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ನಾರಾಯಣ ಅವರ ನಿಕಟ ಸಂಬಂಧ ಇದ್ದೇ ಇರುತ್ತದೆ. ಗೋಕಾಕ್ ವರದಿ ಸಂಬಂಧವಾಗಿ ನಡೆದ ಚಳವಳಿಯಲ್ಲಿ ಇವರು ಪ್ರತ್ಯಕ್ಷವಾಗಿ ಭಾಗವಹಿಸದಿರಬಹುದು; ಆದರೆ ಕನ್ನಡ ಜಾಗೃತಿ ಪರಿಷತ್ತಿನ ಮೂಲಕ ಸಮ್ಮೇಳನ ನಡಸಿ, ಚಳವಳಿಗೆ ಬೀಜಾಂಕುರ ಹುಟ್ಟು ಹಾಕಿದವರು ನಾರಾಯಣ. 'ಶ್ರೀ' ಶತಮಾನೋತ್ಸವವ್ಯಾಜದಲ್ಲಿ ನಾಡಿನ ಮೂಲೆಮೂಲೆಯಲ್ಲೂ ಕನ್ನಡದ ಬಗ್ಗೆ ಜನಜಾಗೃತಿ ಉಂಟುಮಾಡಬೇಕೆಂಬುದು ಅವರ ಸಂಕಲ್ಪ. ಅವರ ಸಂಕಲ್ಪ ಈಡೇರಿ, ಕುಗ್ಗುತ್ತಿರುವ ಕನ್ನಡಿಗರ ಸ್ವಾಭಿಮಾನ ಎಚ್ಚರಗೊಂಡು, ಕನ್ನಡ ನಾಡಿನ ಎಲ್ಲ ಕಾರ್ಯ ಕ್ಷೇತ್ರಗಳಲ್ಲಿಯೂ ಕನ್ನಡಕ್ಕೆ ಅಗ್ರಸ್ಥಾನ ದೊರೆಯಲಿ, ಶ್ರೀಯವರ ಹೊಂಗನಸು ನಲ್‌ನನಸಾಗಲಿ ಎಂದು ಹಾರೈಸಬೇಕಾದದ್ದು ಎಲ್ಲ ಕನ್ನಡಿಗರ ಕರ್ತವ್ಯ.

ಆಂಗ್ಲ ಭಾಷಾ ಪರಿಚಯ

ಶ್ರೀ ನಾರಾಯಣರು ಕನ್ನಡದ ಹೊರತು ಬೇರೆ ಯಾವ ಭಾಷೆಯಲ್ಲಿ ಮಾತನಾಡಿದುದನ್ನು ಯಾರೂ ಕೇಳಿರಲಾರರು.

ಬೇರೆ ಭಾಷೆಯ ವಿದ್ವಾಂಸರೊಡನೆ-ತಂತ್ರಜ್ಞರೊಡನೆ, ಕಾರ್ಪೊರೇಷ್ನ, ಪರಿಷತ್ತು, ಇತರ ಸಂಸ್ಥೆಗಳಲ್ಲಿ ವ್ಯವಹರಿಸಿರುವ ಇವರು ಕನ್ನಡದಲ್ಲೇ ವ್ಯವಹರಿಸಿ ಕಾರ್ಯ ಸಾಧಿಸಿದ್ದಾರೆ. ಅವಶ್ಯ ಬಂದಾಗ ಭಾಷಾಂತರ ಮಾಡಿಸಿ, ಇತರರಿಗೆ ತಿಳಿಸಿದ್ದಾರೆ. ತಾವು ಮಾತ್ರ ತಮ್ಮ ಮಾತೃ ಭಾಷೆಯನ್ನೇ ಉಪಯೋಗಿಸಿದ್ದಾರೆ. ಇದರ ಜೊತೆಗೆ ಹೇಳಬೇಕಾದ ಇನ್ನೊಂದು ವಿಷಯ—ಯಾವುದೇ ಸಂದರ್ಭದಲ್ಲಿ ಆಂಗ್ಲ ಭಾಷೆಯಲ್ಲಿ ಕರಡು ಸಿದ್ಧಪಡಿಸಿದರೆ, ವಾಕ್ಯ–ಪದ–ವ್ಯಾಕರಣವನ್ನು ತಿದ್ದುವ ಅವರ ಆಂಗ್ಲ ಭಾಷಾ ಪರಿಚಯ ಬಹಳ ಜನರಿಗೆ ತಿಳಿದಿಲ್ಲ. ಕಿರಿಯರಿಗಂತೂ ಅವರು ಆಂಗ್ಲಭಾಷೆ ಪದಪ್ರಯೋಗ-ವ್ಯಾಕರಣಕ್ಕೆ ಸಂಬಂಧಪಟ್ಟ ಪುಸ್ತಕಗಳನ್ನು ಉಡುಗೊರೆಯಾಗಿ ಕೊಟ್ಟಿದ್ದಾರೆ.

ಸಮನ್ವಯ ವ್ಯಕ್ತಿತ್ವ

ಸಿ. ಪಿ. ಕೆ.

“ಜಿ. ನಾರಾಯಣ ಅವರು ಕನ್ನಡ ಸಾಹಿತ್ಯ ಪರಿಷತ್ತಿಗೆ ಅಧ್ಯಕ್ಷರಾದ ಮೇಲೆ ಶ್ರೀಮನ್ನಾರಾಯಣನೆ ಪ್ರತ್ಯಕ್ಷವಾದಂತಾಯಿತು.”

—ಇದು ರಾಷ್ಟ್ರಕವಿ ಕುವೆಂಪು ಅವರು, ಪರಿಷತ್ತಿನ ವಜ್ರಮಹೋತ್ಸವ ಸಂದರ್ಭದ ಒಂದು ಗೋಷ್ಠಿಯಲ್ಲಿ ಆಡಿದ ಮಾತು. ಜಿ. ನಾರಾಯಣ ಅವರ ಸಾಮರ್ಥ್ಯಕ್ಕೆ ಇದಕ್ಕಿಂತ ಬೇರೆ ಪ್ರಮಾಣ ಪತ್ರ ಬೇಕಿಲ್ಲ. ಅವರು ಯಾವುದಕ್ಕೆ ಕೈ ಹಾಕಿದರೂ ಅದನ್ನು ಪುನರುಜ್ಜೀವಿಸಬಲ್ಲ ಗಟ್ಟಿಗರು, ಗಾರುಡಿಗರು. ಸಾರ್ವಜನಿಕ ಜೀವನದಲ್ಲಿ ಕೆಲಸ ಮಾಡುವವರು ನಾರಾಯಣ ಅವರಿಂದ ಕಲಿಯಬೇಕಾದ ಪಾಠಗಳು ಹಲವಿವೆ.

ಜಿ. ನಾರಾಯಣ ಅವರು ಹೆಚ್ಚು ಮಾತನಾಡುವವರಲ್ಲ; ಆಡಿದಾಗ, ಅದರಲ್ಲಿ ಖಚಿತತೆ, ತೂಕ, ನಿರುದ್ವೇಗಗಳನ್ನು ಕಾಣುತ್ತೇವೆ. ಮುಖ್ಯವಾದ ಸಂಗತಿಯೆಂದರೆ, ಮಾತಿಗಿಂತ ಕೃತಿಯಲ್ಲಿ ಅವರಿಗೆ ಹೆಚ್ಚು ನಂಬಿಕೆ. ಅವರು ಆಳವಾಗಿ ವಿಚಾರ ಮಾಡುತ್ತಾರೆ; ದೂರಾಲೋಚನೆ ಮಾಡುತ್ತಾರೆ; ಕೈಕೊಂಡ ನಿರ್ಣಯವನ್ನು ಶ್ರದ್ಧೆಯಿಂದ, ದಕ್ಷತೆಯಿಂದ ಕಾರ್ಯರೂಪಕ್ಕಿಳಿಸುತ್ತಾರೆ. ಅವರು ಹಿಡಿಯುವ ಯಾವುದೇ ಕೆಲಸ, ಅವರ ಪಾಲಿಗೊಂದು ವ್ರತ.

ನಾರಾಯಣ ಅವರು ಹಿಂದೆ ಬೆಂಗಳೂರು ನಗರ ಕಾರ್ಪೊರೇಷನ್ ಮೇಯರ್ ಆಗಿದ್ದರು. ಆ ಹುದ್ದೆಯಿಂದ ನಿವೃತ್ತರಾದ ಕೂಡಲೆ ಅವರು ಕಾರ್ಪೊರೇಷನ್ ವಾಹನವನ್ನು ಬಿಟ್ಟು, ಸ್ವಂತ (ಬಾಡಿಗೆ ?) ವಾಹನದಲ್ಲಿ ಮನೆಗೆ ಹೋದರಂತೆ! ಒಬ್ಬ ವ್ಯಕ್ತಿಯ ನಿಸ್ಪೃಹತೆ, ಪ್ರಾಮಾಣಿಕತೆಗಳಿಗೆ ಇಂಥ ಸಣ್ಣ ಸಂಗತಿಗಳೂ ಸಾಕ್ಷಿಗಳಾಗುತ್ತವೆ.

ವಿನಯಶೀಲತೆ ನಾರಾಯಣ ಅವರ ಒಂದು ಪ್ರಮುಖ ಗುಣ. ತಮಗೆ ಏನೂ ತಿಳಿದಿಲ್ಲವೆಂಬಂತೆ ಅವರು ತೋರಿಸಿಕೊಳ್ಳುತ್ತಾರೆ. ತನ್ಮೂಲಕ, ಬೇರೆಯವರಿಂದಲೂ ಕೆಲಸ ಮಾಡಿಸುವ ಕಲೆ ಅವರಿಗೆ ಸಿದ್ಧಿಸಿದೆ. ‘ಕೆಲಸ ಮಾಡು, ಮಾಡಿಸು’—ಇದು ನಾರಾಯಣ ಅವರ ಸೂತ್ರ. ಯಾರು ಯಾರಿಗೆ

‘ಕೆಲಸ ಮಾಡು, ಮಾಡಿಸು’—ಇದು ನಾರಾಯಣ ಅವರ ಸೂತ್ರ. ಯಾರು ಯಾರಿಗೆ ಏನೇನು ಜವಾಬ್ದಾರಿ ವಹಿಸಬೇಕೊ ಅದನ್ನು ವಹಿಸಿ, “ನಿಮಗೆ ಎಲ್ಲ ಗೊತ್ತಿದೆ, ಮಾಡಿ” ಎಂದು ಬಿಡುತ್ತಾರೆ. ಹಾಗೆ ಹೇಳುವಾಗ ಆಯಾ ಕೆಲಸಕ್ಕೆ ತಕ್ಕವರನ್ನೇ ಅವರು ಆರಿಸುತ್ತಾರೆ. ಹೀಗಾಗಿ ಕಾರ್ಯಗಳು ಸುಸೂತ್ರವಾಗಿ ನಡೆಯುತ್ತವೆ. ನಾರಾಯಣ ಅವರದು ಪ್ರಭುಸಂಮಿತವಲ್ಲ; ಮಿತ್ರಸಂಮಿತ.

ಏನೇನು ಜವಾಬ್ದಾರಿ ವಹಿಸಬೇಕೊ ಅದನ್ನು ವಹಿಸಿ, "ನಿಮಗೇ ಎಲ್ಲಾ ಗೊತ್ತಿದೆ, ಮಾಡಿ" ಎಂದುಬಿಡುತ್ತಾರೆ. ಹಾಗೆ ಹೇಳುವಾಗ, ಆಯಾ ಕೆಲಸಕ್ಕೆ ತಕ್ಕವನನ್ನೇ ಅವರು ಆರಿಸಿರುತ್ತಾರೆ. ಹೀಗಾಗಿ, ಕಾರ್ಯಗಳು ಸುಸೂತ್ರವಾಗಿ ನಡೆಯುತ್ತವೆ. ನಾರಾಯಣ ಅವರದು ಪ್ರಭು ಸಂಮಿತವಲ್ಲ, ಮಿತ್ರಸಂಮಿತ.

ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಪದವಿಯನ್ನು ಬಿಟ್ಟ ಮೇಲೆ ಒಮ್ಮೆ ನಾರಾಯಣ ಅವರು ನನ್ನೊಡನೆ ಮಾತನಾಡುತ್ತ ಹೇಳಿದರು: "ನಾನು ಅಧ್ಯಕ್ಷನಾಗಿದ್ದಾಗ, ಒಂದೊಂದು ಊರಿಗೆ ಒಂದೊಂದು ಸಲ ಪ್ರತ್ಯೇಕವಾಗಿ ಪ್ರವಾಸ ಕಾರ್ಯಕ್ರಮ ಹಾಕಿಕೊಳ್ಳುತ್ತಿರಲಿಲ್ಲ. ಒಂದೇ ಸಲ ಅನೇಕ ಊರುಗಳ ಪ್ರವಾಸ ಕೈಕೊಳ್ಳುತ್ತಿದ್ದೆ. ಉದಾಹರಣೆಗೆ, ಮಡಿಕೇರಿಗೆ ಹೋಗಬೇಕಾದಾಗ ಜೊತೆಯಲ್ಲೆ ಮಂಡ್ಯ, ಮೈಸೂರುಗಳ ಕಾರ್ಯಕ್ರಮವನ್ನೂ ಹಾಕಿಕೊಳ್ಳುತ್ತಿದ್ದೆ." ಸಾರ್ವಜನಿಕ ಹಣವನ್ನು ಉಳಿಸುವ ಬಗೆಗಳಲ್ಲಿ ಇದೂ ಒಂದು.

ಇತ್ತೀಚೆಗೆ, ವಯಸ್ಕರ ಶಿಕ್ಷಣದ ಬಗ್ಗೆ ನಾರಾಯಣ ಅವರು ತುಂಬ ಕಾಳಜಿ ವಹಿಸುತ್ತಿದ್ದಾರೆ. ಅವರು ಅದಕ್ಕೊಂದು ದೊಡ್ಡ ಯೋಜನೆ ತಯಾರಿಸಿ, ಮೈಸೂರಿನ ಮತ್ತು ಬೆಂಗಳೂರಿನ ಅನೇಕ ಸಾಹಿತಿಗಳೊಡನೆ ಮುಖ್ಯಮಂತ್ರಿಗಳನ್ನು ಕಂಡು ಆ ಬಗ್ಗೆ ಮಾತನಾಡಿದರು. (ನನಗೂ ಈ ವಿಷಯದಲ್ಲಿ ಪತ್ರ ಬರೆದು, ನಿಯೋಗದಲ್ಲಿ ಭಾಗವಹಿಸಲು ಬೆಂಗಳೂರಿಗೆ ಕರೆಯಿಸಿಕೊಂಡಿದ್ದರು). ಈಗ ಸರ್ಕಾರವೇ ಅಕ್ಷರ ಸೇನಾ ಯೋಜನೆಯನ್ನು ಹಾಕಿಕೊಂಡಿದೆ. ಇದರ ಹಿಂದೆ ನಾರಾಯಣ ನಿಯೋಗದ ಪ್ರೇರಣೇ ಇದ್ದಿರಲೂಬಹುದು. ಅಂತೂ ನಾರಾಯಣ ಅವರಿಗೆ ಹೊಳೆಯತಕ್ಕವೆಲ್ಲ ಜನೋಪಯುಕ್ತವಾದ ದೊಡ್ಡ ದೊಡ್ಡ ಯೋಜನೆಗಳೇ.

ನಾರಾಯಣ ಅವರಿಗೆ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಅಧ್ಯಕ್ಷತೆಯ ಆಸೆಯಿದೆ ಎಂದೊಬ್ಬರು ಈಚೆಗೆ ಒಂದು ಪತ್ರಿಕೆಯಲ್ಲಿ ಬರೆದಿದ್ದರು. ಇದರತ್ತ, ನಾನು ನಾರಾಯಣ ಅವರ ಗಮನ ಸೆಳೆದಾಗ ಅವರಾಡಿದ ಮಾತುಗಳು ಗಮನಾರ್ಹ: "ನೋಡಿ, ಅಧಿಕಾರವಿದ್ದರೆ ಏನಾದರೂ ಒಳ್ಳೆಯ ಕೆಲಸ ಮಾಡಬಹುದು. ಆದರೆ ನಾನು ಅಧಿಕಾರದ ಬೆನ್ನು ಹತ್ತಿ ಹೋಗುವವನಲ್ಲ." ನಾರಾಯಣ ಅಧಿಕಾರದ ಬೆನ್ನುಹತ್ತಿ ಹೋಗುವವರೂ ಅಲ್ಲ, ಬಂದ ಅಧಿಕಾರವನ್ನು ದುರುಪಯೋಗಪಡಿಸಿಕೊಳ್ಳುವವರೂ ಅಲ್ಲ.

ವ್ಯವಹಾರಜ್ಞಾನ, ಮೌಲ್ಯಪ್ರಜ್ಞೆ ಎರಡನ್ನೂ ಉಳ್ಳವರು ಜಿ. ನಾರಾಯಣ ಅವರು. ಅವರದು ಸಮನ್ವಯ ವ್ಯಕ್ತಿತ್ವ. ಇಂತಹವರ ಸಂಖ್ಯೆ ಹೆಚ್ಚಾಗಿದ್ದಿದ್ದರೆ, ನಮ್ಮ ಸಾರ್ವಜನಿಕ ಜೀವನದ ಸ್ವರೂಪ ಸ್ವಲ್ಪವಾದರೂ ಭಿನ್ನವಾಗಬಹುದಿತ್ತು.

ಗುಣ-ಶೀಲ-ಚಾರಿತ್ರ್ಯ

ಅಭಯ, ಮನಃಶುದ್ಧಿ, ಜ್ಞಾನಯೋಗಸ್ಥಿತಿ, ದಾನ, ಸಂಯಮ, ಯಜ್ಞ, ಅಧ್ಯಯನ, ತಪಸ್ಸು, ಋಜುತ್ವ, ಅಹಿಂಸೆ, ಸತ್ಯ, ಸಹನೆ, ತ್ಯಾಗ, ಶಾಂತಿ, ಪರರ ಗುಟ್ಟನ್ನು ರಟ್ಟುಮಾಡದಿರುವುದು, ಪ್ರಾಣಿದಯೆ, ವ್ಯಾಮೋಹವಿಲ್ಲದಿರುವುದು, ಮೃದುತ್ವ, ಚಾಂಚಲ್ಯವಿಲ್ಲದಿರುವುದು, ತೇಜಸ್ಸು, ಕ್ಷಮೆ, ತೃಪ್ತಿ, ಶೌಚ, ಪರರಿಗೆ ಕೇಡೆಣಿಸದಿರುವುದು, ಅಹಂಕಾರವಿಲ್ಲದಿರುವುದು—ಈ ದೈವೀಗುಣಗಳು ಯೋಗ್ಯರಲ್ಲಿ ಕಂಡುಬರುವುವು.

—ಭಗವದ್ಗೀತೆ

ಇಂತಹವರನ್ನು ಸ್ನೇಹಿತರೆಂದು ಕರೆಯುವುದೇ ಸುಯೋಗ

ಡಾ|| ಎಲ್. ಎಸ್. ಶೇಷಗಿರಿರಾವ್

ಶ್ರೀ ನಾರಾಯಣ ಅವರದು ಮೃದು ಸ್ವಭಾವ—ವೈಯಕ್ತಿಕ ಸಂಬಂಧಗಳಲ್ಲಿ. ಆದರೆ ತತ್ವಗಳ ಪಾಲನೆಯಲ್ಲಿ ಔಚಿತ್ಯವರಿತು ನಡೆಯುವುದರಲ್ಲಿ ಅವರು ಬಂಡೆಯಂತೆ ಗಟ್ಟಿ. ನಾರಾಯಣ ಅವರು ದನಿ ಎತ್ತರಿಸಿ ಮಾತನಾಡುವುದಿಲ್ಲ, ಮೃದುವಾಗಿ ಮಾತನಾಡುತ್ತಾರೆ. ಅವರಿಗೆ ನಮ್ಮ ಅಭಿಪ್ರಾಯವನ್ನು ಒಪ್ಪಿಸುವುದು ಮತ್ತು ಅವರ ಮೇಲೆ ಪ್ರಭಾವ ಬೀರುವುದು ಸುಲಭ ಎಂದುಕೊಂಡವರಿಗೆ ಬಹು ಬೇಗ ತಮ್ಮ ತಪ್ಪಿನ ಅರಿವಾಗುತ್ತದೆ.

ಕೆಲವರ ಸ್ನೇಹ ದೊರೆಯದೆಯೇ ಹೋಗಿದ್ದರೆ ನನಗೆಂತಹ ನಷ್ಟವಾಗುತ್ತಿತ್ತು ಎಂದು, ನಮ್ಮ ಬಾಳಿನ 'ಬ್ಯಾಲೆನ್ಸ್‌ಷೀಟ್' ತಯಾರಿಸಿದಾಗ ಎನ್ನಿಸುವುದುಂಟು. ಇಂತಹ ಅಮೂಲ್ಯ ಬಾಂಧವ್ಯಗಳು ಬಾಳಿನ ಉತ್ತರಾರ್ಧ ದಲ್ಲಿ ಲಭ್ಯವಾಗುವುದು ವಿರಳ. ಈಚೆಗಿನ ವರ್ಷಗಳಲ್ಲಿ ನನಗೆ ದಕ್ಕಿದ ಇಂತಹ ಅಮೂಲ್ಯ ಲಾಭಗಳಲ್ಲಿ ಶ್ರೀ ಜಿ. ನಾರಾಯಣ ಅವರ ಸ್ನೇಹ ಒಂದು.

ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದಾಗ ನನಗೆ ಅಷ್ಟೇನೂ ಸಂತೋಷವಾಗಲಿಲ್ಲ ಎಂಬ ಮಾತನ್ನು ಬೇರೆಡೆಯಲ್ಲಿ ನಾನೇ ಹೇಳಿದ್ದೇನೆ. (ಅವರು ಅಧ್ಯಕ್ಷರಾಗಿ ಆಯ್ಕೆಯಾದಾಗ ನನಗೆ ಅವರ ಮುಖಪರಿಚಯ ಸಹ ಚೆನ್ನಾಗಿರಲಿಲ್ಲ) ಅವರ ಪರಿಚಯವಾಗಿ, ಅದು ಗೌರವ ವಾಗಿ ಬೆಳೆದು, ಆತ್ಮೀಯತೆಯಾಗಿ ಫಲಿಸಿರುವ ದಿನಗಳು ಈಗಿನವು. ಅವರೊಡನೆ ಪರಿಷತ್ತಿನಲ್ಲಿ ಕೆಲಸ ಮಾಡಲು ಪ್ರಾರಂಭಿಸಿದ ಕೆಲವೇ ದಿನಗಳಲ್ಲಿ ನನಗೆನಿಸಿತು, ಹಗಲು ಗನಸುಗಳನ್ನು ಕಾಣುವುದರಲ್ಲಿ ತಪ್ಪಿಲ್ಲ, ಆ ಗಾಳಿಯಲ್ಲಿ ಕಾಣುವ ಸೌಧಗಳಿಗೆ ಅಸ್ತಿಭಾರಹಾಕುವ ಸಾಮರ್ಥ್ಯ ಬೇಕು ಅಷ್ಟೆ ಎಂದು. ಪ್ರಾರಂಭದ ದಿನಗಳಲ್ಲಿ ಅವರು ಬೃಹದ್ ಯೋಜನೆಗಳ ಮಾತನ್ನಾಡಿದಾಗ, 'ಇಷ್ಟು ದುಡ್ಡು ಸಿಕ್ಕಬಹುದೇ, ಇದಕ್ಕೆಲ್ಲ ಜನ ಸಿಕ್ಕಬಹುದೇ ?' ಎಂದು ಅನುಮಾನದಿಂದಲೇ ನೋಡುತ್ತಿದ್ದೆ, ಕೇಳುತ್ತಿದ್ದೆ. ಆದರೆ ಕ್ರಮೇಣ ಅರ್ಥವಾಯಿತು, ಅವರು ಯೋಜನೆಯ ಮೊದಲಕ್ಷರವನ್ನು ಇತರರ ಮುಂದೆ ಆಡುವ ಹೊತ್ತಿಗೆ ಕಡೆಯ ವಿವರವನ್ನೂ ಸ್ಪಷ್ಟಮಾಡಿಕೊಂಡಿರುತ್ತಾರೆ ಎಂದು.

ಶ್ರೀ ನಾರಾಯಣ ಅವರು ಯಾವ ವಿಷಯವನ್ನು ಕುರಿತು ಮಾತನಾಡಿದರೂ, ಅಮುಖ್ಯವಾದುದರಿಂದ ಮುಖ್ಯವಾದುದನ್ನು ಸ್ಪಷ್ಟವಾಗಿ ಬೇರ್ಪಡಿಸಿಯೇ ಮಾತನಾಡುವರು. ಇಂಗ್ಲೀಷಿನಲ್ಲಿ ಹೇಳುವ ಹಾಗೆ, he goes straight to the heart of the matter. ಅಷ್ಟೇ ಅಲ್ಲ, ಯಾವುದೇ ಹೆಜ್ಜೆ ಇಟ್ಟರೆ ಅದು ನಾಳೆ ನಮ್ಮನ್ನು ಎಲ್ಲಿಗೆ ಕರೆದೊಯ್ಯಬಹುದು, ಇನ್ನು ಹತ್ತು ವರ್ಷಕ್ಕೆ ಎಲ್ಲಿಗೆ ಕರೆದೊಯ್ಯಬಹುದು ಎಂದು ಕಲ್ಪಿಸಿಕೊಳ್ಳಬಲ್ಲರು. ಮತ್ತೊಂದು ಅವರ ಗುಣ, ತಮ್ಮ ಅಭಿಪ್ರಾಯವನ್ನು ಸ್ಪಷ್ಟವಾಗಿ ಹೇಳುವುದು.

ಅವರಿಗೆ ಯಾರಲ್ಲಿ ಗೌರವವಿದೆಯೊ, ಯಾರಲ್ಲಿ ಆತ್ಮೀಯತೆ ಇದೆಯೊ ಅವರ ಅಭಿಪ್ರಾಯ ಅವರಿಗೆ ಒಪ್ಪಿಗೆಯಾಗ ದಿದ್ದರೆ ತಮ್ಮ ಅಭಿಪ್ರಾಯವನ್ನು ಯಾವ ಸಂಕೋಚವೂ ಇಲ್ಲದೆ ಸ್ಪಷ್ಟವಾಗಿ ಹೇಳುತ್ತಾರೆ. ಹಾಗೆಂದು, ಒರಟು ತನವೇ ಪ್ರಾಮಾಣಿಕತೆಯ ಸಾಕ್ಷಿ ಎಂದೇನೂ ಭಾವಿಸುವುದಿಲ್ಲ. ಸೌಜನ್ಯಕ್ಕೆ ಮಾತ್ರವಲ್ಲ. ಸ್ನೇಹ ಗೌರವಗಳಿಗೆ ಎಳ್ಳಿನಷ್ಟೂ ಚ್ಯುತಿಬಾರದ ಹಾಗೆ ಹೇಳುತ್ತಾರೆ.

ಅವರೊಡನೆ ಕೆಲಸ ಮಾಡುವುದು, ಮಾತುಕಥೆ ಆಡುವುದು ಸಂತೋಷಕರವೂ ಲಾಭಕರವೂ ಆದ ಅನುಭವವಾಗುವುದು ಈ ಕಾರಣದಿಂದಲೇ. ತಮ್ಮ ಜೊತೆಯವರ ಅಭಿಪ್ರಾಯಕ್ಕೆ ಗೌರವ ಕೊಡುತ್ತಾರೆ, ಅವರಿಗೆ ಹೊಣೆಒಪ್ಪಿಸಿದಮೇಲೆ ಅವರಿಗೆ ಸ್ವಾತಂತ್ರ್ಯ ಕೊಡುತ್ತಾರೆ. ಅಕಸ್ಮಾತ್ ತಪ್ಪುಗಳಾದರೆ ಅರ್ಥಮಾಡಿಕೊಳ್ಳುತ್ತಾರೆ. ಆಕ್ಷೇಪಣೆಯಲ್ಲಿ ಕಾಲ ಕಳೆಯದೆ ಸರಿಪಡಿಸಲು ನೆರವಾಗುತ್ತಾರೆ. ಕಳೆದ ಹನ್ನೆರಡು ವರ್ಷಗಳಲ್ಲಿ ಮತ್ತೆ ಮತ್ತೆ ಅವರೊಡನೆ ಕೆಲಸಮಾಡಿದ್ದೇನೆ. ಯಾವಾಗಲೂ ಅವರ ಗಮನ ಕೆಲಸ ಯಶಸ್ವಿಯಾಗುವುದರ ಕಡೆಗೆ.

ಶ್ರೀ ನಾರಾಯಣ ಅವರದು ಮೃದು ಸ್ವಭಾವ— ವೈಯಕ್ತಿಕ ಸಂಬಂಧಗಳಲ್ಲಿ. ಆದರೆ ತತ್ವಗಳ ಪಾಲನೆಯಲ್ಲಿ ಔಚಿತ್ಯವರಿತು ನಡೆಯುವುದರಲ್ಲಿ ಅವರು ಬಂಡೆಯಂತೆ ಗಟ್ಟಿ. 'ನಾರಾಯಣ ಅವರು ದನಿ ಎತ್ತರಿಸಿ ಮಾತನಾಡುವುದಿಲ್ಲ, ಮೃದುವಾಗಿ ಮಾತನಾಡುತ್ತಾರೆ, ಅವರಿಗೆ ನಮ್ಮ ಅಭಿಪ್ರಾಯವನ್ನು ಒಪ್ಪಿಸುವುದು ಮತ್ತು ಅವರ ಮೇಲೆ ಪ್ರಭಾವ ಬೀರುವುದು ಸುಲಭ' ಎಂದುಕೊಂಡವರಿಗೆ ಬಹು ಬೇಗ ತಮ್ಮ ತಪ್ಪಿನ ಅರಿವಾಗುತ್ತದೆ.

ಶ್ರೀ ನಾರಾಯಣ ಅವರ ನಡೆ-ನುಡಿ, ವ್ಯಕ್ತಿತ್ವಗಳನ್ನು ಕುರಿತು ಹತ್ತಾರು ಅಂಶಗಳನ್ನು ಹೇಳಬಹುದು. ಕನ್ನಡ ಸಾಹಿತ್ಯ ಪರಿಷತ್ತಿನ ಮೂಲಕ, ಕನ್ನಡ ಜಾಗೃತಿ ಪರಿಷತ್ತಿನ ಮೂಲಕ, ಗೋಕಾಕ್ ಸಮಿತಿಯ ಸದಸ್ಯರಾಗಿ ಇತರ ರೀತಿಗಳಲ್ಲಿ ಅವರು ಕನ್ನಡಕ್ಕೆ ಸಲ್ಲಿಸಿರುವ ಸೇವೆ ಅಪಾರ. ಅವರು ಕನ್ನಡಕ್ಕಾಗಿ ಮಾಡಿರುವ ಎಷ್ಟೋ ಕೆಲಸ ಬೆಳಕಿಗೇ ಬಂದಿಲ್ಲ. ಒಮ್ಮೊಮ್ಮೆ ಅವರ ಅಭಿಪ್ರಾಯ ನನಗೆ ಒಪ್ಪಿಗೆಯಾಗದೆ ಹೋದದ್ದುಂಟು. ಆಗಲೂ ಅವರ ಕಾಳಜಿ, ಶ್ರದ್ಧೆ ಸ್ಪಷ್ಟ. ಇಂತಹ ಹಲವಾರು ವಿಷಯಗಳನ್ನು ವಿವರಿಸಬಹುದು. ಒಂದೇ ಅಂಶವನ್ನು ಪ್ರಸ್ತಾಪಿಸಿ ಈ ಲೇಖನ ಮುಗಿಸುತ್ತೇನೆ. ಹಲವು ವರ್ಷಗಳ ಹಿಂದೆ 'ಭಾರತ-ಭಾರತಿ ಪುಸ್ತಕ ಸಂಪದ' ಯೋಜನೆಯ ಉದ್ಘಾಟನೆಯ ಸಮಾರಂಭದಲ್ಲಿ ಶ್ರೀ ನಾರಾಯಣ ಅವರು ಮಾತನಾಡಿದರು. ಅವರ ಭಾಷಣದ ಪ್ರಾರಂಭ ಅವರ ಸ್ವಭಾವಕ್ಕೆ ಕನ್ನಡಿಯಾಗಿತ್ತು. ಅವರೆಂದರು : "ಈಚಿಗಿನ ದಿನಗಳಲ್ಲಿ ನಾನು ಒಂದು ಪ್ರಶ್ನೆಯನ್ನು ಕುರಿತು ಯೋಚನೆ ಮಾಡುತ್ತಿದ್ದೇನೆ. ನನ್ನ ಮನೆಯ ಮಕ್ಕಳಿಗೆ, ನಾಡಿನ ಮಕ್ಕಳಿಗೆ 'ನೀವು ಇವರನ್ನು ಮೇಲ್ಪಂಕ್ತಿಯಾಗಿಟ್ಟುಕೊಳ್ಳಿ' ಎಂದು ಹೇಳಬೇಕಲ್ಲ. ಯಾರನ್ನ ತೋರಿಸುವುದು ? ನನಗೆ ಉತ್ತರ ಸಿಕ್ಕುತ್ತಿಲ್ಲ." ಯಾವುದೇ ಸಂದರ್ಭದಲ್ಲಿಯೂ ಅವರ ದೃಷ್ಟಿ ನೆಟ್ಟಿರುವುದು ನೈತಿಕಮೌಲ್ಯಗಳಲ್ಲಿ, ನಾಡಿನ ನಾಳಿನ ಮಂಗಳದಲ್ಲಿ.

ಸ್ನೇಹಿತರಿದ್ದರೆ ಇಂತಹವರಿರಬೇಕು. ವಿರೋಧಿಗಳಿದ್ದರೂ ಇಂತಹವರೇ ಇರಲಿ ಎನ್ನಿಸುವ ವ್ಯಕ್ತಿತ್ವದವರು ಶ್ರೀ ನಾರಾಯಣ.

ಕನ್ನಡನಾಡು ಅವರ ಸಾಮರ್ಥ್ಯವನ್ನು ಸಾರ್ಥಕವಾಗಿ ಬಳಸಿಕೊಂಡಿಲ್ಲ. ಶ್ರೀ ನಾರಾಯಣ ಅವರಿಗೆ ದೀರ್ಘ ಆಯುಸ್ಸು, ಆರೋಗ್ಯ ಮನಸ್ಸಿನ ನೆಮ್ಮದಿ ದೊರೆಯಲಿ. ಅವರ ಸಾಮರ್ಥ್ಯವನ್ನು ನಾಡು ಸಾರ್ಥಕವಾಗಿ ಬಳಸಿಕೊಳ್ಳಲಿ ಎಂದೇ ನನ್ನಂತಹ ಅವರ ಸ್ನೇಹಿತರ ಪ್ರಾರ್ಥನೆ.

ಗಾಂಧಿವಾದಿ

ಶುಭ್ರ ಖಾದಿಧಾರಣೆ. ತಮ್ಮ ಉಡುಗೆ ತೊಡುಗೆಗಳನ್ನು ತಾವೇ ಶುಚಿಗೊಳಿಸುವ ಸಂಪ್ರದಾಯ—ಪ್ರತಿಯೊಂದು ಕೆಲಸದಲ್ಲೂ ತುಂಬು ಶ್ರದ್ಧೆ. ಬೇರೆಯವರಿಗೆ ಹೇಳಿ ಮಾಡಿಸುವ ಕೆಲಸಗಳಲ್ಲೂ ಪ್ರತಿ ಹಂತದಲ್ಲೂ ಪರೀಕ್ಷೆ. ಸ್ವತಃ ಮಾಡಿ ತೋರಿಸಬಲ್ಲ ಚತುರತೆ. ಬಹುಶಃ ಗಾಂಧಿ ನಡೆದು ತೋರಿಸಿದ, ಇಂಮೂ ಮಾದರಿ ಎನ್ನಿಸಿಕೊಳ್ಳಬಲ್ಲ ಗಾಂಧಿ ವಾದ. ಇದೇ ನಾರಾಯಣರ ಯಶಸ್ವಿ ಜೀವನದ ಗುಟ್ಟು.

ಕನ್ನಡವೇ ಕಾಯಕವಾದ ಜಿ. ನಾರಾಯಣರು

ಡಾ. ಸಿದ್ಧಯ್ಯ ಪುರಾಣಿಕ

ಕನ್ನಡಕ್ಕೆ ತಮ್ಮನ್ನು ಸಂಪೂರ್ಣವಾಗಿ ಸಮರ್ಪಿಸಿಕೊಂಡಿರುವ ಅವರು ಏನಾದರೂ ಹೇಳಿದರೆ ಸಾಕು, ಅದನ್ನು ಮಾಡಿ ಅವರಿಗೆ ಸಂತಸವನ್ನುಂಟುಮಾಡಬೇಕೆನ್ನುವವರು ಕನ್ನಡ-ನಾಡಿನ ಒಳಗೂ ಹೊರಗೂ ಇದ್ದಾರೆ. ಎಂತಲೇ ಅವರು ಒಂದು ಏಕ-ವ್ಯಕ್ತಿ-ಸಂಸ್ಥೆಯಾಗಿದ್ದಾರೆ, ಕನ್ನಡದ ಅಮೂಲ್ಯ ತವನಿಧಿಯಾಗಿದ್ದಾರೆ.

ಏಕನಿಷ್ಠೆಗೆ ಇನ್ನೊಂದು ಹೆಸರು ಶ್ರೀ ಜಿ. ನಾರಾಯಣ. ರಾಜಕೀಯ ರಂಗದಲ್ಲಿ ಅವರಿದ್ದಾರೆ ಇಲ್ಲದಂತೆ; ಸಾರ್ವಜನಿಕ ರಂಗದಲ್ಲಿಯೂ ಇದ್ದಾರೆ ಇಲ್ಲದಂತೆ; ಆದರೆ ಕನ್ನಡ ಕಾಯಕದಲ್ಲಿ ಅವರು ಇದ್ದೂ ಇಲ್ಲದಂತಿರುವುದು ಸಾಧ್ಯವಿಲ್ಲ. ಕನ್ನಡ ಅವರ ಉಸಿರು; ಕನ್ನಡ ಕಾಯಕ ಅವರ ಪಂಚ ಪ್ರಾಣ.

ಅವರ ಕನ್ನಡ ಕಾಯಕ ಸ್ವೀಕರಣ ಎಷ್ಟು ಬಲವಾದುದೋ ಅಷ್ಟೇ ಬಲವಾದುದು ಅವರ ಇತರ ಪ್ರಲೋಭನೆಗಳ ನಿರಾಕರಣ. ಒಮ್ಮೆ ಚಾಮರಾಜಪೇಟೆ ಮತಕ್ಷೇತ್ರದಿಂದ ಇವರನ್ನೇ ತಮ್ಮ ಅಭ್ಯರ್ಥಿಯಾಗಿ ನಿಲ್ಲಿಸಲು ಪ್ರಯತ್ನಿಸಿದುವು ಎಲ್ಲ ಪ್ರಬಲ ರಾಜಕೀಯ ಪಕ್ಷಗಳು. ಇವರು ಒಪ್ಪಿದ್ದರೆ ಜಯ ಕಟ್ಟಿಟ್ಟ ಗಂಟಾಗಿದ್ದಿತು ಆಗ. ಆದರೂ ಇವರು ಆ ಪ್ರಲೋಭನೆಗೆ ತಾವೂ ಬಲಿಯಾಗಲಿಲ್ಲ. ಕನ್ನಡವನ್ನೂ ಬಲಿಕೊಡಲಿಲ್ಲ! ಕನ್ನಡಕ್ಕೆ ಏನೇನನ್ನೋ ನಿರೀಕ್ಷಿಸಿರುವ ಇವರು ಕನ್ನಡದಿಂದ ತಮಗೆ ಏನನ್ನೂ ನಿರೀಕ್ಷಿಸಿಲ್ಲ.

ಕನ್ನಡಕ್ಕಾಗಿ ದುಡಿಯುವವರು, ಕನ್ನಡ ನುಡಿಯನ್ನು ಬೆಳೆಸುವವರು, ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸುವವರು, ಕನ್ನಡ ಸಂಸ್ಕೃತಿಯನ್ನು ಸಂವರ್ಧಿಸುವವರು ಯಾರೇ ಇರಲಿ, ಎಲ್ಲಿಯೇ ಇರಲಿ ಅವರಿಗಾಗಿ ಇವರ ಸಹಾಯಹಸ್ತ ಸದಾ ಸಿದ್ಧ. ಇವರೆಲ್ಲರಿಗೂ ಇವರ ಮನೆ ಹಾಗೂ 'ವಿನೋದ ಕಾರ್ಯಾಲಯ' ಮುಕ್ತದ್ವಾರ. 'ವಿನೋದ ಕಾರ್ಯಾಲಯ' ಅದೆಷ್ಟು ಸಂಘ ಸಂಸ್ಥೆಗಳ ಅಧಿಕೃತ ಕಾರ್ಯಾಲಯವೆಂಬುದನ್ನು ನೆನೆದಾಗ ಇವರ ಬಿಡುವಿಲ್ಲದ, ದಣಿವಿಲ್ಲದ, ಬೇಸರವಿಲ್ಲದ ನಿರಂತರ ಕನ್ನಡ ಸೇವೆಯ ಕಲ್ಪನೆ ಮೂಡೀತು.

ಇವರಿಗೆ ಕನ್ನಡ ಸೇವಾ ದೀಕ್ಷೆಯನ್ನು ಕೊಟ್ಟವರಾರೋ ನನಗೆ ಗೊತ್ತಿಲ್ಲ. ಯಾರಾದರೂ ಇದ್ದರೆ ಅವರಿಗೆ ಇವರ ಕನ್ನಡ ಸೇವೆಯ ಅನೇಕ ಮುಖಗಳನ್ನು ನೋಡಿ ಅಭಿಮಾನ ಉಕ್ಕೇರಿರಲು ಸಾಕು. ಇವರ ಕನ್ನಡ ಸೇವಾ ಕ್ಷೇತ್ರದಿಂದ ಹೊರಗುಳಿದವರು ಯಾರು? ಪಂಡಿತರೆ? ಪಾಮರರೆ? ಲೇಖಕರೆ? ವಾಚಕರೆ? ಗಮಕಿಗಳೆ? ಕೀರ್ತನಕಾರರೆ? ಲೇಖಕಿಯರೆ? ಜಾನಪದ ಕಲಾವಿದರೆ? ಒಳನಾಡ ಕನ್ನಡಿಗರೆ? ಹೊರನಾಡ ಕನ್ನಡಿಗರೆ?

ವಿದೇಶಗಳ ಕನ್ನಡಿಗರೆ? ಪ್ರಕಾಶಕರೆ? ಪ್ರಚಾರಕರೆ? ಯಾರೂ ಇಲ್ಲವೆಂದರೆ ಇದಕ್ಕೆ ಇದಿರು ಮಾತಿಲ್ಲ.

ಎಲ್ಲರೂ ಅವರನ್ನೇ ಅರಸಿಕೊಂಡೇಕೆ ಹೋಗುತ್ತಾರೆ? ತಮ್ಮ ಕೆಲಸವನ್ನು ಅವರು ಅಂಗೀಕರಿಸಿಬಿಟ್ಟರೆ ಸಾಕು—ಅದಕ್ಕೆ ಯಶಸ್ಸು ಖಂಡಿತ, ಎಂಬ ವಿಶ್ವಾಸ ಎಲ್ಲರಿಗೆ. ಒಮ್ಮೆ ಅವರು ಒಂದು ಕನ್ನಡ ಕಾರ್ಯವನ್ನು ಒಪ್ಪಿದರೆಂದರೆ ಅದನ್ನು ಒಪ್ಪಿಸಿದವರೇ ಕೈ ಬಿಟ್ಟರೂ, ಕೈ ಕೊಟ್ಟರೂ ಅವರದನ್ನು ಬಿಡುವವರಲ್ಲ. ಆ ಕೆಲಸದ ಸಾಧಕ ಬಾಧಕಗಳನ್ನೆಲ್ಲ ಆಮೂಲಾಗ್ರವಾಗಿ ವಿಶ್ಲೇಷಿಸುತ್ತಾರೆ; ಅದರ ಯಶಸ್ಸಿಗಾಗಿ ಎಲ್ಲ ವಿವರಗಳನ್ನೊಳಗೊಂಡ ಕಾರ್ಯಯೋಜನೆಯೊಂದನ್ನು ರೂಪಿಸುತ್ತಾರೆ; ಅವರ ಯಾವ ಯಾವ ಅಂಗವನ್ನು ಯಾರಿಗೆ ಕೊಟ್ಟರೆ ಪೂರ್ಣವಾದೀತೆಂಬುದನ್ನು ವಿಚಕ್ಷಣತೆಯೊಡನೆ ನಿರ್ಧರಿಸಿ ಅವರು ಆ ಅಂಗವನ್ನು ವಹಿಸಿಕೊಳ್ಳುವಂತೆ ಅವರ ಮನ ಒಲಿಸುತ್ತಾರೆ; ಅವರಿಗೆ ಎಡರು ತೊಡರುಗಳು ಎದುರಾದಾಗ ಅವರ ನೆರವಿಗಾಗಿ ಧಾವಿಸುತ್ತಾರೆ; ತಮ್ಮ ಒಟ್ಟು ಹೊಣೆಗಾರಿಕೆಯನ್ನು ದಿಟ್ಟತನದಿಂದ ನಿರ್ವಹಿಸುತ್ತಾರೆ. ಅಂತೂ ಜಯ ಗಳಿಸಿಯೇ ಅವಭೃತ ಸ್ನಾನ ಮಾಡುತ್ತಾರೆ. ಉದ್ದಕ್ಕೂ ಸದ್ದಿಲ್ಲದ ಸಾಧನೆ; ಗದ್ದಲವಿಲ್ಲದ ಕಾರ್ಯಾಚರಣೆ; ಪ್ರಚಾರದ ರಭಸ, ಅಬ್ಬರಗಳಿಲ್ಲದ ಸೇವೆ; ಅನುದ್ವೇಗಕರವಾದ ನುಡಿ, ಕಲಂಕ ರಹಿತವಾದ ನಡೆ!

ಕನ್ನಡಕ್ಕಾಗಿ ನಿಷ್ಠೆಯಿಂದ ದುಡಿಯಲು ಕಂಕಣ ಬದ್ಧರಾದ ಕನ್ನಡ ಕಾರ್ಯಕರ್ತರ ಒಂದು ಸೇನೆಯನ್ನೇ ಸಿದ್ಧಗೊಳಿಸಿದ ಶ್ರೇಯಸ್ಸು ಶ್ರೀ ಜಿ. ನಾರಾಯಣರದು. ಈ ಕಾರ್ಯಕರ್ತರ ಕಾಯಕನಿಷ್ಠೆ ಅಸದೃಶವಾದುದು. ಶ್ರೀ ನಾರಾಯಣರು ಪರಿಷತ್ತಿನ, ಮಹಾನಗರ ಸಭೆಯ ಅಧಿಕಾರದಲ್ಲಿರಲಿ, ಇಲ್ಲದಿರಲಿ ಅವರು ಹೇಳಿದ ಕೆಲಸ ಮಾಡಲು ಸದಾ ಸಿದ್ಧರಿವರು, ಸನ್ನದ್ಧರಿವರು. ಶ್ರೀ ಜಿ. ನಾರಾಯಣರು ಸದು ವಿನಯದ ತುಂಬಿದ ಕೊಡ. ಅವರೇನಾದರೂ ಕನ್ನಡ ಕೆಲಸ ಮಾಡ ಹೇಳಿದರೆ ಅವರ ಸಿಷ್ಯ ಕಾರ್ಯಕರ್ತರೇಕೆ, ಯಾರೂ ನಿರಾಕರಿಸಲಾರರು. ಅವರ ಸದುದ್ದೇಶದಲ್ಲಿ, ನಿಃಸ್ಪೃಹತೆಯಲ್ಲಿ, ಕನ್ನಡದ ಬಗ್ಗೆ ಕಾಳಜಿ-ಕಳಕಳಿಗಳಲ್ಲಿ, ಸೇವಾಬುದ್ಧಿಯಲ್ಲಿ ಸಂದೇಹವಿದ್ದರೆ ತಾನೆ ನಿರಾಕರಿಸುವ ಪ್ರಶ್ನೆ? ಕನ್ನಡಕ್ಕೆ ತಮ್ಮನ್ನು ಸಂಪೂರ್ಣವಾಗಿ ಸಮರ್ಪಿಸಿಕೊಂಡಿರುವ ಅವರು ಏನಾದರೂ ಹೇಳಿದರೆ ಸಾಕು, ಅದನ್ನು ಮಾಡಿ ಅವರಿಗೆ ಸಂತಸವನ್ನುಂಟುಮಾಡಬೇಕೆನ್ನುವವರು ಕನ್ನಡನಾಡಿನ ಒಳಗೂ ಹೊರಗೂ ಇದ್ದಾರೆ. ಎಂತಲೇ ಅವರು ಒಂದು ಏಕ-ವ್ಯಕ್ತಿ-ಸಂಸ್ಥೆಯಾಗಿದ್ದಾರೆ; ಕನ್ನಡದ ಅಮೂಲ್ಯ ತವನಿಧಿಯಾಗಿದ್ದಾರೆ.

ಅವರ ಬಗ್ಗೆ ಬರೆಯಲು ಮೊದಲು ಮಾಡಿದರೆ ಬರೆಯುತ್ತಲೇ ಹೋಗಬೇಕೆನ್ನಿಸುತ್ತದೆ; ಬರೆದಷ್ಟೂ ಬರೆಯುವ ಬಯಕೆ ತೀವ್ರವಾಗುತ್ತದೆ. ಆದರೂ ಸಂಪಾದಕರು ನಿಗದಿ ಮಾಡಿರುವ ಗಡುವಿನಲ್ಲಿಯೇ ಬರೆಯಬೇಕಾಗಿದೆಯಾಗಿ ಇಲ್ಲಿಗೆ ನಿಲ್ಲಿಸಬೇಕು ನಾನು. ಅರುವತ್ತು ದಾಟಿರುವ ಅವರನ್ನು ಸಾರ್ವಜನಿಕವಾಗಿ ಅಭಿನಂದಿಸಲಿರುವುದು ಅತ್ಯಂತ ಶ್ಲಾಘನೀಯವಾದುದು. ಇದನ್ನು ಮಾಡಲು ಮುಂದೆ ಬಂದಿರುವವರೆಲ್ಲ ಅಭಿನಂದನೀಯರು. ಈ ಚರಿತ್ರಾರ್ಹ ಸಂದರ್ಭದಲ್ಲಿ ಕನ್ನಡ ತಾಯಿ ಅವರಿಗೆ ಉದ್ದಂಡ ಆಯುಷ್ಯವನ್ನೂ, ಅಖಂಡ ಆರೋಗ್ಯವನ್ನೂ, ಅವರ ಕನ್ನಡ ಕಾಯಕದಲ್ಲಿ ಅಪೂರ್ವ ಯಶಸ್ಸನ್ನೂ, ಅವರಿಗೂ ಅವರ ಪರಿವಾರಕ್ಕೂ ಉತ್ತರೋತ್ತರ್ಷವನ್ನೂ ಅನುಗ್ರಹಿಸಲೆಂದು ಅವರ ಅಸಂಖ್ಯ ಅಭಿಮಾನಿಗಳೊಡನೆ ನಾನೂ ಪ್ರಾರ್ಥಿಸುತ್ತೇನೆ. 'ನಿಮ್ಮೊಡನೆ ನಾವಿದ್ದೇವೆ' ಎಂಬುದನ್ನು ಸ್ಥಿರೀಕರಿಸಲೆಂದೇ ಹಮ್ಮಿಕೊಂಡಿರುವ ಈ ಅಭಿನಂದನ ಸಮಾರಂಭ ಅಭೂತಪೂರ್ವವಾಗಿ ಜರುಗಲೆಂದೂ, ಅವರ ಕನ್ನಡ ಕಾಯಕಕ್ಕೆ ಕನ್ನಡಿಗರೆಲ್ಲರ ಸಹಕಾರವನ್ನು ದೊರಕಿಸಿಕೊಡಲೆಂದೂ ಹೃತ್ಪೂರ್ವಕವಾಗಿ ಹಾರೈಸುತ್ತೇನೆ.

ಕಾರ್ಯಕುಶಲ ಕನ್ನಡ ಸೇನಾನಿ

ಡಾ|| ರಂ. ಶ್ರೀ. ಮುಗಳಿ

ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಹಲವಾರು ಯೋಜನೆಗಳನ್ನು ರೂಪಿಸಿದರು. ಕರ್ನಾಟಕದುದ್ದಕ್ಕೂ ವಿವಿಧ ಸ್ವರೂಪದ ಸಭೆ ಸಮ್ಮೇಳನಗಳನ್ನು ನಡಸಿದರು. ಎಲ್ಲದರಲ್ಲಿಯೂ ಕನ್ನಡಭಾಷೆ-ಸಾಹಿತ್ಯ-ಸಂಸ್ಕೃತಿಗಳ ಅಭಿಮಾನ ಮತ್ತು ಅರಿವು ಕನ್ನಡಿಗರಲ್ಲಿ ಹೆಚ್ಚಬೇಕು, ಇದಕ್ಕಾಗಿ ಸಾಕ್ಷರತೆಯ ಪ್ರಸಾರವು ಹೆಚ್ಚಿನ ಪ್ರಮಾಣದಲ್ಲಿ ಆಗಬೇಕು ಮತ್ತು ವ್ಯವಹಾರಗಳಲ್ಲಿ ಕನ್ನಡಕ್ಕೆ ಅಗ್ರಪಟ್ಟ ದೊರಕಬೇಕು—ಇದು ಅವರ ಮೂಲ ಉದ್ದೇಶ.

ನಾನು ಸಾಂಗಲಿಯ ವಿಲಿಂಗ್ಡನ್ ಕಾಲೇಜಿನಲ್ಲಿ ಪ್ರಾಚಾರ್ಯನಾಗಿ ಬಿಡುವಿಲ್ಲದ ಕೆಲಸಕಾರ್ಯಗಳಲ್ಲಿ ತೊಡಗಿರುವಾಗ ಒಂದು ದಿನ ಬೆಂಗಳೂರಿನಿಂದ ಒಂದು ತಂತಿಯ ಸಂದೇಶ ಬಂತು. ಯಾವುದೋ ಒಂದು ಕಾರ್ಯಕ್ರಮಕ್ಕೆ ನಾನು ಒಪ್ಪಬೇಕೆಂದು ಅದರ ಅಭಿಪ್ರಾಯವಾಗಿತ್ತು. ಅದನ್ನು ಕಳಿಸಿದವರು ಮೇಯರ್ ಎಂದು ಕಾಣಿಸಲಾಗಿತ್ತು. ನನಗೆ ಆಗ ಅದರ ತಳಬುಡವೇ ತಿಳಿಯಲಿಲ್ಲ. ಏನೋ ಔಪಚಾರಿಕ ಆಮಂತ್ರಣವಿರಬಹುದೆಂದು ನಾನು ಉತ್ತರಬರೆಯದೆ ಸುಮ್ಮನಿದ್ದೆ. ಆದರೆ ಮರುದಿನ ಕೈಸೇರಿದ ಪತ್ರದಿಂದ ವಿಷಯ ತಿಳಿಯಿತು. ಬೆಂಗಳೂರು ಮಹಾನಗರಪಾಲಿಕೆಯ ಪರವಾಗಿ ಸಾಹಿತಿಯೆಂದು ನನ್ನ ಸನ್ಮಾನ ಮಾಡುವುದು ಆ ಕಾರ್ಯಕ್ರಮದ ಉದ್ದೇಶವಾಗಿತ್ತು. ಕನ್ನಡ-ಕನ್ನಡ-ನಿಘಂಟುಸಮಿತಿಯ ಸಭೆಯೊಂದಕ್ಕೆ ನಾನು ಬೆಂಗಳೂರಿಗೆ ಬರುವುದನ್ನು ತಿಳಿದುಕೊಂಡು ಅದಕ್ಕೆ ಹೊಂದಿಕೊಂಡು ಈ ಕಾರ್ಯಕ್ರಮವನ್ನು ಹೂಡಲಾಗಿತ್ತು. ಆ ತಂತಿಯನ್ನು ಕಳಿಸಿದವರು ಮತ್ತು ಪತ್ರವನ್ನು ಬರೆದವರು ಆ ಮಹಾನಗರಪಾಲಿಕೆಯ ಮೇಯರ್ ಅಂದರೆ ಮಹಾಪೌರರಾಗಿದ್ದ ಶ್ರೀ ಜಿ. ನಾರಾಯಣ ಅವರು. 'ಇದೆಲ್ಲ ಬೇಡ' ಎನ್ನುವುದಕ್ಕೆ ಅವಕಾಶಕೊಡದಂತೆ ಎಲ್ಲ ಏರ್ಪಾಡುಗಳನ್ನು ಮಾಡಿ ಅವರು ಎಷ್ಟು ಅಚ್ಚುಕಟ್ಟಾಗಿ ಈ ಕಾರ್ಯಕ್ರಮವನ್ನು ನಡೆಸಿದರು ಎಂಬುದು ಇಂದಿಗೂ ನನ್ನ ಕಣ್ಣಮುಂದೆ ಕಟ್ಟಿದಂತಿದೆ. ಅಂದಿನಿಂದ ಇಂದಿನವರೆಗೆ ಅವರ ಕಾರ್ಯಕುಶಲತೆಯನ್ನು ಮತ್ತು ಇತರ ಸದ್ಗುಣಗಳನ್ನು ಅನೇಕ ಸಂದರ್ಭಗಳಲ್ಲಿ ಹತ್ತಿರದಿಂದ ನೋಡಿ ತುಂಬ ಮೆಚ್ಚಿಕೊಂಡವರಲ್ಲಿ ನಾನೊಬ್ಬನು ಎಂದು ಹೆಮ್ಮೆಯಿಂದ ಹೇಳಬಯಸುತ್ತೇನೆ.

ನಾನು ಹಲವಾರು ವರ್ಷ ಆಗಾಗ ಸಭೆ ಸಮಾರಂಭಗಳ ಕಾರಣದಿಂದ ಬೆಂಗಳೂರಿಗೆ ಬಂದು ಹೋಗುತ್ತಿದ್ದೆ. ಆದರೆ ಇಂದಿಗೆ ಹದಿನೆಂಟು ವರ್ಷಗಳ ಹಿಂದೆ ನಾನು ಇಲ್ಲಿಯೇ ಬಂದು ನೆಲಸುವೆನೆಂದು ಯಾರೂ ಸುಲಭವಾಗಿ ಊಹಿಸುವಂತಿರಲಿಲ್ಲ. ಯಾವ ಅದೃಷ್ಟವು ನನ್ನನ್ನು ಬೆಂಗಳೂರಿಗೆ ಎಳೆದುಕೊಂಡು ಬಂದು ಕಾಲೂರುವಂತೆ ಮಾಡಿತೋ ಅದೇ ನನಗೆ ಮಾಡಿದ ದೊಡ್ಡ ಉಪಕಾರವೆಂದರೆ ಶ್ರೀ ನಾರಾಯಣ ಅವರ ಸ್ನೇಹ-ಸೌಹಾರ್ದಗಳು

ನನಗೆ ನಿರಂತರವಾಗಿ ದೊರೆಯುವಂತೆ ಮಾಡಿದ್ದು. ನನ್ನಮಟ್ಟಿಗೆ ನನಗೆ ಬೇರೆ ಏನಾದರೂ ಜೀವನದಲ್ಲಿ ಸಿಗಲಿ ಬಿಡಲಿ, ಶ್ರೀ ನಾರಾಯಣ ಅವರಂಥ ವ್ಯಕ್ತಿಗಳ ಸ್ನೇಹ ಮತ್ತು ಆತ್ಮೀಯತೆಗಳು ಸಿಕ್ಕರೆ ಸಾಕು, ನಾನು ಸಮಾಧಾನದಿಂದ ಬದುಕಬಲ್ಲೆ ಮಾತ್ರವಲ್ಲ, 'ಸಿಡಿಲನೂ ಸವಿಯ ಮಾಡುವೆ' ಎಂದು ಹೇಳುವವನು, ಹಿಂಜರಿಯದೆ ಮುಂದೆ ಮುಂದೆ ಹೋಗುವವನು.

ಕನ್ನಡನಾಡಿನ ಸಮಸ್ಯೆಗಳು ಒಂದರೊಳಗೊಂದು ತೊಡಕಿಕೊಂಡವುಗಳಾಗಿವೆ. ಕರ್ನಾಟಕದ ರಾಜಧಾನಿಯಾದ ಬೆಂಗಳೂರಿನಲ್ಲಿ ಅವು ಹೆಚ್ಚು ಜಟಿಲವಾಗಿಬಿಟ್ಟಿವೆ. ಇಂಥ ಸಂನಿವೇಶದಲ್ಲಿ ಕನ್ನಡತನವನ್ನು ಹೆಚ್ಚಿಸಬೇಕೆಂದು ಕೆಲವರು ತಂತಮ್ಮ ರೀತಿಯಲ್ಲಿ ಕೆಲಸಮಾಡುತ್ತ ಬಂದಿದ್ದಾರೆ. ಅದರಿಂದ ಒಂದಿಲ್ಲೊಂದು ಬಗೆಯ ಒಳ್ಳೆಯದಾಗಿದೆ. ಶ್ರೀ ನಾರಾಯಣ ಅವರದು ಮಾತ್ರ ಅವರಿಗೇ ವಿಶಿಷ್ಟವಾದ ರಚನಾತ್ಮಕ ಕಾರ್ಯಪದ್ಧತಿ. ಕನ್ನಡ ಪುಸ್ತಕ ಪ್ರಸಾರವಿರಲಿ, ಸಭೆಸಮಾರಂಭಗಳಿರಲಿ ಪ್ರತಿಯೊಂದು ವಿವರದಲ್ಲಿ ಅದರ ಸಮಗ್ರ ಯೋಜನೆಯನ್ನು ಮಾಡಿ ಆಯಾ ಕೆಲಸಕ್ಕೆ ತಕ್ಕವರಿಗೆ ಅದನ್ನು ಹಂಚಿಕೊಟ್ಟು ತಾವೂ ತಮ್ಮ ಪಾಲಿನ ಕೆಲಸ ಮತ್ತು ಹೊಣೆಯನ್ನು ನಿರ್ವಹಿಸಿ ಎಲ್ಲವೂ ಯೋಜಿತವಾದಂತೆ ನಡೆಯುವಹಾಗೆ ನೋಡಿಕೊಳ್ಳುವ ಕಾರ್ಯಕುಶಲತೆ ಮತ್ತು ಯೋಗ್ಯನಾಯಕತ್ವ ಅವರ ವೈಶಿಷ್ಟ್ಯ. ತಾವು ಕೈಗೊಂಡ ಕಾರ್ಯ ಮತ್ತು ಹೊಣೆಗಾರಿಕೆ ಎಷ್ಟೇ ದೊಡ್ಡದಾಗಿದ್ದರೂ ಅವರು ತಮ್ಮ ಮನಸ್ಸಿನ ಸಮತೋಲನವನ್ನು ಕಳೆದುಕೊಳ್ಳುವುದಿಲ್ಲ. ಯಾವ ವಿವರವೂ ತಪ್ಪದಂತೆ ಕಾರ್ಯವು ಯಥೋಚಿತವಾಗಿ ನಡೆಯುವಂತೆ ನೋಡಿಕೊಳ್ಳುತ್ತಾರೆ. ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಹಲವಾರು ಯೋಜನೆಗಳನ್ನು ರೂಪಿಸಿದರು. ಕರ್ನಾಟಕದುದ್ದಕ್ಕೂ ವಿವಿಧ ಸ್ವರೂಪದ ಸಭೆ ಸಮ್ಮೇಳನಗಳನ್ನು ನಡೆಸಿದರು. ಎಲ್ಲದರಲ್ಲಿಯೂ ಕನ್ನಡಭಾಷೆ-ಸಾಹಿತ್ಯ-ಸಂಸ್ಕೃತಿಗಳ ಅಭಿಮಾನ ಮತ್ತು ಅರಿವು ಕನ್ನಡಿಗರಲ್ಲಿ ಹೆಚ್ಚಬೇಕು, ಇದಕ್ಕಾಗಿ ಸಾಕ್ಷರತೆಯ ಪ್ರಸಾರವು ಹೆಚ್ಚಿನ ಪ್ರಮಾಣದಲ್ಲಿ ಆಗಬೇಕು, ಆಡಳಿತ ಮತ್ತು ವ್ಯವಹಾರಗಳಲ್ಲಿ ಕನ್ನಡಕ್ಕೆ ಅಗ್ರಪಟ್ಟ ದೊರಕಬೇಕು ಇದು ಅವರ ಮೂಲ ಉದ್ದೇಶ.

ಪರಿಷತ್ತಿನ ಸುವರ್ಣಮಹೋತ್ಸವ ಮತ್ತು ವಜ್ರಮಹೋತ್ಸವಗಳನ್ನು ತಮ್ಮ ಅಧ್ಯಕ್ಷತೆಯ ಅವಧಿಯಲ್ಲಿ ಅವರು ಅತ್ಯಂತ ವಿಜೃಂಭಣೆಯಿಂದ ನೆರವೇರಿಸಿದರು. ಈ ಎರಡೂ ಉತ್ಸವಗಳು ತೀರ ಹತ್ತಿರ ಬಂದಂತೆ ಅವರು ದೇಹಾಯಾಸದಿಂದ ಬಳಲಿದರು, ಆದರೆ ಎದೆಕುಗ್ಗಲಿಲ್ಲ. ವಜ್ರಮಹೋತ್ಸವದ ಕಾಲಕ್ಕಂತೂ ಒಂದುವಾರ ಮುಂಚೆ ಅವರು ಹಾಸಿಗೆ ಹಿಡಿದರು. ಆದರೆ ಹತಾಶರಾಗದೆ ತಮ್ಮ ಸ್ನೇಹಿತರನ್ನೂ ಕಾರ್ಯಕರ್ತರನ್ನೂ ಮನೆಗೆ ಕರೆಸಿಕೊಂಡು ಮಲಗಿದಲ್ಲಿಯೇ ಉಳಿದ ಕಾರ್ಯವಿವರಗಳನ್ನು ತಿಳಿಹೇಳಿ ಎಲ್ಲವೂ ಸಾಂಗವಾಗಿ ನಡೆಯುವಂತೆ ನೆರವಾಗಲು ಕೋರಿದರು. ಈ ಸಂದರ್ಭದಲ್ಲಿ ಅವರ ಕಾರ್ಯಕುಶಲತೆ ಮನೋಧೈರ್ಯ ಮತ್ತು ವಿವರಗಳ ಪರಿಜ್ಞಾನ ಎದ್ದು ಕಂಡವು.

ಸುವರ್ಣ ಮಹೋತ್ಸವದ ಸಮಾರಂಭದಲ್ಲಿ ಆ ವರ್ಷದ ಸಾಹಿತ್ಯ ಸಮ್ಮೇಲನವೂ ಜರುಗಿದಾಗ ಕನ್ನಡಿಗರಿಗೆ ಉದ್ಯೋಗಾವಕಾಶವು ಹೆಚ್ಚಿನ ಪ್ರಮಾಣದಲ್ಲಿ ದೊರಕಬೇಕೆಂಬ ಗೊತ್ತುವಳಿಯ ಚರ್ಚೆ ನಡೆಯಿತು. ಆಗ ಕನ್ನಡಿಗರೆಂದರೆ ಯಾರು ಎಂಬ ಪ್ರಶ್ನೆ ಬಂದು ಮಹಾಸಾಗರದಂತಿದ್ದ ಸಭೆ ಭಾವನೋದ್ರೇಕದಿಂದ ಕೆರಳಿದಾಗ ಶ್ರೀ ನಾರಾಯಣ ಅವರು ಅತ್ಯಂತ ಶಾಂತ ಮನಃಸ್ಥಿತಿಯಿಂದ ಅಂದಿನ ಪರಿಸ್ಥಿತಿಯನ್ನು ಇದಿರಿಸಿದ ರೀತಿ ಅವರಲ್ಲಿದ್ದ ಉತ್ತಮನಾಯಕತ್ವದ ಗುಣವನ್ನು ಎತ್ತಿ ತೋರಿಸಿತು.

ಅರವತ್ತುವರ್ಷತುಂಬಿರುವ ಈ ಸಂದರ್ಭದಲ್ಲಿ ಕನ್ನಡ ನಾಡುನುಡಿಗಳ ಸರ್ವತೋಮುಖವಾದ ಏಳಿಗೆಗೆ ಕಳಕಳಿಯಿಂದ ದುಡಿಯುತ್ತಿರುವ ಶ್ರೀ ನಾರಾಯಣ ಅವರಿಗೆ ಸುದೀರ್ಘ ಆಯುಷ್ಯವನ್ನು ಉತ್ತಮ ಆರೋಗ್ಯವನ್ನು ದೇವರು ದಯಪಾಲಿಸಲಿ ಎಂದು ಪ್ರಾರ್ಥಿಸುತ್ತೇನೆ. ನಾಡಿನ ಜನತೆ ಈ ಕಾರ್ಯಕುಶಲ ಕನ್ನಡ ಸೇನಾನಿಯನ್ನು ಇನ್ನೂ ಹೆಚ್ಚಿನ ಹೊಣೆಗಾರಿಕೆಯ ಸ್ಥಾನಗಳಲ್ಲಿ ನಿಲ್ಲಿಸಿ ನಾಯಕತ್ವದ ಲಾಭಪಡೆದು ಕನ್ನಡವು ಒಂದು ಸಾರ್ವತ್ರಿಕವಾದ ಚೈತನ್ಯದಾಯಕವಾದ ಶಕ್ತಿಯಾಗುವಂತೆ ಪ್ರಯತ್ನಿಸಲಿ ಎಂದು ಮನಃಪೂರ್ವಕವಾಗಿ ಹಾರೈಸುತ್ತೇನೆ.

ಪರಿಷತ್ತಿನ ಅಧ್ಯಕ್ಷತೆ

ಪ್ರೊ|| ಜಿ. ವೆಂಕಟಸುಬ್ಬಯ್ಯ

ಎಂಥ ಸಂದರ್ಭದಲ್ಲಿಯೂ ಅಧೀರರಾಗದ ಒಂದು ಸ್ಥಿಮಿತ ಚಿತ್ತತೆ ಅವರಿಗಿದೆ. ಯಾವ ಕಾರ್ಯಕ್ಕೂ ಖಚಿತ ಯೋಜನೆಯನ್ನು ಹಾಕುವ, ಎಲ್ಲವನ್ನೂ ತಾವೇ ಖುದ್ದು ವಿಚಾರಿಸುವ, ತಪಾಸು ಮಾಡುವ ರೀತಿ ಅತ್ಯಾಶ್ಚರ್ಯಕರವಾದುದು. ಅನೇಕರಿಗೆ ಇದು ಸಾಧ್ಯವಾಗುವುದಿಲ್ಲ. ಅವರಿಗೆ ಇದು ರಕ್ತಗತ.

ಮಾನ್ಯ ಜಿ. ನಾರಾಯಣ ಅವರು ಪರಿಷತ್ತಿನ ಅಧ್ಯಕ್ಷರಾಗಿ ಚುನಾಯಿತರಾಗುವ ಮುಂಚೆ ನಾನು ಅದರ ಅಧ್ಯಕ್ಷನಾಗಿದ್ದೆ. ನನ್ನ ಅಧಿಕಾರಾವಧಿಯ ಕಾಲ ಬಡತನದ ಬವಣೆಯ ಕಾಲ. ದಿ|| ಎಸ್. ಆರ್. ಕಂಠಿಯವರ ಬೆಂಬಲ, ಮಾನ್ಯ ರಾಮಕೃಷ್ಣ ಹೆಗ್ಗಡೆ ಅವರಿತ್ತ ಸರಕಾರಿ ದ್ರವ್ಯಸಹಾಯ ನನಗೆ ದೊರಕದೆ ಇದ್ದರೆ ಪರಿಷತ್ತು ಇಂದು ಚರಿತ್ರೆಯಲ್ಲಿ 'ಸತ್ತ ಸಂಸ್ಥೆಗಳ' ಸಾಲಿನಲ್ಲಿ ನಮೂದಾಗುತ್ತಿತ್ತು. ಜಂತೆ ಮುರಿದು ಬೀಳುತ್ತಿದ್ದ ಕಟ್ಟಡವನ್ನು ಭುಜಕೊಟ್ಟು ನಿಲ್ಲಿಸಿದ ಕಷ್ಟದ ಕಾರ್ಯ ನನ್ನದಾಯಿತು. ತಿಂಗಳ ಸಂಬಳವನ್ನು ಸಿಬ್ಬಂದಿಗೆ ಕೊಡಲು ಆಯ್ಕೆಯಾದ ಮೊದಲ ತಿಂಗಳಲ್ಲಿಯೇ ನನಗೆ ಕಷ್ಟವಾಯಿತು. ನಾನು ಇಂಥ ಸಂದರ್ಭದಲ್ಲಿ ಸಾಲ ಮಾಡಿ ಪರಿಷತ್ತಿನ ಹೆಸರನ್ನು ಉಳಿಸಬೇಕಾಯಿತು. ನಾನು ನಾರಾಯಣ ಅವರಿಗೆ ಅಧಿಕಾರವನ್ನು ವಹಿಸಿಕೊಟ್ಟಾಗ 65 ಸಾವಿರ ರೂಪಾಯಿಗಳಷ್ಟು ಬ್ಯಾಂಕ್ ಡಿಪಾಸಿಟ್ ಇತ್ತು. ಇಂಥ ಸಮಯದಲ್ಲಿ ನನ್ನ ಮಿತ್ರರಾದ ಶಂಕರಗೌಡರು ವಿದ್ಯಾಮಂತ್ರಿಗಳಾಗಿ ಅಧಿಕಾರ ವಹಿಸಿಕೊಂಡರು. ನಾರಾಯಣರು ಪರಿಷತ್ತಿನ ಅಧಿಕಾರವನ್ನು ವಹಿಸಿಕೊಂಡರು. ಮಂತ್ರಿಗಳಿಗೆ ಕನ್ನಡದ ಬಗ್ಗೆ ಆಸಕ್ತಿ. ನಾರಾಯಣರಿಗೆ ಕೆಲಸ ಮಾಡುವ ಹುಮ್ಮಸ್ಸು. ಅಲ್ಲಿಂದ ಮುಂದೆ ಪರಿಷತ್ತು ಬೆಳೆದು ಅಭಿವೃದ್ಧಿ ಹೊಂದಿದ ಕಥೆ ಎಲ್ಲರಿಗೂ ತಿಳಿದಿದೆ. ಈ ಕಾರ್ಯದಲ್ಲಿ ನಾರಾಯಣರ ಸೇವೆ ತುಂಬ ಸ್ತುತ್ಯವಾದುದು. ಹೊಸ ಸಂವಿಧಾನವನ್ನಿತ್ತು ಪರಿಷತ್ತನ್ನು ಉಳಿಸಿದ ಕಾರ್ಯ ನನ್ನದು ; ಅದನ್ನು ಬೆಳಸಿದ ಕಾರ್ಯ ನಾರಾಯಣರದು. ನಾನು ಉದ್ದೇಶಿಸಿದ್ದ ಅನೇಕ ಕಾರ್ಯಕ್ರಮಗಳು ಅವರಿಂದ ಪೂರೈಸಿಕೊಳ್ಳುವ ಅವಕಾಶ ಹೊಂದಿದುವು. ಜಿಲ್ಲಾ ಸಾಹಿತ್ಯ ಸಮ್ಮೇಳನ ನನ್ನ ಮೊದಲ ಕನಸಾಗಿತ್ತು. ಅದನ್ನು ನಾರಾಯಣರು ನನಸು ಮಾಡಿದರು. ಹೀಗೆಯೇ ಸ್ಥಿರವಾದ ಪುಸ್ತಕ ಪ್ರದರ್ಶನ ಇತ್ಯಾದಿಗಳು.

ಒಟ್ಟಿನಲ್ಲಿ ಪರಿಷತ್ತಿನ ಹೆಸರು ನಾಡಿನಲ್ಲಿ ಅಧಿಕವಾಗಿ ಪ್ರಚಾರಗೊಂಡುದು ಶ್ರೀ ನಾರಾಯಣರ ಕಾಲದಲ್ಲಿ. ಸರಕಾರ ಹೆಚ್ಚಿಗೆ ಧನಸಹಾಯ ಮಾಡಿದುದು ಅವರ ಕಾಲದಲ್ಲಿ. ಅನೇಕ ವ್ಯಾಪಕ ಕಾರ್ಯಕ್ರಮಗಳು ನಡೆದುದು ಅವರ ಮುಂದಾಳತನದಲ್ಲಿ. ಈ ಎಲ್ಲ

ಕಾರ್ಯಗಳಲ್ಲಿ ಅವರಿಗೆ ಬೆಂಬಲ ನೀಡುವ ಅವಕಾಶ ನನಗೆ ದೊರಕಿತ್ತು. ಅವರ ಕಾರ್ಯವನ್ನು ಹತ್ತಿರದಿಂದ ನೋಡಿರುವ ನನಗೆ ಅವರ ಬಗ್ಗೆ ಅಪಾರವಾದ ಮೆಚ್ಚಿಕೆಯಿದೆ. ಅವರ ವಿವೇಕ ನನಗೆ ಆಶ್ಚರ್ಯವನ್ನು ತಂದಿದೆ. ಯಾರನ್ನೂ ಎದುರು ಹಾಕಿಕೊಳ್ಳದೆ, ಯಾರನ್ನೂ ತುಂಬ ಹಚ್ಚಿಕೊಳ್ಳದೆ, ಎಲ್ಲರ ಸಹಾಯ ಸಲಹೆ ಸಹಕಾರಗಳನ್ನೂ ಪಡೆಯುವ ಅವರ ಜಾಣತನ ಮೆಚ್ಚಿಕೆಗೆ ಅರ್ಹವಾದುದು. ಎಂಥ ಸಂದರ್ಭದಲ್ಲಿಯೂ ಅಧೀರರಾಗದ ಒಂದು ಸ್ತಿಮಿತಚಿತ್ತತೆ ಅವರಿಗಿದೆ. ಯಾವ ಕಾರ್ಯಕ್ಕೂ ಖಚಿತ ಯೋಜನೆಯನ್ನು ಹಾಕುವ, ಎಲ್ಲವನ್ನೂ ತಾವೇ ಖುದ್ದು ವಿಚಾರಿಸುವ, ತಪಾಸು ಮಾಡುವ ರೀತಿ ಅತ್ಯಾಶ್ಚರ್ಯಕರವಾದುದು. ಅನೇಕರಿಗೆ ಇದು ಸಾಧ್ಯವಾಗುವುದಿಲ್ಲ. ಅವರಿಗೆ ಇದು ರಕ್ತಗತ.

ಪರಿಷತ್ತಿಗೆ ಇಂಥ ಒಬ್ಬ ಯೋಜಕರ ಅಗತ್ಯವಿತ್ತು. ಸಮಯಕ್ಕೆ ಸರಿಯಾಗಿ ಅವರು ದೊರೆತರು. ಸಂಸ್ಥೆಗೆ ಬೆಳಕುಬರುವುದು ಸಾಧ್ಯವಾಯಿತು. ಇಂದು ಬೃಹತ್ತಾಗಿ ಕಾಣುವ ಈ ಕಟ್ಟಡಗಳು, ಪುಸ್ತಕ ಭಂಡಾರ, ಪ್ರಕಟಣ ಶಾಖೆ, ನಿಘಂಟುಕಾರ್ಯ, ಪ್ರಚಾರ ಕಾರ್ಯಕ್ರಮಗಳು ಇವುಗಳೆಲ್ಲಕ್ಕೂ ಅವರ ಹಿನ್ನೆಲೆ ಶಕ್ತಿ ತುಂಬಿದೆ. ಆದುದರಿಂದ ಜನತೆ ಶ್ರೀ ನಾರಾಯಣ ಅವರಿಗೆ ಕೃತಜ್ಞರಾಗಿರಬೇಕು. ಅವರನ್ನು ಸನ್ಮಾನಿಸುವ ಸಂದರ್ಭದಲ್ಲಿ ನಾನು ಅವರ ಸೇವೆ ಸಾಹಿತ್ಯ ಕ್ಷೇತ್ರದಲ್ಲಿ ಸದಾ ಬೆಳಗುತ್ತಿರಲಿ ಎಂದು ಹಾರೈಸುತ್ತೇನೆ. ಅವರಿಗೆ ಆಯುರಾರೋಗ್ಯಗಳೂ ಐಶ್ವರ್ಯವೂ ಒದಗಿ, ಅವರ ಕುಟುಂಬವು ಸುಖವಾಗಿದ್ದು ಅವರಿಂದ ಅಪಾರವಾದ ಕನ್ನಡದ ಕೆಲಸ ನಡೆದು, ಅವರು ಇನ್ನೂ ಅಧಿಕವಾದ ಶ್ರೇಯಸ್ಸನ್ನು ಪಡೆಯಲಿ ಎಂದು ಹಾರೈಸುತ್ತೇನೆ.

ವೈಶಿಷ್ಟ್ಯ

ಶ್ರೀ ಕೆಂಗಲ್ ಹನುಮಂತಯ್ಯನವರ ಮುಖ್ಯಮಂತ್ರಿತ್ವದ ಕೊನೆಯ ದಿನಗಳು. ಕರ್ನಾಟಕ ಕಾಂಗ್ರೆಸ್‌ನಲ್ಲಿ ಹನುಮಂತಯ್ಯನವರ ಪದಚ್ಯುತಿಗೆ ಸತತ ಪ್ರಯತ್ನ, ಅವರಿಗೆ ದಿನೇ ದಿನೇ ಬೆಂಬಲ ಕಡಿಮೆಯಾಗುತ್ತಿದ್ದ ಕುರುಹು. ಅಂದು ಕಾಂಗ್ರೆಸ್ ಕಛೇರಿಯಲ್ಲಿ (ಇಂದಿನ ಜನತಾ ಕಛೇರಿ) ಈ ವಿಷಯದಲ್ಲಿ ತೀರ್ಮಾನಕ್ಕೆ ಕಾಂಗ್ರೆಸ್ಸಿಗರ ಸಭೆ, ಎಲ್ಲರ ಒಲವು ನೂತನ ಮುಂದಾಳುವಿನತ್ತ—ಹನುಮಂತಯ್ಯನವರು ಅಧಿಕಾರ ಕಳೆದುಕೊಳ್ಳುವುದು ಎಲ್ಲರಿಗೂ ವೇದ್ಯವಾಗಿತ್ತು. ಆದರೆ ಕಾಂಗ್ರೆಸ್ಸಿಗೆ ಅದಕ್ಕಿಂತ ಹೆಚ್ಚಾಗಿ ಕರ್ನಾಟಕಕ್ಕೆ ಅವರು ಸಲ್ಲಿಸಿದ ಸೇವೆ ಚಿರಸ್ಮರಣೀಯ. ಅಂದು ಕಾಂಗ್ರೆಸ್ ಕಛೇರಿಯಲ್ಲಿ ಅವರ ಸೇವೆಯ ವಿವರ ನೀಡುವ, ಅವರನ್ನು ಮುಖ್ಯಮಂತ್ರಿ ಪದವಿಯಿಂದ ಕೆಳಗಿಳಿಸುವುದು ಅನ್ಯಾಯವೆಂದು ಸಾರುವ ಕರಪತ್ರ ಮುದ್ರಿಸಿ ಹಂಚಿಸಿದ ಒಂದು ಗುಂಪು ಅಲ್ಲಿತ್ತು. ಯಾರ ಗಣನೆಗೂ ಎಲ್ಲರ ಪರಿಹಾಸ್ಯಕ್ಕೂ ಒಳಗಾದ ಗುಂಪು ಅದು—ಸ್ವತಃ ಹನುಮಂತಯ್ಯನವರೇ ಸಭೆಗೆ ಬಂದಾಗ ಈ ಕರಪತ್ರ ಓದಿ, ಕೊನೆಗೂ ನನ್ನ ಸೇವೆ ಗುರುತಿಸಿದ ನೀವು ಇದ್ದೀರಲ್ಲ ಆದರೆ ಈ ಪ್ರಯತ್ನ ನಿಷ್ಫಲ ಎಂದು ಹೇಳಿ ಹೋದರಂತೆ. ಅವರ ಕಣ್ಣಿನಲ್ಲಿ ಅಂದು ಕಂಡುಬಂದ ಎರಡು ಹನಿ ಕಣ್ಣೀರು ಬಹುಶಃ ಬಹು ಮಂದಿ ನೋಡಿರಲಿಕ್ಕಿಲ್ಲ, ಈ ಕಾರ್ಯ ಮಾಡಿದವರು ಶ್ರೀ ಜಿ. ನಾರಾಯಣ ಮತ್ತು ಅವರ ನಾಲ್ಕಾರು ಕಾಂಗ್ರೆಸ್ ಗೆಳೆಯರು. ಆಗ ಶ್ರೀ ಹನುಮಂತಯ್ಯನವರಿಗೆ ನಾರಾಯಣರ ವ್ಯಕ್ತಿಶಃ ಪರಿಚಯ ಕೂಡ ಇಲ್ಲದಿದ್ದ ಕಾಲ. ಆದರೂ ಸರಿ ಕಂಡದ್ದನ್ನು ಹೇಳುವ, ಅನ್ಯಾಯವನ್ನು ಪ್ರತಿಭಟಿಸುವ ದಿಟ್ಟತನ ನಾರಾಯಣರದು—ಇದೇ ಅವರ ವೈಶಿಷ್ಟ್ಯ.

ನಮ್ಮ ಅಧ್ಯಕ್ಷರು

ವೆಂಕಟೇಶ್ ಸಾಂಗಲಿ

ಸಭೆಯ ಅಖಾಡಾದಲ್ಲಿ ಅವರು ಎದುರಾಳಿಯನ್ನು ಸಾಧ್ಯವಿದ್ದಮಟ್ಟಿಗೆ ಸ್ನೇಹಾಸ್ತದಿಂದಲೇ ಹತಪ್ರಭಗೊಳಿಸುತ್ತಾರೆ. ಪ್ರಸಂಗ ಕೈಮೀರಿದಾಗ ಅಸಾಧಾರಣವಾದ ಕೆಲವು ಪಟ್ಟುಗಳನ್ನೂ ಅವರು ಬಳಸಿದ್ದುಂಟು. ಮರುಕ್ಷಣದಲ್ಲಿ ಎಲ್ಲವನ್ನೂ ಮರೆತುಬಿಡುತ್ತಾರೆ.

ನಮ್ಮ ಅಧ್ಯಕ್ಷರು ಪರಿಷತ್ತಿನ ಕಚೇರಿಗೆ ಬರುವುದು ಗಡಿಯಾರದ ಮುಳ್ಳಿನೊಂದಿಗೆ ಬೆಳಗಿನ ಒಂಬತ್ತು ಗಂಟೆಗೆ. ಕೈ ಚೌಕದಿಂದ ಆಸನದ ಧೂಳು ಕೊಡಹಿ ಮೇಜಿನ ಮೇಲಿನ ಸಲಕರಣೆಗಳನ್ನು ಸಮಗೊಳಿಸಿ ಕೆಲಸಕ್ಕೆ ಅಣಿಯಾಗುತ್ತಾರೆ. ಟಪಾಲಿನಿಂದ ಬಂದ ಕಾಗದಗಳನ್ನು ಒಂದೊಂದಾಗಿ ಎತ್ತಿಕೊಳ್ಳುತ್ತ ಹೊರ ನೋಟದಿಂದಲೇ ಅತಿಮಹತ್ವದ್ದು, ಮಹತ್ವದ್ದು, ಸಾಮಾನ್ಯ ಪ್ರಕಾರದ್ದು ಎಂದು ಅವನ್ನು ಗುರುತಿಸುತ್ತಾರೆ. ಒಳಗಿನ ಕಾಗದವು ಗಾಯವಾಗದ ಹಾಗೆ ಚಾಕು ಅಥವಾ ಕತ್ತರಿಯಿಂದ ಕವರಿನ ಆಯಕಟ್ಟನ್ನು ಕತ್ತರಿಸಿ ಒಮ್ಮೆ ಓದಿ ಕಾಗದವನ್ನು ಕೆಳಗಿಡುತ್ತಾರೆ.

ಬಹುಪಾಲು ಕಾಗದಗಳ ವಿಲೇವಾರಿ ಅಂದಂದಿಗೆ ನಡೆಯುತ್ತದೆ; ಆಲೋಚನೆಗೆ ಅರ್ಹವಾದದ್ದು ಎನಿಸಿದರೆ ಅವರ ಮೇಜಿನ ಬಲಭಾಗದ ಡ್ರಾಅರ್ ಸೇರುತ್ತದೆ–ಸ್ವಲ್ಪ ಕಾಲ ಮಾತ್ರ. ಅಧ್ಯಕ್ಷರ ನೆನಪಿನ ಶಕ್ತಿಯನ್ನು ಮೀಟುವ ದಾಖಲೆಗಳು, ಕಾಗದ, ಫೈಲು, ಕಾರ್ಯಕ್ರಮಗಳ ಪಟ್ಟಿ, ವಿಷಯ—ಸಂದರ್ಭಗಳ ಸೂಚಿ, ಮುಖ್ಯ ವಿಳಾಸಗಳು, ಟೆಲಿಫೋನ್ ನಂಬರುಗಳು—ಇನ್ನೂ ಏನೇನೋ ಒಳಗೊಂಡ ಬ್ರಹ್ಮಾಂಡ—ಆ ಡ್ರಾಅರ್.

ಎಲ್ಲ ಕಾಗದಗಳನ್ನೂ ಅವರೇ ಉತ್ತರಿಸುತ್ತಾರೆ. ಆ ಬರವಣಿಗೆಯಲ್ಲಿ ಅಸ್ಪಷ್ಟತೆಗೆ, ಆಡಂಬರದ ಶಬ್ದಗಳಿಗೆ ಅವಕಾಶವಿಲ್ಲ. ನೇರವಾಗಿ ವಿಷಯ ಪ್ರಸ್ತಾಪ. ತಮ್ಮ ಅಸಮಾಧಾನವನ್ನು ಸೂಚಿಸುವುದು ಅನಿವಾರ್ಯವಾದಾಗಲೂ ಪದಬಳಕೆಯಲ್ಲಿ ಅವರು ತುಂಬ ಜಾಗರೂಕತೆ ವಹಿಸುತ್ತಾರೆ. ಪರಿಷತ್ತಿನ ಪಡೆಯಲ್ಲಿ ಯಾರೊಬ್ಬರ ಮನಸ್ಸೂ ನೊಂದುಕೊಳ್ಳಬಾರದು. ಟೈಪ್ ಆದ ಕರಡನ್ನು ಒಂದೆರಡು ಬಾರಿ ತಿದ್ದಿದರೂ ಬೇಸರವಿಲ್ಲ; ತಮ್ಮ ಆಡಳಿತದ ದಕ್ಷತೆಗೆ, ಪರಿಷತ್ತಿನ ಗೌರವಕ್ಕೆ ಅನುಗುಣವಾದ ರೀತಿಯಲ್ಲಿಯೇ ಕಾಗದ ಹೋಗಬೇಕು. ವಿಳಾಸದಲ್ಲಿ ಸಹ ಒಂದೂ ತಪ್ಪು ಉಳಿದಿಲ್ಲವೆಂಬುದನ್ನು ಖಚಿತಪಡಿಸಿಕೊಂಡ ಬಳಿಕವೇ ಅದರ ರವಾನೆ.

ಅಧ್ಯಕ್ಷರನ್ನು ಕಾಣಲು ಅನೇಕ ಮಂದಿ ಪರಿಷತ್ತಿಗೆ ಬರುತ್ತಾರೆ. ಅವರಲ್ಲಿ ಅತ್ಯುಗ್ರ ಕನ್ನಡಾಭಿಮಾನಿಗಳು ಇದ್ದಾರೆ; ವಿಶ್ವೇಶ್ವರಯ್ಯನವರ ಕಾಲದ ಅನುಭವಗಳನ್ನು ಮೆಲುಕು ಹಾಕುವ ನಿವೃತ್ತ ಜೀವಿಗಳು ಇದ್ದಾರೆ.

ಕರಾವಳಿ ಜಿಲ್ಲೆಯ ಯಕ್ಷಗಾನ ಕಲಾವಿದರು, ಉತ್ತರ ಕರ್ನಾಟಕದ ಗೀಗೀ ಮೇಳ, ಮುಂಬಯಿ ಸೊಲ್ಲಾಪುರಗಳಿಂದ ಬಂದ ಹೊರನಾಡ ಕನ್ನಡ ಪ್ರತಿನಿಧಿಗಳು, ಅಮೇರಿಕೆಯ ಕನ್ನಡ ಕೂಟದವರು, ಪರಿಷತ್ತಿನ ಜಿಲ್ಲಾ ಸಮಿತಿಯ ಅಧ್ಯಕ್ಷರೊಬ್ಬರು-ಹೀಗೆ ಹಲವು ಆಶೆ ಅಪೇಕ್ಷೆಗಳನ್ನು ಹೊತ್ತು ಇಲ್ಲವೇ ಅಗತ್ಯ ಕೆಲಸಗಳಿಗಾಗಿ ಜನ ಬರುತ್ತಾರೆ. ಅವರ ಮುಗುಳುನಗೆ ನಿಮ್ಮನ್ನು ಸ್ವಾಗತಿಸುತ್ತದೆ. ನೀವು ಪರಿಚಿತರಾಗಿದ್ದರೆ ಮಾತು ಲೋಕಾಭಿರಾಮವಾಗಿ ನಡೆಯುತ್ತದೆ; ಸಾಹಿತ್ಯ, ಕಲೆ, ರಂಗಭೂಮಿ, ಶಿಕ್ಷಣಗಳನ್ನು ಕುರಿತಂತೆ ತೆರೆದ ಮನಸ್ಸಿನ ಚರ್ಚೆ. ಅಪರಿಚಿತರೊಂದಿಗೆ ತುಸು ಶ್ರೀಮದ್ಗಾಂಭೀರ್ಯದ ವಾತಾವರಣ ; ಕೆಲಸಕ್ಕೆ, ವಿಷಯಕ್ಕೆ ಸೀಮಿತವಾದ ಮಾತು. ಮಧ್ಯೆ ಮಧ್ಯೆ ಒಂದೊಂದು ಮರು ಪ್ರಶ್ನೆ. ಮಹತ್ವದ ಸಂಗತಿಗಳಿದ್ದರೆ ಒಂದೆರಡು ಟಿಪ್ಪಣಿ....ಮತ್ತೆ ಮುಗುಳುನಗೆ; ಕ್ಷಣಕಾಲ ಮೌನ. ನೀವು ಕುರ್ಚಿ ತೆರವು ಮಾಡಬೇಕೆಂಬ ಸೂಚನೆ ಇದು. ಆದರೆ ಬಾಯಿಬಿಟ್ಟು ಹಾಗೆ ಸೂಚಿಸುವುದು ಅತಿಥಿಗಳಿಗೆ ಅಗೌರವ ತೋರಿದಂತೆ. ಪರಿಷತ್ತಿನ ಕೆಲಸ ಕಾರ್ಯಗಳನ್ನು ಕುರಿತ ವಿಚಾರ ವಿನಿಮಯಕ್ಕಾಗಿ ಒಮ್ಮೊಮ್ಮೆ ಅವರು ಕಾರ್ಯಕರ್ತರನ್ನು ಆಹ್ವಾನಿಸುತ್ತಾರೆ. ಆಗ ಅಧ್ಯಕ್ಷರದೇ ಮುಖ್ಯ ಮಾತು. ವಿಶೇಷ ಸಂದರ್ಭಗಳಲ್ಲಿ ಕೆಲವು ಗಣ್ಯರ ಬಳಿ ತಾವೇ ಹೋಗುತ್ತಾರೆ; ತಾವು ಯೋಜಿಸಿಕೊಂಡ ಕಾರ್ಯಕ್ರಮವನ್ನು ವಿವರಿಸಿ ಅವರಿಂದ ಸಲಹೆಗಳನ್ನು ಪಡೆಯುತ್ತಾರೆ.

ಈ ಬಗೆಯ ಸಂಪರ್ಕ ಅವರಿಗೆ ಬಲವನ್ನೂ ಧೈರ್ಯವನ್ನೂ ತಂದಿದೆ; ಸಾರ್ವಜನಿಕರಲ್ಲಿ ಒಡಕು ಮಾತು ಕಡಿಮೆ ಮಾಡಲು, "ಈ ಸಂಸ್ಥೆ ನಮ್ಮದು" ಎಂಬ ಭಾವನೆ ಬೆಳೆಯಲು ಕಾರಣವಾಗಿದೆ. ವ್ಯಕ್ತಿಗಳ ಸ್ವಭಾವ, ಯೋಗ್ಯತೆ, ಕಾರ್ಯಸಾಮರ್ಥ್ಯವನ್ನು ಖಚಿತವಾಗಿ ಬೆಲೆಕಟ್ಟುವ, ಅವರನ್ನು ಉಚಿತವಾದ ಕೆಲಸಕ್ಕೆ ಹೂಡಿಕೊಳ್ಳುವ ವಿಧಾನದಲ್ಲಿ ಅವರು ಪಳಗಿದವರು. "ದಯವಿಟ್ಟು ಕೂಡಲೆ ಪರಿಷತ್ತಿಗೆ ಬಂದು ನನಗೆ ಭೆಟ್ಟಿಯಾಗಿರಿ. ಬರುವ ಮೊದಲು ಫೋನುಮಾಡಿರಿ.'' ಎಂಬ ಎರಡು ಸಾಲಿನ ಪತ್ರ ನಿಮ್ಮ ಕೈಸೇರಿದಾಗ, ಯಾವುದೋ ಬಲೆಯಲ್ಲಿ ಸಿಕ್ಕಿಕೊಳ್ಳಲಿದ್ದೀರಿ—ಎಂಬ ಕಲ್ಪನೆಯೂ ನಿಮ್ಮಲ್ಲಿ ಸುಳಿಯಲಾರದು. ಅಲ್ಲಿಗೆ ಹೋದಾಗ ಒಂದು ಗಾಂಧೀ ಟೋಪಿ, ಪುಸ್ತಕ ತುಂಬಿದ ಕೊರಳ ಚೀಲ ನಿಮಗಾಗಿ ಕಾದಿದೆ. ಸಾಹಿತ್ಯ ಪ್ರಸಾರ ಯೋಜನೆಯಲ್ಲಿ ಪಾದಯಾತ್ರೆಗೆ ಹೊರಟ ಒಂದು ಗುಂಪಿನ ಮುಖ್ಯರು ನೀವು! ಅಧ್ಯಕ್ಷರ ಸ್ನೇಹ ಬಂಧನ ನಿಮ್ಮನ್ನು ಕಟ್ಟಿ ಹಾಕಿರುತ್ತದೆ; ಬಿಡಿಸಿಕೊಳ್ಳಲಾರಿರಿ.

ಎಂಥ ಪ್ರಸಂಗದಲ್ಲಿಯೂ ಅವರು ತಾಳ್ಮೆಕಳೆದುಕೊಂಡವರಲ್ಲ. ಮಾಲಿಯ ಮೈಗಳ್ಳತನ, ಅಚ್ಚುಕೂಟದಲ್ಲಿ ನಡೆಯುವ ಸಿಧಾನ ಕೆಲಸ, ಕೆಲಸಗಾರನೊಬ್ಬನ ಅನುಚಿತ ವರ್ತನೆ ಗಮನಕ್ಕೆ ಬಂದಾಗ ಅವರು ಸುಮ್ಮನೆ ಇರುತ್ತಾರೆ. ದಂಡನೆ ಹೋಗಲಿ, ವಾಗ್ದಂಡನೆಯೂ ಇಲ್ಲ. ಕಾಲಾಂತರದಲ್ಲಿ ನಿಮಗೆ ತಿಳಿಯುತ್ತದೆ—ಯಾರೂ ಇಲ್ಲದಾಗ ಅಂಥವರನ್ನು ಕರೆದು ತಪ್ಪೊಪ್ಪಿಗೆ ಪಡೆದುಕೊಂಡಿದ್ದಾರೆ ಎಂದು.

ಸಭೆಯ ಆಖಾಡಾದಲ್ಲಿ ಅವರು ಎದುರಾಳಿಯನ್ನು ಸಾಧ್ಯವಿದ್ದಮಟ್ಟಿಗೆ ಸ್ನೇಹಾಸ್ತದಿಂದಲೇ ಹತಪ್ರಭಗೊಳಿಸುತ್ತಾರೆ. ಪ್ರಸಂಗ ಕೈಮೀರಿದಾಗ ಅಸಾಧಾರಣವಾದ ಕೆಲವು ಪಟ್ಟುಗಳನ್ನು ಅವರು ಬಳಸಿದ್ದುಂಟು. ಮರುಕ್ಷಣದಲ್ಲಿ ಎಲ್ಲವನ್ನೂ ಮರೆತುಬಿಡುತ್ತಾರೆ.

ಜಿ. ನಾರಾಯಣ ಅವರು ಒಂಬತ್ತು ವರ್ಷ ನಾಲ್ಕು ತಿಂಗಳ ಕಾಲ ಪರಿಷತ್ತಿನ ಅಧ್ಯಕ್ಷರಾಗಿದ್ದರು. ಈ ಅವಧಿಯಲ್ಲಿ ತಮ್ಮದೆನ್ನುವ ಯಾವ ವಿಷಯದ ಕಡೆಗೂ ಗಮನವಿಲ್ಲ. ಅನಾರೋಗ್ಯದಿಂದ ಹಾಸಿಗೆ ಹಿಡಿದಾಗಲೂ ಪರಿಷತ್ತಿಗೆ ಫೋನು ಮಾಡಿ ವಿಷಯಗಳನ್ನು ತಿಳಿದು ಸೂಚನೆ ನೀಡುತ್ತಿದ್ದರು. ತಮ್ಮದೇ ಆದ 'ಸ್ವತಂತ್ರ' ಮುದ್ರಣಾಲಯದ ಮೇಲ್ವಿಚಾರಣೆ ಪರಿಷತ್ತಿನ ಕೆಲಸಗಳ ಮಧ್ಯೆ ನಡೆಯತಕ್ಕದ್ದು. ಅಲ್ಲಿಗೆ ಹೋಗುವಷ್ಟು ಬಿಡುವು ಇಲ್ಲ. ಮನೆಯವರ ಅನಾರೋಗ್ಯದ ಸಮಯದಲ್ಲಿ ಡಾಕ್ಟರರಿಂದ ಫೋನು ಬಂದಾಗಲೇ ಇವರಿಗೆ ಅವರ ನೆನಪು. ಇದು ಸಾರ್ವಜನಿಕ ಕೆಲಸದ ಹುಚ್ಚು ಅನ್ನೋಣವೇ ಅಮಲು ಅನ್ನೋಣವೇ? ಯಾವ ಒಂದು ಏಕನಿಷ್ಠೆಯ ಗುರಿಯಿಂದ ಅವರು ಅಧಿಕಾರ ವಹಿಸಿಕೊಂಡರೋ ಅದೇ ಬಗೆಯ ಕೃತಕೃತ್ಯತೆಯ, ನಿರ್ಮಲ ಭಾವದಿಂದ ಕೆಳಗಿಳಿದರು.

ಅವರು ಅಪರೂಪದ ಒಂದು ಸಂಪ್ರದಾಯವನ್ನು ಹಾಕಿಕೊಟ್ಟಿದ್ದಾರೆ. ಅದು ಬಹುಕಾಲ ಉಳಿಯುವಂತೆ ನೋಡಿಕೊಳ್ಳಬೇಕಾದುದು ಮುಂದಿನವರ ಹೊಣೆ.

ನಾಡ ಮುನ್ನಡೆಗಾಗಿ ಅವರ ಸೇವೆ ಮುಂದುವರೆಯಲಿ; ಭಗವಂತನು ಅಂಥ ಅವಕಾಶಗಳನ್ನು ಅನುಗ್ರಹಿಸಲಿ.

ಸಾಹಿತ್ಯ ಪರಿಷತ್ತಿನ ನಾರಾಯಣ

ವಿ. ಹೆಚ್. ಗೌಡ

ಪರಿಷತ್ತನ್ನು ಕೇವಲ ಸಾಹಿತಿಗಳಲ್ಲ, ಸಾಮಾನ್ಯ ಕನ್ನಡಿಗನೂ ತನ್ನ ಸಂಸ್ಥೆಯೆಂದು ಹೆಮ್ಮೆಪಟ್ಟುಕೊಳ್ಳುವಂತಹ ಒಂದು ವಿಸ್ತಾರಕ್ಕೆ ಒಯ್ದುದ್ದು ನಾರಾಯಣರು ಎಂದೂ ಪರಿಷತ್ತಿನ ಮಾಜಿ ಅಧ್ಯಕ್ಷರಲ್ಲ ಎಂಬುದನ್ನು ಕನ್ನಡಿಗರ ಹೃದಯದಲ್ಲಿ ನೆಲೆಯಾಗಿಸಿದೆ.

ಶ್ರೀಮಾನ್ ಜಿ. ನಾರಾಯಣ ಅವರು ಮಾಜಿ ಮೇಯರ್ ಎನ್ನಿಸಿಕೊಂಡ ಹಾಗೆ ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷರು ಎನ್ನಿಸಿಕೊಳ್ಳಲಿಲ್ಲ. ಕನ್ನಡ ಸಾಹಿತ್ಯ ಪರಿಷತ್ತಿಗೂ ಅವರಿಗೂ ಉಂಟಾದ ಸಂಬಂಧ ಅವರನ್ನು 'ಮಾಜಿ' ಎಂದು ಗುರುತಿಸಲು ಯಾರಿಗೂ ಆಗುತ್ತಿಲ್ಲ.

೧೯೭೮ ರ ಮೇ ತಿಂಗಳಲ್ಲಿ ಜಿ. ನಾರಾಯಣ ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷತೆಯ ಜವಾಬ್ದಾರಿಯನ್ನು ವಹಿಸಿಕೊಂಡರು. ಅನೇಕ ಕನ್ನಡ ಸಾಹಿತಿಗಳು ಇದನ್ನು 'ಯಾವನೋ ಒಬ್ಬ ಅಸಾಹಿತಿ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಆಗಿಬಿಟ್ಟನಲ್ಲ' ಎಂದು ಮೂದಲಿಸಿದರು. ಈ ಮುಂಚೆ ಸಾಹಿತಿಗಳು ಎನ್ನಿಸಿಕೊಂಡವರೇ ಪರಿಷತ್ತಿನ ಅಧ್ಯಕ್ಷರಾಗುತ್ತಿದ್ದರು. ಜಿ. ನಾರಾಯಣ 'ಸಾಹಿತಿ' ಎನ್ನಿಸಿಕೊಂಡಿರಲಿಲ್ಲ. ಸಾಹಿತಿ ಅಧ್ಯಕ್ಷರುಗಳು ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯ ಚಟುವಟಿಕೆಗಳನ್ನು ಕೇವಲ ಸಾಹಿತಿಗಳು ಎನ್ನಿಸಿಕೊಂಡವರಿಗೆ ಮೀಸಲಾಗಿರಿಸಿಕೊಂಡು ಬೆಂಗಳೂರಿನ ಚಾಮರಾಜಪೇಟೆಯಿಂದ ಹೊರಗೆ ತೆಗೆದುಕೊಂಡು ಹೋಗದ ಹಾಗೆ ನೋಡಿಕೊಂಡಿದ್ದರು. ಮುಂಬರುವ ಅಧ್ಯಕ್ಷರು ಇಷ್ಟನ್ನೇ ಮಾಡುತ್ತಾರೆ; ಇಷ್ಟನ್ನೇ ಮಾಡಬೇಕು ಎನ್ನಿಸಿರಬೇಕು ಸಾಹಿತಿಗಳಿಗೆ. ಅಸಾಹಿತಿ ಅಧ್ಯಕ್ಷರಾದ ಜಿ. ನಾರಾಯಣ ಅವರು ಪರಿಷತ್ತು ಮಾಡಬೇಕಾದ ಕನ್ನಡ ಕೆಲಸದ ಒಂದು ವಿರಾಟ್ ರೂಪವನ್ನು ಕಲ್ಪಿಸಿಕೊಂಡಿದ್ದವರು. ತಮ್ಮ ಈ ಹಿಮಾಲಯ ಸದೃಶ ಕಲ್ಪನೆ ಕಾರ್ಯಗತವಾಗಲು ಹಗಲಿರುಳೂ ಶ್ರಮಿಸಲೆಂದೇ ಪರಿಷತ್ತಿಗೆ ಕಾಲಿಟ್ಟರೇ ವಿನಃ, ಪರಿಷತ್ತಿನ ಅಧ್ಯಕ್ಷಗಿರಿ ಸುಖದ ಸುಪ್ಪತ್ತಿಗೆ ಎಂದು ಯಾವತ್ತೂ ನಾರಾಯಣ ಭಾವಿಸಿದವರಲ್ಲ; ಅದು ಜವಾಬ್ದಾರಿಯ ಮುಳ್ಳಿನ ಮಂಚ ಎಂದೇ ಅದಕ್ಕೆ ಮೈಯೊಡ್ಡಲು ಸಿದ್ಧರಾದವರು. ಮುಳ್ಳಿನ ಮಂಚಕ್ಕೆ ಮೈಯೊಡ್ಡಲು ಸಿದ್ಧರಾಗಿದ್ದ ಅವರನ್ನು ಸಾಹಿತಿಗಳ ಮೂದಲಿಕೆ ಕಿಂಚಿತ್ತೂ ವಿಚಲಿತಗೊಳಿಸಲಿಲ್ಲ.

ಕನ್ನಡ ಸಾಹಿತ್ಯ ಪರಿಷತ್ತನ್ನು 'ಕನ್ನಡ' ಪರಿಷತ್ತನ್ನಾಗಿಸಲು ಹಗಲಿರುಳು ಶ್ರಮಿಸಿದರು. ಇಡೀ ಕನ್ನಡ ಜನತೆಯ ಸಾಂಸ್ಕೃತಿಕ ಆಶೋತ್ತರಗಳನ್ನು ಪ್ರತಿನಿಧಿ

ಸುವ ಒಂದು ಸಂಸ್ಥೆಯನ್ನಾಗಿ ಕಟ್ಟುವ ಅವರ ಕನಸನ್ನು ನನಸಾಗಿಸಿದ ಜಿ. ನಾರಾಯಣರನ್ನು ಪರಿಷತ್ತಿನ ಮಾಜಿ ಅಧ್ಯಕ್ಷರೆಂದು ಕನ್ನಡ ಜನತೆ ಹೇಗಾದರೂ ಕರೆದೀತು? ಸಾಹಿತಿ ಅಧ್ಯಕ್ಷರುಗಳು ನಡೆಸಿಕೊಂಡು ಬರುತ್ತಿದ್ದ ಯಾವ ಕಾರ್ಯವನ್ನೂ ಅವರು ನಿಲ್ಲಿಸಲಿಲ್ಲ. ಹೊಸದಾಗಿ ತಾವು ರೂಪಿಸಿದ ಕಾರ್ಯಗಳನ್ನೆಲ್ಲಾ ಅನುಷ್ಠಾನ ಗೊಳಿಸಿದರು. ತ್ರೈವಾರ್ಷಿಕ ಯೋಜನೆ, ಪಂಚವಾರ್ಷಿಕ ಯೋಜನೆ ಎಂದು ಯೋಜನೆಗಳನ್ನು ಹಮ್ಮಿಕೊಂಡು ಕನ್ನಡದ ಕೊರತೆಗಳನ್ನು ನೀಗಲು ಶ್ರಮಿಸಿದರು. ಸರಕಾರದ ಮೇಲೆ ಒತ್ತಾಯ ತಂದು ಪರಿಷತ್ತಿಗೆ ಸರಕಾರದ ಉದಾರ ಹಣ ಸಹಾಯವನ್ನು ಗಳಿಸಿದರು. ಪರಿಷತ್ತಿನ ಕಾರ್ಯಕ್ರಮಗಳು ಜಿಲ್ಲೆ ತಾಲ್ಲೂಕು ಮಟ್ಟಗಳಲ್ಲಿ ಜರುಗಿದವು. ಪುಸ್ತಕ ಪ್ರಚಾರದ ಕಾರ್ಯಕ್ರಮ ನಾಡಿನಾದ್ಯಂತ ಯಶಸ್ವಿಯಾಗಿ ನಡೆಯಿತು. ನಾರಾಯಣರ 'ಮನೆಗೊಂದು ಪುಸ್ತಕ ಭಂಡಾರ'ದ ಕಲ್ಪನೆಯಂತೂ ಸಾಹಿತಿಗಳ ಹುಬ್ಬೇರಿಸಿತು. ಪರಿಷತ್ತನ್ನು ಕೇವಲ ಸಾಹಿತಿಗಳಲ್ಲ, ಸಾಮಾನ್ಯ ಕನ್ನಡಿಗನೂ ತನ್ನ ಸಂಸ್ಥೆಯೆಂದು ಹೆಮ್ಮೆಪಟ್ಟುಕೊಳ್ಳುವಂತಹ ಒಂದು ವಿಸ್ತಾರಕ್ಕೆ ಒಯ್ದದ್ದು ನಾರಾಯಣರು ಎಂದೂ ಪರಿಷತ್ತಿನ ಮಾಜಿ ಅಧ್ಯಕ್ಷರಲ್ಲ ಎಂಬುದನ್ನು ಕನ್ನಡಿಗರ ಹೃದಯದಲ್ಲಿ ನೆಲೆಯಾಗಿಸಿತು.

೧೯೭೩ ಅಥವಾ ೧೯೭೪ ಇರಬಹುದು. ಸಾಹಿತ್ಯ ಪರಿಷತ್ತಿನ ಕಾರ್ಯಸಮಿತಿ ಸಭೆಗೆ ಹೋಗುವ ಮುನ್ನ ಡಾ|| ಎಚ್. ಎಲ್. ತಿಮ್ಮೇಗೌಡರನ್ನು ಭೇಟಿಯಾಗಿದ್ದೆ. ಚಾಮರಾಜಪೇಟೆಯ ಉಪ ಚುನಾವಣೆಯಲ್ಲಿ ಸಂಸ್ಥಾ ಕಾಂಗ್ರೆಸ್ಸಿನ ಅಭ್ಯರ್ಥಿಯಾಗಲು ನಾರಾಯಣರನ್ನು ಒಪ್ಪಿಸಬೇಕೆಂದು ನನಗೆ ಡಾಕ್ಟರು ಹೇಳಿದ್ದರು. ಆಗಬಹುದು ಎಂದು ಪರಿಷತ್ತಿಗೆ ಹೋದೆ. ನನ್ನನ್ನು ನೋಡಿದ ಕೂಡಲೆ ನಾರಾಯಣರು "ನನಗೆ ನೀವು ಒಂದು ಉಪಕಾರ ಮಾಡಬೇಕು" ಎಂದರು. ನಾನು "ನಿಮಗೆ ಮಾಡಿಕೊಡಬಹುದಾದ ಉಪಕಾರ ಏನು ಹೇಳಿ. ಆಗುವುದಾದರೆ ನೋಡೋಣ" ಎಂದೆ. "ವೀರೇಂದ್ರ ಪಾಟೀಲರು, ರಾಮಕೃಷ್ಣ ಹೆಗ್ಗಡೆಯವರ ಬಗ್ಗೆ ನನಗೆ ತುಂಬಾ ಗೌರವ. ಅವರು ನನ್ನ ಬಳಿ ಬಂದು ಚಾಮರಾಜಪೇಟೆ ಉಪ ಚುನಾವಣೆಯಲ್ಲಿ ಸ್ಪರ್ಧಿಸಿ ಎಂದು ನನ್ನನ್ನು ಒತ್ತಾಯ ಮಾಡಬಾರದು. ನನ್ನ ಬಳಿ ಬಂದ ಅವರ ಮುಖ ಚಿಕ್ಕದುಮಾಡಿ ಕಳುಹಿಸಲು ನನಗೆ ಇಷ್ಟವಿಲ್ಲ" ಎಂದರು. ಯಾವ ವಿಷಯದ ಬಗ್ಗೆ ಅವರನ್ನು ಒಪ್ಪಿಸಬೇಕೆಂದು ಹೋದೆನೋ, ನಾನು ಬಾಯಿ ಬಿಡುವ ಮೊದಲೇ ಅವರಾಡಿದ ಈ ಮಾತು ಅದಕ್ಕೆ ಉತ್ತರವಾಗಿತ್ತು. "ಏಕೆ? ನೀವು ಚುನಾವಣೆಗೆ ನಿಲ್ಲಲು ಇಚ್ಛಿಸುವುದಿಲ್ಲ" ಎಂದೆ. ಅದಕ್ಕೆ ಅವರು "ಹಾಗೇನಿಲ್ಲ. ನಾನು ಚುನಾವಣೆಗೆ ನಿಲ್ಲಲೇಬಾರದೆಂದಲ್ಲ. ಆದರೆ, ನಾನು ಪರಿಷತ್ತಿನ ಅಧ್ಯಕ್ಷ ಆಗಿರುವವರೆಗೆ ಯಾವುದೇ ರಾಜಕೀಯ ಸ್ಥಾನ ಒಪ್ಪಿಕೊಳ್ಳಲು ಸಿದ್ಧನಿಲ್ಲ. ಸರ್ಕಾರ ಪರಿಷತ್ತಿಗೆ ಮಾಡಬೇಕಾದ ಅನೇಕ ಕಾರ್ಯಗಳ ಬಗ್ಗೆ ಸರ್ಕಾರವನ್ನು ಈಗ ಒತ್ತಾಯಿಸುತ್ತಿದ್ದೇನೆ. ಪರಿಷತ್ತಿನ ಅಧ್ಯಕ್ಷ ಎಂದು ಅವರೂ ಗೌರವಿಸುತ್ತಿದ್ದಾರೆ ಎಂದರು. ಶ್ರೀ ನಾರಾಯಣರು ಮಾತನ್ನು ಅಷ್ಟಕ್ಕೇ ನಿಲ್ಲಿಸಲಿಲ್ಲ. "ನೋಡಿ, ಆಡಳಿತ ಕಾಂಗ್ರೆಸ್‌ನವರೂ ಬಂದಿದ್ದರು. ನಾನು ಅವರಿಗೆ ಒಂದೇ ಮಾತಿನಲ್ಲಿ ಹೇಳಿಬಿಟ್ಟೆ. ನಾನು ಕಾಂಗ್ರೆಸ್ಸಿಗ. ಸಂಸ್ಥಾ ಕಾಂಗ್ರೆಸ್ ಇರುವವರೆಗೂ ಅದೇ ನಿಜವಾದ ಕಾಂಗ್ರೆಸ್ ಎಂದು ಭಾವಿಸಿದ್ದೇನೆ. ನಾನು ಸಂಸ್ಥಾ ಕಾಂಗ್ರೆಸ್‌ನವನೇ ಹೊರತು ಬೇರೆ ಕಾಂಗ್ರೆಸ್ಸಿನವನಲ್ಲ ಎಂದು ಹೇಳಿ ಕಳುಹಿಸಿದೆ" ಎಂದರು. ಅವರ ವಿಚಾರ ನನಗೆ ಹಿಡಿಸಿತು. ಅವರನ್ನು ಒತ್ತಾಯಿಸಲು ಹೋಗಲಿಲ್ಲ. ಡಾಕ್ಟರಿಗೆ ನಾರಾಯಣರ ಆ ವಿಷಯ ತಿಳಿಸಿಬಿಟ್ಟೆ.

ಸಂಸ್ಥಾ ಕಾಂಗ್ರೆಸ್ ಪ್ರದೇಶ ಸಮಿತಿ ಚಾಮರಾಜಪೇಟೆ ಉಪಚುನಾವಣೆಗೆ ತನ್ನ ಅಭ್ಯರ್ಥಿ ಆಯ್ಕೆ ಮಾಡುವುದರ ಬಗ್ಗೆ ಚರ್ಚಿಸಲು ಸಮಾವೇಶಗೊಂಡಿತು. ನಾನು ಆ ಸಮಿತಿಯ ಸದಸ್ಯ ಆಗಿದ್ದೆ. ಚಾಮರಾಜಪೇಟೆ ಕ್ಷೇತ್ರ ಗೆಲ್ಲಲು ನಾರಾಯಣರಿಗೊಬ್ಬರಿಗೆ ಸಾಧ್ಯ ಎಂಬುದು ಇಡೀ ಸಮಿತಿಯ ಅಭಿಪ್ರಾಯ. ಆದರೆ ಅವರು ಒಪ್ಪುವುದಿಲ್ಲ ಎಂಬುದು ಸಭೆಯ ಕೊರಗು. ನಂಜಪ್ಪ ಎಂಬ ಮಾಜಿ ಕಾರ್ಪೊರೇಟರ್ ಆ ಸಭೆಯಲ್ಲಿ ಹಾಜರಿದ್ದರು. ಅವರು ಎದ್ದು ಹೇಳಿದರು: "ನಾರಾಯಣ್ ಮೇಯರ್ ಆಗಿದ್ದಾಗ ನಾನು ಕಾರ್ಪೊರೇಟರ್ ಆಗಿದ್ದೆ. ನಾನು ಅವರೊಡನೆ ತುಂಬಾ ವಿಶ್ವಾಸದಿಂದಿದ್ದೇನೆ. ನಾನು ಹೋಗಿ ಅವರ ಪಾದಗಳನ್ನು ಹಿಡಿದು ಕೇಳಿಕೊಳ್ಳುತ್ತೇನೆ. ಅವರು ಒಪ್ಪುವವರೆಗೂ ಹಿಡಿದ

ಅವರ ಪಾದ ಬಿಡುವುದಿಲ್ಲ". ನನಗೆ ವಿದ್ಯುತ್ ಸ್ಪರ್ಶವಾದಂತಾಯಿತು. ಟಿಕೆಟ್‌ಗೂ ಕಾಲು ಕಟ್ಟುವವರು ಇರುವಾಗ , ನಮ್ಮಲ್ಲಿ ನಾರಾಯಣರಂತಹವರೂ ಇದ್ದಾರಲ್ಲ ಎನ್ನಿಸಿತು. ಅವರ ಮನೆ ಮುಂದೆ ಧರಣಿ ಕೂರುವುದಾಗಿ ಬೆಂಗಳೂರು ನಗರದ ಪಕ್ಷದ ಅನೇಕ ಕಾರ್ಯಕರ್ತರು ಆ ಸಭೆಗೆ ಬಂದು ಸಭೆಯ ಅನುಮತಿಗಾಗಿ ಒತ್ತಾಯಿಸಿದರು. ಸಭೆ ಯಾವ ನಿರ್ಣಯಕ್ಕೂ ಬರಲಿಲ್ಲ. ವೀರೇಂದ್ರ ಪಾಟೀಲರು, ರಾಮಕೃಷ್ಣ ಹೆಗ್ಗಡೆಯವರು, ಹೆಚ್. ಡಿ. ದೇವೇಗೌಡರು ಪ್ರಯತ್ನಿಸಿ ವಿಫಲರಾದರು.

ತಾವು ಪಡೆಯುವ ರಾಜಕೀಯ ಸ್ಥಾನಗಳು ಪರಿಷತ್ತಿನ ಕಾರ್ಯಕ್ಕೆ ಅಡ್ಡಗಾಲು ಹಾಕಬಹುದೆಂದು ಅವೆಲ್ಲವನ್ನೂ ನಾರಾಯಣರು ನಿರಾಕರಿಸಿದರು. ನನಗೆ ತಿಳಿದ ಹಾಗೆ ಇಂತಹವರು ನಾರಾಯಣ ಒಬ್ಬರೇ.

ಅರವತ್ತರ ಹೊಸ್ತಿಲಲ್ಲಿರುವ ಶ್ರೀಮಾನ್ ಜಿ. ನಾರಾಯಣ ಅವರು ಕನ್ನಡದ ಕೆಲಸಕ್ಕೆ ಚಿರ ಯುವಕರು. ಅಧಿಕಾರದ ವ್ಯಾಮೋಹ ಇಲ್ಲದೆ ತಾವು ಕೈಗೊಳ್ಳುವ ಪ್ರತಿಯೊಂದು ಕೆಲಸವನ್ನೂ ತನ್ನ ಕರ್ತವ್ಯವೆಂದು ನಿರ್ವಹಿಸುವವರು.

ವಿನೋದ

ಬಹುಶಃ, ನಾರಾಯಣರ ಬೆಂಗಳೂರು ಪ್ರವೇಶ — ಅವರ ಕಾಂಗ್ರೆಸ್ ಒಡನಾಟ—ಅಂದಿನ ಹಿರಿಯ ರಾಜಕಾರಣಿಗಳಾದ ಶ್ರೀ ಕೆ. ಟಿ. ಭಾಷ್ಯಂ, ಶ್ರೀ ವೀರಣ್ಣಗೌಡರು ಇವರ ಸಂಪರ್ಕ—ಎಲ್ಲ ಅವರ ಸೇವಾಕಾಂಕ್ಷೆಯ ಫಲ. ಇವಿಷ್ಟು ಮಾತ್ರವಲ್ಲದೇ ಮುಂದೆ ಜನಪ್ರಿಯ ಪತ್ರಿಕಾ ಪ್ರಪಂಚಕ್ಕೆ ಪ್ರವೇಶ. ವಾರ್ತಾ, ಚಿತ್ರಗುಪ್ತದಲ್ಲಿ ಸೇವೆ ಮುಂದುವರಿಕೆ, ಆಗ ನಡೆದ ಘಟನೆಯೊಂದರ ಹಿನ್ನೆಲೆ—ನಾರಾಯಣರ ಸ್ವಂತ ಪತ್ರಿಕೆ ಪ್ರಾರಂಭಕ್ಕೆ ನಾಂದಿ. ಅತ್ಯಂತ ಪರಿಶ್ರಮದಿಂದ ಅಲ್ಪ ಕಾಲಾವಧಿಯಲ್ಲಿ ಸ್ವಾತಂತ್ರ್ಯ ದಿನಾಚರಣೆಯಂದು ನೂತನ ಮುದ್ರಣಾಲಯ—ಮಾಸ ಪತ್ರಿಕೆಯ ಪ್ರಕಟನೆ ಪ್ರಾರಂಭ ಮಾಡಿದ ಹಿರಿಮೆ ಇವರದು. ಸ್ವತಂತ್ರ ಮುದ್ರಣಾಲಯದಲ್ಲಿ ಏಕೈಕ ಹಾಸ್ಯಪತ್ರಿಕೆಯಾಗಿ ಉಳಿದು ಹೊರಬರುತ್ತಿರುವ "ವಿನೋದ" ಜಿ. ನಾರಾಯಣರ ಅಭಿಮಾನದ ಪ್ರಕಟಣೆ.

ಜಿ. ನಾರಾಯಣರು ಕನ್ನಡದ ಉಸಿರು

ಕಂಠೀರಾವ್

ಜಿ. ನಾರಾಯಣರು ಕಾಣದ ಕೈ. ಅದು ಸದಾ ತೆರೆದ ಅಭಯ ಹಸ್ತ. ಅವರು ಕುಶಲ ಸಂಧಾನ ತಂತ್ರಜ್ಞರು; ಸಿದ್ಧಾಂಜನ ಸಫಲಪ್ರಯೋಗ ಪರಿಣತ ಮತಿಗಳು. ಸದಾ ಸರ್ವರ ಕಲ್ಯಾಣಾಕಾಂಕ್ಷಿಗಳು. ಆಶಾಂಬರದ ಬೆಳಕಿನ ಬಿಂದು. ಅರಿವಿನ ಮೂಲೆಯನ್ನು ಹಿಡಿದು ದಣಿವರಿಯದೆ ಸಾಗುವ ದಣ್ಣಾಯಕರು.

ಸುಮಾರು ಹನ್ನೆರಡು ವರ್ಷಗಳ ಹಿಂದೆ ಭಾಷಾಂತರ ಇಲಾಖೆಯ ಭವಿಷ್ಯ ರೂಪಿಸುವ ಭವ್ಯ ಕನಸಿನೊಂದಿಗೆ ನಾನು ಮೊದಲು ಅವರನ್ನು ಕಂಡದ್ದು. ಅವರ ದೃಷ್ಟಿ ನಮ್ಮ ಕಡೆಗೆ ಹರಿಯಿತು. ನಮ್ಮ ಕಾರ್ಯ ಸಿದ್ಧಿಸಿತು. ಭಾಷಾಂತರ ಇಲಾಖೆ ಹೆಮ್ಮರವಾಗಿ ಬೆಳೆಯಿತು; ಹೂ—ಹಣ್ಣು ನೀಡಿತು. ಜಿ. ನಾರಾಯಣರು ನಮ್ಮ ಸಾಧನೆಯನ್ನು ಸ್ವತಃ ಕಂಡು ಸಂತೋಷಿಸಿದರಷ್ಟೇ ಅಲ್ಲ, ಪುಳಕಿತರಾಗಿ ಪ್ರೋತ್ಸಾಹಿಸಿದರು.

ಕನ್ನಡವನ್ನು ಆಡಳಿತದಲ್ಲಿ ಯಶಸ್ವಿಯಾಗಿ ಜಾರಿಗೆ ತರುವ ದಿಶೆಯಲ್ಲಿ ಅವರು ಪಟ್ಟು ಹಿಡಿದು ಪ್ರಯತ್ನಿಸಿದ್ದಾರೆ. "ಗಂಗೆ ಮೇಲಿಂದ ಕೆಳಗೆ ಹರಿಯಬೇಕೇ ಹೊರತು ಕೆಳಗಿನಿಂದ ಮೇಲಲ್ಲ" ಎಂದ ಅಂದಿನ ಅವರ ಕಿವಿ ಮಾತು ಪರಿಣಾಮ ಬೀರದೆ ಹೋಗಲಿಲ್ಲ. ಅವರು ಕನ್ನಡದ ಕಟ್ಟಾಳು. ಆದರೂ ತ್ರಿಭಾಷಾ ಸೂತ್ರವನ್ನು ಅದ್ಯಾಪಿ ಬೆಂಬಲಿಸಿ ಭಾರತದ ಭಾವೈಕ್ಯತೆಯನ್ನು ಪ್ರತಿಪಾದಿಸುತ್ತ ಬಂದಿದ್ದಾರೆ.

ಕುಡಿಯುವ ನೀರಿಗೆ ಕಾವೇರಿಯನ್ನು ಕರೆತರಲು ಮುಂದಾದವರೂ ಅವರೇ. ಆಡಳಿತದಲ್ಲಿ ಕನ್ನಡವನ್ನು ಬಳಸುವಂತೆ ಕಾವೇರಿಸಿದವರೂ ಅವರೇ. ಆದರೆ ಅವರದು ಶಾಂತಿಯ ಮಾರ್ಗ; ಗಲಭೆಗೊಂದಲಗಳ ಕ್ರಾಂತಿಯ ಮಾರ್ಗವಲ್ಲ. ದೂಳೆಬ್ಬಿಸುವ ಕ್ರಾಂತಿಗಳಿಗೆ ಅವರು ಒಲಿದಿಲ್ಲ, ಒಲಿಯುವ ನಿರೀಕ್ಷೆಯೂ ಇಲ್ಲ. ಅವರದು ಗುರಿಯತ್ತ ವೇಗದಿಂದ ಧಾವಿಸುವ ಧೀರ ನಡಿಗೆ. ಧೃತಿಗೆಡದ ದೀರ್ಘಧಾವನ. ಅವರು ಕೇವಲ ಜನನಾಯಕರಲ್ಲ, ಜನಮನದ ನಾಯಕರು. ಸಂಘಟನಾ ಶಕ್ತಿಗೆ 'ಜಿ. ನಾರಾಯಣ' ಎನ್ನುತ್ತಾರೆ ಎಂದರೆ ಅತಿಶಯೋಕ್ತಿಯಾಗಲಾರದು.

ಜಿ. ನಾರಾಯಣರು ತಾಳ್ಮೆಯ ತವರೂರು! ಸೌಜನ್ಯದ ಸಾಗರ. ಸದಾ ತಿಳಿನಗೆ ಬೀರುವ ತಂಪಿನ ತಾಣ. ಅವರನ್ನು ಕಂಡರೆ ಸಾಕು, ಕಣ್ಣು ತಣಿಯುತ್ತವೆ. ಹೃದಯ ಅರಳುತ್ತದೆ. ಅವರ ಮಾತುಗಳು ಮೆಲು ಮಾತುಗಳು ನಿಜ, ಆದರೆ ವಿಚಾರಪರ ವಿಕಿರಣಗಳು; ವಿದ್ಯುದ್ವೇಗವಾಹಿಗಳು. ಅವರ ಮಾತುಗಳು ಹುಸಿ

ಬಾಣಗಳಲ್ಲ. ಗುರಿಕಂಡು ನೆಲೆಗೆ ಹಿಂದಿರುಗುವ "ನಾರಾಯಣಾಸ್ತ್ರಗಳು". ಅವರ ಸಲಹೆ ಪಡೆಯುವುದೆಂದರೆ ಸಮಸ್ಯೆಗೆ ಸಿದ್ಧೌಷಧಿಯನ್ನು ಪಡೆದುಕೊಂಡಂತೆಯೇ ಸರಿ.

ಜಿ. ನಾರಾಯಣರದು ಕಾಣದ ಕೈ. ಅದು ಸದಾ ತೆರೆದ ಅಭಯ ಹಸ್ತ. ಅವರು ಕುಶಲ ಸಂಧಾನ ತಂತ್ರಜ್ಞರು; ಸಿದ್ಧಾಂಜನ ಸಫಲಪ್ರಯೋಗ ಪರಿಣತ ಮತಿಗಳು. ಸದಾ ಸರ್ವರ ಕಲ್ಯಾಣಾಕಾಂಕ್ಷಿಗಳು. ಆಶಾಂಬರದ ಬೆಳಕಿನ ಬಿಂದು. ಅರಿವಿನ ಮೂಲೆಯನ್ನು ಹಿಡಿದು ದಣಿವರಿಯದೆ ಸಾಗುವ ದಣ್ಣಾಯಕರು. ಕಮನೀಯ ಕರ್ಮಯೋಗಿ. ಕರವಿಡಿದು ಮುನ್ನಡೆಸುವ ಅಕ್ಕರೆಯ ಅಣ್ಣ.

ವಿರೋಧಕ್ಕೆ ಅವರು ಜಗ್ಗುವವರಲ್ಲ. ವಿರೋಧ, ವಿಮರ್ಶೆ ಅಥವಾ ಟೀಕೆ ಆರೋಗ್ಯವಂತ ಪ್ರಜಾತಂತ್ರದ ಒಂದು ಅವಿಭಾಜ್ಯ ಅಂಗವೆಂಬುದು ಅವರ ನಿಲುವು. ಎದೆಗೆ ಒದ್ದ ಭೃಗು ಋಷಿಯ ಪಾದವನ್ನೊತ್ತಿ ಉಪಚರಿಸಲಿಲ್ಲವೇ ಅಂದು ಆ ಶ್ರೀಮನ್ನಾರಾಯಣ ? ಇಂದೂ ಈ ನಾರಾಯಣರದು ಅದೇ ಮಾರ್ಗ. ಅರೆನುಡಿ, ಕಿರುನುಡಿ, ಬಿರುನುಡಿ ಅವರಿಂದ ಬಲು ದೂರ. ಅವರದು ನೇರನುಡಿ, ತಾರಕನುಡಿ.

'ಯೋಜಕ: ತತ್ರ ದುರ್ಲಭ:' ಎಂದಂತೆ ಒಳ್ಳೆಯ ಯೋಜಕರು ಸಿಕ್ಕುವುದು ದುರ್ಲಭ. ಇಂಥ ನೋಂಪಿವೆತ್ತ ಸುಜೀವ ಕನ್ನಡಿಗರಿಗೆ ದೊರಕಿದ್ದು ನಾಡಿನ ಭಾಗ್ಯ, ನುಡಿಯ ಪುಣ್ಯ.

ಜಿ. ನಾರಾಯಣರು ಅರುವತ್ತು ದಾಟಿದರೂ ಅತ್ಯುತ್ಸಾಹೀ ಕಾರ್ಯಶೀಲರು. ಕನ್ನಡ ನಾಡಿನ ಜನಜೀವನವು ಶಾಂತ, ಸಮೃದ್ಧ ಸುಖಸಾಗರವಾಗಲಿ ಎಂದು ಸದಾ ಹಾರೈಸುವ ಜಿ. ನಾರಾಯಣರು ನಾಡ ಜೀವನಕ್ಕೆ ದಿಕ್ಸೂಚಕ ದೀಪಸ್ತಂಭವಾಗಿ ಸದಾ ರಾರಾಜಿಸಲಿ. ಸುಪ್ರೀತರಾದ ದೇವತೆಗಳು ಅವರ ಮೇಲೆ ಸದಾ ಸನ್ಮಂಗಳದ ಸೇಸೆಗಳನ್ನು ಸುರಿಯುತ್ತಿರಲಿ !

ಈಶ್ವರ

ದೇವರು ಕಟ್ಟಿಗೆಯಲ್ಲೂ ಇಲ್ಲ; ಕಲ್ಲಿನಲ್ಲೂ ಇಲ್ಲ. ಮಣ್ಣಿನಲ್ಲೂ ಇಲ್ಲ. ದೇವರಿರುವುದು ವ್ಯಕ್ತಿಯ ಭಾವನೆಯಲ್ಲಿ. ಆದ್ದರಿಂದ ಅವರವರ ಮನೋಭಾವವೇ ಎಲ್ಲಕ್ಕೂ ಕಾರಣ.

—**ಸುಭಾಷಿತ**

ಗುಣ-ಶೀಲ

ಮನುಷ್ಯನಿಗೆ ಆಭರಣ ರೂಪ ; ರೂಪಕ್ಕೆ ಆಭರಣ ಗುಣ ; ಗುಣಕ್ಕೆ ಆಭರಣ ಜ್ಞಾನ ; ಜ್ಞಾನಕ್ಕೆ ಆಭರಣ ಕ್ಷಮೆ !

—**ಚಾಣಕ್ಯ ನೀತಿ**

ಜಿ. ನಾರಾಯಣ-ನಾನು

ನಾಡಿಗೇರ ಕೃಷ್ಣರಾಯ

ಒಂದು ಸಾರ್ವಜನಿಕ ಸಭೆಯಲ್ಲಿ ನಾನು ಹೇಳಿದೆ, "ಶ್ರೀ ನಾರಾಯಣ ಅವರು 'ವಿನೋದ' ಪತ್ರಿಕೆ ನಿಲ್ಲಿಸಿದರೆ ಲಾಭ ಬರುತ್ತದೆ" ಅಂತ. ಅದಕ್ಕೆ ಅವರು ಉತ್ತರ ಕೊಡುತ್ತಾ 'ಯಾರಾದರೂ ಕನ್ನಡದಲ್ಲಿ ಹಾಸ್ಯ ಪತ್ರಿಕೆ ಇದೆಯೇ'? ಅಂತ ಕೇಳಿದರೆ 'ಇಗೋ ಇಲ್ಲಿದೆ ಅಂತ' ತೋರಿಸುವುದಕ್ಕೆ 'ವಿನೋದ' ಹೊರಡಿಸುತ್ತಿದ್ದೇನೆ'! ಅಂತ ಹೇಳಿದರು.

ನಾನು ಆಗ ಪ್ರಜಾಮತದಲ್ಲಿ ಕೆಲಸ ಮಾಡುತ್ತಿದ್ದೆ. ಒಂದು ಮಧ್ಯಾಹ್ನ ಶ್ರೀ ಜಿ. ನಾರಾಯಣ ಅವರು ನಮ್ಮ ಕಚೇರಿಗೆ ಬಂದರು. "ಹಾಗಾದರೆ ಯುದ್ಧಕ್ಕೆ ಬಾ" ಅಂತ ಪೌರಾಣಿಕ ಕತೆಗಳಲ್ಲಿ ಹೇಳುವಂತೆ ನಾನು "ಹಾಗಾದರೆ ಹೋಟಲಿಗೆ ಬಾ" ಎಂದು ಹೇಳಿದೆ. ಇಬ್ಬರೂ ಹೋಟಲಿಗೆ ಹೋದೆವು. ಕಾಫಿಯನ್ನು ಕುಡಿಯುತ್ತ ಅವರು ಹೇಳಿದರು: "ನಾನೊಂದು ಹಾಸ್ಯ ಮಾಸಪತ್ರಿಕೆ ಹೊರಡಿಸಬೇಕೆಂದಿದ್ದೇನೆ. ನಿಮ್ಮ ಸಹಕಾರ ಬೇಕು" ನಾನು ಅಡ್ಡಿ ಆತಂಕಗಳ ಬಗ್ಗೆ ಎಷ್ಟು ಹೇಳಿದರೂ ಅವರು ಕೇಳಲಿಲ್ಲ. ಒಪ್ಪಿಕೊಂಡೆ. ಅದರ ತಪ್ಪಿಗಾಗಿ ಸುಮಾರು ಇಪ್ಪತ್ತು ವರ್ಷ ವಿನೋದಕ್ಕೆ ಲೇಖನಗಳನ್ನು ಬರೆದೆ. ಅವರ ಕಚೇರಿಗೆ ಹೋದಾಗ ಅರ್ಧ ಪ್ಯಾಕ್ ಸಿಗರೇಟ್, ಒಂದು ಬೆಂಕಿಪೊಟ್ಟಣ, ಒಂದು ಕಪ್ ಕಾಫಿ ಕೊಡುತ್ತಿದ್ದರು. ಲೇಖನ ಬರೆದಾದ ಮೇಲೆ ಒಂದಿಷ್ಟು ದಕ್ಷಿಣೆ ಕೊಡುತ್ತಿದ್ದರು. ಆದರೆ ನನಗೆ ವಯಸ್ಸಾಗಿ ಬರೆಯುವುದನ್ನು ಬಿಟ್ಟೆ. ಆದರೆ 'ವಿನೋದ' ಬರುವುದು ನಿಂತಿಲ್ಲ.

ಒಂದು ಸಾರ್ವಜನಿಕ ಸಭೆಯಲ್ಲಿ ನಾನು ಹೇಳಿದೆ, "ಶ್ರೀ ನಾರಾಯಣ ಅವರು 'ವಿನೋದ' ಪತ್ರಿಕೆ ನಿಲ್ಲಿಸಿದರೆ ಲಾಭ ಬರುತ್ತದೆ" ಅಂತ. ಅದಕ್ಕೆ ಅವರು ಉತ್ತರ ಕೊಡುತ್ತ 'ಯಾರಾದರೂ ಕನ್ನಡದಲ್ಲಿ ಹಾಸ್ಯ ಪತ್ರಿಕೆ ಇದೆಯೇ'? ಅಂತ ಕೇಳಿದರೆ 'ಇಗೋ ಇಲ್ಲಿದೆ ಅಂತ' ತೋರಿಸುವುದಕ್ಕೆ 'ವಿನೋದ' ಹೊರಡಿಸುತ್ತಿದ್ದೇನೆ !' ಅಂತ ಹೇಳಿದರು.

ಎಂತಹ ಕನ್ನಡಾಭಿಮಾನ. ಕೈಯಿಂದ ಹಣಹೋದರೂ ಚಿಂತೆಯಿಲ್ಲ, ಹೆಸರು ಉಳಿಯಬೇಕು! ನನಗೀಗ ಪಾರ್ಶ್ವವಾಯು (ಸ್ಟ್ರೋಕ್) ಹೊಡೆದಿದೆ. ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದೆ. ಶ್ರೀ ನಾರಾಯಣ ಅವರು ಎರಡು ದಿನ ನನ್ನನ್ನು ನೋಡುವುದಕ್ಕೆ ಬಂದಿದ್ದರು.

ಶ್ರೀ ನಾರಾಯಣ ಅವರ ಬಗ್ಗೆ ಮುನ್ನೂರು ಶಬ್ದಗಳಲ್ಲಿ ಬರೆಯಬೇಕೆಂದು ಸೂಚನೆ ಕೊಟ್ಟಿದ್ದಾರೆ. ಅವರ ಬಗ್ಗೆ ಮುನ್ನೂರು ಪುಟಗಳಷ್ಟನ್ನು ಬರೆಯಬಹುದು. ಸೂಚನೆಯಂತೆ ನನ್ನ ಅವರ ಸಂಬಂಧದ ಬಗ್ಗೆ ಬರೆದಿದ್ದೇನೆ.

ಭಗವಂತನು ಅವರಿಗೂ ಅವರ ಕುಟುಂಬ ವರ್ಗಕ್ಕೂ ಸಕಲ ಸನ್ಮಂಗಳ ಕರುಣಿಸಲೆಂದು ಪ್ರಾರ್ಥಿಸುತ್ತೇನೆ.

ಜೈ ಕರ್ನಾಟಕ !

ವಾಮನ-ತ್ರಿವಿಕ್ರಮ

ಪ್ರೊ. ವೀ. ಪುಟ್ಟನಾದಪ್ಪ

ಅಂತಹ ಕಷ್ಟಕಾಲದಲ್ಲೂ ಲೇಖಕರಿಗೆ ಮೂರು ರೂಪಾಯಿ ಸಂಭಾವನೆ ಕೊಡುತ್ತಿದ್ದರು ಶ್ರೀ ನಾರಾಯಣ. ಇದು ಅವರ ನೀತಿಗೆ, ತತ್ವಕ್ಕೆ ಒಂದು ನಿದರ್ಶನ. ಲಕ್ಷಾಧೀಶ್ವರರು ಒಟ್ಟುಗೂಡಿ, ಹಣಹೂಡಿ ಪತ್ರಿಕೆಗಳನ್ನು ಹೊರಡಿಸುತ್ತಿರುವ ಈ ಕಾಲದಲ್ಲಿ ಏಕಾಂಗಿಯಾಗಿ, ಸ್ವಾವಲಂಬಿಯಾಗಿ ಮೂರು ದಶಕಗಳಿಂದ ಮಾಸಿಕ 'ವಿನೋದ' ಪತ್ರಿಕೆಯನ್ನು ನಡೆಸಿಕೊಂಡು ಬರುತ್ತಿರುವ ನಾರಾಯಣ ಅವರ ಕೆಚ್ಚು ಮೆಚ್ಚುಗೆಯ ವಿಷಯ.

ಶೇಕ್ಸ್‌ಪಿಯರ್ ಒಂದು ಕಡೆ ಹೀಗೆ ಹೇಳಿದ್ದಾನೆ: Some are born great; some achieve greatness; some have greatness thrust on them. ಶ್ರೀ ಜಿ. ನಾರಾಯಣ ಅವರು ಎರಡನೆಯ ಗುಂಪಿಗೆ ಸೇರಿದವರು. ಸ್ವಪ್ರಯತ್ನದಿಂದ, ಸ್ವಾವಲಂಬನೆಯಿಂದ ಜೀವನ ವಾರಿಧಿಯ ಉಬ್ಬರವಿಳಿತಗಳೊಡನೆ ನಿರಂತರ ಸೆಣಸಾಡಿ, ಹೋರಾಡಿ, ಶ್ರಮಜೀವಿಯಾಗಿ ಉನ್ನತಿಯ ಶಿಖರವೇರಲು, ವಾಮನನಾಗಿದ್ದವರು ತ್ರಿವಿಕ್ರಮರಾಗಲು ಶ್ರೀ ಜಿ ನಾರಾಯಣ ಅವರಿಗೆ ಮೂರು ದಶಕಗಳು ಬೇಕಾದುವು. ಮುವ್ವತ್ತು ವರುಷಗಳ ಹಿಂದೆ ನನಗೆ ಅವರ ಪರಿಚಯವಾದಾಗ ಅವರು 'ವಿನೋದ' ಮಾಸಪತ್ರಿಕೆಯ ಸಂಪಾದಕರು ಮಾತ್ರ. ರಾಜಕೀಯ ಮತ್ತು ಸಾಹಿತ್ಯ ಕ್ಷೇತ್ರಗಳಲ್ಲಿ ಅವರು ಪ್ರಮುಖತೆ ಪಡೆದಿರಲಿಲ್ಲ. ಈಗ ವಿನೋದ ಮುದ್ರಣಾಲಯವಿರುವ ರಸ್ತೆ ಚಾಮರಾಜಪೇಟೆ ಮುಟ್ಟುವ ಮೂಲೆಯ ಒಂದು ಸಣ್ಣ ಅಂಗಡಿಯಲ್ಲಿ ಆಗ ಶ್ರೀ ನಾರಾಯಣ ಅವರ ಮುದ್ರಣಾಲಯವಿತ್ತು. ಆ ಸಣ್ಣ ಜಾಗದಲ್ಲಿ ಮುದ್ರಣಯಂತ್ರದ ಮುಂದೆ ಅವರ ಮೇಜು ಮತ್ತು ಎರಡು ಕುರ್ಚಿಗಳು. ಒಂದು ಅವರಿಗೆ, ಇನ್ನೊಂದು ಅವರನ್ನು ಕಾಣಲು ಬಂದವರಿಗೆ. ಒಂಟಿ ಖದ್ದರುಪಂಚೆ, ಖದ್ದರು ಜುಬ್ಬ, ತಿರುಪತಿ ತಲೆ ಅಥವಾ ಅರ್ಚಕರ ಜುಟ್ಟಿತ್ತೋ ಏನೋ ನನಗೆ ಮರೆತು ಹೋಗಿದೆ! ಒಣಕಲು ದೇಹ. ಮಿತಭಾಷಿ. ಮುವ್ವತ್ತು ವರುಷಗಳ ಹಿಂದೆ ನಾಕಂಡ ನಾರಾಯಣ. ಅದೇ ತಾನೆ ಅವರು ಪ್ರಕಟಿಸಲು ಪ್ರಾರಂಭಿಸಿದ್ದ 'ವಿನೋದ' ಮಾಸಿಕಕ್ಕೆ ನಾನೊಬ್ಬ ಲೇಖಕ. ಅಂದು ಪ್ರಕಟವಾಗುತ್ತಿದ್ದ ಹಾಸ್ಯಪ್ರಧಾನ ಪತ್ರಿಕೆಗಳಲ್ಲಿ 'ವಿನೋದ'ವೂ ಒಂದು. ಕೊರವಂಜಿ, ನಗುವನಂದ, ವಿಕಟಕವಿ ಹೀಗೆ ಬೇರೆ ಪತ್ರಿಕೆಗಳೂ ಇದ್ದುವು. ಹಲವಾರು ಕಾರಣಗಳಿಂದ ಆ ಪತ್ರಿಕೆಗಳು ಕೊನೆಯುಸಿರೆಳೆದರೂ 'ವಿನೋದ' ಇನ್ನೂ ಬದುಕಿದೆ, ನಾರಾಯಣರ ಭಗೀರಥ ಪ್ರಯತ್ನದಿಂದ.

ಮೂರು ದಶಕಗಳ ಹಿಂದೆ 'ವಿನೋದ' ದಲ್ಲಿ ಶ್ರೀ ನಾಡಿಗೇರ ಕೃಷ್ಣರಾಯರ, ಅ. ರಾ. ಸೇ. ಅವರ, ದಾಶರಥಿ ದೀಕ್ಷಿತರ ಮತ್ತು ನನ್ನ ಲೇಖನಗಳು ಕ್ರಮವಾಗಿ ಕಾಣಿಸಿಕೊಳ್ಳುತ್ತಿದ್ದುವು. ಆಗ ನಾನು ನಾರಾಯಣ ಅವರನ್ನು ಕಾಣಲು ಅವರ ಮುದ್ರಣಾಲಯಕ್ಕೆ ಹೋಗು

ತ್ತಿದ್ದೆ. ಅದೂ ಇದೂ ಮಾತಾಡಿ ಮುಗಿದ ಮೇಲೆ ನಾನು ಹೊರಟುನಿಂತಾಗ ಹಿಂದಿನ 'ವಿನೋದ' ಸಂಚಿಕೆಯಲ್ಲಿ ಪ್ರಕಟವಾದ ನನ್ನ ಲೇಖನಕ್ಕೆ ನಾರಾಯಣ ಅವರು ಮೂರು ರೂಪಾಯಿ ಸಂಭಾವನೆಯನ್ನು ನನಗೆ ಕೊಡುತ್ತಿದ್ದರು. ಅವರು ಕೊಡುತ್ತಿದ್ದ ಮೂರು ರೂಪಾಯಿ ನನಗೆ ಮುನ್ನೂರು ರೂಪಾಯಿಗಳಷ್ಟು ಸಂತೋಷವನ್ನು ಕೊಡುತ್ತಿತ್ತು. ಏಕೆಂದರೆ, ಈಗ ಅತ್ಯಧಿಕ ಪ್ರಸಾರವಿರುವ ಕೆಲವು ಪತ್ರಿಕೆಗಳೂ ಆಗ ಲೇಖಕರಿಗೆ ಸಂಭಾವನೆ ಕೊಡುವ ಸ್ಥಿತಿಯಲ್ಲಿರಲಿಲ್ಲ. ಅಂತಹ ಕಷ್ಟಕಾಲದಲ್ಲೂ ಲೇಖಕರಿಗೆ ಮೂರು ರೂಪಾಯಿ ಸಂಭಾವನೆ ಕೊಡುತ್ತಿದ್ದರು ಶ್ರೀ ನಾರಾಯಣ. ಇದು ಅವರ ನೀತಿಗೆ, ತತ್ವಕ್ಕೆ ಒಂದು ನಿದರ್ಶನ. ಲಕ್ಷಾಧೀಶ್ವರರು ಒಟ್ಟುಗೂಡಿ, ಹಣಹೂಡಿ ಪತ್ರಿಕೆಗಳನ್ನು ಹೊರಡಿಸುತ್ತಿರುವ ಈ ಕಾಲದಲ್ಲಿ ಏಕಾಂಗಿಯಾಗಿ, ಸ್ವಾವಲಂಬಿಯಾಗಿ ಮೂರು ದಶಕಗಳಿಂದ ಮಾಸಿಕ 'ವಿನೋದ' ಪತ್ರಿಕೆಯನ್ನು ನಡೆಸಿಕೊಂಡು ಬರುತ್ತಿರುವ ನಾರಾಯಣ ಅವರ ಕೆಚ್ಚು ಮೆಚ್ಚುಗೆಯ ವಿಷಯ.

ಎಲ್ಲವೂ ದುಬಾರಿಯಾಗಿರುವ ಇಂದಿನ ದಿನಗಳಲ್ಲಿ ಜಾಹಿರಾತುಗಳ ಸಹಾಯವಿಲ್ಲದೆ ಒಂದು ಪತ್ರಿಕೆ ಬಹಳ ಕಾಲ ಬದುಕುವುದು ಕಷ್ಟ. ಶ್ರೀ ನಾರಾಯಣ ಅವರು ಪ್ರಭಾವಶೂನ್ಯರೇನಲ್ಲ. ಅವರಿಗಿರುವ ಅಪಾರ ಸ್ನೇಹಿತರು ಮತ್ತು ಅಭಿಮಾನಿಗಳ ನೆರವಿನಿಂದ 'ವಿನೋದ'ಕ್ಕೆ ಅವರು ಜಾಹಿರಾತುಗಳನ್ನು ಒದಗಿಸಿಕೊಳ್ಳಬಲ್ಲರು. ಆದರೆ ಅವರಿಗೆ ಅದು ಬೇಕಿಲ್ಲ. ಹಿಂದೊಮ್ಮೆ ನಾನು ಶ್ರೀ ನಾರಾಯಣ ಅವರ ಪುತ್ರರಾದ ಶ್ರೀ ರಾಘವೇಂದ್ರ ಅವರ ಜೊತೆ ಈ ಬಗ್ಗೆ ಮಾತಾಡಿದಾಗ ಅವರು ಹೀಗೆ ಹೇಳಿದರು: "ನಮ್ಮ ತಂದೆಯವರಿಗೆ ಜಾಹಿರಾತಿಗಾಗಿ ಬೇರೊಬ್ಬರ ಬಳಿ ಹೋಗಲು ಇಷ್ಟವಿಲ್ಲ. ಹಾಗೇ ನಡೆದಷ್ಟು ದಿನ ಪತ್ರಿಕೆ ನಡೆಯಲಿ ಎಂದು ಹೇಳಿದ್ದಾರೆ". ಏಳೆಂಟು ವರುಷಗಳ ಹಿಂದೆ ಮೈಸೂರು ವಿಶ್ವವಿದ್ಯಾನಿಲಯದ ಶೈಕ್ಷಣಿಕ ಸಭೆಯೊಂದರಲ್ಲಿ ಶ್ರೀ ನಾರಾಯಣ-ನಾನು ಭೇಟಿಯಾದೆವು. ಆಗ 'ವಿನೋದ'ದ ಮಾತೂ ಬಂತು. ಮನನೊಂದು ಅವರು ನನಗೆ ಹೇಳಿದರು. "ನೋಡಿ ಪುಟ್ಟಮಾದಪ್ಪನವರೆ, ಪತ್ರಿಕೆ ನಡೆಸುವುದು ಈಗ ಬಹಳ ಕಷ್ಟವಾಗಿದೆ. ಯಾರಾದರೂ ಮುಂದೆ ಬಂದರೆ ಮುದ್ರಣಾಲಯವನ್ನೂ, ಪತ್ರಿಕೆಯನ್ನೂ ಮಾರಲು ಸಿದ್ಧ". ನಾನು ಆಗ ಅವರಿಗೆ ಹೇಳಿದೆ: "ದಯವಿಟ್ಟು ಹಾಗೆ ಮಾಡಬೇಡಿ ನಾರಾಯಣ್. ಇಂದು ಇಡೀ ಕರ್ನಾಟಕದಲ್ಲಿ ಹಾಸ್ಯಕ್ಕೆ ಮೀಸಲಾದ ಪತ್ರಿಕೆ 'ವಿನೋದ' ಒಂದೇ. ದಯವಿಟ್ಟು ಅದನ್ನು ನಡೆಸಿಕೊಂಡು ಹೋಗಿ". ನಾನು ಹಾಗೆ ಹೇಳುತ್ತಿದ್ದಾಗ ಅವರ ಮುಖ ಚಿಂತನೆಯ ಕಂತೆಯಾಗಿತ್ತು.

ರಾಜಕೀಯಕ್ಕಿಳಿದು ಶ್ರೀ ನಾರಾಯಣ ಅವರು ಬೆಂಗಳೂರಿನ ಮೇಯರ್ ಆದಾಗ, ಸಾಹಿತ್ಯ ಕ್ಷೇತ್ರಕ್ಕಿಳಿದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದಾಗ ಅವರ–ನನ್ನ ನಡುವೆ ಹೆಚ್ಚು ಪತ್ರವ್ಯವಹಾರ ಇರಲಿಲ್ಲ. ಅನೇಕ ಕಾರಣಗಳಿಂದಾಗಿ ನಾನೂ ಬರೆಯುವುದನ್ನು ನಿಲ್ಲಿಸಿದ್ದೆ. ಆದರೂ ಶ್ರೀ ನಾರಾಯಣ ಅವರಿಂದ ಆಗಾಗ ಒಂದು ಅಂಚೆಕಾರ್ಡು ಬರುತ್ತಿತ್ತು. "ವಿನೋದಕ್ಕೆ ಒಂದು ಲೇಖನ ಕಳುಹಿಸಿಕೊಡಿ" ಎಂದು. ಅವರ ಜ್ಞಾಪಿಸುವ ಪತ್ರಗಳಿಂದ ನನಗೆ ನಾಚಿಕೆಯಾಗಿ ಮತ್ತೆ ಲೇಖನಿಯನ್ನು ಕೈಗೆತ್ತಿಕೊಂಡೆ. ಲೇಖಕರನ್ನು ಪ್ರೋತ್ಸಾಹಿಸುವ ಅವರ ವಾತ್ಸಲ್ಯಕ್ಕೆ ಇದೊಂದು ನಿದರ್ಶನ. ಮೂರು ದಶಕಗಳ ಹಿಂದೆ ಅನಾಮಧೇಯರಾಗಿದ್ದ ಶ್ರೀ ಜಿ. ನಾರಾಯಣ ಇಂದು ಕರ್ನಾಟಕದ ಗೌರವಾನ್ವಿತ ವ್ಯಕ್ತಿಗಳಲ್ಲಿ ಒಬ್ಬರಾಗಿದ್ದಾರೆ. ಸರಳತೆ, ಸಜ್ಜನಿಕೆ, ಸೌಹಾರ್ದ–ಇವು ಅವರ ಜೀವನದ ಹಾಸುಹೊಕ್ಕುಗಳಾಗಿವೆ. ಇವನಾರವ, ಇವನಾರವ, ಇವನಾರವ ಎನ್ನದೆ ಇವ ನಮ್ಮವ, ಇವ ನಮ್ಮವ, ಇವ ನಮ್ಮವ ಎನ್ನುವ ಪೀಳಿಗೆಗೆ ಸೇರಿದವರು ಶ್ರೀ ಜಿ. ನಾರಾಯಣ ಅವರು.

ಕ್ರಿಯೆ

ನೀನು ಏನು ಹೇಳುವೆ ಎಂಬುದರಲ್ಲಿ ಮಹತ್ವವಿಲ್ಲ; ಆದರೆ ನೀನೇನು ಮಾಡುವೆ ಎನ್ನುವುದರಲ್ಲಿ ಆ ಮಹತ್ವವಿದೆ. ಆದುದರಿಂದ ತೀವ್ರ ನಿಷ್ಠೆಯ ಮನಸ್ಸು, ಶೀಲಬಲ, ತ್ವರಿತಗತಿಯ ಕಾರ್ಯಪ್ರವೃತ್ತಿಯ ಮಾನವರಿಗೆ ಜಗತ್ತು ನೀಡುವ ವಿಪುಲ ಅವಕಾಶಗಳನ್ನು ನೀನು ಆಲೋಚಿಸು.

—ಜವಾಹರಲಾಲ್ ನೆಹರೂ

ವಿನೋದ-ನಾರಾಯಣ-ನಾನು

ಎಸ್. ಪಿ. ಸತೀಶ್

ಸರಳ ಸ್ವಭಾವ. ಎಲ್ಲರನ್ನೂ ನಗೆಮೊಗದಿಂದ ಮಾತನಾಡಿಸುತ್ತಾರೆ. ಆಗಾಗ್ಗೆ ಚಟಾಕಿ ಹಾರಿಸಿ ನಗಿಸುತ್ತಾರೆ. ನಿಷ್ಠುರದ ಮಾತುಗಳನ್ನು ಅವರೆಂದೂ ಆಡುವುದಿಲ್ಲ. ಯಾವುದಾದರೂ ಧೋರಣೆಯನ್ನು ಕುರಿತು ಮಾತನಾಡಿದಾಗ ದೀರ್ಘ ಚಿಂತನೆ ಮಾಡುತ್ತಾರೆ.

ನಾನು ನಾರಯಣನೂ ಅಲ್ಲ, ನಾರಾಯಣನೂ ನಾನಲ್ಲ. ಕುಮಾರವ್ಯಾಸನು ಪ್ರಾಸದ ಅನುಕೂಲಕ್ಕಾಗಿ ನಾರಾಯಣನನ್ನು ನಾರಯಣ ಎಂದು ಕರೆದಿದ್ದ. ಅವನನ್ನೇ ಅನುಸರಿಸಿ ಇಲ್ಲಿ ಪ್ರಾಸಪ್ರಸಂಗವಿಲ್ಲದ್ದಿದರೂ ದೇಶಹಳ್ಳಿಯ ಮಾನ್ಯ ಶ್ರೀ ಜಿ. ನಾರಾಯಣರವರನ್ನು ನಾರಯಣ ಎಂದು ಕರೆದಿದ್ದೇನೆ.

ನಾನು ವಿನೋದ ಪತ್ರಿಕೆಯನ್ನು ಬಹು ದಿನಗಳಿಂದ ಬಲ್ಲೆ. ಅದನ್ನು ಸಾಮಾನ್ಯವಾಗಿ ನಾನು ಕೊಂಡು ಕೊಂಡೇ ಓದುತ್ತಿದ್ದೆ. ಬೇರೆಯವರಿಂದ ಕಿತ್ತುಕೊಂಡರೆ ಅವರ ಸಮಯದ ಮರ್ಜಿ ಹಿಡಿದು ಓದಿ ಕೊಡಬೇಕು. ಇದು ಅನೇಕ ವೇಳೆ ಸಾಧ್ಯವಾಗುತ್ತಿರಲಿಲ್ಲ. ಒಂದೆರಡು ಬಾರಿ ಇಂತಹ ಇಕ್ಕಟ್ಟಿನ ಪರಿಸ್ಥಿತಿಗೆ ಸಿಕ್ಕಿಕೊಂಡು ನಾನು ಕೊಂಡುಕೊಂಡೇ ಓದಬೇಕೆಂದು ನಿರುಪಾಯನಾಗಿ ತೀರ್ಮಾನ ತೆಗೆದುಕೊಂಡಿದ್ದೆ.

ಈಗ ವಿನೋದ ಕಾರ್ಯಾಲಯ ಸಾಹಿತ್ಯ ಪರಿಷತ್ತಿನ ಹತ್ತಿರದ ಬ್ಯಾಂಕೊಂದರ ಕಟ್ಟಡದಲ್ಲಿದೆ. ಹಿಂದೆ ಅದು ಚಾಮರಾಜಪೇಟೆಯ 3ನೇ ಅಡ್ಡ ರಸ್ತೆ ಮತ್ತು ಬಸವನ ಗುಡಿ ರಸ್ತೆಗಳು ಸೇರುವೆಡೆಯಲ್ಲಿತ್ತು. ಈಗಲೂ ಸಹ ಒಂದು ಬೋರ್ಡ್ ಅಲ್ಲಿ ತೂಗುಯ್ಯಾಲೆ ಆಡುತ್ತಲೇ ಇದೆ.

ನಾರಾಯಣರು ಈ ನಗೆ ಪತ್ರಿಕೆಯನ್ನು 32ವರೆ ವರ್ಷಗಳಿಂದ ನಡೆಸಿಕೊಂಡು ಬಂದಿದ್ದಾರೆ. ಪತ್ರಿಕೆ ಆರಕ್ಕೆ ಏರಿಲ್ಲ. ಮೂರಕ್ಕೆ ಇಳಿದಿಲ್ಲ. ತನ್ನ ಗೌರವಾದರಗಳನ್ನು ಉಳಿಸಿಕೊಂಡು ನಡೆದಿದೆ. ಮುಖಪುಟದಲ್ಲಿನ ವಿಘ್ನೇಶ್ವರನಿಗೆ ಯಾವ ವಿಘ್ನವೂ ಉಂಟಾಗಿಲ್ಲ. ಸೊಂಡಿಲನ್ನು ಎತ್ತಿಸಿಕೊಂಡು ಕೈಯಲ್ಲಿ ಪುಸ್ತಕ ಹಿಡಿದು, ಹೊಟ್ಟೆ ಮುಂದೆ ಮಾಡಿಕೊಂಡು ಕಾಲಲ್ಲಿ ಚಪ್ಪಲಿ ಧರಿಸಿಕೊಂಡು ನಡದೇ ಇದ್ದಾನೆ ಗಜಾನನ! ಇವನ ಹೊಟ್ಟೆಯನ್ನು ನೋಡಿದರೆ ಈತ ಪ್ರತಿದಿನ ಹೆತ್ತ ತುಪ್ಪ ಮತ್ತು ಗೋಧಿ ರೊಟ್ಟಿಯನ್ನು ಎಲ್ಲೋ ಕದ್ದು ತಿನ್ನುತ್ತಿರಬೇಕು ಎನ್ನಿಸುತ್ತದೆ. ಮುಖಪುಟದಲ್ಲಿ ಒಂದು ವ್ಯಂಗ್ಯ ಚಿತ್ರಕ್ಕೆ ಚ್ಯುತಿಯಿಲ್ಲ. ಶೀರ್ಷಿಕೆಗಾಗಿ ಯಾವುದಾದರೊಂದು ಚೌಕಟ್ಟು ಕಾದಿರುತ್ತದೆ. ಸ್ವಾತಂತ್ರ್ಯೋತ್ಸವ ಸಂಚಿಕೆಯ ಚೌಕಟ್ಟುಗಳಿಗೆ ವರ್ಷವೆಲ್ಲಾ ವಿಶ್ರಾಂತಿ ಅಂತ ಕಂಡು ಬರುತ್ತದೆ. ಅಲ್ಲಲ್ಲಿ ಸ್ಥಳ ಉಳಿದಾಗ

ನಗು ತರಿಸುವ ಕೆಲವು ಚಿತ್ರಗಳಿಗೂ ಸ್ಥಳದಾನವಾಗುತ್ತದೆ. ನಗೆ ಹನಿಗಳಿಗೂ ಅಲ್ಲಲ್ಲಿ ಸ್ಥಳ ದೊರಕುವುದುಂಟು. ಇತ್ತೀಚೆಗೆ ಹಿಂದಿನ ನೆನಪು (ಕಹಿಯಲ್ಲ) ಶೀರ್ಷಿಕೆಯಲ್ಲಿ ಹಿಂದೆ ಪ್ರಕಟವಾಗಿದ್ದ ವ್ಯಂಗ್ಯಚಿತ್ರಗಳು ದಾರಿಮಾಡಿಕೊಂಡಿವೆ. 3-4 ಪುಟ ಮಾಮೂಲಿ ಜಾಹಿರಾತುಗಳು. ಅವುಗಳ ಹಾವಳಿ ಅಷ್ಟಾಗಿ ಇಲ್ಲ. ಸಧ್ಯ ಬದುಕಿದೆವು ಎಂದು ನಿಟ್ಟುಸಿರು ಬಿಡಬಹುದು.

ನಾನು ನಾರಾಯಣರನ್ನು ನೋಡಿದ್ದು 1975ರಲ್ಲಿ. 1976ರಲ್ಲಿ ನಿಕಟ ಸಂಪರ್ಕ ಬಂದಿತು. ನಾನು ಆಗ ಪಠ್ಯ ಪುಸ್ತಕ ಇಲಾಖೆ ನಿರ್ದೇಶಕನಾಗಿದ್ದೆ. ಕನ್ನಡದ ವಿಷಯ ಬಂದಾಗ ಇವರೂ ಚರ್ಚೆಗೆ ಬರುತ್ತಿದ್ದರು. ಇಡೀ ದೇಶವ್ಯಾಪೀ ಮೆಚ್ಚುಗೆ ಪಡೆದಿರುವ ಭಾಷಾ ನೀತಿ ರೂಪಿಸುವಲ್ಲಿ ಇವರು ನನಗೆ ಮೆಚ್ಚುಗೆಯ ಬೆಂಬಲ ನೀಡಿದ್ದರು. ಇತ್ತೀಚೆಗೆ ಭಾಷಾ ನೀತಿ ಬೀದಿಗಿಳಿದಿದೆ. ಅತ್ತ ನ್ಯಾಯಾಲಯಗಳಿಂದ ಸರ್ಕಾರಿ ಆಜ್ಞೆಗಳಿಗೆ ಲಾಗ ಹಾಕಿಸಲಾಗುತ್ತಿದೆ.

ನಾರಾಯಣರು ದೈಹಿಕವಾಗಿ ಕುಳ್ಳ. ಐದು ಅಡಿ ಎತ್ತರವಿರಬಹುದು ಎಂದು ನನ್ನ ಕಣ್ಣಳತೆ. ವಾಮನ ಮೂರ್ತಿ. ಮೂರ್ತಿ ಚಿಕ್ಕದು. ಕೀರ್ತಿ ದೊಡ್ಡದು. ದೇಶಹಳ್ಳಿ ಎಲ್ಲಿ? ಬೆಂಗಳೂರಿನ ಮೇಯರ್ ಎಲ್ಲಿ? ಇತ್ತೀಚಿಗೆ ಮೇಯರ್ ಎಂಬ ಪದವನ್ನು ಮೇಯೋರು ಎಂದು ಮಾಡಿಕೊಂಡಿದ್ದಾರೆಂದು ನನ್ನ ಸ್ನೇಹಿತ ಗುಗ್ಗು ಪತ್ತೇದಾರಿ ಸುದ್ದಿ ತಂದಿದ್ದಾನೆ. ಅದು ಅಲ್ಲಿಗಿರಲಿ.

ಇವರ ಉಡುಪು ತೀರಾ ಸಾಧಾರಣ. ಬಟ್ಟೆ ಖಾದಿಯದು. ಒಂದೋ ಅಥವಾ ಎರಡೋ ಪದರಿನ ಲುಂಗಿ, ಮೇಲೆ ಮುಂಡಕ್ಕೆ ಒಂದು ಜುಬ್ಬ. ತಲೆಗೆ ಒಂದು ಟೋಪಿ ಹಾಕುತ್ತಾರೆ. ಇತರರಿಗೆ ಟೋಪಿ ಹಾಕುವ ಹವ್ಯಾಸ ಇವರದಲ್ಲ. ಅವರು ಹಾಕುವ ಟೋಪಿ ಗಾಂಧಿ ಟೋಪಿಯಲ್ಲ. ಖಾದಿಕೋಟಿನ ಬಟ್ಟೆಯದು. ಬಣ್ಣದ್ದು. ಕಣ್ಣಿಗೆ ಓದುವ ಕನ್ನಡಕ. ಸರಳ ಸ್ವಭಾವ. ಎಲ್ಲರನ್ನೂ ನಗೆಮೊಗದಿಂದ ಮಾತನಾಡಿಸುತ್ತಾರೆ. ಆಗಾಗ್ಗೆ ಚಟಾಕಿ ಹಾರಿಸಿ ನಗಿಸುತ್ತಾರೆ. ನಿಷ್ಠುರದ ಮಾತುಗಳನ್ನು ಅವರೆಂದೂ ಆಡುವುದಿಲ್ಲ. ಯಾವುದಾದರೂ ಧೋರಣೆಯನ್ನು ಕುರಿತು ಮಾತನಾಡಿದಾಗ ದೀರ್ಘ ಚಿಂತನೆ ಮಾಡುತ್ತಾರೆ. ಅನೇಕ ವೇಳೆ ಜೇಗುದಿಗೊಂಡು ಸಾಂತ್ವನದ ಮಾತಾಡಿ ಜನಗಣಮನ ಹಾಡುತ್ತಾರೆ.

ವಿನೋದದ ಪುಟಗಳ ಸಂಖ್ಯೆ 32ಕ್ಕೆ ಸೀಮಿತ. ಲೇಖನಗಳನ್ನು ಪ್ರಕೃತ ಸಹಸಂಪಾದಕ ಅರ್ಥಾತ್ ನಾರಾಯಣರ ಪುತ್ರ ರಾಘವೇಂದ್ರ ಅವರು ಮೂರು ಹೆಚ್ಚು ಕಡಿಮೆ ಆರಿಸಿ ಗುಡ್ಡೆ ಹಾಕುತ್ತಾರೆ. ಕಾರ್ಯಾಲಯಕ್ಕೆ ನಾರಾಯಣರು ಬಂದಾಗ ಆ ಗುಡ್ಡೆ ಎತ್ತಿಕೊಳ್ಳುತ್ತಾರೆ. ಆರಿಸಿಕೊಳ್ಳುತ್ತಾ ಬಿಡುತ್ತಾ ಹೋಗುತ್ತಾರೆ. ಅನುಭವದಿಂದ ಇಂತಿಷ್ಟೇ ಲೇಖನಗಳು ಬೇಕೆಂದು ತೂಕಹಾಕಿದಂತೆ ತೆಗೆದುಕೊಡುತ್ತಾರೆ. ಇವರ ತತ್ವ ಬಹು ಜನಯೋಃ ಪ್ರೀತ್ಯಾರ್ಥಂ. ಎಷ್ಟು ಜನರ ಹೆಸರನ್ನು ಅಚ್ಚುಮಾಡುವುದು ಸಾಧ್ಯವೋ ಅಷ್ಟೂ ಲೇಖನಗಳನ್ನು ಪ್ರಕಟಿಸುವುದು ಅವರ ನೀತಿ. ಹಳಬರು, ಹೊಸಬರು ಇಬ್ಬರನ್ನೂ ಬೆರೆಸುತ್ತಾರೆ. ಕೆಲವರಿಗೇ ಅಂಟಿಕೊಳ್ಳುವುದಿಲ್ಲ. ಅವರ ತತ್ವಗಳು ಒಳ್ಳೆಯವು. ಆದರೆ ಈ ತತ್ವಗಳು ಪ್ರಕಟವಾಗಿಲ್ಲ.

1982 ಮತ್ತು 1983ರಲ್ಲಿ ಶ್ರೀಯುತರು ನನ್ನ ಹತ್ತು ಲೇಖನಗಳನ್ನಾದರೂ ಪ್ರಕಟಿಸಿದ್ದಾರೆ. ಇದರಲ್ಲೂ ಒಂದು ತತ್ವ ಪರಿಪಾಲಿಸಿದ್ದಾರೆ. ನಾನು ಒಮ್ಮೆ ಭೇಟಿಯಾದಾಗ ಎಂತಹ ವಿಷಯಗಳಿರಬೇಕು, ಗಾತ್ರ ಎಷ್ಟಿರಬೇಕು, ಸ್ವಂತದ್ದಾಗಿರಬೇಕೆ, ಅನುವಾದವಾದರೆ ಚಿಂತೆ ಇಲ್ಲವೇ ಎಂದು ಎಷ್ಟೋ ಪ್ರಶ್ನೆಗಳ ಮಳೆಗೆರೆದೆ. ಅವರು ಮಾತ್ರ ಗೋರ್ಕಲ್ಲಿನಂತಿದ್ದರು. ನಂತರ ಬಾಯಿಬಿಟ್ಟರು: ಇಂತಹುದೇ ಎಂದು ಹೇಗೆ ಹೇಳುವುದು? ಯಾವುದು ಬೇಕಾದರೂ ಆಗಬಹುದು. ಅದರ ಒರೆಗಲ್ಲು ಇಷ್ಟೆ. ಓದಿದವರು ಮೆಚ್ಚಿಕೊಳ್ಳಬೇಕು. ಮೆಚ್ಚುಗೆ ಪತ್ರಗಳು ಬಾರದಿದ್ದರೂ ಚಿಂತೆಯಿಲ್ಲ. ಕೆಲವರು ಬರೆಯಿಸಿಕೊಂಡವರೂ ಉಂಟು. ನಾವು ಆ ಪತ್ರಗಳನ್ನು ಪ್ರಕಟಿಸುವುದಿಲ್ಲ. ಬರೆದು ತನ್ನಿ ನೋಡೋಣ ಎಂದರು. ಆದಷ್ಟು ಚಿಕ್ಕದಾಗಿರಲಿ ಎಂದರು. ಅಚ್ಚಾದ ಮೂರು ಪುಟಗಳಿಗಿಂತ ಹೆಚ್ಚಾಗಬಾರದು ಎಂದರು. ನನ್ನ ಅಂತರಂಗವೇ ಬೇರೆಯದಾಗಿತ್ತು. ಅಂತೂ ಬರೆಯುವುದೆಂದು ನಿರ್ಧರಿಸಿ ಒಂದನ್ನು ಅನುವಾದ ಮಾಡಿದೆ. ಸಂಪಾದಕರಲ್ಲಿಗೆ ಹೋಗಿ ವಾದಮಾಡಿದೆ. ಲೇಖನದ ಹೆಸರು 'ಯೋಜನಾ ಸದಸ್ಯರೊಂದಿಗೆ' ಎಂದಿತ್ತು. 'ನೀವು ಅಲ್ಲಿನವರೆಗೆ ಏಕೆ ಹೋದಿರಿ, ನನ್ನೊಂದಿಗೆ ಮಾತನಾಡಿ

ದ್ದರೆ ಸಾಕಾಗಿತ್ತು' ಎಂದು ನಗುತ್ತ ಹೇಳಿದರು. ಲೇಖನ ಮೂರು ಪುಟಗಳಿಗಿಂತ ಹೆಚ್ಚಾಗಿತ್ತು. ಎರಡು ಸಂಚಿಕೆಯಲ್ಲಿ ಹಾಕುವುದಾಗಿ ಹೇಳಿದರು. ಆಗಲಿ ಎಂದು ಅಲ್ಲಿಂದ ಕಾಲೆತ್ತಿದೆ. ಕಾಯುತ್ತಾ ಇದ್ದೆ. ಅದೇ ತಿಂಗಳ ಸಂಚಿಕೆಯಲ್ಲಿ ಇಡೀ ಲೇಖನ ಅಚ್ಚಾಗಿತ್ತು. ಅವರಲ್ಲಿಗೆ ದೌಡಾಯಿಸಿ ಹೋದೆ. ಅವರನ್ನು ಸಿಕ್ಕಾಪಟ್ಟೆ ಹೊಗಳಿದೆ. ಅವರು ಏರಲೂ ಇಲ್ಲ, ಇಳಿಯಲೂ ಇಲ್ಲ.

ಒಮ್ಮೆ 'ಗಗನಸಖಿಯಾಗುವ ಬಯಕೆ' ಎಂಬ ಲೇಖನ ತೆಗೆದುಕೊಂಡು ಹೋದೆ. ಅವರು ಓದಿ ನೋಡಿ, "ಇದು ಸ್ವಲ್ಪ ದೊಡ್ಡದು. ಎರಡು ಸಂಚಿಕೆಗಳಲ್ಲಿ ಹಾಕೋಣ" ಎಂದರು. ನನ್ನಾಸೆಗೆ ಸ್ಥಾನವಿರಲಿಲ್ಲ. ಬಯಕೆಯನ್ನು ಎರಡು ಭಾಗ ಮಾಡುವುದು ಕಷ್ಟ ಕಾರ್ಯವೆಂದು ಮತ್ತೊಮ್ಮೆ ರಾಗ ಎಳೆದೆ. ಉಪಯೋಗ ಬೀಳಲಿಲ್ಲ.

"ಸರಿ, ಈ ಸಾರಿ—ಮಂತ್ರಿಗಳ ಮಗ—ತಂದಿದ್ದೇನೆ."

"ಮಂತ್ರಿಗಳು, ಮಾಜಿ ಮಂತ್ರಿಗಳು ಭಾವೀ ಮಂತ್ರಿಗಳೇ ಹೇರಳವಾಗಿರುವಾಗ ಮಗನ ತಂಟೆಗೆ ಏಕೆ ಹೋದಿರಿ" ?

"ಇಲ್ಲ ಸರ್, ಓದಿನೋಡಿ, ನೀವು ಖಂಡಿತಾ ಮೆಚ್ಚಿಕೊಳ್ಳುತ್ತೀರಿ" ಎಂದೆ. ಎಂದಿನಂತೆ ಎರಡು ಕಂತುಗಳು ದೊರೆತವು.

'ಅಂಟುಲೆ ದುಃಸ್ವಪ್ನ'ವು ಎರಡಾಗಿ ಒಡೆದು ಕೊಂಡಿತ್ತು.

"ಕಾಂಪೂಟರಾಲಯ" ಎರಡು ಹಂತಗಳಲ್ಲಿ ನಿರ್ಮಾಣವಾಯಿತು.

"ಸಮಯಕ್ಕೆ ತಕ್ಕಂತೆ" ಅವರ ನೀತಿಯಂತೆಯೇ ಪ್ರಕಟವಾಯಿತು.

"ಹೊಸ ಪಕ್ಷ" ಕಟ್ಟಲು 1983ರ ಅಕ್ಟೋಬರ್, ನವೆಂಬರುಗಳು ಕಳೆಯಬೇಕಾಯಿತು.

'ಪ್ರವಾಹ ಪೀಡಿತರ ಪರಿಹಾರ ನಿಧಿ' ಗಾಗಿ ಎರಡು ತಿಂಗಳುಗಳಲ್ಲಿ ಎರಡು ಬಾರಿ ಹೋಗಿ ಕಂತುಗಳಲ್ಲಿ ಕಾಣಿಕೆ ತರಲಾಯಿತು.

ಒಂದು ದಿನ ನಾರಾಯಣ ಅವರು ಸ್ನೇಹಿತರೊಬ್ಬರೊಂದಿಗೆ ಮಾತನಾಡುತ್ತಾ ಕುಳಿತಿದ್ದರು. ನನ್ನ ಸಂಕ್ಷಿಪ್ತ ಕೇಸ್‌ನಿಂದ 'ಮೂರ್ಖರ ನಿಯಮಗಳು' ತೆಗೆದುಕೊಂಡು ಅವರ ಮುಂದಿಟ್ಟೆ. ಹಾಗೂ ಹೀಗೂ ತಿರುಗಿಸಿ ನೋಡಿದರು. ಅವರಿಗೆ ನಗು ಬಂತು. "ಮೂರ್ಖರು ನಿಯಮಗಳನ್ನು ಮಾಡುವುದಾಗಲೀ ಅವುಗಳನ್ನು ತತ್ವಗಳೆಂದು ಒಪ್ಪಿಕೊಳ್ಳುವುದಾಗಲೀ ಹೇಗೆ ಸಾಧ್ಯ" ಎಂದರು. ಕುಳಿತಿದ್ದ ಸ್ನೇಹಿತರು ಹುಬ್ಬುಜೋಡಿಸಿದರು.

ನಾನು ನನ್ನಲ್ಲಿದ್ದ ಪ್ರತಿ ತೆಗೆದು ಎರಡು ಮೂರು ಜನ ಮೂರ್ಖರ ತತ್ವಗಳನ್ನು ಓದಿ ಹೇಳಿದೆ. ಆಗ ಅವರಿಗೆ ಸ್ವಲ್ಪ ನಂಬಿಕೆ ಬಂದಿತ್ತು. ಇಡೀ ಲೇಖನವನ್ನೇ ಬಾಯಿಬಿಟ್ಟು ಓದಿದರು. ಇಬ್ಬರೂ "ಪರವಾಗಿಲ್ಲವೇ, ಚೆನ್ನಾಗೇ ಇದೆ" ಎಂದರು.

ಮೂರ್ಖರ ನಿಯಮಗಳು ಮೂರು ತಿಂಗಳಿಂದ ಮುದ್ರಣಕ್ಕಾಗಿ ಕಾಯುತ್ತಿದೆ. ಹಸ್ತ ಪ್ರತಿ ಅಲ್ಲ ಬೆರಳಚ್ಚಿನ ಪ್ರತಿ ಸಿಕ್ಕುತ್ತಿಲ್ಲವಂತೆ. ಕಣ್ಣಾಮುಚ್ಚಾಲೆ ಆಡಿಸುತ್ತಿದೆಯಂತೆ. ಆದರೆ ನಾರಾಯಣರು ಬಿಡಬೇಕಲ್ಲ. ಆ ನಿಯಮಗಳು ನಾರಾಯಣರನ್ನು ಮೂರ್ಖರನ್ನಾಗಿಸುವಷ್ಟು ಶಕ್ತಿಯುತವಾಗಿಲ್ಲ.

ನಗೆಬುಗ್ಗೆ ಎಬ್ಬಿಸಿದ ಹಾಗೂ ಎಬ್ಬಿಸುತ್ತಿರುವ ನಾರಾಯಣರ ಬದುಕು ನೂರು ವರ್ಷಗಳನ್ನು ದಾಟುವಂತಾಗಲೆಂದು ನಲ್ಮೊಗದ ನಿಟಿಲ ನೇತ್ರನನ್ನು ನಾವೆಲ್ಲ ನೆನೆಯೋಣ.

ನಡತೆ

ಒಂದು ಆಚರಣೆಯನ್ನು ಬಿತ್ತು, ಅದರಿಂದ ನೀನು ಒಂದು ಪ್ರವೃತ್ತಿಯುನ್ನು ಬೆಳೆದುಕೊಳ್ಳುವೆ ; ಒಂದು ಪ್ರವೃತ್ತಿಯನ್ನು ಬಿತ್ತು, ಅದರಿಂದ ನಿನ್ನ ಶೀಲವನ್ನು ಬೆಳೆದುಕೊಳ್ಳುವೆ ; ಒಂದು ಶೀಲವನ್ನು ಬಿತ್ತು, ಅದರಿಂದ ನಿನ್ನ ಭವಿತವ್ಯವನ್ನು ಬೆಳೆದುಕೊಳ್ಳುವೆ !

—ಚಾರ್ಲ್ಸ್ ರೀಡ್

‘ವಿನೋದ’ ಜನಕ ನಾರಾಯಣ

ಎನ್. ಎಸ್. ರಾಮುಪ್ರಸಾದ್

ಗಾಂಧೀ ಮಾರ್ಗದಲ್ಲಿ ನಂಬಿಕೆಯಿಟ್ಟ ಅವರು ಅನುಸರಿಸಿದ್ದು ಗಾಂಧೀಯವರನ್ನು, ಗಾಂಧಿಯವರ ಹಿಂ‘ಬಾಲಕ’ರನ್ನಲ್ಲ. ಆದ್ದರಿಂದಲೇ ಕೆರಳಿದ ನಾರಾಯಣರನ್ನು ಕಾಣುವುದು ದುಸ್ತರ. ಈ ನೈಪುಣ್ಯದಿಂದಲೇ ಅವರು 9 ವರ್ಷಕಾಲ ಸಾಹಿತಿಗಳ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತಿನ ಮುಂದಾಳುತನವನ್ನು ಸಮರ್ಥವಾಗಿ ನಿರ್ವಹಿಸಿದರು.

ನಿರ್ಮಮತೆ, ನಿರಹಂಕಾರ ಮತ್ತು ಶಾಂತಮನಸ್ಥಿತಿ ಇವು ಮಹಾಪುರುಷರ ಲಕ್ಷಣಗಳು. ಕಾರ್ಯನಿರತ ಪತ್ರಕರ್ತರಾಗಲು ಈ ಗುಣಗಳು ಅವಶ್ಯಕ, ಅಲ್ಲ, ಅನಿವಾರ್ಯ ಎಂದು ನನ್ನ ಭಾವನೆ. ಜಿ. ನಾರಾಯಣರು ಇಂಥ ಸ್ವಭಾವವನ್ನುಳ್ಳವರು. ಆದ್ದರಿಂದಲೇ ಸಮರ್ಥ ಪತ್ರಕರ್ತರು.

‘ಸಮರ್ಥ’ ಪತ್ರಕರ್ತರು ಎಂದು ಹೇಳಿದ್ದೇನೆ. ‘ಯಶಸ್ವಿ’ ಪತ್ರಕರ್ತರು ಎಂದು ಹೇಳಿಲ್ಲ. ಸಮರ್ಥ ನೆನಿಸಿಕೊಳ್ಳಲು ವೃತ್ತಿನೈಪುಣ್ಯ ಸಾಕು. ಯಶಸ್ವಿಯಾಗಲು ವ್ಯವಹಾರ ಕುಶಲತೆ ಬೇಕು. ಸಾರ್ವಜನಿಕ ಜೀವನ ರಂಗದಲ್ಲಿ ಪಡೆದ ನಾನಾ ಸ್ಥಾನಬಲದಲ್ಲಿ ವ್ಯವಹಾರ ಕುಶಲತೆಯನ್ನು ನಿಚ್ಚಳವಾಗಿ ಪ್ರದರ್ಶಿಸಿರುವ ಜಿ. ನಾರಾಯಣ ಸ್ವಕೀಯದಲ್ಲಿ ಪರಮ ಅವ್ಯವಹಾರಿ. ದುರ್ವ್ಯವಹಾರಿಯಾಗಿದ್ದರೂ ತಾಳಿಕೊಳ್ಳಬಹುದಿತ್ತು. ಆದರೆ ಈ ವ್ಯಕ್ತಿ ಸುವ್ಯವಹಾರದಲ್ಲಿ ವ್ಯವಹಾರ ಕುಶಲತೆಯನ್ನು ಸೋಕಿಸಿಕೊಂಡೂ ಇಲ್ಲದವರಂತಿದ್ದಾರೆ. ಆದ್ದರಿಂದಲೇ ಚಾಮರಾಜಪೇಟೆಯ ಪಂಪಮಹಾಕವಿ ರಸ್ತೆಯಲ್ಲಿರುವ ‘ವಿನೋದ’ ಮಾಸಪತ್ರಿಕೆಯ ನಾಮಫಲಕವೂ ನಾಲ್ಕು ಜನರ ಕಣ್ಣಿಗೆ ಕಾಣುವುದಿಲ್ಲ.

33 ವರ್ಷಗಳಿಂದ ಸತತವಾಗಿ (ಸಣ್ಣ ಪತ್ರಿಕೆಗಳ ವಿಚಾರದಲ್ಲಿ ಇದು ಉಲ್ಲೇಖನಾರ್ಹ ಅಂಶ. ಸತತವಾಗಿ 32 ವರ್ಷಗಳಿಂದ ಪ್ರಕಟವಾಗುತ್ತಿದ್ದು ಮುಂದುವರೆದಿದೆ. 1953 ರಲ್ಲಿ ಒಂದು ಬಾರಿ ಅದರ ಸಂಪಾದಕರು ಮೂರು ತಿಂಗಳಕಾಲ ವಿಕ್ಟೋರಿಯಾ ಆಸ್ಪತ್ರೆಯ ಅತಿಥಿಗಳಾಗಿದ್ದಾಗ ಒಂದು ತಿಂಗಳ ಸಂಚಿಕೆ ಮಾತ್ರ ಹೊರಬರಲಿಲ್ಲ. “ಸಂಚಿಕೆ ಸಿದ್ಧವಾಗಿರಲಿಲ್ಲ ಎಂದಲ್ಲ; ಸಿದ್ಧವಾಗಿತ್ತು; ಅದನ್ನು ರವಾನಿಸಲು ಸಾಧ್ಯವಾಗಲಿಲ್ಲ” ವೆಂದು ಜಿ. ನಾರಾಯಣ ವಿವರಣೆ ಕೊಡುತ್ತಾರೆ.) ಸಕಾಲಕ್ಕೆ ಒಂದು ಪತ್ರಿಕೆ ಪ್ರಕಟವಾಗುತ್ತಿದೆಯೆಂದರೆ ಅದರ ನಿರ್ವಹಣೆಗೊಂದು ಭಾರಿ ವ್ಯವಸ್ಥೆ ಪುದವಟ್ಟು ಇರಬೇಕೆನಿಸುತ್ತದೆ. ಆದರೆ ನತದೃಷ್ಟ ‘ವಿನೋದ’ ನಿಗೆ ಪತ್ರಿಕೆಯ ಮುದ್ರಕ, ಪ್ರಕಾಶಕ, ಸಂಪಾದಕ ಜಿ. ನಾರಾಯಣರೊಬ್ಬರ ಕರ್ತವ್ಯ ಪರಾಯಣತೆಯನ್ನು ಬಿಟ್ಟು ಬೇರೆ ಬಂಡವಾಳವಿಲ್ಲ. ‘ವಿನೋದ’ ನೆಚ್ಚಿರುವುದು ನಾರಾಯಣರ ಬರಿದಾದ ಕಿಸೆಯನ್ನಲ್ಲ; ಅವರ ಅದಮ್ಯ ಸಂಕಲ್ಪ ಶಕ್ತಿಯನ್ನು.

ಸ್ವಾತಂತ್ರ್ಯ ಹೋರಾಟದ ಕಹಳೆಯಾಗಿ 'ವಾರ್ತಾ' ಮಾರ್ಪಟ್ಟಾಗ ಸ್ವಾತಂತ್ರ್ಯ ಹೋರಾಟದ ಗೀಳಿನ ಜಿ. ನಾರಾಯಣ ಅದರ ಬಳಗದಲ್ಲಿ ಸೇರಿದ್ದರು. ಸಾರ್ವಜನಿಕ ಜೀವನರಂಗದಲ್ಲಿ ವಿಖ್ಯಾತರಾದ ಸಾಹುಕಾರ್ ಚನ್ನಯ್ಯನವರ ಆಡಳಿತ. ಹೆಚ್. ಕೆ. ವೀರಣ್ಣಗೌಡರು ಪತ್ರಿಕೆಯ ಸಂಪಾದಕರು. ಅವರಿಬ್ಬರ ಅನುಚರರಾಗಿದ್ದ ಜಿ. ನಾರಾಯಣ ಪತ್ರಿಕೆಯ ವ್ಯವಸ್ಥಾಪಕರು.

ಗದ್ದಲ, ಗೌಜುಗಳಿಗೆ ಸಲ್ಲದ ಈ ಯುವಕ ಎಲ್ಲರ ಚಲನವಲನಗಳ ಮೇಲೂ ಎಚ್ಚರಗಣ್ಣು ಇಟ್ಟಿದ್ದ. ಎಲ್ಲ ವ್ಯವಹಾರಗಳ ಮರ್ಮವನ್ನೂ ತಿಳಿಯಬಲ್ಲವನಾಗಿದ್ದ. ಸುತ್ತಲಿದ್ದವರೆಲ್ಲರನ್ನೂ ಅಳೆದು, ಅದೇ ಅಳತೆಗೋಲನ್ನು ತನಗೂ ಅನ್ವಯಿಸಿ ಅಳತೆ ನೋಡಿಕೊಳ್ಳುವ ಸ್ವಾಭಾವಿಕ ಜಾಣತನ ಪಡೆದಿದ್ದ. ಒಪ್ಪು ತಪ್ಪುಗಳನ್ನು ಪಟ್ಟಿಮಾಡಿಕೊಂಡಿದ್ದ. ಜತೆಗೇ ಪತ್ರಿಕಾಲಯದ ವ್ಯವಹಾರಗಳನ್ನೆಲ್ಲ ಕಲಿತ. —ಜಿ. ನಾರಾಯಣರು ಪತ್ರಕರ್ತರಾಗಲು ಇದು ಹಿನ್ನೆಲೆ.

ಸ್ವಾತಂತ್ರ್ಯ ಸಾಧನೆಯಾಯಿತು. ಮುದ್ರಣಾಲಯವನ್ನು ನಡೆಸುವ ಮತ್ತು ಪತ್ರಿಕೆಯನ್ನು ನಡೆಸುವ ಸಾಮರ್ಥ್ಯದ ವಿನಿಯೋಗ ಆಗಬೇಕೆನಿಸಿತು. ಎಂಥ ಪತ್ರಿಕೆ ಆದೀತು ? ಬಂಡವಾಳದ್ದೇನು ವ್ಯವಸ್ಥೆ ? ಆದರೆ ಆಗಿನ್ನೂ 25-26ರ ಪ್ರಾಯದ ಯುವಕನಿಗೆ ಇದೊಂದು ಸಮಸ್ಯೆ ಎನಿಸಲೇ ಇಲ್ಲ. ನಿರ್ಧಾರ ಮಾಡಲು ವಿಳಂಬವೂ ಆಗಲಿಲ್ಲ. ಮೊದಲು ಮುದ್ರಣಾಲಯ ಆರಂಭವಾಯಿತು. ಅದೇ ತಿಂಗಳಲ್ಲಿ (1950) 'ವಿನೋದ' ಅವತರಿಸಿದ.

"ಜಿ. ನಾರಾಯಣರ ಜತೆ ಜಗಳವಾಡಿ ಬಂದೆ. ಅವರನ್ನು ಬೈದೆ. ಬೈಸಿಕೊಂಡು ಬಂದೆ" ಎಂದು ಯಾರಾದರೂ ಹೇಳಿದರೆ ನಾನು ಆ ವ್ಯಕ್ತಿಗೆ ನೊಬೆಲ್ ಶಾಂತಿ ಪುರಸ್ಕಾರ ಸಿಗಬೇಕೆಂದು ಶಿಫಾರ್ಸು ಮಾಡಿಯೇನು !

ಮನಸ್ಸಿನ ಸಮಾಧಾನವನ್ನು ಎಂದೂ ಕಳೆದುಕೊಳ್ಳದ, ಏನೇ ಕೋಪ-ತಾಪವಿದ್ದರೂ ಅವೆಲ್ಲವನ್ನೂ ಅಡಗಿಸಿಟ್ಟುಕೊಳ್ಳಬಲ್ಲ ಮತ್ತು ಹೇಳಬೇಕಾಗಿರುವುದನ್ನು ಭೀತಿ ಇಲ್ಲದೆ ನಯವಾಗಿಯೇ ನಿರ್ಧಾರವನ್ನು ಸಾರುವ ದನಿಯಲ್ಲಿ ಹೇಳುವ ನಡವಳಿಕೆಯ ಒಂದು ಹದವನ್ನು ಅವರು ಕಂಡುಕೊಂಡಿದ್ದಾರೆ. ಮಹಾತ್ಮಗಾಂಧಿಯವರು ಈ ದೇಶದ ರಾಜಕಾರಣವನ್ನು ನಿರ್ವಹಿಸಿಯೂ ತಮ್ಮ ಮನಸ್ಸಿನ ಹದವನ್ನು ಕೆಡಿಸಿಕೊಂಡಿರಲಿಲ್ಲ. ನಾನಾ ಬಗ್ಗೆ ಬಣ್ಣ, ಭಾಷೆಗಳ ಜನರ ಭಾವನೆಗಳಿಗೆ ಪ್ರತಿಸ್ಪಂದಿಸಿ ಪರಿಹಾರ ಕಲ್ಪಿಸಬೇಕಾಗಿದ್ದ ಮಹಾತ್ಮಗಾಂಧಿ ಕೋಪದಿಂದ ಯಾರೊಬ್ಬರಿಗೂ ಬಿರು ನುಡಿಯಾಡಿದ ಪ್ರಸಂಗದ ಉಲ್ಲೇಖವಿಲ್ಲ. ಇದು ಅವರಿಗೆ ಸಾಧ್ಯವಾದದ್ದು ಅವರು ಹೊಂದಿದ್ದ ಹಾಸ್ಯ ದೃಷ್ಟಿಯಿಂದ. ತಮ್ಮ ಎದುರಾಳಿಗಳನ್ನು ನಗೆಯಿಂದ, ನಗೆಮಾತಿನಿಂದ ನಿರುತ್ತರಗೊಳಿಸುವ ಕಲೆಯಲ್ಲಿ ಗಾಂಧೀಜಿ ಪಳಗಿದ್ದರು. ರಾಜ್ಯದ ಹಿರಿಯ ರಾಜಕಾರಣಿಗಳ ಜತೆಯಲ್ಲಿದ್ದು ಅವರ ಓರೆ-ಕೋರೆಗಳನ್ನೆಲ್ಲ ಅರ್ಥಮಾಡಿಕೊಂಡ ಜಿ. ನಾರಾಯಣರೂ ಕೋಪ ತಾಪ ಪ್ರದರ್ಶನದ ನಿರರ್ಥಕತೆಯನ್ನು ಅರ್ಥ ಮಾಡಿಕೊಂಡರು. ಗಾಂಧಿ ಮಾರ್ಗದಲ್ಲಿ ನಂಬಿಕೆಯಿಟ್ಟ ಅವರು ಅನುಸರಿಸಿದ್ದು ಗಾಂಧಿಯವರನ್ನು, ಗಾಂಧಿಯವರ ಹಿಂ'ಬಾಲಕ'ರನ್ನಲ್ಲ. ಆದ್ದರಿಂದಲೇ ಕೆರಳಿದ ನಾರಾಯಣರನ್ನು ಕಾಣುವುದು ದುಸ್ತರ. ಈ ನೈಪುಣ್ಯದಿಂದಲೇ ಅವರು 9 ವರ್ಷಕಾಲ ಸಾಹಿತಿಗಳ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತಿನ ಮುಂದಾಳುತನವನ್ನು ಸಮರ್ಥವಾಗಿ ನಿರ್ವಹಿಸಿದರು.

ಎದುರು ಬಂದವರನ್ನು ನಕ್ಕು ಸ್ವಾಗತಿಸುವ, ಸಹಜವಾಗಿ ಮಾತಿನಲ್ಲಿ ಹಾಸ್ಯ ತುಂಬುವ ನಾರಾಯಣ ಮೇಲು ನೋಟಕ್ಕೆ ತೀರ ಗಂಭೀರ ವ್ಯಕ್ತಿ. ಆದರೆ ಅವರ ಪರಿಚಯ ಗಾಢವಾದಷ್ಟೂ ಅವರ ಹಾಸ್ಯದೃಷ್ಟಿಯ ಪರಿಚಯವಾಗುತ್ತದೆ. 1950ರಲ್ಲಿ ಪತ್ರಿಕೆಯೊಂದನ್ನು ಆರಂಭಿಸಬೇಕೆಂಬ ಬಯಕೆ ಮೂಡಿದಾಗ ಹಾಸ್ಯಕ್ಕೆ ಮೀಸಲಾದ ಮಾಸಪತ್ರಿಕೆಯೇ ಸರಿ ಎನಿಸಿದ್ದು ತೀರ ಸಹಜ. ಆಗ 'ಕೊರವಂಜಿ' ಇದ್ದಳು. 'ನಗುವನಂದ' ಇದ್ದ. ಇವರಿಬ್ಬರಿಗೂ ಕಿರಿಯವನಾಗಿ 'ವಿನೋದ'ನೂ ಸೇರಿಕೊಳ್ಳಲಿ; ಮೂರೂ ಸೇರಿದರೂ ದೊಡ್ಡ ಸಂಖ್ಯೆಯಲ್ಲ ಎನಿಸಿತು.

ಹಾಸ್ಯಬರಹಗಳಲ್ಲಿ ವಿಶೇಷ ಅಭಿರುಚಿ, ಅವುಗಳ ಕೊರತೆಯ ಬಗ್ಗೆ ಕಾಳಜಿಗಳೇ 'ವಿನೋದ'ನಿಗೆ ಆಕಾರ ನೀಡಿದವು. ಸಾಹಿತ್ಯವೂ ಮನಸ್ಸಿನ ಹರ್ಷಕ್ಕೆ ನೆರವಾಗಬೇಕು ಎಂಬ ಬಯಕೆಯನ್ನು ಸಾಕ್ಷಾತ್ಕರಿಸಿಕೊಳ್ಳುವ ನಮ್ರ ಪ್ರಯತ್ನದಿಂದ ಭಾರಿ ಆಕಾಂಕ್ಷೆಯನ್ನು ನಾರಾಯಣರು ಆಗಲೂ ಹೊಂದಿರಲಿಲ್ಲ. ಈಗಲೂ ಹೊಂದಿಲ್ಲ.

ಆದ್ದರಿಂದಲೇ 'ವಿನೋದ' ಸದ್ದಿಲ್ಲದೆ ಸಾಗಿದ್ದಾನೆ. ಆತನಿಗೀಗ 33 ವರ್ಷ ತುಂಬಿದೆ.

ಯಾವುದೇ ಪಂಥಕ್ಕೂ ನಾರಾಯಣ ನಿಷ್ಠರಲ್ಲ. ಆದ್ದರಿಂದಲೇ ಅವರಿಗೆ ಭ್ರಮೆಗಳಿಲ್ಲ. 'ಕೊರವಂಜಿ' ನಿಂತು ಹೋಯಿತು. ಹಾಸ್ಯ ಸಾಹಿತ್ಯದ ಸೆಲೆ ಬತ್ತಿಹೋಗಿದೆ ಎಂಬುದನ್ನು ಅವರು ಒಪ್ಪುವುದಿಲ್ಲ. ಪ್ರತಿದಿನವೂ ಪ್ರಕಟವಾಗುವ ವಾರ್ತಾ ಪತ್ರಿಕೆಗಳಲ್ಲಿ, ವಾರ-ತಿಂಗಳಿನ ಪತ್ರಿಕೆಗಳಲ್ಲಿ ಅದೇಷ್ಟೊಂಡು ಹಾಸ್ಯದ ಬರಹಗಳು ಪ್ರಕಟವಾಗುತ್ತಿವೆ ಎಂಬುದನ್ನು ಅವರು ಉಲ್ಲೇಖಿಸುತ್ತಾರೆ. ಆದರೆ ಉತ್ತೇಜನದ ಅಭಾವವಿದೆ ಎಂಬುದನ್ನು ಒಪ್ಪುತ್ತಾರೆ.

ಬೇರೆ ಬೇರೆ ನಿಯತ ಕಾಲಿಕಗಳಲ್ಲಿ ಹಾಸ್ಯದ ತುಣುಕುಗಳು, ವ್ಯಂಗ್ಯ ಚಿತ್ರಗಳು ಪ್ರಕಟವಾಗುತ್ತಿರುವಾಗ 'ವಿನೋದ'ನ ಅಗತ್ಯವೆಲ್ಲಿದೆ ಎಂಬ ಪ್ರಶ್ನೆಗೆ ಅವರ ಉತ್ತರ ಸರಳ; ಮರ್ಮಸ್ಪರ್ಶಿಯೂ ಹೌದು.

"ಆದರೆ ಹಾಸ್ಯಕ್ಕೇ ಮೀಸಲಾದ ಒಂದೂ ಪತ್ರಿಕೆ ಇಲ್ಲ. ಆದ್ದರಿಂದ 'ವಿನೋದ' ನನ್ನು ಭದ್ರಮಾಡಬೇಕು. ಹಾಗೆಂದರೆ 'ವಿನೋದ' ಅಮರನಾಗಬೇಕೆಂದೇನೂ ಇಲ್ಲ. 'ವಿನೋದ'ಕ್ಕೆ ಆಜೀವ ಸದಸ್ಯರನ್ನೇಕೆ ಮಾಡಿಸಬಾರದು ಎಂದು ಗೆಳೆಯರು ಕೇಳಿದ್ದಾರೆ. ನನ್ನ ಉದ್ದೇಶ ಅದು ಶಾಶ್ವತವಾಗಿ ನಡೆಯುತ್ತಿರಬೇಕೆಂದೇನೂ ಅಲ್ಲ. ಎಷ್ಟು ದಿನವಾದರೆ ಅಷ್ಟು ದಿನ ಪ್ರಕಟವಾಗುತ್ತಿರಲಿ. ಇದಕ್ಕಿಂತ ಉತ್ತಮವಾದದ್ದು ಪ್ರಕಟವಾದಾಗ 'ವಿನೋದ' ಕಣ್ಮರೆಯಾದರೂ ಸಂಕಟಪಡುವುದಿಲ್ಲ. ಆದ್ದರಿಂದಲೇ ಆಜೀವ ಚಂದಾದಾರರನ್ನು ಮಾಡಿಸುವ ಪ್ರಯತ್ನ ಮಾಡಿಲ್ಲ." ತಮ್ಮ ಪ್ರಯತ್ನದಲ್ಲಿ ಶ್ರದ್ಧೆಯನ್ನು ಹೊಂದಿದ್ದು ನಿರ್ಮಮತೆಯಿಂದ ಇರುವುದು ಸಾಧ್ಯವೆಂಬುದನ್ನು ಅವರು ತೋರಿಸಿಕೊಟ್ಟಿರುವ ರೀತಿಯಿದು. ಈ ನಿರ್ಮಮತೆ ಸಾಧಾರಣರಿಗೆ ಸಿದ್ಧಿಸದು. 33 ವರ್ಷ ಕಾಲ ಒಂದು ಪತ್ರಿಕೆಯ ಒಡೆಯರಾಗಿದ್ದರಿಂದ ಜಿ. ನಾರಾಯಣ ಎಷ್ಟು ಶ್ರೀಮಂತರಾಗಿರಬಹುದು.

ಪತ್ರಿಕೆಯ ಹೆಸರಷ್ಟನ್ನೇ ಬಳಸಿಕೊಂಡು ಬಲ್ಲಿದರಾದವರುಂಟು. ಪತ್ರಿಕೆ ಪ್ರಕಟವಾಗದೇ ಇದ್ದರೂ ಬೀಗುವ ಪ್ರಕಾಶಕರು, ಸಂಪಾದಕರು ಲೆಕ್ಕವಿಲ್ಲದಷ್ಟು. 'ವಿನೋದ' ದಿಂದ ಏನನ್ನೂ ಪಡೆಯದ ಸಂಪಾದಕರು ಜಿ. ನಾರಾಯಣ. 'ವಿನೋದ'ದ ಸಂಪಾದಕರು ಅವರು ಎಂಬುದೂ ಬಹಳ ಜನರಿಗೆ ತಿಳಿದಿರಲಿಕ್ಕಿಲ್ಲ. ಯಾಕೆಂದರೆ ಪತ್ರಿಕಾ ಸಂಪಾದಕರಿಗೆ ಸಿಗುವ ಮನ್ನಣೆಯನ್ನು ದಕ್ಕಿಸಿಕೊಳ್ಳಲು ಅವರು ಪ್ರಯತ್ನಿಸಿಯೇ ಇಲ್ಲ. ಯಾರನ್ನೂ ಜಾಹೀರಾತು ಬೇಡಿಲ್ಲ. ತಮ್ಮ ಪತ್ರಿಕೆಯ ಬೆಳಸಿಗಾಗಿ ಯಾವುದೇ ಮಂತ್ರಿಮಾನ್ಯರನ್ನು ಓಲೈಸಿಲ್ಲ. ಅಷ್ಟೇ ಏಕೆ, ಪತ್ರಿಕೆಯನ್ನು ಬೆಳೆಸುವ ಯೋಜನೆಯನ್ನೇ ಹಾಕಿಲ್ಲ. ಸಾಹಿತ್ಯ ಪರಿಷತ್ತಾಗಲಿ, ಗಮಕ ಪರಿಷತ್ತಾಗಲಿ, ಎಲ್ಲಕ್ಕೂ ಬೆಳವಣಿಗೆಯ ಯೋಜನೆ ರೂಪಿಸುವ ನಾರಾಯಣರು ತಮ್ಮ 'ವಿನೋದ'ನ ಬೆಳವಣಿಗೆಯನ್ನು ಯೋಜಿಸಿಯೇ ಇಲ್ಲ.

ಪತ್ರಿಕೆ ಆರಂಭಿಸಿದಾಗ ಒಂದು ರೀಮ್ ಕಾಗದಕ್ಕೆ 16 ರೂಪಾಯಿ ಬೆಲೆ. 'ವಿನೋದ'ನ ಒಂದು ಸಂಚಿಕೆಯ ಬೆಲೆ ಎರಡಾಣೆ. ಈಗ ಒಂದು ರೀಮ್ ಕಾಗದಕ್ಕೆ 160 ರೂಪಾಯಿಗಳಿಗಿಂತ ಹೆಚ್ಚು. ಅಂದರೆ ಹತ್ತು ಪಟ್ಟಿಗಿಂತ ಅಧಿಕ. 'ವಿನೋದ'ನ ಬೆಲೆ ಆ ಅನುಪಾತದಲ್ಲಿ 24 ಆಣೆ (1-50) ಆಗಬೇಕಿತ್ತು. ಆದರೆ 75 ಪೈಸೆಯನ್ನು ಮೀರಿಲ್ಲ. ಪತ್ರಿಕೆ ಅಗ್ಗವಾಗಿದ್ದರೆ ಕೊಳ್ಳುವವರಿಗೆ ಆಸಕ್ತಿ ಇರುತ್ತದೆ; ಬೆಲೆ ಹೆಚ್ಚಾದರೆ ಓದುವ ಹಂಬಲವೂ ಇಂಗಿ ಹೋಗುತ್ತದೆಂಬುದು ಅವರ ನಂಬಿಕೆ. "ಆದರೂ ಹಲವಾರು ಏಜೆಂಟರು ಒತ್ತಾಯಮಾಡುತ್ತಿದ್ದಾರೆ. ಈಗಿನ ದರಗಳಲ್ಲಿ ನಿರ್ವಹಣೆ ಕಷ್ಟವಾದರೆ ಮುಂದಿನ ವರ್ಷದಿಂದ ಒಂದು ರೂಪಾಯಿ ಮಾಡಬೇಕೆಂದಿದೆ".

ಹಾಗಾದರೆ ಪತ್ರಿಕೆ ನೀಡಿರುವ ಲಾಭ ? ಅದರ ದೆಸೆಯಿಂದ ಸಾಲವಾಗಿಲ್ಲ. ಒಂದು ವರ್ಷದಲ್ಲಿ ಅದಕ್ಕೆ ಮಾಡಿದ ವೆಚ್ಚ ಮತ್ತು ಆದಾಯಗಳನ್ನು ಲೆಕ್ಕಮಾಡಿ ಸ್ವಾತಂತ್ರ್ಯ ದಿನೋತ್ಸವ ಸಮಯದಲ್ಲಿ ಪ್ರಕಟಿಸುವ ವಿಶೇಷ ಸಂಚಿಕೆಯ ಮೂಲಕ ನಷ್ಟವನ್ನು ನಿವಾರಿಸಿಕೊಳ್ಳುವ ಕಾರ್ಯ ತಂತ್ರ ಪ್ರಕಾಶಕ ನಾರಾಯಣರದು. ನಷ್ಟವಾಗದೆ ಇರುವುದಕ್ಕೆ ಕಾರಣ ಅವರು ಮುದ್ರಕರೂ ಆಗಿರುವುದು ಒಂದು ಮತ್ತು ಸಂಪಾದಕರಿಗೆ ಗೌರವ ವೇತನವೂ ಕೊಡಬೇಕಾಗಿಲ್ಲದಿರುವುದು ಇನ್ನೊಂದು.

ಲಾಭದಾಯಕವಾಗಿ ಮಾಡಲು ಅವರಿಗೆ ಬಾರದೆಂದಲ್ಲ. ಆದರೆ "ವಿನೋದದ ಪ್ರಕಟನೆ ಒಂದು ಉದ್ಯೋಗವಲ್ಲ. ಅದೊಂದು ಹವ್ಯಾಸ. ಇತರೆ ಹಲವು ಕೆಲಸಕಾರ್ಯಗಳ ನಡುವೆ ಅದಕ್ಕಷ್ಟು ಗಮನ. ಇನ್ನೂ ಚೆನ್ನಾಗಿ ಮಾಡಬೇಕೆಂದರೆ ಹೆಚ್ಚು ಗಮನ ಕೊಡಬೇಕಾಗುತ್ತದೆ. 75 ಪೈಸೆಗಳಿಗೆ ಒಂದು ಬಟ್ಟಲು ಕಾಫಿಯೂ ಸಿಗದಿರುವಾಗ ದರವನ್ನು ಹೆಚ್ಚಿಸಬೇಕಾಗುತ್ತದೆ. ಹೆಚ್ಚು ಜಾಹೀರಾತು ಸಂಗ್ರಹಣೆ ಮಾಡಬೇಕಾಗುತ್ತದೆ. ಮುದ್ರಣ-ವಿನ್ಯಾಸಗಳನ್ನು ಉತ್ತಮಪಡಿಸಬೇಕಾಗುತ್ತದೆ. ಈ ಎಲ್ಲ ಅಗತ್ಯಗಳ ಅರಿವೂ ಅವರಿಗೆ ಇದೆ. ಆದರೆ ಅವರೇ ಹೇಳಿದಂತೆ 'ವಿನೋದ'ದ ಪ್ರಕಟಣೆ ನಾರಾಯಣರಿಗೆ ಒಂದು ವೃತ್ತಿಯಲ್ಲ; ಪ್ರವೃತ್ತಿ. ಹಾಸ್ಯದಲ್ಲಿ ಅವರಿಟ್ಟಿರುವ ನಂಬಿಕೆಯ ಅಭಿವ್ಯಕ್ತಿ.

ಪತ್ರಿಕೆ ಬೆಳೆದಿಲ್ಲವೆಂದು ಜನರನ್ನು ದೂರುವುದೂ ಅವರಿಗೆ ಸಮ್ಮತವಿಲ್ಲ. "ಲೋಪವೆಲ್ಲ ನಮ್ಮದೇ. ಸಹಕಾರ ಕೇಳಿದಾಗ ಜನರಿಂದ ಅಪೇಕ್ಷಿತ ಸಹಕಾರ ದೊರಕಿಯೇ ದೊರಕುತ್ತದೆ"ಂಬ ನಂಬಿಕೆಯೂ ಇದೆ.

'ವಿನೋದ'ದ ಲೇಖಕ ಬಳಗವೂ ಅಷ್ಟೇ. ಪೂರ್ಣ ಸಹಕಾರದ ಮನೋಭಾವ ಪ್ರದರ್ಶಿಸಿದೆ. ಲೇಖನದ ಕೊರತೆಯೆಂಬುದೇ ಕಂಡುಬಂದಿಲ್ಲ. ಅಂದರೆ ಬಂದುದೆಲ್ಲ ಬೆಳಕು ಕಂಡಿಲ್ಲ. ಸಭ್ಯತೆಯ ಗೆರೆಯೊಳಗಿದ್ದು 'ಹಾಸ್ಯ' ಲೇಖನವೆಂಬ ಪ್ರಕಾರಕ್ಕೆ ಒಳಪಡುವುದಿದ್ದರೆ ಅಂಥ ಲೇಖನ ಯಾರಿಂದಲೇ ಬಂದಿದ್ದರೂ ಅದಕ್ಕೆ ಮನ್ನಣೆ. ಅದಕ್ಕೆ ಹಿರಿಯರು-ಕಿರಿಯರೆಂಬ ತಾರತಮ್ಯ ಗಣನೆಗಳಿಲ್ಲ. ಲೇಖಕರಿಗೆಲ್ಲ ವರ್ಷದಲ್ಲಿ ಮೂರು ಬಾರಿ ನಿಗದಿಯಾದಂತೆ ಹಣಸಂದಾಯವಾಗುತ್ತದೆ. ಇದುವರೆಗೂ ಒಬ್ಬರಾದರೂ ನಮಗೆ ಹಣ ಬಂದಿಲ್ಲವೆಂಬ ತಕರಾರನ್ನೇ ಎತ್ತಿಲ್ಲ. 32 ವರ್ಷಗಳ ಅವಧಿಯಲ್ಲಿ ಒಬ್ಬರಾದರೂ ಲೇಖಕರೊಡನೆ ಸಂಬಂಧ ಕೆಡಿಸಿಕೊಳ್ಳದಿರುವ ಏಕೈಕ ಸಂಪಾದಕರು ಜಿ. ನಾರಾಯಣ.

'ವಿನೋದ'ಕ್ಕೆ ನಾರಾಯಣರನ್ನು ಬಿಟ್ಟರೆ ಆಯ್ಕೆ ಮಾಡುವವರು ಬೇರೆ ಯಾರೂ ಇಲ್ಲ, ಮೊಳೆಜೋಡಕರನ್ನು ಬಿಟ್ಟರೆ. ಅಂದರೆ ಕರಡು ತಿದ್ದುವ ಕಾರ್ಯವೂ ಸಂಪಾದಕರದ್ದೇ. ವಾಸ್ತವವಾಗಿ "ನಾನು ಲೇಖನವನ್ನು ಓದಿ ಆನಂದಪಡುವ ಸಮಯವೇ ಅದು" ಎನ್ನುತ್ತಾರೆ ನಾರಾಯಣ.

ಕೃತಿಚೌರ್ಯದ ಕಾಟ ಪ್ರಬಲರನ್ನು ಕಾಡಿರುವಾಗ 'ವಿನೋದ'ವನ್ನು ಕಾಡಿಲ್ಲವೆಂದರೆ ನಂಬಬಹುದೇ? ಎಲ್ಲ ನಿಯತಕಾಲಿಕಗಳನ್ನು ಓದುವ ಹವ್ಯಾಸವುಳ್ಳ ಸಂಪಾದಕ ನಾರಾಯಣರ ಕಣ್ಣುತಪ್ಪಿಸಿಯೂ ಚರ್ವಿತ ಚರ್ವಣ ಆಗುವುದುಂಟು. ಎಲ್ಲಿ ಪ್ರಕಟವಾದ್ದು, ಯಾವಾಗ ಯಾವ ಭಾಷೆಯದು ಎಂಬುದನ್ನೆಲ್ಲ ಪತ್ತೆ ಹಚ್ಚುವುದು ಕಷ್ಟ.

"ಹೊಸ ಲೇಖಕರಲ್ಲಿ ಇದು ಸ್ವಾಭಾವಿಕ. ಆದರೆ ಅನುಕರಣೆ ಮಾಡಿದರೂ ಚಿಂತೆಯಿಲ್ಲ. ಹೊಸ ಲೇಖಕರು ಬರುತ್ತಿದ್ದಾರೆಂಬ ಹರ್ಷ ನನಗಿದೆ. ನನ್ನ ಪತ್ರಿಕೆಯನ್ನು ಜನರೆಲ್ಲ ಓದಿ ಹರ್ಷಪಡುತ್ತಾರೆಂಬ ಭ್ರಮೆ ನನಗಿಲ್ಲ. ಆದರೆ ವಿನೋದ ಸಾಹಿತ್ಯ ಸೃಷ್ಟಿಗೆ ಹೊಸಬರು ಬರುತ್ತಿದ್ದಾರೆಂಬುದೇ ಒಂದು ಸಮಾಧಾನ."

'ವಿನೋದ'ನನ್ನು 33 ವರ್ಷ ಕಾಲ ಬೆಳೆಸಿದ ಜಿ. ನಾರಾಯಣರು ಪತ್ರಿಕೆಯಿಂದ ಗಳಿಸದೆಯೂ ನೆಮ್ಮದಿಯಿಂದ ಇರುವುದರ ರಹಸ್ಯವಿದು. ಅವರು ಭ್ರಮಾಧೀನರಲ್ಲ. ಆದ್ದರಿಂದ ಭ್ರಮನಿರಸನಕ್ಕೆ ಆಸ್ಪದವಿಲ್ಲ. ನಿರಾಸೆಗೆ ಎಡೆಯಿಲ್ಲ. 'ವಿನೋದ' ಅವರ ಪಾಲಿಗೆ 'ವಿನೋದ'ವನ್ನೇ ನೀಡುತ್ತ ಬಂದಿದೆ.

ಕರ್ತವ್ಯ

ನಿದ್ರಿಸುತ್ತಿದ್ದಾಗ ಕನವರಿಸುತ್ತಿದ್ದೆ; ಜೀವನವು ಸೌಂದರ್ಯವೆಂದು. ಎಚ್ಚರವಾದಾಗ ನಾ ಕಂಡೆ; ಜೀವನವು ಕರ್ತವ್ಯವೆಂದು.

—ಇ. ಎಸ್. ಹೂಪರ್

ಜಿ. ನಾರಾಯಣ-ನಾನು ಕಂಡಂತೆ

ಎಂ. ಟಿ. ವಿ. ಆಚಾರ್ಯ

ಶ್ರೀ ಜಿ. ನಾರಾಯಣ ಅವರು ನನಗೆ ಕೇವಲ ವ್ಯಕ್ತಿಯಾಗಿ ಕಂಡುಬಂದಿಲ್ಲ. ಅವರೊಂದು ಸಂಸ್ಥೆ. ಅವರ ಪ್ರಥಮ ಪರಿಚಯ ನನಗೆ ಸುಮಾರು ಇಪ್ಪತ್ತು ವರ್ಷಗಳ ಕೆಳಗೆ. ಅವರ ಭೇಟಿಯಾದಾಗ ಲೆಲ್ಲಾ ಯಾವುದಾದರೂ ಸಾರ್ವಜನಿಕ ಕ್ಷೇತ್ರದ ಸೇವೆಗೆ ಸಂಬಂಧಿಸಿದಂತೆಯೇ ಅವರ ಮಾತು, ಮೈ, ಮನಸ್ಸು, ಎಲ್ಲಾ ಮಗ್ನ. ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದಾಗಲೂ, ಇಲ್ಲದಿದ್ದಾಗಲೂ, ಅವರನ್ನು ಏಕಾಂಗಿಯಾಗಿ ಕಂಡುದು ಅಪರೂಪ. ಯಾವಾಗಲೂ ಅನೇಕ ಸಂದರ್ಶಕರ ಒಡನಾಟ. ಎಲ್ಲ ರಿಗೂ ತಾಳ್ಮೆಯ ಆಳ ಅನುಭವ ಪ್ರಜ್ಞೆಯುಳ್ಳ ಸಲಹೆ ಗಳು, ಹಿತವಾಕ್ಯಗಳು ; ಎಲ್ಲರಿಗೂ ಬೇಕಾದ ಆತ್ಮ ಬಂಧು. ಮೃದುಮಾತು, ಶುದ್ಧ ಹೃದಯ, ಸತ್ಯನಿಷ್ಠ, ಸರಳ ನಿರಾಡಂಬರದ ಕಳಂಕರಹಿತ ಚಾರಿತ್ರ್ಯವುಳ್ಳ 'ಅಜಾತ ಶತ್ರು' ಈ ವ್ಯಕ್ತಿ. ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದೆಂಬಂತೆ, ಯಾವಾಗಲೂ ದೊಡ್ಡ ದೊಡ್ಡ ಅಸಾಧ್ಯ ಯೋಜನೆಗಳೇ ಅವರ ಗುರಿ. ಗುರಿ ಸಾಧಿಸುವ ವರೆಗೆ ಬಿಡದ ಛಲ. ಸಾಧನೆಗಳು ಒಂದೆರಡಲ್ಲ. ಅವರು "ನಡೆದು ಬಂದ ಹಾದಿ" ಕಂಡವರಿಗೆ ಇದು ಉತ್ಪ್ರೇಕ್ಷೆ ಯಲ್ಲ.

ಜಿ. ನಾರಾಯಣರ ನಿಕಟವರ್ತಿಗಳೆಲ್ಲಾ ಅವರ ಮೇಲಿನ ಗುಣಾಂಶಗಳ ಜೊತೆಗೆ ಇನ್ನೂ ಹೆಚ್ಚಿನದನ್ನು ಸ್ವಾರಸ್ಯವಾಗಿ ತಿಳಿಸಬಲ್ಲರು. ಆದರೆ ದೇವರಿಗೂ ವಿರೋಧಿಗಳುಂಟು. ದೈವೀಕ ಪುರುಷರೆಂದು ಅನೇಕರು ಭಾವಿಸಿದ್ದ ಗಾಂಧೀಜಿಯವರಿಗೂ ವಿರೋಧಿಗಳಿರಲಿಲ್ಲವೆ? ಅಂತೆಯೇ ಜಿ. ನಾ. ಅವರಲ್ಲೂ ಕಳಂಕ ಕಂಡವರಿದ್ದರೆ ಅಚ್ಚರಿಯಿಲ್ಲ. ತಪ್ಪಾಗಿ ತಿಳಿದವರೂ ಇಲ್ಲದಿಲ್ಲ. ಹಾಗೆ ಕಳಂಕ ಕಂಡು ಮಸಿ ಬಳಿಯಲು ಯತ್ನಿಸಿದವರು ಎಂತಹ ವ್ಯಕ್ತಿಗಳೆಂಬುದನ್ನು ನನ್ನಂತೆ ಅನೇಕರು ಬಲ್ಲರು. ಗುಲಾಬಿಯ ಚಂದವನ್ನು ಹೊಗಳಿದವರು, ಬಯಸಿದಲ್ಲಿ, ಅದರ ಮುಳ್ಳನ್ನು ತೆಗಳಬಹುದಲ್ಲವೆ ? ಇದು ಮಾನವ ಸಹಜ ಪ್ರವೃತ್ತಿ. ಚಿಂತಿಸುವ ವಿಷಯವಲ್ಲ.

ನೂರಾರು ಮಂದಿಗೆ, ನಾಡಿಗೆ ಹಿತಬಯಸಿ ಅದಕ್ಕಾಗಿ ಜೀವ ಸವೆಸಿ, ಸೇವೆಗೆ ತಮ್ಮ ಜೀವನವನ್ನು ಮುಡುಪಾ ಗಿಟ್ಟವರು, ತಮ್ಮ ಸ್ವಂತ ಹಿತ, ಸ್ವಾರ್ಥ, ಗೃಹಕೃತ್ಯ

ನಮ್ಮನಾಡು, ನುಡಿಗೆ ಅನೇಕ ವಿಧಗಳಲ್ಲಿ ಜಿ. ನಾ. ಅವರಂತಹ ನಿಸ್ವಾರ್ಥ ಪರಿಶುದ್ಧ ಜೀವಿಗಳ ಸೇವೆ ಸಾರ್ವ ಜನಿಕವಾಗಿ ಅಗತ್ಯವೆಂದು ನನ್ನ ಅನಿಸಿಕೆ. ಆದರೆ, ಜಿ. ನಾ. ಅವರು ಕಲುಷಿತ ರಾಜಕೀಯದಿಂದ ಎಂದಿಗೂ ಬಹುದೂರ.

ಚಿಂತನೆಗಳನ್ನೆಲ್ಲಾ ದೂರ ಮಾಡಿದುದು ಒಂದು ದೋಷ ವೆಂದು ಭಾವಿಸುವುದಾದಲ್ಲಿ ಜಿ. ನಾ. ದೋಷಿಗಳೆನ್ನ ಬಹುದು. ಇದೊಂದೇ ನಾನು ಅವರಲ್ಲಿ ಕಂಡ ದೋಷ. ಆದರೆ ನನ್ನ ಅರವತ್ತು ನಾಲ್ಕು ವರ್ಷಗಳ ಜೀವನಾನು ಭವದಲ್ಲಿ ಪರಿಚಯ ಪಡೆದು ಒಡನಾಡಿದ ಸಾವಿರಾರು ಮಂದಿಯಲ್ಲಿ, ಪ್ರತ್ಯೇಕ ರೀತಿ ಸ್ವಚ್ಛವಾಗಿ ಶುಭ್ರವಾಗಿ ಮೇರುಸದೃಶವಾಗಿ ಉನ್ನತವಾಗಿ ನನ್ನ ಮೆಚ್ಚಿಗೆಗೆ ಗೌರವಾದರಗಳಿಗೆ ಪಾತ್ರರಾದ ವ್ಯಕ್ತಿಗಳು ಕೇವಲ ಕೆಲವೇ ಮಂದಿ. ಅಂತಹವರಲ್ಲೂ ಎದ್ದು ನಿಲ್ಲಬಲ್ಲ ವ್ಯಕ್ತಿತ್ವ ವೆಂದರೆ ಶ್ರೀ ಜಿ. ನಾ. ಅವರದು. ಅಂತಹ ಇನ್ನೊಬ್ಬ ರನ್ನು ನಾನು ಕಂಡುದಿಲ್ಲ.

ನಮ್ಮ ನಾಡು, ನುಡಿಗೆ ಅನೇಕ ವಿಧಗಳಲ್ಲಿ ಜಿ. ನಾ. ಅವರಂತಹ ನಿಸ್ವಾರ್ಥ ಪರಿಶುದ್ಧ ಜೀವಿಗಳ ಸೇವೆ ಸಾರ್ವ ಜನಿಕವಾಗಿ ಅಗತ್ಯವೆಂದು ನನ್ನ ಅನಿಸಿಕೆ. ಆದರೆ, ಜಿ. ನಾ. ಅವರು ಕಲುಷಿತ ರಾಜಕೀಯದಿಂದ ಎಂದಿಗೂ ಬಹುದೂರ. ಈ ಕಾರಣಕ್ಕಾಗಿ ಸಾರ್ವಜನಿಕ ಸೇವಾ ಕ್ಷೇತ್ರದಲ್ಲಿ ಉನ್ನತ ಸ್ಥಾನಮಾನಗಳಲ್ಲಿರಬೇಕಾದ ಈ ವ್ಯಕ್ತಿ ಇಂದು ಎಲೆಯ ಮರೆಯ ಕಾಯಿಯಂತೆ ಇರಬೇಕಾದುದು ಅನಿರ್ವಾರ್ಯವೆಂದರೆ ಕಾಲಸ್ಥಿತಿಯ ವಿಪರ್ಯಾಸ. ಆದರೂ ಮಾವಿನಮರ ಹಣ್ಣು ನೆರಳು ನೀಡುವಂತೆ ಶ್ರೀ ಜಿ. ನಾರಾಯಣರ ಸೇವೆ ಸಾಗಿಯೇ ಇದೆ.

ಸಜ್ಜನರು

ದಯಾದತ್ತವಾದ ಹೃದಯ, ಸತ್ಯವಾದ ಮಾತು, ಪರಹಿತಕ್ಕೆ ಮೀಸಲಾದ ದೇಹ—ಇವುಗಳಿರುವವನನ್ನು ಕಲಿಪುರುಷ ತಾನೇ ಏನು ಮಾಡಬಲ್ಲನು ?

—ಸುಭಾಷಿತ

ಧರ್ಮ

ಕ್ಷಮೆಯನ್ನು ಸರಿಗಟ್ಟುವ ತಪಸಿಲ್ಲ ; ಸಂತೋಷಕ್ಕಿಂತ ಮಿಗಿಲಾದ ಸುಖವಿಲ್ಲ ; ಆಸೆಗಿಂತ ಬೇರೆ ಯಾವ ವ್ಯಾಧಿ ಯಿಲ್ಲ ; ದಯೆಯನ್ನು ಮೀರಿಸಿದ ಧರ್ಮವಿಲ್ಲ.

—ಸುಭಾಷಿತ

ಹಟವಾದಿ ಜಿ. ನಾ.

ದಾಶರಥಿ ದೀಕ್ಷಿತ್

ಜಿ. ನಾರಾಯಣ ಅವರಿಂದ, ತಪ್ಪದೆ ವರ್ಷಕ್ಕೆ ಎರಡು ಕಾಗದಗಳು ಬರುತ್ತವೆ. ಒಂದು—'ಪ್ರಿಯರೆ ಇನ್ನೇನು ಆಗಸ್ಟ್ 15 ಬರುತ್ತಿದೆ. ಮಾಮೂಲಿನಂತೆ ದಪ್ಪ ಪುಷ್ಪವಾಗಿ ವಿನೋದ ಸ್ವಾತಂತ್ರ್ಯ ಸಂಚಿಕೆ ಬರಬೇಕಲ್ಲ; ಅದರ ಹೂರಣಕ್ಕೆ ತಾವು ಸ್ವಲ್ಪ ಕೈಕೊಟ್ಟು ಎಂದಿನಂತೆ ವಿನೋದ ಮೈತುಂಬಿ ಬರಲು ತಮ್ಮ ಸಹಕಾರ ಬೇಕು. ಅದಕ್ಕಾಗಿ ವಿನೋದದ ಸ್ವಾತಂತ್ರ್ಯ ಸಂಚಿಕೆಗೆ ದಯವಿಟ್ಟು ಮಾಮೂಲಿನಂತೆ ತಮ್ಮ ಒಂದು ನಗೆ ಲೇಖನ ಕಳಿಸಿ'—ಎಂಬ ವಕ್ಕಣಿಕೆಯ ಮೊದಲ ಪತ್ರ. ಮೊದಲನೆ ಪತ್ರಕ್ಕೆ ನಾನು ಯಾವತ್ತೂ ಲೇಖನ ಕಳಿಸಿ, ಅವರಿಂದ ಶಾಭಾಷ್‌ಗಿರಿ ಪಡೆದಿಲ್ಲ. ಎರಡನೇ ಪತ್ರ—'ಪ್ರಿಯರೆ, ವಿನೋದ ವಿಶೇಷ ಸಂಚಿಕೆ ಮುದ್ರಣ ಆರಂಭವಾಗಿದೆ. ಇನ್ನೂ ತಮ್ಮ ಲೇಖನ ಬರಲಿಲ್ಲ. ನಿಮ್ಮ ಲೇಖನಕ್ಕಾಗಿ ಕಾದಿದ್ದೇವೆ. ಬೇಗ ಕಳಿಸಿ' ಎಂದು ಬರೆಯುವುದು ನಡೆದು ಬಂದ 26 ವರ್ಷದ ದಾರಿ. ಆಮೇಲೆ ನಾನು ನಗೆ ಬರಹ ಕಳಿಸಬೇಕು. ಅದನ್ನೊಳಗೊಂಡ ದಪ್ಪದಾದ ಆನೆಸೊಂಡ್ಲಿನ ಮುಖ ಚಿತ್ರದೊಡನೆ ವಿನೋದ ವಿಶೇಷ ಸ್ವಾತಂತ್ರ್ಯೋತ್ಸವ ಸಂಚಿಕೆ ಆಗಸ್ಟ್ 15 ಕ್ಕೆ ಹೊರ ಬರಬೇಕು.

ಆಗಸ್ಟ್ 15 ಜಿ. ನಾರಾಯಣರಿಗೆ ಬಹುಪ್ರಿಯವಾದ ದಿನ. ಅದೇ ಆಂಗ್ಲರ ದಾಸ್ಯದ ನೊಗ ಕಿತ್ತೆಸೆದ ಭಾರತೀಯ ಸ್ವತಂತ್ರವಾಗಿ ತನ್ನ ಪಾಡಿಗೆ ತಾನು ತನ್ನನ್ನು ತನಗಾಗಿ ಆಳಿಕೊಳ್ಳಲು ಪ್ರಾರಂಭಿಸಿದ ದಿನ. ಈ ಸ್ವಾತಂತ್ರ್ಯ ಪುಗಸಟ್ಟೆ ಬಳುವಳಿಯಾಗಿ ಬರಲಿಲ್ಲ. ಮಹಾತ್ಮ ಗಾಂಧೀಜಿ ಅವರು ನೇತೃತ್ವ ವಹಿಸಿ ನಡೆಸಿದ ಗಂಭೀರ ಶಾಂತ ಸತ್ಯ ಅಹಿಂಸಾ ಹೋರಾಟದ ಚಳುವಳಿಯ ಫಲವಾಗಿ ಗೆದ್ದು ತಂದದ್ದು ಈ ಸ್ವಾತಂತ್ರ್ಯ.

ಈ ಚಳುವಳಿ ದೇಶಾದ್ಯಂತ ಕಾಳ್ಗಿಚ್ಚಿನಂತೆ ಹರಡಲು ಸಂಸ್ಥೆಗೆ ಸಾಕಷ್ಟು ಮುಂದಾಳುಗಳು, ಸ್ವಯಂಸೇವಕರುಗಳು ಬೇಕಾದಾಗ ಮುಂದೆ ಬಂದವರು ಜಿ. ನಾರಾಯಣ ಅವರು. ಈ ಸ್ವಯಂಸೇವಕ ಮನೋಭಾವ ಇವರಲ್ಲಿ ಶಿಸ್ತನ್ನು ತುಂಬಿದ್ದಲ್ಲದೆ, ಇವರ ಸುತ್ತಮುತ್ತ ಇರುವವರ ಮೇಲೆ ಪ್ರಭಾವ ಬೀರದೆ ಇರಲಿಲ್ಲ. ಹೀಗೆ ಸ್ವಯಂ ಪ್ರಕಾಶಕರಾದುದಲ್ಲದೆ ಸುತ್ತಲೂ ಬೆಳಕು ಚೆಲ್ಲಬಲ್ಲ ಚೇತನವಾಗಿ ಬೆಳೆದು ಬಂದರು ಜಿ. ನಾ.

ಅಪ್ಪಟ ಖಾದಿಧಾರಿಗಳು, ಸದಾ ನಗುತ್ತಿರುವ ಮುಖ, ಮೂರ್ತಿ ಚಿಕ್ಕದಾದರೂ ಅದರ ಸಾಮರ್ಥ್ಯ ಬಹು ದೊಡ್ಡದು. ಅವರು ವಿನಂತಿಸಿಕೊಂಡರೆ ಜೇನು ಸವಿದಂತೆ. ಅವರು ಹೇಳುವ ಕೆಲಸ ಮಾಡಲು ಆಗೋಲ್ಲವೆಂದು ತಿರಸ್ಕರಿಸಲು ಸಾಧ್ಯವೇ ಆಗುತ್ತಿರಲಿಲ್ಲ.

ನನ್ನ ಇವರ ನಿಕಟ ಪರಿಚಯವಾದದ್ದು 'ವಿನೋದ' ಹಾಸ್ಯ ಮಾಸಪತ್ರಿಕೆಯ ಮೂಲಕ. ಜಿ. ನಾ. ಬರೆದದ್ದು ಕಡಿಮೆ. ಆದರೂ ಬರೆದದ್ದು ಬಹಳ; ಸಂಘಟಿಸಿದ್ದು ಬಹಳ! ನಾಡ ನಗೆ ಬರಹಗಾರರ ಬಹುತೇಕ ಭಾವ ಚಿತ್ರಗಳನ್ನು ಇವರು ಸಂಗ್ರಹಿಸಿದ್ದಾರೆ. ವರ್ಷಕ್ಕೊಮ್ಮೆ ಬರುವ ಸ್ವಾತಂತ್ರ್ಯ ಸಂಚಿಕೆ ನಗೆ ಬರಹ ಪ್ರಿಯರಿಗೆ ಸೊಗಸಾದ ಗ್ರಾಸ. ತಿಂಗಳು ವಿನೋದ ಚಿನಕುರುಳಿ ಇದ್ದಹಾಗೆ. ಇದನ್ನು ಮೂವತ್ತು ವರ್ಷ ನಡೆಸುವುದು ಒಂದು ಪವಾಡವೇ ಸರಿ.

ಜಿ. ನಾ. ವಿನೋದಕ್ಕಾಗಿ ನನ್ನ ಹತ್ರ ನಾಟಕ ಆಡ್ಸಿದ್ದಾರೆ, ಭಾಷಣಮಾಡ್ಸಿದ್ದಾರೆ, ಲೇಖನ ಬರೆಸಿದ್ದಾರೆ, ಸಂತೋಷಪಟ್ಟಿದ್ದಾರೆ. ಪರಿಷತ್ತು ನಾಟಕ ಆಡಿಸಿದಾಗ, ರಂಗಸಂಗೀತ ಏರ್ಪಡಿಸಿದಾಗ ನಮ್ಮ ರಂಗಭೂಮಿಯ ಆ ವಿಶಿಷ್ಟ ಸ್ವಾರಸ್ಯದ ಸವಿ ಉಣಿಸಿದ್ದಾರೆ.

ಇವರು ಮೇಯರ್ ಆಗಿದ್ದಾಗ ಕರಗದ ದಿನ ಕೆಂಪೇಗೌಡ ದಿನಾಚರಣೆ, ನಗರ ಸಭೆಯ ಆವರಣದಲ್ಲಿ ಸತತ ಸೂತ್ರಬೊಂಬೆ ಆಟ ಆಡಿಸಿ ಪ್ರೇಕ್ಷಕರು ಸಂತೋಷ ಪಡುವಂತೆ ಮಾಡಿದ್ದರು. ತದನಂತರ ಪರಿಷತ್ತಿನ ಅಧ್ಯಕ್ಷ ಪದವಿ ಬಂತು. ಏನೂ ಮಾಡದೆ ಸರಿಯಾದ ಯಜಮಾನನಿಲ್ಲದ ಬಹುಜನಗಳಿರುವ ಸಂಸಾರದ ಯಜಮಾನಿಕೆ ವಹಿಸಿಕೊಂಡಂತೆ ಧೂಳು ಝಾಡಿಸಲು ಟೊಂಕ ಕಟ್ಟಿದರು.

ಪರಿಷತ್ತಿನ ವೈಭವಪೂರ್ಣ ಸುವರ್ಣ-ರಜತ ಮಹೋತ್ಸವ ಮರೆಯಲಾಗದ ಉತ್ಸವಗಳು. ಈಗಲೂ ಅವರು ರಾತ್ರಿ ಹಗಲು ಎನ್ನದೆ ಶ್ರಮವಹಿಸಿ ಊಟದ ವ್ಯವಸ್ಥೆಯಿಂದ ಮಂತ್ರಿಗಳ ಸ್ವಾಗತದತನಕ ಪಾದರಸದಂತೆ ಶ್ರಮಿಸಿದ್ದು ಕಣ್ಣಿಗೆ ಕಟ್ಟುತ್ತದೆ.

ಇವರು ಒಳ್ಳೆಯ ಸಂಚಾಲಕರು. ಯಾವ ಕೆಲಸ ಮಾಡಲಿ ಬಹು ದಕ್ಷತೆಯಿಂದ ವಿವರಗಳನ್ನು ತಯಾರಿಸಿ, ಮಿತ್ರರು - ಕಾರ್ಯಕರ್ತರುಗಳೊಡನೆ ಕಾರ್ಯವಿಧಾನ ಚರ್ಚಿಸಿ, ಉದ್ದೇಶಿತ ಕಾರ್ಯಕ್ರಮ ಎಲ್ಲೂ ಲೋಪವಾಗದಂತೆ ಚೊಕ್ಕಟವಾಗಿ ನಡೆದು ಹೋಗುತ್ತಿತ್ತು. ಸಂಘಟನಾ ಶಕ್ತಿಗೆ ಹೆಸರಾದವರು ಜಿ. ನಾ. ಯಾರಿಂದ ಯಾವ ಕೆಲಸ ಸಾಧ್ಯ 'ರಾಮಾಯಣ' ಸಂಪಾದನವೇ 'ನಿಘಂಟು' ಪ್ರಕಾಶನವೇ—ಮನೆ ಮನೆಗೆ ಕನ್ನಡ ಪುಸ್ತಕ ಹಿರಿಯ ಲೇಖಕರಿಂದ ಮಾರಿಸುವ ಕೆಲಸವೇ—ಯಾವುದೇ ಆಗಲಿ ಅದಕ್ಕೆ ತಕ್ಕ ವ್ಯಕ್ತಿಗಳನ್ನು ಹುಡುಕಿ ಯೋಜಿತ ಕಾರ್ಯ ನೆರವೇರುವಂತೆ ಮಾಡುವ ಶಕ್ತಿಯುಳ್ಳ ವ್ಯಕ್ತಿ.

ರಾಜಕಾರಣಿಗಳ—ರಾಜಕೀಯ ಪರಿಸರದ ನೆರಳಲ್ಲಿ ಬೆಳೆದವರಾದರೂ ಯಾವತ್ತೂ ಅಧಿಕಾರ ದಾಹ ತೋರಿಸಿದವರಲ್ಲ. ಯಾರಿಗಾದರೂ ಸಹಾಯ ಮಾಡುವುದು ಆದರೆ ಮಾಡದೆ ಇರುವವರಲ್ಲ.

ಅಪ್ಪಟ ಖಾದಿಧಾರಿಗಳು, ಸದಾ ನಗುತ್ತಿರುವ ಮುಖ, ಮೂರ್ತಿ ಚಿಕ್ಕದಾದರೂ ಅದರ ಸಾಮರ್ಥ್ಯ ಬಹು ದೊಡ್ಡದು. ಅವರು ವಿನಂತಿಸಿಕೊಂಡರೆ ಜೇನು ಸವಿದಂತೆ. ಅವರು ಹೇಳುವ ಕೆಲಸ ಮಾಡಲು ಆಗೋಲ್ಲವೆಂದು ತಿರಸ್ಕರಿಸಲು ಸಾಧ್ಯವೇ ಆಗುತ್ತಿರಲಿಲ್ಲ.

ಇಂತಹ ನಿಸ್ಪೃಹ ಭಾಷಾಭಿಮಾನಿಗಳು, ನಿಷ್ಠಾವಂತ ಕಾರ್ಯಕರ್ತರು ದೇಶದ ತುಂಬಾ ಇದ್ದಿದ್ದರೆ, ಈ ದೇಶೀ ಹಳ್ಳಿ ಹೈದನಿಗೆ ಎಷ್ಟು ಸಂತೋಷವಾಗುತ್ತಿತ್ತೊ? ಈಗಿನ ಸ್ವಾರ್ಥಪರ ರಾಜಕೀಯ ಕಪ್ಪೆಗಳು ಇವರನ್ನು ಆದರ್ಶವಾಗಿಟ್ಟುಕೊಂಡು ದುಡಿದರೆ ದೇಶಕ್ಕೆ ಕ್ಷೇಮ.

ಇವರನ್ನು ಅಭಿನಂದಿಸುವುದು ಯಾರಿಗೆ ಬೇಡ? ಇವರ ಕನ್ನಡ ಸೇವೆಗೆ ವಿಶ್ವವಿದ್ಯಾನಿಲಯ ಡಾಕ್ಟರೇಟ್ ಕೊಡಬೇಕು. ಇಂಥವರ ಬಳಗ ಬೆಳೆಯಲಿ—ಇವರ ಆದರ್ಶ ಎಲ್ಲರ ಆದರ್ಶವಾಗಲಿ ಎಂದು ಈ ಸಮಯದಲ್ಲಿ ಹಾರೈಸದೆ ಮತ್ತೇನು ಉಳಿದಿದೆ?

ಸ್ವಾತಂತ್ರ್ಯ ಹೋರಾಟದಲ್ಲಿ

ಸೂರ್ಯನಾಥ ಕಾಮತ್

ತರುಣ ನಾರಾಯಣ, ಖಾದೀ ಗ್ರಾಮೋದ್ಯೋಗದ ಚಟುವಟಿಕೆಯ ಮೂಲಕ ಗ್ರಾಮೋದ್ಧಾರದ ಕನಸು ಕಂಡರು. ಬೆಳಗಾವಿ ಜಿಲ್ಲೆಯ ಹುದಲಿಯಲ್ಲಿ ಕರ್ನಾಟಕ ಸಿಂಹ ಶ್ರೀ ಗಂಗಾಧರರಾವ್ ದೇಶಪಾಂಡೆ ಸ್ಥಾಪಿಸಿದ್ದ ಜಮುನಾಲಾಲ್ ಬಜಾಜ್ ಖಾದಿ ವಿದ್ಯಾಲಯದಲ್ಲಿ ಸೇರಿಕೊಂಡರು. ಅಲ್ಲಿ ಕೆಲವು ತಿಂಗಳ ವಾಸ; ತರಬೇತಿ. ಆಶ್ರಮ ಜೀವನದಲ್ಲಿ ಶಿಸ್ತಿನ ಬಗ್ಗೆ ಪ್ರೇಮ.

ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪಾಲುಗೊಂ
ಅನೇಕರು ಮುಂದೆ ಸಾರ್ವಜನಿಕ ಜೀವನದಲ್ಲಿ ಗಣ
ಪಾತ್ರ ವಹಿಸುವಂಥವರಾದರು. ತಮ್ಮ ಸೇವಾಸಿಹ
ಸತತೋದ್ಯಮ, ಶಿಸ್ತು, ಅಚ್ಚುಕಟ್ಟಿನ ಕಾಯ
ನಿರ್ವಹಣೆ ಮತ್ತು ಎಲ್ಲಕ್ಕೂ ಮೀರಿದ ಪ್ರಾಮಾಣಿಕ
ಯಿಂದ ಸಮಾಜ ಸೇವೆಗೈದರು ; ಮತ್ತು ಜನರ ಉ
ಕಾರ ಸ್ಮರಣೆಗೆ ಪಾತ್ರರಾದರು. ಅಂಥ ಕರ್ನಾಟಕ
ಗಣ್ಯರಲ್ಲಿ ಶ್ರೀ ಜಿ. ನಾರಾಯಣ ಒಬ್ಬರು.

ಶ್ರೀ ಜಿ. ನಾರಾಯಣ ಅವರ ಊರು ಮದ್ದೂರ
ಬಳಿಯ ದೇಶಹಳ್ಳಿ. ಮದ್ದೂರಿಗೆ ಅಳಿಯನಾಗಿ
ಮುಂದೆ ಅಲ್ಲೇ ನೆಲೆಸಿದ್ದ ದಿ॥ ಶ್ರೀ ಎಚ್. ಕೆ. ವೀರಣ್ಣ
ಗೌಡರ ಪ್ರಭಾವ ಹದಿವಯದಲ್ಲೇ ಶ್ರೀ ಜಿ. ನಾರಾಯಣ
ಅವರ ಮೇಲೆ ಆಯಿತು. ಮಂಡ್ಯ ಜಿಲ್ಲೆಯ ರೈತರು
ಇರ್ವಿನ್ ನಾಲಾ ಚಳುವಳಿ ಹೂಡಿದಾಗ, ಅದ
ನೇತೃತ್ವ ವಹಿಸಿ ಮದ್ದೂರಿನಿಂದ ಸಾವಿರಾರು ರೈತ
ಕಾಲ್ನಡೆ ಜಾಥಾ ನಡೆಸಿ, ಚಳುವಳಿಯು ಯಶ ಕಾಣು
ವಂತೆ ಮಾಡಿದ ಧೀರರು ದಿ॥ ಎಚ್. ಕೆ. ವೀರಣ್ಣ
ಗೌಡರು. ಅವರಂಥ ವರ್ಣರಂಜಿತ ವ್ಯಕ್ತಿಯ ಪ್ರಭಾ
ವಕ್ಕೆ ಶ್ರೀ ನಾರಾಯಣ ಅವರು ಒಳಪಟ್ಟುದರಲ್ಲಿ ಯಾವ
ಅಚ್ಚರಿಯೂ ಇಲ್ಲ. 1937-38 ರಲ್ಲಿ ಆಗಿನ್ನೂ
14-15 ರ ಬಾಲಕರಾಗಿದ್ದ ಶ್ರೀ ನಾರಾಯಣ ಜಿಲ್ಲಾ
ಬೋರ್ಡು ಚುನಾವಣೆಯಲ್ಲಿ ಕಾಂಗ್ರೆಸ್ಸಿನ ಪರ ಪ್ರಚಾ
ರಕ್ಕೆ ಹಳ್ಳಿಹಳ್ಳಿಗಳಿಗೆ ಓಡಾಡಿದರು. ಶಿವಪುರದಲ್ಲಿ
ಸಮಾವೇಶಗೊಂಡ 'ರಾಷ್ಟ್ರಕೂಟ'ವೆಂದು ಉಲ್ಲೇಖಿತ
ವಾದ ಮೈಸೂರು ಸಂಸ್ಥಾನದ ಪ್ರಥಮ ಕಾಂಗ್ರೆಸ್ ಅಧಿ
ವೇಶನದಲ್ಲಿ ಸ್ವಯಂಸೇವಕರಾಗಿ ದುಡಿದರು. ಧ್ವಜ ಏರಿಸಿ
ದರೆ ಗುಂಡು ಹಾರಿಸುವುದಾಗಿ ಬೆದರಿಸಿದ ಪೋಲಿಸರ
ಬೆದರಿಕೆಗೆ ಸೊಪ್ಪುಹಾಕದೆ ಅಲ್ಲಿ ನೆರೆದ ಹೆಂಗಳೆಯರೇ
ಧ್ವಜ ಹಾರಿಸಲು ಮುಂದಾದರು. ಇನ್ನು ಗಂಡುಗಳು
ಹಿಂದೆಗೆಯಲುಂಟೆ ? ಗುಂಡಿನ ಭಯಕ್ಕೆ ಬೆದರದೆ ಸಹಸ್ರ
ಸಹಸ್ರ ಜನ ಎದ್ದು ನಿಂತು ಆರೋಹಿತ ಧ್ವಜಕ್ಕೆ
ಗೌರವ ಸಲ್ಲಿಸಿ ತಮ್ಮ ಗಂಡೆದೆಯ ಕೆಚ್ಚನ್ನು ಪ್ರದರ್ಶಿಸಿ
ದರು ಶಿವಪುರದಲ್ಲಿ. ಹೇಡಿಯೂ ಧೀರನಾಗುವಂತ
ಅಂದಿನ ಅಧಿವೇಶನದ ಪ್ರಭಾವ ಬಾಲಕ ಶ್ರೀ ನಾರಾ
ಯಣ ಅವರ ಮೇಲೆ ಆಗದೇ ಉಂಟೆ ?

ಚನ್ನಪಟ್ಣದಲ್ಲಿ ಹೈಸ್ಕೂಲಿಗೆ ಹೋಗುತ್ತಿದ್ದಾಗ

ಕಾಂಗ್ರೆಸ್ಸು, ಸೇವಾದಳಗಳ ಗೀಳು ಬಿಡಲಿಲ್ಲ. ತನ್ನ ಸಹಪಾಠಿಗಳನ್ನೆಲ್ಲ ಕರೆದು ತಮ್ಮ ಊರಾದ ದೇಶಹಳ್ಳಿಯಲ್ಲಿ ಸಭೆಯೊಂದನ್ನು ನಡೆಸಿದರು. ಸ್ವಾತಂತ್ರ್ಯ, ಜವಾಬ್ದಾರಿ ಸರಕಾರ, ರೈತರ ಉದ್ಧಾರದ ಬಗ್ಗೆ ಭಾಷಣ ಮಾಡಿದರು. ತಕ್ಷಣ ಪೋಲೀಸರ ದಿನಚರಿಯಲ್ಲಿ ಈ ಬಾಲಕ ದಾಖಲಾದ. ಶಿಸ್ತಿನ ಕ್ರಮತೆಗೆದುಕೊಳ್ಳುವಂತೆ ಶಾಲಾ ಮುಖ್ಯೋಪಾಧ್ಯಾಯರಿಗೆ ಪೋಲಿಸು ಇಲಾಖೆಯಿಂದ ಪತ್ರವೂ ಹೋಯಿತು. ಮುಖ್ಯೋಪಾಧ್ಯಾಯರು ಸುಮ್ಮನಾದರು. ಆದರೆ ಉಳಿದ ಜನ ಸುಮ್ಮನಿರುತ್ತಾರೆಯೆ? ಹುಡುಗ ರಾಜಕೀಯಕ್ಕಿಳಿದರೆ ತಂದೆ ಸರ್ಕಾರದ ಕಿರುಕುಳ ಎದುರಿಸುವ ಪ್ರಸಂಗ ಬಂದೀತೆಂದು ಊರ 'ಹಿತೈಷಿ' ಗಳಿಂದ ತಂದೆಗೆ ಬೆದರಿಕೆ. ಪರಿಣಾಮವಾಗಿ ಎಸ್. ಎಸ್. ಎಲ್. ಸಿ. ಗೇ ಇವರ ಶಿಕ್ಷಣದ ಮುಕ್ತಾಯ.

ಗಾಂಧೀಜಿಯವರ ಮೋಡಿಗೆ ಒಳಗಾದ ಅನೇಕ ಶ್ರದ್ಧಾವಂತ ಜನಕ್ಕೆ ವಿಧಾಯಕ ಕಾರ್ಯದ ಗೀಳು. ತರುಣ ನಾರಾಯಣ, ಖಾದೀ ಗ್ರಾಮೋದ್ಯೋಗದ ಚಟುವಟಿಕೆಯ ಮೂಲಕ ಗ್ರಾಮೋದ್ಧಾರದ ಕನಸು ಕಂಡರು. ಬೆಳಗಾವಿ ಜಿಲ್ಲೆಯ ಹುದಲಿಯಲ್ಲಿ ಕರ್ನಾಟಕ ಸಿಂಹ ಶ್ರೀ ಗಂಗಾಧರರಾವ್ ದೇಶಪಾಂಡೆ ಸ್ಥಾಪಿಸಿದ್ದ ಜಮುನಾಲಾಲ್ ಬಜಾಜ್ ಖಾದಿ ವಿದ್ಯಾಲಯದಲ್ಲಿ ಸೇರಿಕೊಂಡರು. ಅಲ್ಲಿ ಕೆಲವು ತಿಂಗಳ ವಾಸ; ತರಬೇತಿ. ಆಶ್ರಮ ಜೀವನದಲ್ಲಿ ಶಿಸ್ತಿನ ಬಗ್ಗೆ ಪ್ರೇಮ. "ಗಾಂಧೀಜಿಯವರ ಧ್ಯೇಯೋದ್ದೇಶಗಳು ನನಗೆ ಹಿಡಿಸಿತು. ಅದನ್ನು ನನ್ನ ಬದುಕಿನ ಆದರ್ಶವಾಗಿಟ್ಟುಕೊಂಡು ನಡೆಯಬೇಕು ಎಂದು ನನ್ನ ಮನಸ್ಸಿಗೆ ತೋರಿತು. ಅಂದಿನಿಂದ ಇಂದಿನವರೆಗೆ ಆ ದಿಕ್ಕಿನಲ್ಲಿ ನಡೆಯಲು ಕೈಲಾದ ಪ್ರಯತ್ನ ಮಾಡಿದ್ದೇನೆ" ಎಂದು ಅಂದಿನ ಜೀವನದಿಂದ ತಮ್ಮ ಮೇಲಾದ ಪರಿಣಾಮವನ್ನು ಸ್ವತಃ ಶ್ರೀ ನಾರಾಯಣ ಹೇಳಿದ್ದಾರೆ.

ಕ್ವಿಟ್ ಇಂಡಿಯಾ ಚಳುವಳಿ ಆರಂಭ (1942). ಇಡೀ ಕರ್ನಾಟಕದಲ್ಲಿಯೇ ಬೆಳಗಾವಿಯಲ್ಲಿ ಆಗ ಚಳುವಳಿ ಅತ್ಯಂತ ಉಗ್ರ, ತೀವ್ರ. ಆಶ್ರಮದ ಮುಖ್ಯರಾದ ಶ್ರೀ ರಾಮಚಂದ್ರ ವಡವಿ ಆ ಭಾಗದಲ್ಲಿ ಭೂಗತ ಚಳವಳಿಯ ಅಧ್ವರ್ಯು. ಆಶ್ರಮದಲ್ಲಿದ್ದೇ ಚಳುವಳಿಯಲ್ಲಿ ಶ್ರೀ ನಾರಾಯಣ ಶ್ರೀ ವಡವಿ ಅವರ ಜೊತೆ ಸಹಕರಿಸಿದರು. ಮುಂದೆ ಆಶ್ರಮಕ್ಕೆ ಬೀಗ. ಅಕ್ಟೋಬರ್ 2 ರಂದು ಗಾಂಧೀ ಜಯಂತಿಯ ದಿನ ಬೆಳಗ್ಗೆ 7 ಕ್ಕೆ ಇತರ ಮೂವರ ಜೊತೆ ಶ್ರೀ ನಾರಾಯಣ ಹುದಲಿ ಊರಲ್ಲಿ ಪ್ರಭಾತ ಫೇರಿ ನಡೆಸಿದರು. ಊರ ಜನರೂ ಮೆರವಣಿಗೆಯಲ್ಲಿ ಸೇರಿಕೊಂಡರು. ಅದೇ ದಿನ ಬಂಧನ. ಬೆಳಗಾವಿಯಲ್ಲಿ ವಿಚಾರಣೆ, ಮೂರು ತಿಂಗಳ ಶಿಕ್ಷೆ, ದಂಡ. 1943 ರ ಜನವರಿ 2 ರಂದು ಹಿಂಡಲಗಿ ಜೈಲಿನಿಂದ ಬಿಡುಗಡೆ. ಬಿಡುಗಡೆಯ ನಂತರ ಊರಿಗೆ ಬಂದರು. ಮುಂದೆ 1944 ರಲ್ಲಿ ಮಹಾತ್ಮರ ಬಿಡುಗಡೆ ಆದಾಗ ಅವರನ್ನು ಕಾಣಲು ಮೈಸೂರಿನಿಂದ ಹೋಗಿದ್ದ ನಿಯೋಗದಲ್ಲಿ ಸೇರಿಕೊಂಡು ಮುಂಬೈಯಾತ್ರೆ. ಮಹಾತ್ಮರ ದರ್ಶನ.

ಆನೇಲೆ ಊರಲ್ಲಿದ್ದಾಗ ಸಾಕ್ಷರತಾ ಪ್ರಸಾರದ ಬಗ್ಗೆ ಬೇರೆ ಬೇರೆ ಸಭೆಗಳು ನಡೆದಲ್ಲೆಲ್ಲ ತಾವೇ ಬರೆದ ಹಾಡುಗಳನ್ನು ಹಾಡಿ ಪ್ರಚಾರಕಾರ್ಯ ನಡೆಸಿದರು. ಈ ರಚನಾತ್ಮಕ ಕಾರ್ಯ ಕೆಲಕಾಲ ನಡೆಯಿತು. ಮುಂದೆ ಶ್ರೀ ಎಚ್. ಕೆ. ವೀರಣ್ಣಗೌಡರ ಕರೆಯಂತೆ ಬೆಂಗಳೂರಿಗೆ ಬಂದು ಅರಳೇಪೇಟೆಯಲ್ಲಿನ ಮೈಸೂರು ಕಾಂಗ್ರೆಸ್ ಕಛೇರಿಯಲ್ಲಿ ಸ್ವಯಂಸೇವಕನಾಗಿ ದುಡಿತ. ಸ್ವಾತಂತ್ರ್ಯ ಪೂರ್ವದ ಕಾಂಗ್ರೆಸ್‌ನಲ್ಲಿ ಯಾರಿಗೂ ಸಂಬಳ ಸಾರಿಗೆಯಿಲ್ಲ. ಒಬ್ಬ ಕಾರ್ಯಕರ್ತ ಎಲ್ಲ ಕೆಲಸಗಳನ್ನೂ ಮಾಡಬೇಕು—ಕಛೇರಿಯ ಕಸಗುಡಿಸುವುದರಿಂದ ಹಿಡಿದು, ಅಡಿಗೆ, ಟೈಪಿಂಗ್, ಲೆಕ್ಕಪತ್ರ ಬರೆಯುವುದು, ಇತ್ಯಾದಿ. ಆಗ ಬೆಂಗಳೂರು ಸ್ಟೇಶನಿನಲ್ಲಿ ಎರಡಾಣೆಗೆ ಒಂದರಂತೆ ಅನ್ನದ ಪೊಟ್ಟಣ ಮಾರುತ್ತಿದ್ದರು. ಒಂದೊಂದು ದಿನ ಆ ಪೊಟ್ಟಣವೇ ನಮಗೆ ಗತಿ. ಎರಡು ಪೊಟ್ಟಣ ತಂದು ಮೂರು ಜನ ಉಂಡದ್ದೂ ಉಂಟು. ಇಷ್ಟೆಲ್ಲ ಅನಾನುಕೂಲಗಳು ಇದ್ದರೂ ಕಾಂಗ್ರೆಸ್ ಕೆಲಸ ಮಾಡುವುದರಲ್ಲಿ ನಮಗೆ ಸ್ವಲ್ಪವೂ ಬೇಸರವಾಗುತ್ತಿರಲಿಲ್ಲ.

ಶ್ರೀ ಕೆ.ಸಿ. ರೆಡ್ಡಿಯವರು ಕಾಂಗ್ರೆಸ್ ಅಧ್ಯಕ್ಷರಾದಾಗ, ಜವಾಬ್ದಾರಿ ಸರಕಾರದ ಪರ ಹೋರಾಟ ತೀವ್ರಗೊಳಿಸಲು ಕಾಂಗ್ರೆಸ್ ಕಾರ್ಯಕರ್ತರು ಆರಂಭಿಸಿದ 'ವಾರ್ತಾ' ಎಂಬ ಪತ್ರಿಕೆಯ ವ್ಯವಸ್ಥಾಪಕರಾಗಿ ಶ್ರೀ ವೀರಣ್ಣಗೌಡರ ಕೇಳಿಕೆಯಂತೆ ಶ್ರೀ ನಾರಾಯಣ ದುಡಿದರು. ಜವಾಬ್ದಾರಿ ಸರಕಾರವು 1947ರ ಅಕ್ಟೋಬರ್‌ನಲ್ಲಿ ಸ್ಥಾಪಿತವಾದಾಗ ಆ ಹುದ್ದೆ ತ್ಯಜಿಸಿದರು.

ರತ್ನತ್ರಯ ಸಾಧಕ

ಡಾ|| ಸಾ. ಶಿ. ಮರುಳಯ್ಯ

ಬಾಪೂಜಿಯವರಂತೆಯೇ ನಾರಾಯಣರೂ ತತ್ತ್ವಕ್ಕೆ ಅಂಟಿಕೊಳ್ಳುವ ಸ್ವಭಾವದವರು. ತಮಗೆ ಸರಿ ಎಂದು ತೋರಿದ ನಿರ್ಧಾರಕ್ಕೆ ಬಂದ ತತ್ತ್ವಕ್ಕೆ ಉಡದಂತೆ ಅಪ್ಪಿಕೊಂಡುಬಿಡುತ್ತಾರೆ. ಆದರಿಂದ ಅವರನ್ನು ಬಿಡಿಸಲು ಸಾಧ್ಯವೇ ಇಲ್ಲ. ಯಾವ ಆಕರ್ಷಣೆ ಅಡಚಣೆಗಳು ಅಡ್ಡಾಡಲಿ, ಒಡ್ಡಾಡಲಿ ನಾರಾಯಣರು ಮಾತ್ರ ಸ್ಥಿತಪ್ರಜ್ಞರಂತೆ ಕುಳಿತುಬಿಡುತ್ತಾರೆ.

ಜಲಿಯನ್‌ವಾಲಾಬಾಗಿನಲ್ಲಿ ನಡೆದ ಪಾತ ಡಯರ್‌ನ ಹತ್ಯಾಕಾಂಡವಿನ್ನೂ ಜನಮನದಲ್ಲಿ ಹಸುರ ಗಿತ್ತು; ಲಾಲಾಜಿಯವರು ಪೊಲೀಸರ ಲಾಠಿ ಏಟ ತಿಂದು ಮುಂಬಯಿನ ನಡುರಸ್ತೆಯಲ್ಲಿ ನೆತ್ತರು ಕಾರುತ್ತ ಬಿದ್ದಿದ್ದ ದೃಶ್ಯ ಭಾರತೀಯನ ಕಣ್ಣಿಂದ ದೂ ವಾಗಿರಲಿಲ್ಲ; ಪಂಜಾಬಿನಲ್ಲಿ ಕಿಶೋರ ಕೇಸರಿ ಭಗತ ಸಿಂಗ್, ಸಖದೇವ್ ಭಗವತೀಚರಣ ಇವರ ಅರೆ ಬೆಂ ಹೆಣಗಳಿನ್ನೂ ಸಟ್ಲೇಜ್ ನದಿಯಲ್ಲಿ ತೇಲುತ್ತಾ ಜಲಚ ಗಳಿಗೆ ಆಹಾರವಾಗುತ್ತಿದ್ದ ನೋಟ ಅಳಿಸಿರಲಿಲ್ಲ ಪಂಜಾಬಿನ ರಾಜಬೀದಿಯಲ್ಲಿ ಪ್ರತಿ ಭಾರತೀಯನೂ ಅಂಬೆಗಾಲಿಟ್ಟುಕೊಂಡು ಹೋಗಬೇಕು; ತಲೆ ಎತ್ತಿ ನಡೆಯಲಾಗದು ಎಂಬ ಅಮಾನುಷ ಶಾಸನ ಕಣ್ಣೆದುರಿನಲ್ಲಿ ನರ್ತಿಸುತ್ತಿತ್ತು. ಬ್ರಿಟಿಷರ ಸುಳ್ಳು ಆಶ್ವಾಸನೆಗಳಿಂದ ಬೇಸತ್ತ ಬಾಪೂ ಕಿಡಿ ಕಿಡಿಯಾದರು; ಅವರ ಸೈರಣೆ ಸಮಾಧಿಯಾಗಿತ್ತು. 1942ರಲ್ಲಿ ಮುಂಬೈ ಮಹಾನಗರ ಅಧಿವೇಶನ ವೇದಿಕೆಯ ಮೇಲೆ ನಿಂತು ಗುಡುಗಿದರು :

'ಕ್ವಿಟ್ ಇಂಡಿಯಾ; ಕ್ವಿಟ್ ಇಂಡಿಯಾ; ಕ್ವಿಟ್ ಇಂಡಿಯಾ' ಎಂಬುದು ಬ್ರಿಟಿಷರಿಗೆ ಬಾಪೂಜಿ ಕೊಟ್ಟ ಕಟ್ಟಕಡೆಯ ದಿಟ್ಟ ಆದೇಶವಾಗಿತ್ತು. 'ಮಾಡಿರಿ ಇಲ್ಲವೆ ಮಡಿಯಿರಿ'-ಭಾರತೀಯರಿಗೆ ಅವರಿತ್ತ ಮೊತ್ತ ಮೊದಲ ಕ್ರಾಂತಿಕಾರಕ ಸಂದೇಶವಾಗಿತ್ತು.

ಬಾಪೂಜಿಯವರ ಮಾತು ಕೃತಿಗಿಳಿಯತೊಡಗಿದಾಗ ಭಾರತದ ಸ್ವಾಂತಂತ್ರ್ಯದ ಕಿಚ್ಚು ಜ್ವಾಲಾಮುಖಿಯಂತೆ ರಾಷ್ಟ್ರಾದ್ಯಂತ ಹೊಳೆಹರಿಯತೊಡಗಿತ್ತು. ಭಯಂಕರ ಭಾವಾತ್ಮಕ ಕಿಚ್ಚು ಅದು. ಕಾರ್ಮಿಕರು ಗಿರಣಿಗಳನ್ನು ತ್ಯಜಿಸಿದರು, ಮಕ್ಕಳು ಶಾಲಾ ಕಾಲೇಜುಗಳನ್ನು ತೊರೆದರು. ಹಾಗೆ ಕಾಲೇಜು ಶಿಕ್ಷಣಕ್ಕೆ ಶರಣು ಹೊಡೆದು ಬಾಪೂಜಿಯವರ ಕರೆಗೆ ಮಾರುಹೋಗಿ ಮುಂಬೈಗೆ ಹೋಗಿದ್ದ ಓರ್ವ ತೇಜಸ್ವೀ ತರುಣ ಅಧಿವೇಶನ ಮುಗಿದ ಮೇಲೆ ಟಿಕೆಟ್ ಪಡೆದು ಬೆಂಗಳೂರಿಗೆ ಹೊರಟಿದ್ದ. ಆದರೆ ಅವನು ರೈಲ್ವೇ ಪ್ಲಾಟ್ ಫಾರಂ ಮುಟ್ಟುವಷ್ಟರಲ್ಲಿ ರೈಲು ದಮ್ಮುಕಟ್ಟಿ ಹೊರಟಿತ್ತು. ಉರುಳುವ ರೈಲಿನಲ್ಲಿ ಯಾವ ಡಬ್ಬಿಗೆ ಹತ್ತುವುದು? ಎಲ್ಲಾ ಡಬ್ಬಿಗಳ ಬಾಗಿಲುಗಳೂ ಭದ್ರವಾಗಿದ್ದುವು.

ಓಡೋಡಿ ಬಂದ ಬೆಂಗಳೂರು ಬಾಲಕನಿಗೆ ಏನೂ ತೋಚಲಿಲ್ಲ. ತಬ್ಬಿಬ್ಬಾದ ಚಣಕಾಲ. ಅಂದಿನ ರೈಲಿಗೆ ಹೋಗದಿದ್ದರೆ ಬೆಂಗಳೂರು ಮುಟ್ಟುವವರೆಗೂ ಉಪವಾಸ ಮಾಡಬೇಕಾಗುತ್ತೆ ; ಹಣದ ಕೊರತೆ, ಅಪರಿಚಿತ ಸ್ಥಳ. ಬಾಲಕ ಧೈರ್ಯ ತಂದುಕೊಂಡು ಯಾವುದೋ ಒಂದು ಡಬ್ಬಿಯ ಕಂಬಿ ಹಿಡಿದು ತಾಯಿತೊಡೆ ಅಪ್ಪುವ ಮಗುವಿನಂತೆ ಅದನ್ನು ಅಪ್ಪಿಕೊಂಡು ನಿಂತ. ರೈಲು ಜೋರಾಗಿ ಓಡುತ್ತಲೇ ಇತ್ತು. ತಾನು ಏನಾಗುತ್ತೇನೆಂಬ ಕಲ್ಪನೆ ಆ ಬಾಲಕನಿಗಿಲ್ಲ. ಹಾಗೇ ಸಾಗಿತು ಸ್ವಲ್ಪ ದೂರ.

ಆಗ ಇದ್ದಕ್ಕಿದಂತೆಯೇ ಡಬ್ಬದ ಬಾಗಿಲು ತೆರೆಯಿತು. ಬಾಲಕನಿಗೆ ಒಳಗಿನಿಂದ ಹಿಂದೀ ಭಾಷೆಯಲ್ಲಿ ಕರೆಬಂತು. ಬಾಲಕ ಒಳನುಗ್ಗಿ ನಿಂತ. ನೋಡುತ್ತಾನೆ ; ಅದರ ತುಂಬಾ ಮಿಲಿಟರಿಯವರು ; ಬಾಲಕನ ಜಂಘಾಬಲವೇ ಉಡುಗಿಹೋಯಿತು. 'ಓಹೋ, ತಪ್ಪು ಮಾಡಿಕೊಂಡೆ. ಇಲ್ಲವೇ ನನ್ನ ದೈವವೇ ನನಗೆ ಕೈಕೊಟ್ಟಿತು. ನನ್ನ ಕತೆ ಮುಗಿಯಿತು'-ಎಂದಂದುಕೊಂಡ.

ಜಲಿಯನ್‌ವಾಲಾಬಾಗ್ ಪ್ರಕರಣ ನಡೆದ ದಿನವೇ ಅಂದೇ ರಾತ್ರಿ ಅದೇ ಡಯರ್ ತನ್ನ ಅನುಯಾಯಿಗಳ ಜೊತೆ ಹರಟೆಕೊಚ್ಚುತ್ತಾ ಪ್ರಯಾಣಿಸುತ್ತಿದ್ದ ಡಬ್ಬಿಯಲ್ಲಿ ಲಗ್ಗೇಜು ಇಡುವ ಜಾಗದಲ್ಲಿ ಮಲಗಿಕೊಂಡಿದ್ದ ಜವಹರ ಲಾಲ್ ನೆಹರೂರವರಿಗಾದ ಅನುಭವ ಆ ಬಾಲಕನಿಗಾಯಿತಂತೆ !

ಎಲ್ಲ ಸಮವಸ್ತ್ರಧಾರಿಗಳು ಗೇರಾಯಿಸಿಕೊಂಡರು. ಬಾಲಕನ ಮೈ ತುಂಬ ಖಾದಿ. ಅವನ ತಲೆಯ ಮೇಲೆ ಒಂದು ಗಾಂಧೀಟೋಪಿ, ಬಗಲಲ್ಲಿ ಒಂದು ಖಾದಿ ಚೀಲ ; ಕಾಲಲ್ಲಿ ಒರಟು ಚರ್ಮದ ದಪ್ಪ ಚಪ್ಪಲಿ. ತೆಳ್ಳಗೆ ಕುಳ್ಳಗಿದ್ದ ಈ ಬಾಲಕನನ್ನೇ ಪರೀಕ್ಷಕ ದೃಷ್ಟಿಯಿಂದ ವೀಕ್ಷಿಸತೊಡಗಿದರು.

ಹುಡುಗ ಗಡಗಡ ನಡುಗುತ್ತ ನಿಂತ.

ಪ್ರಶ್ನೆಗಳು ನಾಲ್ಕು ದಿಕ್ಕುಗಳಿಂದ ಬಿಟ್ಟ ಬಾಣಗಳಂತೆ ಬಂದವು.

'ಏನಯ್ಯಾ ಯಾವೂರವನು ?'

'ಬೆಂಗಳೂರು'

'ಎಲ್ಲಿಗೆ ಹೋಗಿದ್ದೆ ?'

'ಮುಂಬಯಿಗೆ'

'ಏಕೆ ?'

'ಬಾಪೂಜಿ ಕರೆ ಕೊಟ್ಟಿದ್ದರು. ಅದಕ್ಕಾಗಿ'

'ಬಾಪೂ ಏನು ಹೇಳಿದರು ? ಯಾವ ನಿರ್ಣಯ ತೆಗೆದುಕೊಂಡಿರಿ ?'

'ಬ್ರಿಟಿಷರೇ ಭಾರತದಿಂದ ತೊಲಗಿರಿ ಅಂದರು, ನಮಗೆಲ್ಲಾ ಮಾಡಿ ಇಲ್ಲವೇ ಮಡಿಯಿರಿ ಅಂದರು.'

'ನೀವೆಲ್ಲಾ ಒಪ್ಪಿದಿರಿ ?'

'ಒಪ್ಪದೆ ಇರಲು ಹೇಗೆ ಸಾಧ್ಯ ? ನಾನಷ್ಟೇ ಏಕೆ ನಿಜವಾದ ಭಾರತೀಯನು ಯಾವನೇ ಆಗಿರಲಿ, ಅವನಿಗೆ ಬಾಪೂ ಮಾತು ಸರ್ವಮಾನ್ಯ'

'ಮುಂದೇನು ಮಾಡ್ತೀರಿ ? '

"ಭಾರತ ಬಿಡುಗಡೆ ಪಡೆಯುವವರೆಗೂ ಹೋರಾಡ್ತೀವಿ"

"ನಿಮ್ಮನ್ನು ಹೋರಾಟಕ್ಕೆ ಬಿಟ್ಟರೆ ?"

"ಬಿಡದೇ ಏನು ಮಾಡ್ತಾರೆ ?"

"ಏಯ್ ಬಚ್ಚಾ, ನೀನೀಗ ಇರೋದೆಲ್ಲಿ ಗೊತ್ತಾ ? ಸಿಂಹದ ಬೋನಿನಲ್ಲಿ"

"ಅಲ್ಲ, ಭಾರತೀಯರೇ ಆದ ನನ್ನ ಅಣ್ಣಂದಿರ ಆಶ್ರಯದಲ್ಲಿ ?"

ಎಲ್ಲ ಸೈನಿಕರು ಸ್ತಬ್ಧರಾದರು.

ಬಾಲಕ ಮುಂದುವರಿದ—

"ಅಣ್ಣಂದಿರಾ, ನೀವೂ ನನ್ನಂತೆಯೇ ಭಾರತಾಂಬೆಯ ಮಕ್ಕಳು, ನನ್ನ ಮೇಲಾಗಲಿ ನನ್ನಂತಹ ಸ್ವಯಂ ಸೇವಕರನ್ನಾಗಲೀ, ಗಾಂಧೀಜಿಯವರನ್ನಾಗಲಿ ಅಥವಾ ಭಾರತಾದ್ಯಂತ ರೊಚ್ಚಿಗೆದ್ದಿರುವ ಯಾವ ಸ್ವಾತಂತ್ರ್ಯ ಪ್ರೇಮಿಯ ಬಗೆಗಾಗಲಿ ನಿಮಗೆ ದ್ವೇಷ ಮಾತ್ಸರ್ಯ ಇಲ್ಲ. ಆದರೆ ಬ್ರಿಟಿಷರ ಗುಲಾಮರಾಗಿರುವ ನಿಮಗೆ ನಿಮ್ಮ ಅರಿವು ನಿಮಗಾಗುತ್ತಿಲ್ಲ. ಕುರಿಮಂದೆಯಲ್ಲಿ ಬೆಳೆದ ಸಿಂಹ ತಾನೂ ಒಂದು ಕುರಿ ಎಂದೇ ಭಾವಿಸಿದಂತಾಗಿದೆ ; ನಿಮ್ಮ ಮೈಯಲ್ಲಿ ಹರಿಯುತ್ತಿರುವುದು ನನ್ನಂತಹ ನಿಜವಾದ ಭಾರತೀಯ ರಕ್ತ. ಆದರೆ ಅದೀಗ ಬ್ರಿಟಿಷರ ಎಂಜಲು ತಿಂದು ಕಲುಷಿತವಾಗಿದೆ. ಅದನ್ನು ಶುದ್ಧೀಕರಿಸುವ ಕಾಲ ದೂರವಿಲ್ಲ—'.

ಬಾಲಕನ ಮಾತುಗಳು ಅಣಿಮುತ್ತುಗಳಂತೆ ಉರುಳುತ್ತಿದ್ದವು. ಮಿಲಿಟರಿ ಮಂದಿ ಮಂತ್ರ ಮುಗ್ಧರಾಗಿ ಬಿಟ್ಟ ಕಣ್, ತೆರೆದ ಬಾಯ್ ಆಗಿ ಕೇಳುತ್ತಾ ಕುಳಿತರು.

ಬಾಲಕ ಅವರ ಮಿತ್ರನಾದ, ಬೋಧಕನಾದ, ಗುರುವೇ ಆದ!

ಆ ಬಾಲಕ ಬೇರಾರೂ ಅಲ್ಲ. ದೇಶಹಳ್ಳಿ ಜಿ. ನಾರಾಯಣ.

ವ್ಯಕ್ತಿಗೆ ಒಂದು ಮುಖ, ಆದರೆ ವ್ಯಕ್ತಿತ್ವಕ್ಕೆ ನಾನಾ ಮುಖಗಳು—ಬೀಸುವ ಗಾಳಿಯಂತೆ, ಹರಿಯುವ ನೀರಿನಂತೆ, ಉರಿಯುವ ಜ್ಯೋತಿಯಂತೆ—ಯಾವ ದಿಶೆಯಲ್ಲಿ ನೋಡಿದರೂ ನೋಡಿದವನ ದೃಷ್ಟಿಗೆ ತಕ್ಕಂತೆ ದರ್ಶನವನ್ನೀಯುವ ನಿಲುವು. ಜಿ. ನಾರಾಯಣರವರ ವ್ಯಕ್ತಿತ್ವದ ಆನೆಯನ್ನು ಅಳೆಯ ಹೋದ ಕುರುಡರಲ್ಲಿ ನಾನೂ ಒಬ್ಬ. ಸ್ವಯಂಸೇವಕ ನಾರಾಯಣ, ರಾಷ್ಟ್ರಪ್ರೇಮಿ ನಾರಾಯಣ, ರಾಜಕಾರಣಿ ನಾರಾಯಣ, ಮೇಯರ್ ನಾರಾಯಣ, ಸಾಹಿತಿ ನಾರಾಯಣ, ಪತ್ರಿಕೋದ್ಯಮಿ ನಾರಾಯಣ, ಶಿಕ್ಷಣತಜ್ಞ ನಾರಾಯಣ, ಕನ್ನಡ ಸಾಹಿತ್ಯ ಪರಿಷತ್ ನಾರಾಯಣ, ಕರ್ಮಯೋಗಿ ನಾರಾಯಣ, ಧರ್ಮಪ್ರೇಮಿ ನಾರಾಯಣ—ಇಂಥ ವೆನಿತೋ ವ್ಯಕ್ತಿತ್ವದ ನಾರಾಯಣ ಮುಖಗಳನ್ನು ನಾನು ಕಾಣೆ. ಮೇಲೆ ಹೇಳಿದ ಘಟನೆಯೂ ನಾನು ಕೇಳಿ ತಿಳಿದದ್ದು. ಆದರೆ ನಾನು ಕಂಡದ್ದು ಸಮಯಪಾಲಕ ಹಾಗೂ ತತ್ವನಿಷ್ಠ ನಾರಾಯಣರನ್ನು. ಇದನ್ನು ಗುರುತಿಸಿದ್ದು ಅವರು ಪರಿಷತ್ತಿನ ಅಧ್ಯಕ್ಷರಾಗಿದ್ದಾಗ. ಪರಿಷತ್ತಿನಲ್ಲಿ ಯಾವುದೇ ಕಾರ್ಯಕ್ರಮಗಳು ನಡೆಯಲಿ, ಯಾರೇ ಇರಲಿ, ಇಲ್ಲದಿರಲಿ, ಬರಬೇಕಾದವರು ಯಾರೇ ಬರಲಿ, ಬಾರದಿರಲಿ—ಸಮಯಕ್ಕೆ ಸರಿಯಾಗಿ ಜಿ. ನಾರಾಯಣ ಅವರು ವೇದಿಕೆಯ ಮೇಲೆ ಹಾಜರಾಗುತ್ತಿದ್ದುದುಂಟು. ಅತಿಥಿಗಳಿಲ್ಲದಾಗ ತಾವೇ ಅತಿಥಿಯಾಗಿ, ಸಭಾಧ್ಯಕ್ಷರಿಲ್ಲದಾಗ ತಾವೇ ಅಧ್ಯಕ್ಷರಾಗಿ ಕಾರ್ಯಕ್ರಮ ಆರಂಭಿಸುತ್ತಿದ್ದರು.

ಸಮಯ ಪಾಲನಾ ನಿಷ್ಠೆಯನ್ನು ನಾನು ಕಂಡದ್ದು ಇಬ್ಬರಲ್ಲಿ: ಒಬ್ಬರು ಗಾಂಧೀಜಿ, ಮತ್ತೊಬ್ಬರು ಗಾಂಧೀಜಿಯವರ ಕಟ್ಟಾಭಕ್ತ ಜಿ. ನಾರಾಯಣ.

ಬಾಪೂಜಿಯವರಂತೆಯೇ ನಾರಾಯಣರೂ ತತ್ತ್ವಕ್ಕೆ ಅಂಟಿಕೊಳ್ಳುವ ಸ್ವಭಾವದವರು. ತಮಗೆ ಸರಿ ಎಂದು ತೋರಿದ ನಿರ್ಧಾರಕ್ಕೆ ಬಂದ ತತ್ತ್ವಕ್ಕೆ ಉಡದಂತೆ ಅಪ್ಪಿಕೊಂಡುಬಿಡುತ್ತಾರೆ. ಅದರಿಂದ ಅವರನ್ನು ಬಿಡಿಸಲು ಸಾಧ್ಯವೇ ಇಲ್ಲ. ಯಾವ ಆಕರ್ಷಣೆ ಅಡಚಣೆಗಳು ಅಡ್ಡಾಗಲಿ, ಒಡ್ಡಾಗಲಿ ನಾರಾಯಣರು ಮಾತ್ರ ಸ್ಥಿತಪ್ರಜ್ಞರಂತೆ ಕುಳಿತುಬಿಡುತ್ತಾರೆ. ಒಪ್ಪಿತ ತತ್ತ್ವ ಪ್ರತಿಪಾದನೆಯಲ್ಲಿ ಬಂಡೆಯಾಗುತ್ತಾರೆ; ಬೆಟ್ಟವಾಗುತ್ತಾರೆ. ಇದನ್ನು ಶಿವಮೊಗ್ಗ ಮತ್ತು ರಾಯಚೂರುಗಳಿಗೆ ಅವರೊಡನೆ ಜಿಲ್ಲಾ ಸಮಿತಿಗಳ ರಚನೆಗಾಗಿ ಹೋಗಿದ್ದಾಗ ಕಂಡೆ.

ಅವರಲ್ಲಿರುವ ಮತ್ತೊಂದು ಮಹಾ ಮೌಲ್ಯತುಂಬಿದ ಮಣಿ ಎಂದರೆ ಮಾನವತೆ. ಡಾ॥ ಸಿದ್ಧಯ್ಯ ಪುರಾಣಿಕರು, 'ಏನಾದರೂ ಆಗು ಮೊದಲು ಮಾನವನಾಗು' ಎಂದು ಹೇಳುವಂತೆ ಆದವರು ಜಿ.ನಾರಾಯಣ. ಕಛೇರಿಯಲ್ಲಿರಲಿ, ರಸ್ತೆ ಬದಿಯಲ್ಲಿ ಸಿಗಲಿ 'ಏನ್ ಸ್ವಾಮಿ....ಬನ್ನಿ ಸ್ವಾಮಿ' ಎಂಬ ಜೇನು ತುಂಬಿದ ಆ ಸವಿನುಡಿ, ಅದೇ ರೀತಿಯಲ್ಲಿ ಆತ್ಮೀಯರನ್ನು ನಡೆಸಿಕೊಳ್ಳುವ ರೀತಿ, ಯಾರನ್ನೂ ದ್ವೇಷಿಸದ, ಯಾರ ಪ್ರಗತಿಗೂ ಕರುಬದ ಹಿರಿಯ ಗುಣ ಅವರದು. ಧನಿಕ ದರಿದ್ರ ಎಂಬ ಭೇದವಿಲ್ಲದೆ, ವೃದ್ಧ ಬಾಲಕ ಎಂಬ ತಾರತಮ್ಯವಿಲ್ಲದೆ ಎಲ್ಲರಲ್ಲೂ ಒಂದೇ ಬಗೆಯಲ್ಲಿ ವರ್ತಿಸುವ ಸಮತಾವಾದಿತ್ವ ಬೆಲೆಕೊಟ್ಟರೆ ಸಿಗುವ ವಸ್ತುವಲ್ಲ. ಅದನ್ನು ಸಾಧಿಸಿ, ಸಿದ್ಧಿಸಿಕೊಂಡವರು ಜಿ. ನಾರಾಯಣ ಅವರು.

ಒಟ್ಟಾರೆ ನಾನು ಹೇಳುವುದಿಷ್ಟೆ; ಸಮಯ ಪಾಲನೆ, ತತ್ತ್ವನಿಷ್ಠೆ, ಮಾನವತೆ—ಈ ರತ್ನತ್ರಯಗಳ ಸಾಧಕ ಶ್ರೀ ಜಿ. ನಾರಾಯಣ. ○

ಸ್ವಾತಂತ್ರ್ಯವೂ - ಶೈಕ್ಷಣಿಕತೆಯೂ - ನಾರಾಯಣರೂ

ಡಾ|| ಹಿ. ಶಿ. ರಾಮಚಂದ್ರೇಗೌಡ

ಬೆಂಗಳೂರಿನಂಥ ರಾಜಕೀಯ-ಸಾಮಾಜಿಕ ದುರ್ಜಡತೆಯ ಮಧ್ಯೆ ಕೇಳಿಬರುವ ಕೆಲವೇ ಕೆಲವು ಒಳ್ಳೆಯ ಹೆಸರುಗಳಲ್ಲಿ ಶ್ರೀ ಜಿ. ನಾರಾಯಣ ಅವರದೂ ಒಂದು. ಸ್ಥಾನಮಾನ ಗಳನ್ನು ಬದುಕಿನ ಶ್ರದ್ಧೆಗಳೆಂದು ತಿಳಿದು ಇವತ್ತಿಗೂ ಸ್ವಾತಂತ್ರ್ಯ ಹೋರಾಟದ ಆಶಯವೇನು ಎಂಬುದನ್ನು ಜನತೆಗೆ ಉಣಬಡಿಸುತ್ತಿರುವ ವ್ಯಕ್ತಿ ಅವರು.

ನಿರ್ವಿಕಾರ ಚಿತ್ತದಿಂದ, ನಾನು ಕರ್ನಾಟಕದಲ್ಲಿ ಪ್ರೀತಿಸುವ ಮತ್ತು ಗೌರವಿಸುವ ವ್ಯಕ್ತಿಗಳಲ್ಲಿ ಶ್ರೀ ಜಿ. ನಾರಾಯಣರು ಮುಖ್ಯರು. ಹಿಂದೆ ಅವರು ಏನಾಗಿದ್ದರು ಅಥವಾ ಈಗ ಅವರು ಏನಾಗಿದ್ದಾರೆ ಎಂಬುದು ಇದಕ್ಕೆ ಕಾರಣವಲ್ಲ ; ಅವರು ನಮ್ಮಂಥ ಹೊಸ ಪೀಳಿಗೆಯ ವ್ಯಕ್ತಿಗಳಿಗೆ ಏನು ಕೊಟ್ಟಿದ್ದಾರೆ ಎನ್ನುವ ಸಾಂದರ್ಭಿಕ ತಿಳುವಳಿಕೆಯಿಂದ ; ಅವರು ನಮ್ಮ ಮಧ್ಯೆ ಇರುವ, ಇವತ್ತಿನ ಮಹತ್ವದ ವ್ಯಕ್ತಿಗಳಲ್ಲಿ ಒಬ್ಬರಾಗಿದ್ದಾರೆ.

ಇವತ್ತು ನಮ್ಮ ಎದುರಿಗೆ ಕಾಂಗ್ರೆಸ್ ಇದೆ ; ಕಾಂಗ್ರೆಸ್ ಹೋರಾಟಗಾರರು ಇದ್ದಾರೆ ; ಇವರ ನಡುವೆ ಶ್ರೀ ಜಿ. ನಾರಾಯಣರೂ ಇದ್ದಾರೆ. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ, ಕಾಂಗ್ರೆಸ್, ಕಾಂಗ್ರೆಸ್ ಸಂಸ್ಕೃತಿ ಮತ್ತು ಕಾಂಗ್ರೆಸ್ ಜನ ಬೇರೆ ಬೇರೆಯಾಗಿರ ಲಿಲ್ಲ. ಆಗ ಅದೊಂದು ಶೈಕ್ಷಣಿಕ ಹೋರಾಟವಾಗಿತ್ತು. ಕಾಂಗ್ರೆಸ್ ಎನ್ನುವ ಸಾಂಸ್ಕೃತಿಕ ಸಂಸ್ಥೆ ರಾಜಕೀಯಕ್ಕೆ ಬಂದ ಮೇಲೆ, ಸ್ವಾತಂತ್ರ್ಯ ಹೋರಾಟಗಾರರಲ್ಲದವರ ಕೈಗೆ ಹಸ್ತಾಂತರ ಗೊಂಡಮೇಲೆ ಅಂದಿನ ಹೋರಾಟದ ಕಾಂಗ್ರೆಸ್, ಅದರ ಸಂಸ್ಕೃತಿ ಮತ್ತು ಜನ ಆ ಹೋರಾಟ ಸಂಸ್ಕೃತಿಯ ಮೂಲ ಮಾತೃಕೆಗಳಾದರು. ಅವರು ನಂತರದ ಸ್ವಾತಂತ್ರ್ಯ ಸಮರದ ಶಿಕ್ಷಣವನ್ನು ಪಡೆಯದ ಅಶಿಕ್ಷಿತ ಜನರೊಂದಿಗೆ ಬಡಿದಾಡದಾದರು. ಯಾವ ಫಲಾಪೇಕ್ಷೆಯೂ ಇಲ್ಲದೆ ನೂರು ಹಡೆದ, ನೂರ ರಲ್ಲಿ ಚೂರನ್ನೂ ಗುರುತಿಸದ ತಾಯಿಯಂತಾದರು. ಇಂಥವರಲ್ಲಿ ಎರಡು ವರ್ಗದ ಜನರಿದ್ದಾರೆ. ತಮ್ಮ ಸಾಧನೆಯೆಲ್ಲಾ ಕೊಳ್ಳೆಹೋಯಿತೆಂದು ನಿರಾಶೆ ಗೊಂಡು, ಮುಂದಿನ ಗತಿ ಕಾಣದೆ ಕೈಕಟ್ಟಿ ಕುಳಿತವರು. ಎರಡನೆಯ ವರ್ಗದ ಜನರೆಂದರೆ, ಈ ಕೊಳಕು-ಕೊಳ್ಳೆ ಗಳ ಮಧ್ಯೆಯೂ ಸೌಮ್ಯವಾಗಿ ನಳನಳಿಸಿ ಚಿಗುರಿದವರು. ಶ್ರೀ ನಾರಾಯಣ ಅವರು ಈ ವರ್ಗಕ್ಕೆ ಸೇರಿದವರು.

ನಮ್ಮ ಕಾಂಗ್ರೆಸ್ ಸಂಸ್ಥೆಯಿಂದ ಸ್ವಾತಂತ್ರ್ಯ ಹೋರಾಟದ ಫಲ ಶಿಕ್ಷಣವಾಗಿ ಬರಲಿಲ್ಲ. ಅದು ಈ ಶತಮಾನದ ಆರನೆಯ ದಶಕದ ಹೊತ್ತಿಗೆ ಮೂಲ ಹೋರಾಟದ ಸಂಸ್ಕೃತಿಗೆ ತೀರ ಭಿನ್ನವೇ ಆದ ಶೋಷಣೆಯ

ಸಂಸ್ಕೃತಿಯೊಂದನ್ನು ರೂಪಿಸಿಕೊಂಡಿತು. ನಮ್ಮ ಪರಂಪರೆಯಲ್ಲಿ ಬಂದ ಜಾತಿ ಶೋಷಣೆಯನ್ನು ಇದು ಮುಂದುವರಿಸಿತು. ಸ್ವಾತಂತ್ರ್ಯದ ಫಲವನ್ನೆಲ್ಲಾ ತಾನೇ ಉಂಡು ಜನರಿಗೆ ಎಂಜಲು ಹಾಳೆಗಳನ್ನು ಮಾತ್ರ ಬಿಸಾಕಿತು. ಹೊಸ ಪೀಳಿಗೆಗೆ ಕಾಂಗ್ರೆಸ್ ರಾಜಕೀಯ ಎಂದರೆ ಮುಖದ ಮೇಲೆ ಕಸ ಎಸೆಯುವ ಕೆಲಸ ಎನ್ನುವಂತಾಯಿತು. ಇದರ ಪರಿಣಾಮವಾಗಿ ನಮ್ಮ ಸಮಾಜದಲ್ಲಿ ಎರಡು ದುರಂತಗಳು ಸಂಭವಿಸಿದವು. ಸಾಮಾಜಿಕ ಬೆಳವಣಿಗೆ ಆಧುನೀಕರಣಗೊಳ್ಳದೆ ವಿಮುಖೀಕರಣಗೊಂಡಿತು. ಹೊಸ ಪೀಳಿಗೆ ಸ್ವಾತಂತ್ರ್ಯ ಹೋರಾಟದ ಸಾಧನೆಯನ್ನು ಸರಿಯಾಗಿ ಗ್ರಹಿಸದಾಯಿತು ; ಸಮಾಜ ವಿರೋಧಿಗಳಂತೆ ವರ್ತಿಸಿ ಹೊಸದೊಂದು ಸಮಾಜಕ್ಕಾಗಿ ತುಡಿಯಿತು. ಎರಡನೆಯದಾಗಿ, ಸ್ವಾತಂತ್ರ್ಯದ ಸಾಧನೆ ಸಿದ್ಧಿಗಳನ್ನು ಗ್ರಹಿಸಿದ ಅನುಭವಿಸಿದ, ಆಚರಿಸಿದ ಮಹಾತ್ಮರು ನಮ್ಮ ಬೆಳಕಿಗೆ ಬರದಾದರು. ನಮ್ಮ ಎಲ್ಲ ಅಪರಾಧ-ವೈಭವಗಳ ಮೆರವಣಿಗೆಯ ಮಧ್ಯೆ ಶೋಭಿಸುವ ಹೂವಿನ ಕುಂಡಗಳಾದರು. ನಮ್ಮ ಸಾಮಾಜಿಕ ಬೇಜವಾಬ್ದಾರಿಗೆ-ನಿಷ್ಕ್ರಿಯೆಗೆ ಸಾಕ್ಷಿಕಲ್ಲುಗಳಾದರು. ಅಂಥ ದೊಡ್ಡ ವ್ಯಕ್ತಿಗಳಲ್ಲಿ ಶ್ರೀ ನಾರಾಯಣರೂ ಒಬ್ಬರು.

ಬೆಂಗಳೂರಿನಂಥ ರಾಜಕೀಯ-ಸಾಮಾಜಿಕ ದುರ್ನಡತೆಯ ಮಧ್ಯೆ ಕೇಳಿಬರುವ ಕೆಲವೇ ಕೆಲವು ಒಳ್ಳೆಯ ಹೆಸರುಗಳಲ್ಲಿ ಶ್ರೀ ಜಿ. ನಾರಾಯಣ ಅವರದೂ ಒಂದು. ಸ್ಥಾನಮಾನಗಳನ್ನು ಬದುಕಿನ ಶ್ರದ್ಧೆಗಳೆಂದು ತಿಳಿದು ಇವತ್ತಿಗೂ ಸ್ವಾತಂತ್ರ್ಯ ಹೋರಾಟದ ಆಶಯವೇನು ಎಂಬುದನ್ನು ಜನತೆಗೆ ಉಣಬಡಿಸುತ್ತಿರುವ ವ್ಯಕ್ತಿ ಅವರು. ನೆಹರೂ ಯುಗದವರಂತೆ ವ್ಯಕ್ತಿಪ್ರತಿಷ್ಠೆಯನ್ನು ಬೆಳೆಸಿಕೊಂಡು, ತತ್ವವನ್ನು ತಣ್ಣಗಾಗಿಸುವ, ಮೊರಾರ್ಜಿ ಪೀಳಿಗೆಯವರಂತೆ ಸಾಮೂಹಿಕ ಹೊಣೆಗಾರಿಕೆಯನ್ನು ಧಿಕ್ಕರಿಸಿ ಸಾಮಾಜಿಕ ದುರಂತವಾಗುವ ವ್ಯಕ್ತಿಯ ಪರಿಮಿತಿಗಳನ್ನು ಮೀರಿ ನಿಂತವರು ಶ್ರೀ ಜಿ. ನಾರಾಯಣ. ಇದರಿಂದ ಕಾಂಗ್ರೆಸ್ ಸಂಸ್ಕೃತಿಯ ಬಗ್ಗೆ ಹಗುರವಾಗಿ ಮಾತು ಆರಂಭಿಸುವ ಜನರಿಗೆ ತಟ್ಟನೆ ಶ್ರೀ ಜಿ. ನಾರಾಯಣ ಅವರಂಥವರು ಇದ್ದಾರಲ್ಲವೆ ಎಂದು ತಮ್ಮ ಮಾತು ಕಥೆಗೆ ಗಾಂಭೀರ್ಯ ತುಂಬುವ ಹವಣಿಕೆಯನ್ನು ಮಾಡದಿರಲಾರರು. ಅಂಥ ತುಂಬು ಬದುಕಿನ, ತುಂಬಿತುಳುಕುವ ವ್ಯಕ್ತಿತ್ವ ಅವರದು.

ಹೊಸ ಪೀಳಿಗೆಯನ್ನು ಪ್ರತಿನಿಧಿಸುವಂತೆ ನಾನು ಅವರನ್ನು ಅನೇಕಸಲ ಕಂಡಿದ್ದೇನೆ ; ಅನೇಕ ವಿಚಾರಗಳನ್ನು ಅವರೊಡನೆ ಮಾತನಾಡಿದ್ದೇನೆ. ಆಗೆಲ್ಲ ನನಗೆ ಅನಿಸಿದ್ದು ನಮ್ಮ ಸಮಾಜಕ್ಕೆ ಇವತ್ತಿನ ಕಾಂಗ್ರೆಸ್ಸಿಗರು ಮಾಡುವುದೆಲ್ಲಾ ಮುಗಿದಿದೆ, ಆದರೆ ಶ್ರೀ ಜಿ. ನಾರಾಯಣರಂಥವರ ಸ್ವಾತಂತ್ರ್ಯ ಹೋರಾಟದ ಸಂದರ್ಭದ ಜನ ಮಾಡುವುದು ಇನ್ನೂ ಆರಂಭಗೊಂಡೇ ಇಲ್ಲ ಎನಿಸುತ್ತದೆ. ಸ್ವಾತಂತ್ರ್ಯದ ಸಾಧನೆ-ಸಾಧಕರನ್ನೆಲ್ಲ ಇವತ್ತಿನ ಕಾಂಗ್ರೆಸ್ ಸಂಸ್ಕೃತಿ ಹಳ್ಳಕ್ಕೆ ತಳ್ಳಿ ಮುಂದೆ ಬಂದಿರುವುದು ಮಾತ್ರವಲ್ಲ ; ಅದರ ಮೂಲ ಚಿಂತನೆಯ ಅಳಿಯದ ಮೊಳಕೆಗಳ ಮೇಲೆಲ್ಲ ಮಣ್ಣುತುಂಬಿದೆ ಎಂಬುದು ಸಹ ವಿದಿತವಾಗುತ್ತದೆ. ವ್ಯಕ್ತಿ ಹೋರಾಟದಿಂದ ಮಾತ್ರ ಶಿಕ್ಷಣ ಪಡೆಯುತ್ತಾನೆ ; ಪಾಠಶಾಲೆಯ ಪಠ್ಯ ಪುಸ್ತಕಗಳಿಂದ ಅಲ್ಲ ಎನ್ನುವುದಕ್ಕೆ ಸ್ವಾತಂತ್ರ್ಯ ಹೋರಾಟದ ಸಂದರ್ಭವೂ, ಶ್ರೀ ಜಿ. ನಾರಾಯಣರೂ ಏಕಕಾಲದಲ್ಲಿ ಉದಾಹರಣೆಗಳಾಗಿ ನಿಲ್ಲುತ್ತಾರೆ. ಶ್ರೀ ಜಿ. ನಾರಾಯಣರ ತಿಳುವಳಿಕೆ ಮತ್ತು ಅದನ್ನು ಕ್ರಿಯೆಯಲ್ಲಿ ತೊಡಗಿಸುವ ಪ್ರಯತ್ನಗಳು ಅಚ್ಚರಿಯನ್ನುಂಟುಮಾಡುತ್ತವೆ. ಸಾಮಾಜಿಕ ಬೆಳವಣಿಗೆ ಒಂದು ನಿರಂತರ ಹೋರಾಟವೇ ಹೊರತು ಕೆಲವು ಆಚರಣೆಗಳ ಮೊತ್ತವಲ್ಲ ಎಂಬುದು ಇದರಿಂದ ಅರ್ಥವಾಗುತ್ತದೆ. ಅಧಿಕಾರ, ಅಂತಸ್ತುಗಳು ಸಮಾಜದಲ್ಲಿ ಹೊಸತಾದ, ಜೀವಂತಿಕೆಯ ಏನನ್ನೂ ನಿರ್ಮಿಸಲಾರವು. ಸದಾಬೆಳೆಯುವ ಹೊಣೆಗಾರಿಕೆಯುಳ್ಳ ವ್ಯಕ್ತಿತ್ವ ಮಾತ್ರ ಒಂದು ಸಮಾಜದ ಆಸ್ತಿಯಾಗಬಲ್ಲುದು ಎಂಬುದಕ್ಕೆ ಅವರು ಉದಾಹರಣೆಯಾಗುತ್ತಾರೆ ; ವಸ್ತುವೂ, ಕ್ರಿಯೆಯೂ ಆಗುತ್ತಾರೆ. ಬರಿದೆ ಅಧಿಕಾರದಿಂದ, ಮಂತ್ರಿತ್ವದಿಂದ ಮೆರೆಯುವ ಇವತ್ತಿನ ಬಹುತೇಕ ಜನ ಶ್ರೀ ಜಿ. ನಾರಾಯಣ ಅವರ ಬದುಕಿನಿಂದ ಕಲಿಯಬೇಕಾದುದು ಅಪಾರವಿದೆ.

ನನ್ನ ಮಾನಸಿಕ ಶಿಕ್ಷಣಕ್ಕೆ ವಸ್ತುವಾದ ಶ್ರೀ ಜಿ. ನಾರಾಯಣ ಅವರ ಬದುಕಿನ ಸಾಧನೆಯನ್ನು ಗೌರವಿಸುತ್ತ ಅದು ಒಂದು ಶತಕವನ್ನು ಸಾಧಿಸಲಿ ಎಂದು ಹಾರೈಸುತ್ತೇನೆ.

ನಾರಾಯಣ ಅವರ ಸಮಾಜ ಸೇವೆ

ಎಚ್. ಎ. ರಾಮಕೃಷ್ಣ

ಜನಪ್ರಿಯತೆ ಗಳಿಸಬೇಕೆಂಬ ಆಶೆಯಿಂದ ಶ್ರೀ ನಾರಾಯಣರು ಎಂದೂ ಘನತೆ ಗೌರವವನ್ನು ಸ್ವಾಭಿಮಾನ ವನ್ನು ಬಲಿಗೊಟ್ಟವರಲ್ಲ. ಬ್ಯಾಂಕ್, ಸಹಕಾರ ಸಂಘ, ವಿದ್ಯಾ ಸಂಸ್ಥೆ, ವಿಶ್ವವಿದ್ಯಾನಿಲಯದ ಸೆನೆಟ್ ಸದಸ್ಯತ್ವ ಹಲವಾರು ಸಂಘ ಸಂಸ್ಥೆಗಳಿಗೆ ನೈತಿಕ ನೆರವು ಬೆಂಬಲ ಒತ್ತಾಸೆ ನೀಡಿ ಕೊಂಡು ಬಂದಿದ್ದರೂ ಶ್ರೀ ನಾರಾಯಣರು ಯಾವುದಕ್ಕೂ ಅಂಟಿಕೊಂಡಿಲ್ಲ.

ಸಮಾಜ ಸೇವೆಯ ಹೆಸರಿನಲ್ಲಿ ಮೆರೆಯಬೇಕೆಂದು ಆಶಿಸುವವರಿಗೆ ಯಾವ ಕಾಲದಲ್ಲೂ ಬರಗಾಲವಿಲ್ಲ. ಹಾಗೆ ತೊಡಗುವವರು ಹತ್ತು ಹಲವಾರು ಆಶೆ ಆಕಾಂಕ್ಷೆ ಗಳ ಒತ್ತಡ, ಪ್ರೇರಣೆಯಿಂದ ಪ್ರಭಾವಿತರಾಗುವುದೂ ಸರ್ವಸಾಮಾನ್ಯ. ಜೊತೆಜೊತೆಗೆ ಹಲವು ಬಗೆ, ವಿಭಿನ್ನ ಉದ್ದೇಶಗಳಿಂದಲೂ ಈ ಕ್ಷೇತ್ರಕ್ಕೆ ನೇರ ಧುಮುಕುವವ ರಿದ್ದಾರೆ. ಸ್ಥಾನಮಾನ, ಜನಪ್ರಿಯತೆ, ಸ್ವಾರ್ಥ ಸಾಧನೆ ಹಾಗೂ ಕೀರ್ತಿ ಪ್ರತಿಷ್ಠೆಗಳಿಗೆಂದೇ ಅದರಲ್ಲಿ ಅನೇಕರು ತೊಡಗುವುದೂ ಉಂಟು. ಇದು ಸಾಮಾನ್ಯ ಸವಿಾಕ್ಷೆಗೆ ನಿಲುಕುವ ದೃಶ್ಯ—ಅಷ್ಟೇ ಅಲ್ಲ; ಎಲ್ಲರಿಗೂ ಚೆನ್ನಾಗಿ ಚಿರಪರಿಚಿತವಾಗಿರುವ ಸಂಗತಿ.

ಆದರೆ ಮತ್ತೊಂದು ವರ್ಗದ ಜನರುಂಟು. ಅವರು ಒಳ್ಳೆಯ ಕೆಲಸದಲ್ಲಿ ಏಕೆ ಮುಳುಗುತ್ತಾರೆಂದರೆ, ಅದು ಅವರ ಸ್ವಭಾವವೆಂದೇ ಹೇಳಬೇಕು. ಅಲ್ಲಿ ಎಲ್ಲರ ಹಿತಚಿಂತನೆ, ಪರಿಸರದ ಕಲ್ಯಾಣ ಪ್ರಧಾನವಾಗುತ್ತದೆ. ಒಂದು ರೀತಿಯಲ್ಲಿ ತಮ್ಮ ಸ್ವಂತ ಕೆಲಸಗಳನ್ನೇ ಬದಿ ಗೊತ್ತಿ, ಸರ್ವರ ಸುಖದಲ್ಲಿ ತಮ್ಮ ವ್ಯಕ್ತಿತ್ವದ ವಿಕಸನ ವನ್ನು ಕಂಡುಕೊಳ್ಳುವವರು. ಎಷ್ಟೇ ಅಡಚಣೆಗಳು ಬರಲಿ, ಎದುರಾಗಲಿ, ಯಾವುದಕ್ಕೂ ಎದೆಗುಂದದೆ, ಏಕಾಗ್ರಚಿತ್ತದಿಂದ ಹಿಡಿದ ಕೆಲಸವನ್ನು ಕೊನೆತನಕ ಗುರಿತಲುಪಿಸುವವರೆಗೆ ಪೂರೈಸಬಲ್ಲವರು. ಈ ವರ್ಗ ದವರ—ಬಹಳ ಕಡಿಮೆ ಪ್ರಮಾಣದಲ್ಲಿ ಸಿಗುವ ಜನರು-ಮತ್ತೊಂದು ವಿಶಿಷ್ಟ ಗುಣವೆಂದರೆ ಆತ್ಮ ಸಮರ್ಪಣಾ ಭಾವ. ಶ್ರೀ ನಾರಾಯಣ ಅವರು ಈ ಸಾಲಿನಲ್ಲಿ ಸೇರ ತಕ್ಕವರೆಂದು ಧಾರಾಳವಾಗಿ ಹೇಳಬಹುದು. ಅವರನ್ನು ಕಂಡಿರುವ ಯಾರಿಗೂ ಈ ಮಾತು ಸತ್ಯ.

ಶ್ರೀ ನಾರಾಯಣ ಅವರ ಸಾರ್ವಜನಿಕ ಸೇವೆ ಸುಮಾರು ನಾಲ್ಕು ದಶಕಗಳ ಕಾಲ-ಕಿರಿದಾಗಿ ಪ್ರಾರಂಭ ವಾದರೂ, ಮುನ್ನಡೆದಂತೆಲ್ಲಾ ನಿರ್ದಿಷ್ಟ ಧೋರಣೆ ಧ್ಯೇಯಗಳಿಂದ ಪುಷ್ಟಿಗೊಂಡು, ಬಹುತೇಕವಾಗಿ ವ್ಯಾಪಿಸಿ, ಸಾಫಲ್ಯ ಜೀವನಕ್ಕೆ ಸ್ಪಷ್ಟ ನಿದರ್ಶನದಂತಿದೆ. ಅದರಲ್ಲಿ ನಾವು ಕಾಣುವ ಗುಣವೆಂದರೆ ವೈವಿಧ್ಯಮಯತೆ-ಆದರೆ ಎಂದೂ ಜನರ ಹಿತಸಾಧನೆ, ಆದರ್ಶಪೂರ್ಣ ನಿಟ್ಟಿನ ನಿಲುವು, ಕಾರ್ಯತನ್ಮಯತೆ ಹಾಗೂ ನಿಃಸ್ವಾರ್ಥ ಮನೋಧರ್ಮ ಶ್ರೀ ನಾರಾಯಣ ಅವರ ಹೃನ್ಮನಗಳಲ್ಲಿ

ಬೆಸತುಹೋಗಿವೆ. ಇದು ಅವರು ಬೆಳೆದಿರುವ ರೀತಿ. ಶ್ರೀ ನಾರಾಯಣ ಅವರನ್ನು ಕಂಡಾಗಲೆಲ್ಲಾ ಒಂದು ಪ್ರಾಮಾಣಿಕ ಸಂದೇಹ ನನಗೆ ಬರುತ್ತದೆ. ಅಂದರೆ ಇವರು ಸಂಸಾರಿಯೆ ? ಎಂದು. (ಈ ಮಾತನ್ನು ಯಾರೂ ಹಗುರವಾಗಿ ಹಾಗೆಲ್ಲ ಭಾವಿಸಬಾರದು.) ಪ್ರಾಸಂಗಿಕ ವಾಗಿಯಾದರೂ ಅವರು ತಮ್ಮ ಸ್ವಂತ ಗೃಹಸ್ಥಾಶ್ರಮದ ವಿಚಾರವನ್ನು ಎಂದೂ ಪ್ರಸ್ತಾಪಿಸಿದವರಲ್ಲ. ಯಾವೊತ್ತೂ ತಮ್ಮ ವೈಯಕ್ತಿಕ ಕಷ್ಟ ಕಾರ್ಪಣ್ಯಗಳ, ಜಂಜಾಟ ಬವಣೆಗಳ ವಿಷಯವನ್ನು ಕೇವಲ ಆಕಸ್ಮಿಕವಾಗಿ ಯಾದರೂ ಬಯಲು ಮಾಡುವವರಲ್ಲ. ಆದರೂ ಯಾವು ದಾದರೊಂದು ಚಿಂತನಶೀಲ ಗುಂಗಿನಲ್ಲೇ ಅವರ ಮನಸ್ಸು ತುಯ್ದಾಡುತ್ತಿರುತ್ತದೆ. ಅದು ಯಾವಾಗಲೂ ಸಾರ್ವ ಜನಿಕ ಜೀವನ ಕ್ಷೇತ್ರಕ್ಕೆ ಸಂಬಂಧಿಸಿರುತ್ತದೆ ಎಂಬುದನ್ನು ಅವರ ಜೊತೆ ನಾಲ್ಕು ಮಾತುಕತೆ ಮುಂದುವರಿಸಿದಾಗ ಯಾರಿಗೂ ಮನವರಿಕೆಯಾಗದಿರದು.

ಮದ್ದೂರು ತಾಲ್ಲೋಕು ದೇಶಹಳ್ಳಿಯಲ್ಲಿ ಜನಿಸಿದ ಶ್ರೀ ನಾರಾಯಣ ಅವರು ಬೆಂಗಳೂರಿನ ಕಡೆ ಕಾಲಿಟ್ಟ ಕಾಲ ತುಂಬ ಅರ್ಥಪೂರ್ಣ. ಬಹುಶಃ ಅವರ ಜೀವನಕ್ಕೆ ನಿರ್ದಿಷ್ಟ ಚಲನೆ, ತಿರುವು ಉದ್ದೇಶದ ಅನ್ವೇ ಷಣೆ ಸಿಕ್ಕಿದ್ದು ಆಗಲೇ ಎಂದೂ ಹೇಳಬಹುದು. ಅದು ಜರುಗಿದುದು ಅವರು ಕಾಂಗ್ರೆಸ್ ಸ್ವಯಂಸೇವಕನಾಗಿ ಸೇರಬೇಕೆಂಬ 1939ರಲ್ಲಿ ತೆಗೆದುಕೊಂಡ ತೀರ್ಮಾನ. ಸ್ವಾತಂತ್ರ್ಯದ ಆಂದೋಲನದ ಕರೆಗೆ, ಗಾಂಧೀಜಿಯ ವಾಣಿಗೆ ಅಂದು ಓಗೊಟ್ಟು ರಾಜಕೀಯದಲ್ಲಿ ಪ್ರವೇಶಿಸಿ ದವರ ಸಂಖ್ಯೆ ವಿರಳವೇನಿಲ್ಲ. ಗಾಂಧಿವಾದಕ್ಕೆ ತಮ್ಮನ್ನೇ ಅರ್ಪಿಸಿಕೊಂಡು ಪ್ರತಿಜ್ಞೆ ವಿಧಿ ಮುಗಿಸಿ, ಕಲ್ಯಾಣ ಕಾರ್ಯಗಳಿಗೆ ಕಾಲ ಕ್ರಮೇಣದಲ್ಲಿ ಮಹಾ ಮಂಗ ಳಾರತಿ ಹಾಡಿದವರಿಗೂ ಕೊರತೆಯೇನಿಲ್ಲ. ಆದರೆ ಶ್ರೀ ನಾರಾಯಣ ಅವರು ಇಟ್ಟ ಹೆಜ್ಜೆ, ಆತ್ಮಘಾತುಕ ಹೆಜ್ಜೆ ಯಲ್ಲ. ಗಾಂಧಿ ತತ್ವಕ್ಕೆ ವಿರುದ್ಧವಾದುದಲ್ಲ. ಅಳಲಿನ ರೀತಿಯಲ್ಲಿ ತಮ್ಮ ಸೇವೆ, ಎಂಬ ವಿನಮ್ರ ಭಾವವನ್ನು ಮೈಗೂಡಿಸಿಕೊಂಡು, ವಿಶುದ್ಧವಾದ ಬಾಳ್ವೆಯನ್ನು ಸಾಗಿಸಿಕೊಂಡು ಮುನ್ನಡೆದಿದ್ದಾರೆ. ಹಾಗೆಯೇ ಅದು ಮುಂದುವರಿಯಲಿ. ಉಡುಪು ಊಟೋಪಚಾರದಲ್ಲಿ, ಸರಳತೆ ಸಂಯಮದಲ್ಲಿ, ಎಲ್ಲಾ ವಿಚಾರ ವಿನಿಮಯ ವಿನ್ಯಾಸ ವಿಧಾನಗಳಲ್ಲಿ ಶ್ರೀ ನಾರಾಯಣ ಅವರು ವ್ಯಕ್ತ ಪಡಿಸುವ ಗುಣಗಳು ಆದರ್ಶಪ್ರಾಯ ಸೇವಾಕರ್ತರಾ ವರಿಗೆ ಇರಬೇಕಾದವಾಗಿವೆ. ಅಹಂ, ಸ್ವಪ್ರತಿಷ್ಠೆ ಅವರಲ್ಲಿ ಸ್ಥಾನಸಿಗದು. ಹಾಗೆಂದ ಮಾತ್ರಕ್ಕೆ ಹಿತ್ತಾ ಕಿವಿಯಂತೆ ತಮ್ಮನ್ನೇ ನಿವೇದಿಸಿಕೊಂಡು ಕಾಯ ನಿರ್ವಹಣೆಯ ಸಮಯದಲ್ಲಿ ತಮ್ಮ ವ್ಯಕ್ತಿತ್ವಕ್ಕೆ ತಿಲಾಂಜಲಿಯನ್ನಿತ್ತವರೂ ಅಲ್ಲ. ಒಂದು ಹದದಲ್ಲಿ ಮಿತದಲ್ಲಿ ಕೆಲವೊಂದು ಸೂಕ್ತ ವಿಚಾರವನ್ನು ಸಮನ್ವಯ ಗೊಳಿಸಿಕೊಂಡು ತಮ್ಮ ಸಮಾಜ ಸೇವೆಯನ್ನು ಸತತ ವಾಗಿ ಮಾಡುತ್ತಾ ನಡೆದಿದ್ದಾರೆ. ಇದು ನಿಜಕ್ಕೂ ಗಣ ನೀಯ. ಬೆಂಗಳೂರು ನಗರದ ಕಾರ್ಪೊರೇಶನ್‌ನಲ್ಲಿ ಸದಸ್ಯರಾಗಿ, ಅನಂತರ ಮೇಯರ್ ಸ್ಥಾನಕ್ಕೇರಿ ಶ್ರೀ ನಾರಾಯಣ ಅವರು ತಮ್ಮ ನಿಃಸ್ವಾರ್ಥ ಕಾರ್ಯ ಕೌಶಲ, ದಕ್ಷತೆ ಹಾಗೂ ವಿವೇಕ ವಿವೇಚನೆಗಳನ್ನು ಸಾದರಪಡಿಸಿದ್ದಾರೆ. ಅವರು ಮೇಯರ್ ಆಗಿದ್ದ ಅವಧಿ ಯಲ್ಲಿ ತಮ್ಮ ಸ್ವಂತಕ್ಕೆ ಯಾವ ಅನುಕೂಲವನ್ನೂ ಪಡೆದುಕೊಂಡವರಲ್ಲ ಎಂಬುದು ಹೆಚ್ಚಿನ ದಾಖಲೆ. ಕಾರ್ಪೊರೇಶನ್ ಕಛೇರಿಯಲ್ಲಿ ತುಂಬ ಸುಧಾರಿಸಿದ ಆಡಳಿತದ ವ್ಯವಸ್ಥೆಗೂ ಅವರೇ ಕಾರಣರು. ಕೇವಲ ನಿಸ್ಪೃಹತೆ ಪ್ರಾಮಾಣಿಕತೆಯಿಂದಲೇ ಬೃಹತ್ ಸಾಧನೆ ಯಾಗುವುದಿಲ್ಲ. ಜೊತೆಜೊತೆಗೆ ಕ್ರಿಯಾತ್ಮಕ ಕಲ್ಪನೆ ಹಾಗೂ ಸಂಘಟನಾಶಕ್ತಿ ಅತ್ಯಾವಶ್ಯಕ. ಈ ಎಲ್ಲದರ ಮಿಲನವೇ ಅವರು ವಹಿಸಿದ ಕರ್ತವ್ಯ, ಕಾರ್ಯಗತಗೊಳಿ ಸಿದ ಕಾವೇರಿ ನೀರಿನ ಯೋಜನೆ, ಹಂತ ಹಂತವಾಗಿ ನಗರ ನಾಗರೀಕರಿಗೆ ಅದರ ಪೂರೈಕೆ. ದೈತ್ಯಾಕಾರವಾಗಿ ಬೆಳೆಯುತ್ತಿರುವ ಬೆಂಗಳೂರು ನಗರದಲ್ಲಿ ಅಗತ್ಯಪೂರ್ವಕ ಸೌಕರ್ಯ ಸೌಲಭ್ಯಗಳ ಪಟ್ಟಿಮಾಡಿ, ಅವುಗಳನ್ನು ಯಾವ ಪ್ರಮಾಣದಲ್ಲಿ, ಎಷ್ಟು ಕಾಲದಲ್ಲಿ ನಿರ್ವಹಿಸಬಹು ದೆಂಬ ನಕಾಸೆಯನ್ನು ಸಿದ್ಧಪಡಿಸಿದವರೂ ಶ್ರೀ ನಾರಾ ಯಣರೇ. ಅವರಲ್ಲಿ ವ್ಯಾವಹಾರಿಕ ಬುದ್ಧಿ ಚತುರತೆ ಸಾಕಷ್ಟಿದೆ.

ಶ್ರೀ ನಾರಾಯಣ ಅವರು ಕನ್ನಡ ಅಭಿಮಾನಿ ಯಷ್ಟೇ ಅಲ್ಲ, ಅದು ಅವರ ಬದುಕಿನ ಆಸ್ಥೆ, ಜೀವಾಳ, ಅಂತಃಸತ್ವ. ಆ ದಿಶೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಅವರಿಗಾಗಿಯೇ ಕಾದಿದ್ದು, ಕೈ ಬೀಸಿ ಕರೆಯುತ್ತಿತ್ತು. ಒಂದು ರೀತಿಯಲ್ಲಿ ಸಾಂಪ್ರದಾಯಕ ಜಡತ್ವ ಪಡೆದಿದ್ದ ಪರಿಷತ್ತಿಗೆ ಶ್ರೀ ನಾರಾಯಣ ಅವರು ಅಧ್ಯಕ್ಷರಾಗಿ

ಸ್ಫೂರ್ತಿದಾಯಕ ಚಿಲುಮೆಯಂತೆ, ಸೃಷ್ಟ್ಯಾತ್ಮಕ ಶೀಲ ರಾದರು. ಕನ್ನಡ ಭಾಷೆ, ಬೆಳವಣಿಗೆ ಅದರ ಅಭಿವೃದ್ಧಿ ಗೆಂದು ಇಡೀ ಕರ್ನಾಟಕಕ್ಕೇ ಅನ್ವಯವಾಗುವಂತಹ ಯೋಜನೆಯನ್ನು ಹಾಕಿಕೊಂಡು ಹಲವಾರು ಶಾಖೆ ಉಪ ಶಾಖೆಗಳನ್ನು ನಿರ್ಮಿಸಿದರು. ಅಭಿಜಾತ ಕನ್ನಡ ಕೃತಿಗಳನ್ನು ಪರಿಷತ್ತಿನ ಮುಖಾಂತರ ಪುನರ್ ಮುದ್ರಣ, ಹೊಸ ವ್ಯಾಖ್ಯಾನ, ಗ್ರಂಥ ಸಂಪಾದನೆ ಇತ್ಯಾದಿ ಬಹು ಮುಖ್ಯ ಕೆಲಸಗಳನ್ನು ಯಶಸ್ವಿಯಾಗಿಸಲು ಮೂಲಕರ್ತ ರಾದರು. ಭಾಷೆ ಜೊತೆಗೆ ಅನೇಕ ಸಂಸ್ಕೃತಿ ಕಾರ್ಯ ಪ್ರಣಾಳಿಕೆಗಳನ್ನೂ, ಉತ್ಸವಗಳನ್ನೂ ಅಳವಡಿಸಿಕೊಂಡು ಪ್ರಚಾರ ಕಾರ್ಯಕ್ಕೂ ಒತ್ತುಕೊಟ್ಟರು. ಸರ್ಕಾರ ದಿಂದ ಹೇರಳವಾಗಿ ಧನ ಸಹಾಯ ಸಿಗತೊಡಗಿದುದು ಶ್ರೀ ನಾರಾಯಣ ಅವರ ಕಾಲದಲ್ಲೇ ಎಂದು ಹೇಳ ಬೇಕು. ರಚನಾತ್ಮಕ ಕೆಲಸಗಳು ಪರಿಷತ್ತಿನಲ್ಲಿ ಆಗು ತ್ತಿರುವುದನ್ನು ಸರ್ಕಾರ ಗಮನಿಸದೇ ಇರಲು ಸಾಧ್ಯ ವಿರಲಿಲ್ಲ. ಕನ್ನಡ ಸಾಹಿತ್ಯ ಪರಿಷತ್ತಿನ ವಜ್ರ ಮಹೋತ್ಸವ ಸಮಾವೇಶ ಎಷ್ಟು ನಿಜಕ್ಕೂ ಶ್ಲಾಘನೀಯ! ಎಂತಹ ಮೆಚ್ಚುವಂತಹ ಕಟ್ಟಡಗಳು, ಭವನಗಳು ಆಗ ಎದ್ದುನಿಂತವು ! ಏನು ಗ್ರಂಥ ಭಂಡಾರ ಸಂಗ್ರಹ ! ಎಷ್ಟು ಪುಸ್ತಕಗಳ ಪ್ರಕಟಣೆಗಳು ! ಉಪನ್ಯಾಸ, ಗೋಷ್ಠಿ ಚರ್ಚಾಕೂಟಗಳು ! ನೆರೆ ರಾಜ್ಯಗಳಿಂದ, ಬೇರೆ ಪ್ರದೇಶ ಗಳಿಂದ ಸಾಹಿತಿಗಳ ಸಮ್ಮಿಲನ, ಸನ್ಮಾನ ! ವೈಭವದ ಕಾಲ ಅದು. ಹಾಗೆಯೇ ಕನ್ನಡ ಸಾಹಿತ್ಯ ಪರಿಷತ್ತು ಕಣ್ಣು ಕೋರೈಸುವಂತೆ ವಿಜೃಂಭಿಸಿದುದೂ ಶ್ರೀ ನಾರಾಯಣ ಅವರು ಅಲ್ಲಿ ಅಧ್ಯಕ್ಷರಾಗಿದ್ದಾಗಲೇ ಎಂದು ನಿಸ್ಸಂಕೋಚವಾಗಿ ಉಲ್ಲೇಖಿಸಬಹುದು.

ಶ್ರೀ ನಾರಾಯಣರು ಮಾಡಿದ ಕೆಲಸದ ಬಗ್ಗೆ ಸಾಕಷ್ಟು ಟೀಕೆ ಟಿಪ್ಪಣಿಗಳು ಇಲ್ಲದೇ ಇರಲಿಲ್ಲ. ಆದರೆ ಅವರು ಯಾವುದಕ್ಕೂ ಎದೆಗುಂದದೆ ನಿಭಾಯಿಸಿದರು. ಮತ್ತೊಂದು ಬಹಳ ಮುಖ್ಯವಾದ ಅಗತ್ಯ ವಿಚಾರ- ಕನ್ನಡ ಸಾಹಿತ್ಯ ಪರಿಷತ್ತಿನ ಕಡೆ ಎಲ್ಲರ ಕಣ್ಣು ತಿರು ಗಿದ್ದೂ ಶ್ರೀ ನಾರಾಯಣರ ಕಾಲದಲ್ಲೇ. ಪರಿಷತ್ತಿನಲ್ಲಿ ಅಧಿಕಾರವಿದೆ, ಮೇಲಾಗಿ ಸರ್ಕಾರದ ಧನಸಹಾಯ ತಪ್ಪದೆ ಸುರಿಯುತ್ತದೆ. ಆದಕಾರಣ ನಾವೇಕೆ ಪ್ರವೇ ಶಿಸಿ, ಸೇವೆ ಸಲ್ಲಿಸಬಾರದು ಎಂಬ ಹೆಬ್ಬಯಕೆ ಅನೇಕರಲ್ಲಿ ಬಂದದ್ದೂ ಅದೇ ಸನ್ನಿವೇಶದಲ್ಲಿ! ಶ್ರೀ ನಾರಾಯಣ ಅವರು ಸೂಕ್ಷ್ಮಮತಿ. ಇನ್ನು ಮುಂದೆ ಈ ಹೋರಾಟದ ರಾಜಕೀಯದಲ್ಲಿ ತಾವು ಮುಂದುವರಿಯುವುದು ತರವಲ್ಲ ವೆಂದು ಅರಿತು, ಅವರು ಮೌನವಾಗಿ ಪರಿಷತ್ತಿನ ಸಹ ವಾಸದಿಂದ ವಿಮುಕ್ತರಾದರು. ಸಾಹಿತಿಗಳ ನಡುವೆ ಅವರು ಕಲಿತಿರುವ ಪಾಠವನ್ನು ಒಂದು ಗ್ರಂಥರಚನೆಗೆ ಏಕೆ ಶ್ರೀ ನಾರಾಯಣರು ಬಳಸಿಕೊಳ್ಳಬಾರದು ? ಎಂದು ಆಶಿಸುತ್ತೇನೆ. ಅವರಿಗೆ ಬರೆಯುವ ಶಕ್ತಿ ಇದೆ, ಆದರೂ ಅದರ ಬಗ್ಗೆ ಅಷ್ಟು ಉತ್ಸಾಹಿತರಲ್ಲ ಎಂದೇ ನನ್ನ ಭಾವನೆ, ಇರಲಿ.

ಜನಪ್ರಿಯತೆ ಗಳಿಸಬೇಕೆಂಬ ಆಶೆಯಿಂದ ಶ್ರೀ ನಾರಾಯಣರು ಎಂದೂ ಘನತೆ ಗೌರವವನ್ನು, ಸ್ವಾಭಿ ಮಾನವನ್ನು ಬಲಿಗೊಟ್ಟವರಲ್ಲ. ಬ್ಯಾಂಕ್, ಸಹಕಾರ ಸಂಘ, ವಿದ್ಯಾಸಂಸ್ಥೆ, ವಿಶ್ವವಿದ್ಯಾನಿಲಯದ ಸೆನೆಟ್ ಸದಸ್ಯತ್ವ ಹಲವಾರು ಸಂಘ ಸಂಸ್ಥೆಗಳಿಗೆ ನೈತಿಕ ನೆರವು ಬೆಂಬಲ ಒತ್ತಾಸೆ ನೀಡಿಕೊಂಡು ಬಂದಿದ್ದರೂ ಶ್ರೀ ನಾರಾಯಣರು ಯಾವುದಕ್ಕೂ ಅಂಟಿಕೊಂಡಿಲ್ಲ. ಈ ದೃಷ್ಟಿಯಿಂದ ಅವಲೋಕಿಸಿದಾಗ ಶ್ರೀ ನಾರಾಯಣರ ತ್ಯಾಗಶೀಲತೆ ಎದ್ದು ಕಾಣುತ್ತದೆ. ಈಗಲೂ ಸಾಮಾಜಿಕ ಸೇವೆಯಿಂದ ದೂರವಿರಬೇಕೆಂದು ಬಯಸುವ ಜೀವವಲ್ಲ ಅವರದು. ತಮಗೆ ಸರಿ ಎಂದು ತೋರಿಬಂದರೆ ಈಗಲೂ ಅದರಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾರೆ. ಅದು ಅವರ ಜಾಯಮಾನಕ್ಕೆ ಅಂಟಿಕೊಂಡು ಬಂದ ಒಂದು ವಿಶಿಷ್ಟಗುಣ. ಕಾಯಕದಲ್ಲಿ ಅವರಿಗೆ ಅಪಾರ ವಿಶ್ವಾಸ, ಮಮತೆ.

ಆಡು ಮಾತು ಕನ್ನಡ, ಶ್ರೀ ನಾರಾಯಣ ಅವರಿಗೆ ಚೆನ್ನಾಗಿ ಕರತಲಾಮಲಕವಾಗಿದೆ. ಈ 'ದೇಶಿ' ಕನ್ನಡ ಅವರಲ್ಲಿ ಸ್ಫುಟಗೊಳ್ಳುತ್ತದೆ. ಭಾಷಣ, ಸಂಭಾಷಣೆ, ಚರ್ಚೆಯಲ್ಲಿ ಶ್ರೀ ಗೋರೂರು ರಾಮಸ್ವಾಮಿ ಐಯ್ಯಂ ಗಾರ್ ಮತ್ತು ಶ್ರೀ ಎಚ್ ಎಲ್. ನಾಗೇಗೌಡರ ಮಾದರಿ ಯದು. ಎಂತಹ ಸಮಾರಂಭವೇ ಆಗಲಿ ಪಂಡಿತರಲ್ಲದೆ ಪಾಮರರಿಗೆಲ್ಲಾ ಚೆನ್ನಾಗಿ ಗ್ರಹಿಕೆಯಾಗುವ ರೀತಿಯಲ್ಲಿ ಮಾತನಾಡುತ್ತಾ ಕೇಳುವವರ ಗಮನವನ್ನು ಸೆಳೆಯು ತ್ತಾರೆ. ಅಲ್ಲಿ ಉತ್ಪ್ರೇಕ್ಷೆ ಇಲ್ಲ, ವಿಚಾರ ಮಥನವಷ್ಟೆ.

ವಿನೋದಕ್ಕೆ ಶ್ರೀ ನಾರಾಯಣ ಅವರು ಪ್ರಾಶಸ್ತ್ಯ ಕೊಡುವುದುಂಟು. ಅದಕ್ಕೇ ಲಾಭರಹಿತವಾದ

"ವಿನೋದ" ಮಾಸಪತ್ರಿಕೆಯನ್ನು ಸುಮಾರು ಮೂರು ದಶಕಗಳಿಂದಲೂ ನಡೆಸಿಕೊಂಡುಬಂದಿರುವುದು. ಇದೂ ಒಂದು ಸಮಾಜಸೇವೆ ಎಂದೇ ಹೇಳಬಹುದು. ("ಕೊರವಂಜಿ" ಕಣ್ಮರೆಯಾದ ಮೇಲೆ "ವಿನೋದ" ಒಂದೇ ಏಕಾಂಗಿಯಾಗಿ ಉಳಿದಿರುವುದು) ಅದನ್ನು ಪ್ರೋತ್ಸಾಹಿಸುವುದು ನಮ್ಮೆಲ್ಲರ ಹೊಣೆ ಹಾಗೂ ಜವಾಬ್ದಾರಿಯ ಕೆಲಸ.

ಸುಮಾರು ನಾಲ್ಕು ದಶಕಗಳ ಸಾರ್ವಜನಿಕ ಕ್ಷೇತ್ರದಲ್ಲಿ ಶ್ರೀ ನಾರಾಯಣ ಅವರು ಎಷ್ಟು ವರ್ಗ, ಹಿನ್ನೆಲೆ ವೈವಿಧ್ಯಮಯ ಜನರೊಡನೆ ಬೆರೆತು, ಬದುಕಿನಲ್ಲಿ ಪಕ್ವತೆ ಗಳಿಸಿದ್ದಾರೆಂಬುದನ್ನು ತಿಳಿಯಬೇಕಾದರೆ ಅವರೊಡನೇ ಮಾತಾಡಿ ತಿಳಿಯಬೇಕು. ಒಳ್ಳೆಯದನ್ನು ಯಾವೊತ್ತೂ ಮೆಚ್ಚುವ ನಾರಾಯಣರು, ಕ್ಷುಲ್ಲಕ ವ್ಯಕ್ತಿಗಳ ವಿಚಾರವಾಗಿಯೂ ಬಹಳ ಉದಾರವಾಗಿ ನಡೆದುಕೊಳ್ಳುತ್ತಾರೆ. ಕಹಿನುಡಿ, ಕುಚೋದ್ಯದ ಸಿಡಿ ಮಾತು, ವ್ಯಂಗ್ಯ, ಪರಿಹಾಸ್ಯ ಇತ್ಯಾದಿಯನ್ನು ತಮ್ಮ ಶತ್ರುಗಳಿಗೂ ಅನ್ವಯಿ
ಹೇಳದಿರುವಷ್ಟು ಸುಸಂಸ್ಕೃತರು ಶ್ರೀ ನಾರಾಯಣ

ನಾಲ್ಕಾರು ವರ್ಷಗಳಲ್ಲಿ ಎಷ್ಟು ಸನ್ಮಾನ ಸಮಾರಂ
ಗಳು ಶ್ರೀ ನಾರಾಯಣರ ನೇತೃತ್ವದಲ್ಲಿ ನಡೆದಿವೆ ಎಂ
ನೆನೆದರೆ ನಿಜಕ್ಕೂ ಆಶ್ಚರ್ಯವಾಗುತ್ತದೆ; ಯಾ
ಯಾರು ಸನ್ಮಾನಗೊಂಡಿದ್ದಾರೆ-ಹೌದು, ಶ್ರೀ
ನಾರಾಯಣರು ಆ ವಿಷಯದಲ್ಲಿ ಬಹಳ ಆಸಕ್ತಿ ವಹಿಸಿ
ವುದು ಅಕ್ಷರಶಃ ನಿಜ. ಎಷ್ಟು ಅಭಿನಂದನ ಗ್ರಂಥಗಳ
ತಪ್ಪಲವಾಗಿ!

ಈಗ ಶ್ರೀ ನಾರಾಯಣರಿಗೆ ಅಭಿನಂದನ ಸಮಾ
ರಂಭ. ಅರವತ್ತು ವರ್ಷದ ಅವರ ಆಯುಷ್ಯಕ್ಕೆ ಒಂದ
ನೆನಪಿನ ಘಟನಾವಳಿ. ಆ ದೃಷ್ಟಿಯಿಂದ ವಿಮರ್ಶಿ
ದಾಗ ಶ್ರೀ ನಾರಾಯಣ ಅವರಿಗೆ ಈ ಸಂದರ್ಭ
ಯಥೋಚಿತವಾಗಿದೆ, ಯೋಗ್ಯಪೂರ್ಣವಾಗಿದೆ. ಇದರಲ್ಲಿ
ಪಾಲ್ಗೊಳ್ಳುತ್ತಿರುವ ನನಗೂ ಅಷ್ಟೇ ಆನಂದವೂ ಉಂಟು
ಖಂಡಿತವಾಗಿಯೂ.

ವಯಸ್ಕರ ಶಿಕ್ಷಣ

ನಾರಾಯಣರ ಪ್ರಿಯವಾದ, ಆತ್ಮೀಯವಾದ ವಿಷಯಗಳಲ್ಲಿ ವಯಸ್ಕರ ಶಿಕ್ಷಣ ಒಂದು. ಅವರ ದೃಷ್ಟಿಯಲ್ಲಿ ಇಂದು ಈ ದೇಶದ ಅಳಿವು-ಉಳಿವಿಗೆ ಇದೊಂದೇ ಮಾರ್ಗ. ಈ ವಿಷಯದಲ್ಲಿ ಪ್ರಗತಿಯ ಬಗ್ಗೆ ಅವರಿಗಿರುವ ಕಳಕಳಿ ಅಪಾರ. ಇಡೀ ದೇಶದ ದೃಷ್ಟಿ ಈ ದಿಶೆಯಲ್ಲಿ ಹರಿಯಬೇಕೆನ್ನುವುದು ಅವರ ಅಭಿಮತ. ಇದಕ್ಕಾಗಿ ಪುಸ್ತಕಗಳನ್ನು ಬರೆದು ಈ ಬಗ್ಗೆ ಯೋಜನೆಗಳನ್ನು ತಯಾರಿಸಿರುವ ನಾರಾಯಣರು, ಇಂದಿನ ರಾಜಕೀಯ ಪರಿಸರದಲ್ಲೂ ಈ ಬಗ್ಗೆ ಆಶಾವಾದಿ.

ನಾರಾಯಣ ಅವರ ಪೌರಸೇವೆ

ಮ. ಫಜ್ಲುಲ್ ಹಸನ್

ನಾರಾಯಣ ಅಲ್ಲಿಂದಾಚೆ ಮೈಲಿಗಟ್ಟಲೆ ಪ್ರಯಾಣ ಮಾಡಿದರು. ಸಾರ್ವಜನಿಕ ಸೇವೆಯ ಹೆದ್ದಾರಿ ನಾರಾಯಣ ಅಂತಹವರಿಗಾಗಿ ಕಾದಿರುತ್ತದೆಯೇನೊ! ಅನಂತರ ಅವರು ಅವಿಚ್ಛಿನ್ನವಾಗಿ 9 ವರ್ಷಗಳ ಪರ್ಯಂತ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಸಾರ್ಥಕ ಸೇವೆ ಸಲ್ಲಿಸಿದರು.

"ಎದ್ದು ನಿಂತ ಯಲಹಂಕ ಭೂಪ!" "ಬಿದ್ದು ಹೋದ ಬ್ರಿಟಿಷ್ ಸ್ಮಾರಕ!"

ಪ್ರಜಾವಾಣಿ, ಸಾಪ್ತಾಹಿಕ ಪುರವಣಿ, ೧೯೬೪ರ ನವೆಂಬರ್ ದಿನಾಂಕ ೧ರ ಮುಖಪುಟದಲ್ಲಿ, ಮೇಲಿನ ಎರಡು ಶೀರ್ಷಿಕೆಗಳು ಓದುಗರ ಮನಸ್ಸನ್ನು ಸೆಳೆದವು.

ಅದೇ ದಿನ, ಮುಂಜಾನೆ ಶುಭಮುಹೂರ್ತದಲ್ಲಿ ಮದ್ರಾಸಿನ ಅಂದಿನ ರಾಜ್ಯಪಾಲ ಶ್ರೀ ಜಯಚಾಮರಾಜ ಒಡೆಯರರು ನಗರಸಭಾ ಕಾರ್ಯಾಲಯದ ಮುಂದಿರುವ ಪುಟ್ಟ ಉದ್ಯಾನವನದಲ್ಲಿ ಬೆಂಗಳೂರು ನಿರ್ಮಾಪಕ ಕೆಂಪೇಗೌಡರ ಪ್ರತಿಮೆಯನ್ನು, ಮಂಗಳವಾದ್ಯಗಳ ಹಿನ್ನೆಲೆಯ ಆಕರ್ಷಕ ಸಮಾರಂಭದಲ್ಲಿ ಅನಾವರಣ ಮಾಡಿದರು. ಈ ಸಮಾರಂಭಕ್ಕೆ ಕೇವಲ ಮೂರು ದಿನಗಳ ಹಿಂದೆ ಪ್ರತಿಮೆಯ ಮುಂದಿದ್ದ ರಣಸ್ತಂಭ (ಸೆನೆಟಾಫ್) ಮಣ್ಣು ಪಾಲಾಯಿತು. ೪೦ ಅಡಿ ಉದ್ದವಿದ್ದು, ಒಂದು ಕಾಲು ಶತಮಾನದಿಂದಲೂ ನಿಂತಿದ್ದ ಈ ಸ್ಮಾರಕ ೧೭೯೧ರ ಬೆಂಗಳೂರಿನ ಕದನದಲ್ಲಿ ಮೈಸೂರು ಸೈನ್ಯಕ್ಕೆ ಉಂಟಾದ ಪರಾಭವದ ಸಂಕೇತವೂ, ಚಾರಿತ್ರಿಕ ಸಾಕ್ಷ್ಯವೂ ಆಗಿತ್ತು. ಬೀಳಿಸಲು ಕಾರಣ, ಅದು ಪ್ರತಿಮೆಯ ನೇರ ದೃಷ್ಟಿಗೆ ಅಡ್ಡಲಾಗಿತ್ತು.

ಕೆಂಪೇಗೌಡರ ಪ್ರತಿಮೆಯ ಅನಾವರಣ ಹಾಗೂ ಬ್ರಿಟಿಷ್ ಸ್ಮಾರಕದ ಅಳಿವು ಬೆಂಗಳೂರು ನಗರಪಾಲಿಕೆಯ ಆಳ್ವಿಕೆಯಲ್ಲಿ ಸ್ಮರಣೀಯ ಕಾರ್ಯ ಕಲಾಪಗಳು. ಇವುಗಳ ಸೂತ್ರಧಾರ ಅಂದು ಬೆಂಗಳೂರು ನಗರದ ಮೇಯರ್ ಆಗಿದ್ದ ಜಿ. ನಾರಾಯಣ!

ಜಿ. ನಾರಾಯಣ ಸಾಮಾನ್ಯ ವ್ಯಕ್ತಿ. ಅವರ ಆತ್ಮೀಯತೆ, ಸಜ್ಜನಿಕೆ, ಸಂಯಮ ಮತ್ತು ಮಾತಿನ ಗಾಂಭೀರ್ಯದಿಂದ ಮಾತ್ರ ಅವರ ವ್ಯಕ್ತಿತ್ವವನ್ನು ಅಳೆದರೆ ನಾಣ್ಯದ ಒಂದು ಮುಖವನ್ನು ನೋಡಿಕೊಂಡಂತೆ ಆದೀತು. ಏಕೆಂದರೆ, ಈ ಸಾಧಾರಣ ವ್ಯಕ್ತಿಯಲ್ಲಿ ಒಂದು ಅಪೂರ್ವ ಶಕ್ತಿಯೂ ಅಡಗಿದೆ. ಧೃಡ ಸಂಕಲ್ಪ, ಸರಿ ಎನಿಸಿದ ಕೆಲಸವನ್ನು ಬಿಡದ ಛಲ, ಅದನ್ನು ಕಾರ್ಯರೂಪಕ್ಕೆ ತರುವ ಸಂಧಾನ ಚತುರತೆ ನಾರಾಯಣ ಅವರ ಹುಟ್ಟು ಗುಣ.

ಬೆಂಗಳೂರಿನ ಎರಡು ಪುರಸಭೆಗಳು ೧೯೪೮ರಲ್ಲಿ ವಿಲೀನಗೊಂಡು "ಬೆಂಗಳೂರು ನಗರ ಪಾಲಿಕೆ" ಅಸ್ತಿತ್ವಕ್ಕೆ ಬಂದಿತು. ಆಗ ನಗರದ ವಿಸ್ತೀರ್ಣ ೨೮ ಚದರ ಮೈಲಿಗಳು. ಚುನಾಯಿತ ಪ್ರತಿನಿಧಿಗಳಿಗೆ ಇದ್ದ ಅಧಿಕಾರ ತೀರಾ ಕಡಿಮೆ. ವರಮಾನವೂ ಕಡಿಮೆ. ಆದರೆ ನಾಗರಿಕರಿಗೆ ಒದಗಿಸಬೇಕಾದ ಪೌರ ಸೌಲಭ್ಯಗಳು ಅಪಾರವಾಗಿದ್ದವು.

ದೇಶಹಳ್ಳಿ ಜಿ. ನಾರಾಯಣ ೧೯೫೮ರಲ್ಲಿ ಮೊದಲನೇ ಬಾರಿ ಚಾಮರಾಜಪೇಟೆ ಕ್ಷೇತ್ರದಿಂದ ಚುನಾಯಿತರಾದಾಗ ೩೩ ವರ್ಷಗಳ ಉತ್ಸಾಹಿ ತರುಣ. ಮುಂದೆ, ೭ ವರ್ಷಗಳ ಪರ್ಯಂತ ಅವರು ನಗರ ಪಾಲಿಕೆಗೆ ಅವಿಚ್ಛಿನ್ನ ಸೇವೆ ಸಲ್ಲಿಸಿದರು. ಈ ಅವಧಿಯಲ್ಲಿ ಅವರು ಒಂದು ವರ್ಷ ಆರೋಗ್ಯ ಸ್ಥಾಯೀ ಸಮಿತಿಯ ಸದಸ್ಯರಾಗಿಯೂ ನಾಲ್ಕು ವರ್ಷ ಕಾಮಗಾರಿಕೆ ಸ್ಥಾಯೀ ಸಂಸ್ಥೆಯ ಅಧ್ಯಕ್ಷರಾಗಿಯೂ ಒಂದು ವರ್ಷ (೧೯೬೩) ಆಡಳಿತ ಪಕ್ಷದ ನಾಯಕರಾಗಿಯೂ ಮತ್ತು ೧೯೬೪ರಲ್ಲಿ ಬೆಂಗಳೂರು ನಗರ ಪಾಲಿಕೆಯ ಮೇಯರ್ ಆಗಿಯೂ ಕೆಲಸ ಮಾಡಿದ್ದಾರೆ. ಅವರ ಪೌರಸೇವೆಯನ್ನು ಸ್ಮರಿಸಿದರೆ ಅವರ ಕಾರ್ಯತತ್ಪರತೆ ಹಾಗೂ ನಾಯಕ ಗುಣಗಳನ್ನು ತಿಳಿದುಕೊಳ್ಳದೆ ಇರಲಾಗದು.

ಈ ಶತಮಾನದ ಆರನೇ ದಶಕದಲ್ಲಿ ಬೆಂಗಳೂರಿನ ಜನಸಂಖ್ಯೆಯು ಜಾಸ್ತಿಯಾಗತೊಡಗಿತು. ನಗರದ ವಿಸ್ತೀರ್ಣವೂ ಅಪಾರವಾಗಿ ಬೆಳೆಯತೊಡಗಿತು. ಇದುವರೆಗೆ ಬೆಂಗಳೂರಿಗೆ ನೀರು ಸರಬರಾಜು ಮಾಡುತ್ತಿದ್ದ ಹೆಸರಘಟ್ಟ ಮತ್ತು ತಿಪ್ಪಗೊಂಡನಹಳ್ಳಿಯ ಜಲಾಶಯಗಳು ನಗರದ ನೀರಿನ ಬೇಡಿಕೆಯನ್ನು ಪೂರೈಸಲು ಸಾಲದಾದವು. ಬೇಸಿಗೆಯಲ್ಲಿ ನಾಗರೀಕರು ಕುಡಿಯುವ ನೀರಿಗಾಗಿ ಪೇಚಾಡುತ್ತಿದ್ದರು. ದಿನೇ ದಿನೇ ಬೆಂಗಳೂರಿನ ನೀರಿನ ದಾಹ ಹೆಚ್ಚುತ್ತಲಿತ್ತು. ಇದರಿಂದಾಗಿ ನಗರಕ್ಕೆ ಕಾವೇರಿಯ ನೀರು ಸರಬರಾಜು ಇಲ್ಲದ ಹೊರತು ಬೇರೆ ಮಾರ್ಗವಿಲ್ಲವೆಂದು ನಗರ ಪಿತೃಗಳು ಪ್ರತಿಪಾದಿಸತೊಡಗಿದರು. ಆದರೆ, ಸಂಬಂಧಪಟ್ಟ ಕುಬ್ಜ ಇಂಜಿನೀರುಗಳ ಸೃಷ್ಟಿಯಲ್ಲಿ, ಸಮುದ್ರ ಮಟ್ಟಕ್ಕಿಂತ ೩೧೧೩ ಅಡಿ ಎತ್ತರವಿರುವ ಬೆಂಗಳೂರಿಗೆ ಕಾವೇರಿಯಿಂದ ನೀರು ಸರಬರಾಜು ಮಾಡುವುದು ಅಸಾಧ್ಯವಾಗಿತ್ತು. ಅದಕ್ಕಾಗಿ ಅವರು ಹಳ್ಳಿಮಾಲ ಮತ್ತು ಶಿಂಷಾ ನೀರು ಸರಬರಾಜು ಯೋಜನೆಗಳನ್ನು ತಯಾರು ಮಾಡಿದ್ದರು. ಈ ಯೋಜನೆಗಳನ್ನು ಕಾರ್ಯಗತ ಮಾಡಲು ಸರ್ಕಾರವೂ ನಿರ್ಧಾರಕ್ಕೆ ಬಂದಿತ್ತು. ಆದರೆ ೧೯೬೩ ರಲ್ಲಿ ಪ್ರಧಾನ ಮಂತ್ರಿ ಪಂಡಿತ್ ಜವಾಹರಲಾಲ್ ನೆಹರು ಅವರು ಬೆಂಗಳೂರಿಗೆ ಬಂದಿದ್ದಾಗ್ಯೆ ನಗರ ಪಿತೃಗಳ ಈ ಬೇಡಿಕೆಯನ್ನು ಸಹಾನುಭೂತಿಯಿಂದ ಪರಿಶೀಲಿಸಿ ತಮ್ಮ ಕೈಲಾದ ಮಟ್ಟಿಗೆ ಸಹಾಯ ಮಾಡುವುದಾಗಿ ಮಾತುಕೊಟ್ಟರು. ಆದರೂ ಸರ್ಕಾರ ಕಾವೇರಿ ನದಿ ಯೋಜನೆಯನ್ನು ಕೈಗೊಳ್ಳದೆ ಕಾಲ ವಿಳಂಬ ಮಾಡಿತು.

ಇದೀಗ ನಗರ ಪಿತೃಗಳ ಸಹನೆ ನಿಲ್ಲದಾಯಿತು. ಟಿ. ಆರ್. ಶಾಮಣ್ಣ, ವಿ. ಎಸ್. ಕೃಷ್ಣ ಅಯ್ಯರ್ ಮತ್ತು ಜಿ. ನಾರಾಯಣ ಅವರ ನೇತೃತ್ವದಲ್ಲಿ ಅವರು "ಬೆಂಗಳೂರಿಗೆ ಕಾವೇರಿ ನೀರು ಬೇಕೇ ಬೇಕು" ಎಂದು ಚಳವಳಿ ನಡೆಸಿದರು. ಆಗ ಸರ್ಕಾರ ಹಳ್ಳಿಮಾಲ ಮತ್ತು ಶಿಂಷಾ ಯೋಜನೆಗಳನ್ನು ಕೈಬಿಟ್ಟಿತು. ನಗರಕ್ಕೆ ಕಾವೇರಿ ನೀರು ಸರಬರಾಜಿನ ಯೋಜನೆ ರೂಪಗೊಂಡು ಅದರ ಉದ್ಘಾಟನೆ ನಡೆದದ್ದು ಜಿ. ನಾರಾಯಣ ಮೇಯರ್ ಆಗಿದ್ದಾಗ. ೧೯೬೪ರ ಮೇ ಮಾಹೆಯ ೨೧ನೇ ದಿನ ಜಿ. ನಾರಾಯಣ ಅವರ ಪೌರಸೇವೆಗೆ ಮುಕುಟಪ್ರಾಯದ ದಿನ. ಅಂದು, ಬಸವನಗುಡಿಯ ಕೃಷ್ಣರಾವ್ ಪಾರ್ಕಿನಲ್ಲಿ, ಕೇಂದ್ರ ಸರ್ಕಾರದ ಖಾತೆ ರಹಿತ ಮಂತ್ರಿ ಲಾಲ್ ಬಹದ್ದೂರ್ ಶಾಸ್ತ್ರಿಯವರು ಕಾವೇರಿ ನೀರು ಮತ್ತು ಒಳಚರಂಡಿ ವ್ಯವಸ್ಥೆಯ ಯೋಜನೆಯ ಉದ್ಘಾಟನೆಯ ಸಮಾರಂಭವನ್ನು ನೆರವೇರಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಅಂದಿನ ಕಾಂಗ್ರೆಸ್ ಅಧ್ಯಕ್ಷ ಕಾಮರಾಜ ನಾಡಾರ್ ಅವರು ವಹಿಸಿದ್ದರು.

ಕಾವೇರಿ ನೀರು ಸರಬರಾಜಿನ ಯಮಳ ಯೋಜನೆಯಾಗಿ ಒಳಚರಂಡಿ ವ್ಯವಸ್ಥೆಯೂ ಇತ್ತು. ಈ ಕಾರ್ಯಗತಕ್ಕೆ ಸೀಮಿತವಾದ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯೂ ರೂಪಗೊಂಡದ್ದು ಜಿ. ನಾರಾಯಣ ಅವರು ಮೇಯರ್ ಆಗಿದ್ದಾಗಲೇ. ಈ ಮಂಡಲಿಯ ಉದ್ಘಾಟನೆಯನ್ನು ಅಂದಿನ ಮುಖ್ಯಮಂತ್ರಿ

ನಿಜಲಿಂಗಪ್ಪನವರು ಮೇಯೋ ಹಾಲ್ ಸಭಾಂಗಣದಲ್ಲಿ ೧೯೬೪ರ ಅಕ್ಟೋಬರ್ ೭ರಂದು ನೆರವೇರಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಪಾಮಡಿ ಸುಬ್ಬರಾಮ ಶೆಟ್ಟಿಯವರು ವಹಿಸಿದ್ದರು. ಆಗ ಮೇಯರ್ ನಾರಾಯಣ ಅವರು ಬೆಂಗಳೂರು ನಾಗರಿಕರ ಪರವಾಗಿ ಸರ್ಕಾರಕ್ಕೆ ಕೃತಜ್ಞತೆಗಳನ್ನು ಅರ್ಪಿಸಿದರು.

ಬೆಂಗಳೂರು ದಿನೇ ದಿನೇ ವಿಸ್ತಾರವಾದಂತೆ ವಾಹನ ಸಂಚಾರವೂ ಹೆಚ್ಚಾಯಿತು. ಇದರಿಂದ ನಗರ ರಸ್ತೆಗಳ ಮೇಲೆ ಒತ್ತಡ ಹೆಚ್ಚಾಗಿ ಅವು ಶಿಥಿಲವಾಗತೊಡಗಿದವು. ಕಾಮಗಾರಿಕೆ ಸ್ಥಾಯೀ ಸಮಿತಿಯ ಅಧ್ಯಕ್ಷರಾಗಿ ಕಾರ್ಯ ವಹಿಸಿದ ನಾಲ್ಕು ವರುಷಗಳ ಅವಧಿಯಲ್ಲಿ ಅವರು "ಬೆಂಗಳೂರಿಗೆ ಉತ್ತಮ ರಸ್ತೆಗಳು" ಎಂಬ ಯೋಜನೆಯನ್ನು ಜಾರಿಗೆ ತಂದರು. ಆಗ ನಗರದ ಒಳ ಭಾಗದಲ್ಲಿ 360 ಮೈಲಿ ಉದ್ದದ ರಸ್ತೆಗಳಿದ್ದವು. ಅವುಗಳಲ್ಲಿ ಟಾರು ಹೊದಿಕೆಯ ರಸ್ತೆಗಳ ಉದ್ದ 250 ಮೈಲಿಗಳು. ಅರ್ಧ ಕೋಟಿ ರೂಪಾಯಿ ವೆಚ್ಚದ ಈ ಯೋಜನೆ ಕಾರ್ಯಗತವಾಗಲು ಎರಡು ವರುಷಗಳ ಅವಧಿ ಮೀಸಲಾಗಿತ್ತು. ಇದಕ್ಕೆ ತಗಲುವ ಅರ್ಧಭಾಗ ಹಣ ಸರ್ಕಾರದಿಂದ ಗ್ರಾಂಟಿನ ರೂಪವಾಗಿಯೂ ಇನ್ನರ್ಧ ಭಾಗ ವಾಹನ ತೆರಿಗೆಯಿಂದ ವಸೂಲಾದ ಹಣದಿಂದ ಸಾಲದ ರೂಪವಾಗಿಯೂ ಇರಬೇಕೆಂದು ಯೋಜಿಸಲಾಗಿತ್ತು. ಟಾರಿನ ಬದಲಾಗಿ 112 ಮೈಲಿ ರಸ್ತೆಗಳಿಗೆ ಷಲ್‌ಕ್ರೀಟ್ ಮಾಡುವುದಾಗಿ ಇತ್ತು. ಜೊತೆಗೆ ನಗರದ ಒಳಚರಂಡಿ ಮತ್ತು ನೀರಿನ ಸರಬರಾಜು ಕೊಳವೆಗಳನ್ನು ತೆಗೆದು ಅವುಗಳ ಬದಲು ಅಗಲವಾದ ಕೊಳವೆಗಳನ್ನು ಅಳವಡಿಸುವುದೂ, ನಗರದ ಮುಖ್ಯ ರಸ್ತೆಗಳನ್ನು ಅಗಲ ಮಾಡುವುದೂ ಮತ್ತು 10 ಲಕ್ಷ ರೂಪಾಯಿ ಖರ್ಚಿನಿಂದ ರಸ್ತೆಗಳ ಇಕ್ಕೆಲಗಳಲ್ಲಿ ಫುಟ್ಪಪಥಗಳನ್ನು (foot paths) ನಿರ್ಮಿಸುವುದೂ ಯೋಜನೆಯ ಗುರಿಯಾಗಿದ್ದಿತು. ಈ ಯೋಜನೆ, ಕಾಲಕ್ಕೆ ಸರಿಯಾಗಿ ಕಾರ್ಯಗತವಾದದ್ದು ನಾರಾಯಣ ಅವರ ಜಾಣ್ಮೆಗೆ ನಿದರ್ಶನವಾಗಿದೆ. ಜೊತೆಗೆ ಈ ಯೋಜನೆಯು ಸಮಯೋಚಿತವಾಗಿತ್ತು. ಮುಂದೆ ಒದಗಿದ ಅಪಾರ ಒತ್ತಡವನ್ನು ಬೆಂಗಳೂರಿನ ರಸ್ತೆಗಳು ಸಹಿಸಿದವು.

ಜಿ. ನಾರಾಯಣರ ಸಮಗ್ರ ಪೌರ ಸೇವೆಯ ಸಿಂಹಾವಲೋಕನದಿಂದ ಕಾಣಬರುವ ಮುಖ್ಯ ಅಂಶವೆಂದರೆ, ಅಧಿಕಾರಿಗಳ ಜೊತೆ ವಿಚಾರ ವಿನಿಮಯ, ಸಮಜಾಯಿಶಿ ಮತ್ತು ಸಂಧಾನ ಚತುರತೆ. ಇರುವ ಅಧಿಕಾರದಲ್ಲೇ ಕೆಲಸ ಮಾಡಿಸಿ ನಾಗರಿಕರಿಗೆ ಸೇವೆ ಸಲ್ಲಿಸುವ ಮನೋಭಾವ. ಅವರ ಈ ನಿಲುವಿಗೆ ಕಾರಣವಿಲ್ಲದಿರಲಿಲ್ಲ.

ನಿಜವಾಗಿ ಹೇಳಬೇಕಾದರೆ ನಗರಪಾಲಿಕೆಯ ಆಡಳಿತದಲ್ಲಿ ಚುನಾಯಿತ ಪ್ರತಿನಿಧಿಗಳಿಗೆ ಇರುವ ಅಧಿಕಾರ ತೀರಾ ಅಲ್ಪ. ಹೆಚ್ಚು ಅಧಿಕಾರ ಪಡೆಯಲು ಅನೇಕ ವರ್ಷಗಳಿಂದ ನಗರ ಪಿತೃಗಳು ಅಧಿಕಾರ ವಿಕೇಂದ್ರೀಕರಣದ ಮಾಯಾಮೃಗದ ಬೆನ್ನು ಹತ್ತಿಯೇ ಇದ್ದರು. ಸರ್ಕಾರವೂ ಅಧಿಕಾರ ವಿಕೇಂದ್ರೀಕರಣದ ಗಾಳಿಗೋಪುರವನ್ನು ಕಟ್ಟಿಯೇ ಇತ್ತು. ಹೀಗಾಗಿ, ನಗರ ಪಿತೃಗಳ ಪಾಲಿಗೆ ನಿಜವಾದ ಅಧಿಕಾರ ಬಳಸಲಾಗದ ದೂರದ ಬಿಸಿಲ್ಗುದುರೆಯಾಗಿತ್ತು. ಆದರೆ ಜಿ. ನಾರಾಯಣ ತಾವು ಸ್ಥಾಯೀ ಸಮಿತಿಯ ಅಧ್ಯಕ್ಷರಾಗಿದ್ದಾಗ ಹಾಗೂ ಬೆಂಗಳೂರಿನ ಮೇಯರ್ ಆಗಿದ್ದಾಗ ಬಹು ಜಾಣತನದಿಂದ ನಾಗರಿಕರಿಗೆ ಒದಗಬೇಕಾದ ಪೌರಸೌಲಭ್ಯಗಳನ್ನು ಒದಗಿಸಿಕೊಟ್ಟರು. ಯಾವ ಕೆಲಸ ಮಾಡಬೇಕಾಗಿದ್ದಾಗಲೂ ನಗರ ಪಾಲಿಕೆಯ ಮುಖ್ಯ ಅಧಿಕಾರಿಗಳನ್ನು ತಮ್ಮ ಕೋಣೆಗೆ ಬರಮಾಡಿಕೊಂಡು ಮಾತುಕತೆ ನಡೆಸಿ, ಅವರ ಕಾರ್ಯನಿರ್ವಹಣೆಯಲ್ಲಿ ಒದಗಬಹುದಾದ ಕಷ್ಟನಷ್ಟಗಳನ್ನು ಪರಿಶೀಲಿಸಿ ಅವರಿಗೆ ಉತ್ತೇಜನ ಕೊಡುವುದು ನಾರಾಯಣ ಅವರ ಕಾರ್ಯವಿಧಾನವಾಗಿತ್ತು. ಇದರಿಂದಾಗಿ, ಹೆಚ್ಚು ಅಧಿಕಾರವಿಲ್ಲದಿದ್ದರೂ ಚುನಾಯಿತ ಪ್ರತಿನಿಧಿಗಳು ತಮ್ಮ ಕೆಲಸ ಕಾರ್ಯಗಳ ಕ್ಷಿತಿಜವನ್ನು ವಿಸ್ತಾರಗೊಳಿಸಲು ಅವರು ಮಾರ್ಗದರ್ಶಕರಾದರು.

ಈಗಿರುವ ಹಾಗೆ ಪುರ ಪ್ರತಿನಿಧಿಗಳಿಗೆ ಆಗ ಯಾವ ಸಂಭಾವನೆಯೂ ಸಿಕ್ಕುತ್ತಿರಲಿಲ್ಲ. ಸಾರ್ವಜನಿಕ ಕ್ಷೇತ್ರದಲ್ಲಿ ನಿಷ್ಕಳಂಕ ಜೀವನ, ನಿಸ್ವಾರ್ಥ ಸೇವೆ ಜಿ. ನಾರಾಯಣ ಅವರ ಪೌರಸೇವೆಯ ವೈಶಿಷ್ಟ್ಯವಾಗಿತ್ತು.

ಕನ್ನಡಾಭಿಮಾನಿ ನಾರಾಯಣ ನಗರ ಕಾರ್ಪೊರೇಷನ್ನಿನಲ್ಲೂ ಕನ್ನಡ ಸೇವೆಗೆ ಅವಕಾಶ ಕಲ್ಪಿಸಿಕೊಂಡರು. 1962 ರಲ್ಲಿ ವಿ. ಎಸ್. ಕೃಷ್ಣಯ್ಯರ್ ಅವರು ಮೇಯರ್ ಆಗಿದ್ದಾಗ, ಕನ್ನಡವು ನಗರಪಾಲಿಕೆಯ

ಆಡಳಿತ ಭಾಷೆಯಾಗಲು ಕಾರಣಕರ್ತರಾದರು. ಅದಕ್ಕೂ ಮುಂಚೆ ಹಾರ್ಡಿಂಜ್ ರಸ್ತೆಯನ್ನು ಪಂಪಮಹಾಕವಿ ರಸ್ತೆಯಾಗಿಯೂ, ಸೆನೆಟಾಫ್ ರಸ್ತೆಯನ್ನು ನೃಪತುಂಗ ರಸ್ತೆಯಾಗಿಯೂ ನಾಮಕರಣ ಮಾಡಲು ಮುಂದಾಳತ್ವ ವಹಿಸಿದರು.

ನಾರಾಯಣ ಅವರ ಮೇಯರ್ ಅಧಿಕಾರಾವಧಿಯ ಕೊನೆಯದಿನ ಹೃದಯಸ್ಪರ್ಶಿಯಾಗಿತ್ತು. ತಾವು ನೋಡಬೇಕಾದ ಕೊನೆಯ ಫೈಲಿಗೆ ಸಹಿಮಾಡಿದ ನಂತರ ತಮ್ಮನ್ನು ಕಾಣಲುಬಂದ ಸಹೋದ್ಯೋಗಿಗಳು, ಅಧಿಕಾರಿಗಳು ಹಾಗೂ ಪೌರ ಪ್ರಮುಖರೊಡನೆ ಆತ್ಮೀಯ ಬೀಳ್ಕೊಡುಗೆ. ಮುಂದಿನ ಚುನಾವಣೆ ಸನ್ನಿಹಿತವಾಗಿದ್ದುರಿಂದ ನಗರ ಪಾಲಿಕೆಯ ಎಲ್ಲಾ ಸದಸ್ಯರಿಗೂ ಅದೇ ಕೊನೆಯ ದಿನವಾಗಿತ್ತು. ಕಚೇರಿಯ ವೇಳೆ ಮುಗಿದ ನಂತರ ತಮ್ಮ ಕೋಣೆಯಿಂದ ಹೊರ ಬಂದರು ನಾರಾಯಣ. ಇದೀಗ ಅವರು ಮತ್ತೊಮ್ಮೆ ಬೆಂಗಳೂರಿನ ಒಬ್ಬ ಸಾಮಾನ್ಯ ಪ್ರಜೆಯಾಗಿದ್ದರು. ಮೆಟ್ಟಲು ಇಳಿದು ಅವರು ಪೋರ್ಟಿಕೋ ಬಳಿ ಬಂದಾಗ ಮೇಯರ್ ಅವರ ಕಾರು ಅವರಿಗಾಗಿ ನಿಂತಿತ್ತು. ಜವಾನ ಕಾರಿನ ಬಾಗಿಲು ತೆಗೆದ. ಆದರೆ, ಆವೇಳೆ ನಾರಾಯಣ ಅವರ ದೃಷ್ಟಿ ಬೇರೆ ಕಡೆ ಹರಿದಿತ್ತು. ಅಂಗಳದಲ್ಲಿ ಗುಂಪು ಗುಂಪಾಗಿ ನಿಂತಿದ್ದ ನಾಲ್ಕನೇ ದರ್ಜೆ ನೌಕರರನ್ನು ಕಂಡ ನಾರಾಯಣ ಅವರ ಬಳಿ ಸಾಗಿದರು. ಅದೇ ಆತ್ಮೀಯ ಬೀಳ್ಕೊಡುಗೆ. ಸ್ವಲ್ಪ ಹೊತ್ತಾದ ನಂತರ ಅವರಲ್ಲಿ ಒಬ್ಬನನ್ನು ಕರೆದು ಏನೋ ಹೇಳಿದರು. ಕೂಡಲೇ ಅವನು ಅಲ್ಲಿಂದ ಹೊರಟು ಹೋದ. ತುಸುಹೊತ್ತಿನಲ್ಲಿ ಒಂದು ಆಟೋ ಅವರ ಬಳಿ ಬಂದಿತು. ನಾರಾಯಣ ಅದರಲ್ಲಿ ಕುಳಿತರು. ಆಟೋ ಚಲಿಸತೊಡಗಿತು. ಪೋರ್ಟಿಕೋ ಮೇಲಿನ ಛಾವಣಿಯಲ್ಲಿ ನಿಂತಿದ್ದ ನಾವು ಇವೆಲ್ಲವನ್ನೂ ಬೆರಗುಗಣ್ಣಿನಿಂದ ನೋಡಿದೆವು. ಆಟೋ ಜಯಚಾಮರಾಜ ರಸ್ತೆಯಿಂದ ನಗರ ಭವನದ ಬಳಿ ಕೃಷ್ಣರಾಜ ರಸ್ತೆಗೆ ತಿರುಗಿ ಕಣ್ಮರೆಯಾಗುವವರೆಗೂ ನೋಡಿದೆವು.

ನಾರಾಯಣ ಅಲ್ಲಿಂದಾಚೆ ಮೈಲಿಗಟ್ಟಲೆ ಪ್ರಯಾಣ ಮಾಡಿದರು. ಸಾರ್ವಜನಿಕ ಸೇವೆಯ ಹೆದ್ದಾರಿ ನಾರಾಯಣ ಅಂತಹವರಿಗಾಗಿ ಕಾದಿರುತ್ತದೆಯೇನೊ! ಅನಂತರ ಅವರು ಅವಿಚ್ಛಿನ್ನವಾಗಿ 9 ವರ್ಷಗಳ ಪರ್ಯಂತ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಸಾರ್ಥಕ ಸೇವೆ ಸಲ್ಲಿಸಿದರು.

ವಾಕ್ ಹಾಗೂ ಅಭಿವ್ಯಕ್ತಿ ಸ್ವಾತಂತ್ರ್ಯ, ವ್ಯಕ್ತಿಯು ತನಗೆ ಸರಿಕಂಡ ರೀತಿಯಲ್ಲಿ ದೇವರನ್ನು ಪೂಜಿಸುವ ಸ್ವಾತಂತ್ರ್ಯ, ಆಸೆಗಳಿಂದ ಮುಕ್ತಿ ಪಡೆವ ಸ್ವಾತಂತ್ರ್ಯ, ಭಯದಿಂದ ಮುಕ್ತಿ ಪಡೆವ ಸ್ವಾತಂತ್ರ್ಯ—ಈ ನಾಲ್ಕು ಪ್ರಮುಖ ಸ್ವಾತಂತ್ರ್ಯಗಳು ಪ್ರತಿಯೊಬ್ಬರಿಗೂ ದೊರೆಯಬೇಕು. ಇಂತಹ ಸ್ವಾತಂತ್ರ್ಯಗಳ ತಳಹದಿಯಮೇಲೆ ಸ್ಥಾಪಿತವಾಗಿರುವ ಜಗತ್ತನ್ನು ನಾನು ನಿರೀಕ್ಷಿಸುತ್ತೇನೆ.

—ರೂಸ್‌ವೆಲ್ಟ್

ಜಿ. ನಾರಾಯಣ ಅವರು

ಡಾ|| ಎಂ. ಚಿದಾನಂದಮೂರ್ತಿ

ನಾರಾಯಣ ಅವರಿಗೂ ಕನ್ನಡದ ಯಾವುದೇ ಕಾರ್ಯಕರ್ತರಿಗೂ ಭಿನ್ನಾಭಿಪ್ರಾಯಗಳು ಬರಲು ಸಾಧ್ಯವೇ ಇಲ್ಲ. ಹಾಗೆ ನೋಡಿದರೆ ನಾನು ಒಬ್ಬ ಕನ್ನಡದ ಕಾರ್ಯಕರ್ತನಾಗಿ ಅವರ ಮಾರ್ಗದರ್ಶನವನ್ನು ಬಯಸಿ ಅವರ ಬಳಿ ಹೋಗಿ ಹಲವು ಬಾರಿ ಅವರಿಂದ ಸೂಕ್ತ ಸಲಹೆ ಸಹಕಾರಗಳನ್ನು ಪಡೆದು ಬಂದಿದ್ದೇನೆ.

ಶ್ರೀ ನಾರಾಯಣ ಅವರನ್ನು ನಾನು ಹಲವು ವರ್ಷಗಳಿಂದ ಬಲ್ಲೆ. ಅವರ ಹತ್ತಿರ ಕುಳಿತು ಕನ್ನಡದ ಸಮಸ್ಯೆಗಳನ್ನು ಅವರ ಜೊತೆ ಚರ್ಚಿಸಿದ್ದು ಎಷ್ಟೋ ಬಾರಿ. ಅವರೊಬ್ಬ ಕನ್ನಡದ ಉತ್ತಮ ಕಾರ್ಯಕರ್ತರು. ಕನ್ನಡದ ಬಗ್ಗೆ ನಿಜವಾದ ಪ್ರೀತಿಯನ್ನೂ ಅಭಿಮಾನವನ್ನೂ ಬೆಳೆಸಿಕೊಂಡವರು, ಮತ್ತು ಸಜ್ಜನರು. ಅವರ ಜೊತೆ ಕುಳಿತು ಮಾತನಾಡುವುದು ನನಗೆ ಯಾವಾಗಲೂ ಸಂತೋಷದ ವಿಷಯವೇ.

ಕನ್ನಡವು ಉಳಿಯಬೇಕು. ಕರ್ನಾಟಕದಲ್ಲಿ ಅದು ಆಡಳಿತ ಭಾಷೆಯಾಗಿ ವ್ಯವಹಾರ ಭಾಷೆಯಾಗಿ ಶಿಕ್ಷಣ ಮಾಧ್ಯಮದ ಭಾಷೆಯಾಗಿ ಬೆಳೆಯಬೇಕು; ಕನ್ನಡಿಗರಿಗೆ ಅವರಿಗೆ ದೊರಕಬೇಕಾದ ಪ್ರಮಾಣದಲ್ಲಿ ಹುದ್ದೆಗಳು ದೊರೆಯಬೇಕು; ಅನ್ಯ ಭಾಷೆಯ ಜನರ ಆಕ್ರಮಣ, ಅತಿಕ್ರಮಣ ನಿಲ್ಲಬೇಕು; ಇಲ್ಲೆಲ್ಲ ಶ್ರೀ ನಾರಾಯಣ ಅವರಿಗೂ ಕನ್ನಡದ ಯಾವುದೇ ಕಾರ್ಯಕರ್ತರಿಗೂ ಭಿನ್ನಾಭಿಪ್ರಾಯಗಳು ಬರಲು ಸಾಧ್ಯವೇ ಇಲ್ಲ. ಹಾಗೆ ನೋಡಿದರೆ ನಾನು ಒಬ್ಬ ಕನ್ನಡದ ಕಾರ್ಯಕರ್ತನಾಗಿ ಅವರ ಮಾರ್ಗದರ್ಶನವನ್ನು ಬಯಸಿ ಅವರ ಬಳಿ ಹೋಗಿ ಹಲವು ಬಾರಿ ಅವರಿಂದ ಸೂಕ್ತ ಸಲಹೆ ಸಹಕಾರಗಳನ್ನು ಪಡೆದು ಬಂದಿದ್ದೇನೆ. ಅವರ ಸಂಪರ್ಕ ನನ್ನನ್ನು ಹೆಚ್ಚು ವಿವೇಕಿಯನ್ನಾಗಿ ಮಾಡಿದೆ.

ಕೆಲವು ವಿಷಯಗಳಲ್ಲಿ ಉದ್ದೇಶ ಒಂದೇ ಆಗಿದ್ದರೂ, ಮಾರ್ಗದಲ್ಲಿ ಅವರಿಗೂ ನನಗೂ ಭಿನ್ನಾಭಿಪ್ರಾಯಗಳು ಬಂದುದೂ ಉಂಟು. ಇದು ಲೋಕ ವ್ಯವಹಾರದಲ್ಲಿ ತೀರ ಸ್ವಾಭಾವಿಕ. ಆದರೆ, ಎಂದೂ ಆ ಭಿನ್ನಾಭಿಪ್ರಾಯಗಳು ನಮ್ಮಮಧ್ಯೆ ವಿರಸವನ್ನು ತಂದುಹಾಕಿಲ್ಲ. ಅವರಿಗೆ ಕೆಲವು (ಸಣ್ಣ) ವಿಷಯಗಳಲ್ಲಿ ನನ್ನ ಬಗ್ಗೆ ಬೇಸರ ಇದೆ. ಆದರೆ ಕನ್ನಡದ ಮೇಲೆ ಇರುವ ಪ್ರೀತಿ ನಮ್ಮಿಬ್ಬರನ್ನೂ ಒಂದು ಮಾಡಿದೆ. ಭಿನ್ನಾಭಿಪ್ರಾಯಗಳನ್ನು ಉಳಿಸಿಕೊಂಡೂ ಸ್ನೇಹವನ್ನು ಕಳೆದುಕೊಳ್ಳದಿರುವುದು ಅಪರೂಪವಾಗುತ್ತಿರುವ ಇಂದಿನ ದಿನಗಳಲ್ಲಿ ನಾವು—ನಮ್ಮ ಅದೃಷ್ಟ—ಅದನ್ನು ತಕ್ಕಮಟ್ಟಿಗೆ ಸಾಧಿಸಿದ್ದೇವೆ.

ಶ್ರೀ ಜಿ. ನಾರಾಯಣ ಅವರು–ಎಲ್ಲ ಕಡೆಗೂ ಕನ್ನಡ ಹಿನ್ನಡೆ ಸಾಧಿಸುತ್ತಿರುವ ಇಂದಿನ ಕೆಟ್ಟ ದಿನಗಳಲ್ಲಿ ಮನಸ್ಸು ಮಾಡಿದರೆ, ಕನ್ನಡದ ಅಭಿವೃದ್ಧಿ ಕಾರ್ಯದಲ್ಲಿ ಪ್ರಮುಖ ಪಾತ್ರ ವಹಿಸಬಲ್ಲರೆಂಬ ವಿಶ್ವಾಸ ನನಗಿದೆ.

ಅದ್ಭುತ ಕಾರ್ಯಶಕ್ತಿಯ ಅಪರೂಪದ ವ್ಯಕ್ತಿ

ಚನ್ನವೀರ ಕಣವಿ

ಜಿ. ನಾರಾಯಣ ಅವರು ಅಧ್ಯಕ್ಷರಾಗಿದ್ದ ಒಂದುದಶಕದ ಅವಧಿಯಲ್ಲಿ ಪರಿಷತ್ತಿನ ಪ್ರಯೋಜನವನ್ನು ಸಮಗ್ರ ಕರ್ನಾಟಕಕ್ಕೆ ಒದಗುವಂತೆ ಮಾಡುವಲ್ಲಿ ಅವರು ತಮ್ಮ ಎಲ್ಲ ಕಾಲವನ್ನು, ಶಕ್ತಿಯನ್ನು ಅದಕ್ಕೆ ಧಾರೆಯೆರೆದದ್ದು ಪರಿಷತ್ತಿನ ಇತಿಹಾಸದಲ್ಲಿಯೇ ಒಂದು ಅಪೂರ್ವ ಸಾಧನೆಯೆಂದರೆ ತಪ್ಪಾಗದು.

ಪಂಡಿತರತ್ನಂ ಬಿ. ಶಿವಮೂರ್ತಿಶಾಸ್ತ್ರಿಗಳು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದಾಗ ಆಜೀವ ಸದಸ್ಯರ ಸಂಖ್ಯೆಯನ್ನು ಹೆಚ್ಚಿಸಲು ಸಾಕಷ್ಟು ಪ್ರಯತ್ನ ಪಟ್ಟರು. ಆ ಸಂದರ್ಭದಲ್ಲಿ ಅಂದರೆ, ೧೯೫೭ರಲ್ಲಿ ನಾನು ಪರಿಷತ್ತಿನ ಆಜೀವ ಸದಸ್ಯನಾದೆ. ಧಾರವಾಡದಲ್ಲಿ, ೩೯ನೇ ಕನ್ನಡ ಸಾಹಿತ್ಯ ಸಮ್ಮೇಳನ ೧೯೫೭ರಲ್ಲಿ ಶ್ರೀ ಕುವೆಂಪು ಅವರ ಅಧ್ಯಕ್ಷತೆಯಲ್ಲಿ ನೆರವೇರಿದಾಗ ಆ ಸಮ್ಮೇಳನದ ಪ್ರಧಾನ ಕಾರ್ಯದರ್ಶಿಯಾಗಿ ಕೆಲಸ ಮಾಡುವ ಅವಕಾಶ ನನಗೆ ಒದಗಿದ್ದಿತು. ಅಂದಿನಿಂದ ಸಾಹಿತ್ಯ ಪರಿಷತ್ತಿನ ಕಾರ್ಯಕಲಾಪಗಳ ಜೊತೆಗೆ ನನ್ನ ಸಂಬಂಧ ಬೆಳೆದು ಬಂದಿತು. ಅದಕ್ಕೂ ಮೊದಲು ಮೈಸೂರಿನಲ್ಲಿ ಶ್ರೀ ಕಾರಂತರ ಅಧ್ಯಕ್ಷತೆಯಲ್ಲಿ ನಡೆದ ಸಾಹಿತ್ಯ ಸಮ್ಮೇಳನದ ಸಾಹಿತ್ಯಗೋಷ್ಠಿ ಹಾಗೂ ಕವಿ ಸಮ್ಮೇಳನದಲ್ಲಿ ನಾನು ಭಾಗವಹಿಸಿದ್ದೆ.

ಶ್ರೀ ಜಿ. ನಾರಾಯಣರ ಪರಿಚಯ ನನಗಾದದ್ದು ೧೯೭೪ರಲ್ಲಿ, ಅವರು ಪರಿಷತ್ತಿನ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಲು ಪ್ರಾರಂಭಿಸಿದ ಮೇಲೆ. ಅವರನ್ನು ಮೊದಲ ಸಲ ಕಂಡು ಮಾತನಾಡಿದಾಗ, ಅವರ ಸಾದಾ ಖಾದಿ ವೇಷಭೂಷಣದಲ್ಲಿ, ಸೌಮ್ಯನಗೆಯ, ಒಲಿದು ಒಲಿಸಿಕೊಳ್ಳುವ ರೀತಿಯಲ್ಲಿ ಗಾಂಧಿಮಾರ್ಗದ ನಿಷ್ಠಾವಂತ ಕಾರ್ಯಕರ್ತನೊಬ್ಬನ ನಿರಾಡಂಬರ ವ್ಯಕ್ತಿತ್ವ ಗೋಚರಿಸಿತು. ನೋಡಲು ವಾಮನಮೂರ್ತಿಯಂತಿದ್ದ ಅವರು ಬೆಂಗಳೂರು ನಗರದ ಮಾಜಿ ಮೇಯರರೆಂಬುದನ್ನು ನಂಬಲಿಕ್ಕೂ ಅಸಾಧ್ಯವೆನಿಸಿತು. ಪರಿಷತ್ತಿನ ಹಿಂದಿನ ಅಧ್ಯಕ್ಷರು ಹಾಗೂ ಅವರಲ್ಲಿ ಕೆಲವರಿಗಿದ್ದ ವಿಶಿಷ್ಟವಾದ ಸಾಹಿತ್ಯದ ವ್ಯಕ್ತಿತ್ವವನ್ನು ಕೆಲಮಟ್ಟಿಗೆ ಅರಿತಿದ್ದ ನನಗೆ ಜಿ. ನಾರಾಯಣರ ಬಗ್ಗೆ ಕುತೂಹಲವುಂಟಾಗದೆ ಇರಲಿಲ್ಲ. ಮುಂದೆ ಅಲ್ಪಾವಧಿಯಲ್ಲಿಯೇ ಹಲವಾರು ಹೊಸಹೊಸ ಯೋಜನೆಗಳನ್ನು ಹುಟ್ಟುಹಾಕಿ, ಅವನ್ನು ಫಲಪ್ರದವಾಗಿ ಕಾರ್ಯಗತಗೊಳಿಸುತ್ತ, ಪರಿಷತ್ತಿನ ಕಾರ್ಯವ್ಯಾಪ್ತಿಯನ್ನು ಯಶಸ್ವಿಯಾಗಿ ವಿಸ್ತಾರಗೊಳಿಸುತ್ತ ಸಾಗಿದ ಅವರ ಅದ್ಭುತ ಕಾರ್ಯಶಕ್ತಿಯನ್ನು ಕಂಡು ಅವರ ಬಗ್ಗೆ ನನ್ನಲ್ಲಿ ಸಹಜವಾಗಿ ಅಚ್ಚರಿ, ಆದರ, ಅಭಿಮಾನ ಉಂಟಾದವು.

ಜಿ. ನಾರಾಯಣ ಅವರು ಅಧ್ಯಕ್ಷರಾಗಿದ್ದ ಒಂದು ದಶಕದ ಅವಧಿಯಲ್ಲಿ ಪರಿಷತ್ತಿನ ಪ್ರಯೋಜನವನ್ನು

ಸಮಗ್ರ ಕರ್ನಾಟಕಕ್ಕೆ ಒದಗುವಂತೆ ಮಾಡುವಲ್ಲಿ ಅವರು ತಮ್ಮ ಎಲ್ಲ ಕಾಲವನ್ನು, ಶಕ್ತಿಯನ್ನು ಅದಕ್ಕೆ ಧಾರೆಯೆರೆದದ್ದು ಪರಿಷತ್ತಿನ ಇತಿಹಾಸದಲ್ಲಿಯೇ ಒಂದು ಅಪೂರ್ವ ಸಾಧನೆಯೆಂದರೆ ತಪ್ಪಾಗದು. ತ್ರೈವಾರ್ಷಿಕ ಯೋಜನೆಯ ಮೂಲಕ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ಪರಿಷತ್ತಿನ ಕೇಂದ್ರಗಳ ಸ್ಥಾಪನೆ, ಜಿಲ್ಲಾ ಸಾಹಿತ್ಯ ಸಮ್ಮೇಳನಗಳ ವ್ಯವಸ್ಥೆ, ಆಡಳಿತ ಭಾಷೆಯಾಗಿ ಕನ್ನಡದ ಬಲಪಡಿಸುವಿಕೆ, ಕನ್ನಡೇತರರಿಗೆ ಕನ್ನಡದ ಶಿಕ್ಷಣ, ಹೊರನಾಡಿನಲ್ಲಿ ಕನ್ನಡದ ಪ್ರಚಾರ—ಇದೆಲ್ಲವೂ ಅವರ ಕರ್ತೃತ್ವಶಕ್ತಿಯ ದ್ಯೋತಕವಾಗಿವೆ. ಹಾಗೆಯೇ ಮುಂದೆ ೧೯೭೩ರಿಂದ ಅವರ ಪಾಂಚವಾರ್ಷಿಕ ಯೋಜನೆಯ ಯಶಸ್ಸಿಗೂ ಇದೇ ದಾರಿ ಮಾಡಿಕೊಟ್ಟಿತು. ಕನ್ನಡ ನಾಡಿನ ಒಳಗೂ ಹೊರಗೂ ಎಡೆಬಿಡದೆ ಸಂಚರಿಸಿ ಜನತೆಯನ್ನು, ಬೇರೆಬೇರೆ ಸಂಘ ಸಂಸ್ಥೆಗಳನ್ನು ಪರಿಷತ್ತಿನ ಕಾರ್ಯಕ್ಕೆ ಅವರು ಅಣಿಗೊಳಿಸಿದರು.

ಪರಿಷತ್ತಿನ ಸುವರ್ಣ ಮಹೋತ್ಸವ ಹಾಗೂ ವಜ್ರ ಮಹೋತ್ಸವದ ರಾಷ್ಟ್ರೀಯ ಸ್ವರೂಪದ ಕಾರ್ಯಕ್ರಮಗಳು, ಸುವರ್ಣ ಮಹೋತ್ಸವ ಕಟ್ಟಡ, ಜನಸಾಮಾನ್ಯರಿಗೂ ಎಟುಕಬಲ್ಲ ಬೃಹತ್ ಪ್ರಮಾಣದ ಹಾಗೂ ವೈವಿಧ್ಯ ಪೂರ್ಣವಾದ ಪುಸ್ತಕ ಪ್ರಕಟನೆ, ಜನಪದ ಸಾಹಿತ್ಯ ಮತ್ತು ಕಲೆಗಳ ರಕ್ಷಣೆಗೆ ಅಗತ್ಯವಾದ ಉಪಾಯ ಮತ್ತು ಯೋಜನೆಗಳು—ಹೀಗೆ ಹಲವು ಬಗೆಯ ಕನ್ನಡದ ಕೆಲಸಗಳು ಜಿ. ನಾರಾಯಣರ ಕೈಯಲ್ಲಿ ಸಾರ್ಥಕತೆ ಪಡೆದವು. 'ಚಿನ್ನದ ಬೆಳಸು' 'ಕೌಸ್ತುಭ' ದಂಥ ಅಮೂಲ್ಯವಾದ ಸಂಸ್ಮರಣ ಸಂಪುಟಗಳು ಪ್ರಕಟಗೊಂಡವು. ಭಾರತ ಸ್ವಾತಂತ್ರ್ಯದ ಬೆಳ್ಳಿಹಬ್ಬವನ್ನು ಸಾಹಿತ್ಯಪ್ರಸಾರ ಯೋಜನೆಯಾಗಿ ಆಚರಿಸಿ, ಅದನ್ನು 'ಪುಸ್ತಕ ವರ್ಷ'ಕ್ಕೆ ಸಂಯೋಜಿಸಿ, 'ಪುಸ್ತಕ ಭಾಗ್ಯ' ವನ್ನು ಉಪಯುಕ್ತವಾದ ರೀತಿಯಲ್ಲಿ ಪ್ರಕಟಿಸಿ, ಜಿಲ್ಲೆ ಜಿಲ್ಲೆಗಳಲ್ಲಿ ಪುಸ್ತಕ ಪ್ರದರ್ಶನ ಹಾಗೂ ಮಾರಾಟವನ್ನು ಏರ್ಪಡಿಸಿ—ಒಂದೊಂದನ್ನೂ ಪರಿಷತ್ತಿನ ದಾರಿಯಲ್ಲಿ ಮೈಲುಗಲ್ಲಾಗಿ ನಿಲ್ಲಿಸಿದರು. 'ಪರಿಷತ್ತಿಗೆ ಸಾಕ್ಷಾತ್ ನಾರಾಯಣ ಸ್ವರೂಪದಲ್ಲಿದ್ದಾರೆ ಜಿ. ನಾರಾಯಣ' ಎಂಬ ಶ್ರೀ ಕುವೆಂಪು ಅವರ ಮೆಚ್ಚು ನುಡಿಯಲ್ಲಿ ಆ ತಲೆಮಾರಿನ ಹಿರಿಯರೆಲ್ಲರ ಅನಿಸಿಕೆ ಅಡಗಿದೆ. ತಾವು ಸಾಹಿತಿಗಳೆಂದೂ, ವಿದ್ವಾಂಸರೆಂದೂ ಎಲ್ಲೂ ಹೇಳಿಕೊಳ್ಳದೆ ಇಪ್ಪತ್ತೈದು ವರ್ಷಕ್ಕೂ ಮೇಲ್ಪಟ್ಟು 'ವಿನೋದ' ಪತ್ರಿಕೆಯನ್ನು ತಪ್ಪದೆ ನಡೆಸಿಕೊಂಡು ಬಂದಿರುವ ನಾರಾಯಣರು 'ಸಾಹಿತ್ಯದ ಕಾಳಜಿಯಿಲ್ಲದೆಯೇ ಪರಿಷತ್ತನ್ನು ಬೃಹದಾಕಾರವಾಗಿ ಬೆಳಸಿದರೆ'ಂಬ ಟೀಕೆಯನ್ನು ಹೇಗೆ ನಂಬುವದು ?

ಇವರ ದಕ್ಷತೆ, ಛಲಗಾರಿಕೆ, ಸತತ ಪರಿಶ್ರಮ ಸಾತ್ವಿಕತೆ-ಮೊದಲಾದ ಗುಣಗಳನ್ನು ಮೆಚ್ಚಿಕೊಂಡವರಲ್ಲಿಯೂ ಕೆಲವರಿಗೆ ಇವರ ಈ ಎಲ್ಲ ಕೆಲಸಗಳು, ಸಾಹಿತ್ಯಮೇಳ, ಜಾತ್ರೆ, ರಥೋತ್ಸವವಾಗಿ ಕಂಡವು. ಬದಲಾದ ಪರಿಸರ, ಭಿನ್ನವಾದ ವಾತಾವರಣದಲ್ಲಿ ಪರಿಷತ್ತಿನ ಧ್ಯೇಯ ಧೋರಣೆಗಳಲ್ಲಿ ಬದಲಾವಣೆಯನ್ನು ಬಯಸಿದ ಕೆಲ ಸೃಜನಶೀಲ ಲೇಖಕರ ಆಕ್ರೋಶಕ್ಕೂ ಇವರು ತುತ್ತಾಗಬೇಕಾಯಿತು. ಆದರೆ 'ಇದು ಕೇವಲ ಸಾಹಿತಿಗಳ ಪರಿಷತ್ತಲ್ಲ. ಸಾಹಿತ್ಯದಲ್ಲಿ ಆಸಕ್ತಿ ಇರುವವರೆಲ್ಲರೂ ಇದರಲ್ಲಿ ಪಾಲ್ಗೊಳ್ಳಬೇಕು, ಪರಿಷತ್ತು ಜನತಾ ವಿಶ್ವವಿದ್ಯಾಲಯವಾಗಬೇಕು' ಎಂಬ ಬಿ. ಎಂ. ಶ್ರೀಯವರ ಕನಸನ್ನು ನನಸನ್ನಾಗಿ ಮಾಡುವಲ್ಲಿ ನಾರಾಯಣರು ಪ್ರಾಮಾಣಿಕವಾಗಿ ದಣಿದದ್ದನ್ನು ಯಾರೂ ಅಲ್ಲಗಳೆಯುವಂತಿಲ್ಲ. ಸಾಕಷ್ಟು ಆಡಳಿತದ ಅನುಭವವನ್ನು ಪಡಿದಿದ್ದ ಅವರು ಯಾವುದೇ ಯೋಜನೆಯನ್ನು ಕೈಗೆತ್ತಿಕೊಳ್ಳುವ ಪೂರ್ವದಲ್ಲಿ ಸಾಹಿತ್ಯಜ್ಞರ ಸಲಹೆಯನ್ನು ಪಡೆದುಕೊಂಡೇ ಮುಂದುವರಿಯುತ್ತಿದ್ದರಲ್ಲದೆ ಸರ್ವಾಧಿಕಾರಿಯಂತೆ ಅವರು ಎಂದೂ ನಡೆದುಕೊಳ್ಳಲಿಲ್ಲವೆಂದು ಕೇಳಿದ್ದೇನೆ. ಸರಕಾರದಿಂದ ಹಣ ಪಡೆದ ಮಾತ್ರಕ್ಕೆ ಪರಿಷತ್ತು ಸರಕಾರದ ಅಧೀನ ಕಚೇರಿಯಾಗಬೇಕಿಲ್ಲ ಎಂಬ ಪ್ರಜ್ಞೆಯೂ ಅವರಿಗಿದ್ದಿತು. ಇಂದು ಜೀವನದ ಎಲ್ಲ ಕ್ಷೇತ್ರಗಳಲ್ಲಿಯೂ ರಾಜಕೀಯ ಪ್ರವೇಶ ಮಾಡಿರುವಾಗ, ಪರಿಷತ್ತಿನ ಕೆಲಸಗಳನ್ನು ಪಟ್ಟು ಹಿಡಿದು ಮುಗಿಸಲು ಅವರು ರಾಜಕಾರಣಿಗಳನ್ನು ಅನುಸರಿಸಬೇಕಾಗಿ ಬಂದದ್ದು ಅನಿವಾರ್ಯವಿರಬಹುದು.

ಕನ್ನಡ ಸಾಹಿತ್ಯ ಪರಿಷತ್ತಿನ ಪುರೋಭಿವೃದ್ಧಿಯ ಮೂಲಕ ಜಿ. ನಾರಾಯಣರ ವ್ಯಕ್ತಿತ್ವದ ಹಲವು ಮುಖಗಳು ಇನ್ನಿಷ್ಟು ಪ್ರಕಾಶಗೊಂಡವು. ಅವರು ಆಡದೆ ಮಾಡುತ್ತಾರೆ; ಆಡಿಕೊಳ್ಳುವವರೂ ಅಚ್ಚರಿಗೊಳ್ಳುವಂತೆ ಮಾಡುತ್ತಾರೆ. ಪರಿಷತ್ತು ಹುಟ್ಟಿದ ಕಾಲದಿಂದಲೂ

ಕನ್ನಡ ನುಡಿ, ಸಾಹಿತ್ಯಗಳಿಗಾಗಿ ದುಡಿಯಲು ಯತ್ನಿಸಿದ ದಿ॥ ವಿ. ಸೀ ಯವರು ಅಭಿಪ್ರಾಯಪಟ್ಟಂತೆ ನಾರಾಯಣರ ಅಧಿಕಾರಾವಧಿಯಲ್ಲಿ ಸಾಧಿಸಿರುವ ಕಾರ್ಯ ಮಹತ್ತರ ವಾದದ್ದು. ಪರಿಷತ್ತು ಒಟ್ಟು ನಾಡಿನ ಸಾಹಿತ್ಯಕ್ಕಲ್ಲದೆ ಸಂಸ್ಕೃತಿಯ ಸಾಧನೆ, ಪ್ರಚಾರಗಳಿಗೆ ನೆಲೆಯಾಯಿತು. ಒಂದು ದೌರ್ಭಾಗ್ಯದ ಕಾಲವನ್ನು ನಿವಾರಿಸಿ ಜನ ಸಾಮಾನ್ಯರ ಹೃದಯವನ್ನು ಗೆದ್ದುಕೊಂಡು ಪರಿಷತ್ತಿನ ಸೌಭಾಗ್ಯವನ್ನು ಒಂದು ಅರ್ಥದಲ್ಲಿ ಹೆಚ್ಚಿಸಿದವರು ಜಿ. ನಾರಾಯಣರು. ವಿಧಾಯಕವಾದ ರೀತಿಯಲ್ಲಿ, ವಿಚಾರ ಪೂರ್ಣವಾಗಿ ಸಾರ್ವಜನಿಕ ಸೇವೆಗೆ ತಮ್ಮನ್ನು ಸಮರ್ಪಿಸಿ ಕೊಂಡು, ಒಂದಲ್ಲ ಒಂದು ಕನ್ನಡದ ಕೆಲಸದಲ್ಲಿ ತಮ್ಮನ್ನು ತೊಡಗಿಸಿಕೊಂಡೇ ಇರುವ ಜಿ. ನಾರಾಯಣರಂಥ ಸ್ನೇಹ ಪೂರ್ಣ ನಿರಾಡಂಬರ ವ್ಯಕ್ತಿಗಳು ತೀರ ವಿರಳ. ದಿ. ಟಿ. ಟಿ. ಶರ್ಮಾ ಹಾಗೂ ಡಾ॥ ರಂ. ಶ್ರೀ ಮುಗಳಿಯವರೊಂದಿಗೆ ಶ್ರೀ ಜಿ. ನಾರಾಯಣರು ಪರಿಷತ್ತಿನ ಯಾವುದೋ ಒಂದ ಕೆಲಸಕ್ಕಾಗಿ ಧಾರವಾಡಕ್ಕೆ ಬಂದಾಗ ವಿಶ್ವವಿದ್ಯಾಲಯ ಪ್ರಸಾರಾಂಗದ ಕೆಲವು ಪ್ರಕಟನೆಗಳ ಬಿಡುಗಡೆಯ ಕಾರ್ಯ ಕ್ರಮವನ್ನು ಏರ್ಪಡಿಸಲಾಗಿದ್ದಿತು. ಕರ್ನಾಟಕ ವಿಶ್ವ ವಿದ್ಯಾಲಯದ ತುಂಬು ಆವರಣವನ್ನು ಅದೇ ಮೊದಲ ಕಣ್ತುಂಬ ಕಂಡ ಜಿ. ನಾರಾಯಣರು ತನ್ಮ ಭಾಷಣದಲ್ಲಿ ದಿ॥ ಪಾವಟೆಯವರ ವ್ಯಕ್ತಿತ್ವದ ಹಿರಿಮೆಯನ್ನು ನಾನು ಈಗ ಪೂರ್ಣ ಅರಿಯುವಂತಾಯಿತು' ಎಂದರು. ಒಬ್ಬ ವ್ಯಕ್ತಿಯ ಯೋಗ್ಯತೆಯನ್ನು ಅರಿಯಬೇಕಾದರೂ ಆ ಯೋಗ್ಯತೆಯ ಕೆಲ ಅಂಶಗಳಾದರೂ ನಮ್ಮಲ್ಲಿದ್ದರೆ ಸಾಧ್ಯ ಎಂದು ಹೇಳಲಾಗುತ್ತದೆ. ಅರವತ್ತು ದಾಟಿರುವ, ದಣಿವರಿಯದ ಈ ನಿಷ್ಕಳಂಕ ವ್ಯಕ್ತಿಯ ಅಭಿನಂದನದಲ್ಲಿ ಪಾಲುಗೊಳ್ಳುವ ಈ ಸಂದರ್ಭದಲ್ಲಿ ಮೇಲಿನ ಮಾತನ್ನು ನಾನು ಮತ್ತೆ ಮೆಲುಕು ಹಾಕುವಂತಾಯಿತು.

ಸಭ್ಯಗೃಹಸ್ಥನಾಗಿರುವುದು ಲೇಸು ; ಸುಸಂಸ್ಕೃತ ಬುದ್ಧಿ ಇರುವುದು ಲೇಸು ; ಸೂಕ್ಷ್ಮ ಅಭಿರುಚಿ, ನಿರ್ದಾಕ್ಷಿಣ್ಯ, ಪೂರ್ವಗ್ರಹದೂರ ಮನಸ್ಸಿರುವುದು ಲೇಸು ; ಅಂತೆಯೇ ಹಿತವಾದ ನಡತೆಯುಳ್ಳ ಜೀವನದ ರೀತಿ ಇರುವುದು ಲೇಸು.

—ನ್ಯೂಮ್ಯಾನ್

ನಿನ್ನ ಪಾಲಿಗೆ ಬಂದ ಕಾರ್ಯವನ್ನು ಸಮರ್ಥವಾಗಿ ಪೂರೈಸು ; ಏಕೆಂದರೆ ನಿನಗೆ ಮರಣಾನಂತರ ಯಾವ ಕಾರ್ಯವಾಗಲೀ, ಯೋಜನೆಯಾಗಲೀ ಮಾಡುವುದಕ್ಕಿಲ್ಲ ; ಜ್ಞಾನವಾಗಲೀ, ಬುದ್ಧಿವಂತಿಕೆಯಾಗಲೀ ಪಡೆಯುವುದಕ್ಕಿಲ್ಲ.

—ಬೈಬಲ್

ಎಲ್ಲರಂಥವರಲ್ಲ ನಮ್ಮ ನಾರಾಯಣ

ಎಚ್. ಎಲ್. ನಾಗೇಗೌಡ

ಅವರು ತಮ್ಮ ಸುತ್ತ ಮುತ್ತ ಅನೇಕ ಕಾರ್ಯಕರ್ತರ ಒಂದು ದೊಡ್ಡ ಬಳಗವನ್ನೇ ಕಟ್ಟಿಕೊಂಡಿದ್ದಾರೆ. ಅವರನ್ನೆಲ್ಲಾ ಒಂದೊಂದು ಕೆಲಸಕ್ಕೆ ಹಚ್ಚಿ ಮಾಡಬೇಕಾದ ಕೆಲಸವನ್ನು ಸೈ ಎನ್ನುವಂತೆ ಮಾಡಿ ಮುಗಿಸುತ್ತಾರೆ. ದ್ವೇಷ ಸಾಧಿಸುವುದು, ಗುಂಪುಗಾರಿಕೆ, ಜಾತೀಯತೆ-ಇವುಗಳಿಂದ ನಾರಾಯಣ ಬಹು ದೂರ.

ಸುಮಾರು 20 ವರ್ಷಗಳ ಕಾಲ ರಾಜ್ಯದ ನಾನಾ ಕಡೆ ಸರ್ಕಾರಿ ಹುದ್ದೆಯಲ್ಲಿದ್ದು 1969 ರಲ್ಲಿ ನಾನು ಬೆಂಗಳೂರಿಗೆ ಲೇಬರ್ ಕಮೀಷನರಾಗಿ ಬಂದೆ. ಅಲ್ಲಿಯ ವರೆಗೆ ನನಗೂ ನಾರಾಯಣ ಅವರಿಗೂ ಪರಿಚಯ ವಿರಲಿಲ್ಲ. ಅವರ ಹೆಸರು ಕೇಳಿದ್ದೆನೋ ಏನೋ. ನಾನು ಬೆಂಗಳೂರಿಗೆ ಬಂದಾಗ ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದರು. ಅದಕ್ಕೆ ಮುನ್ನ ನಗರ ಕಾರ್ಪೊರೇಷನ್ನಿನ ಮೇಯರ್ ಆಗಿ ಸೇವೆ ಸಲ್ಲಿಸಿ ಹೆಸರು ಗಳಿಸಿದ್ದರು. ಬೆಂಗಳೂರಿಗೆ ಬಂದವರ ಮೇಲೆ ಸದಾ ಕಣ್ಣಿಟ್ಟುಕೊಂಡಿರುತ್ತಿದ್ದ ಅವರು ಒಮ್ಮೆ ನನ್ನನ್ನು ಸಾಹಿತ್ಯ ಪರಿಷತ್ತಿನ ಒಂದು ಸಭೆಗೆ ಆಹ್ವಾನಿಸಿದರು. ಅಂದಿನಿಂದ ಅವರ ನನ್ನ ಸ್ನೇಹ ಆರಂಭವಾಗಿ ಇಂದಿನ ವರೆಗೂ ನಡೆದುಕೊಂಡು ಬಂದಿದೆ. ಒಮ್ಮೆ ಒಬ್ಬರ ಸಂಪರ್ಕ ಪಡೆದರೆ ಅವರನ್ನು ಸುಲಭವಾಗಿ ಬಿಟ್ಟು ಕೊಡುವ ವ್ಯಕ್ತಿ ಅಲ್ಲ ಅವರು.

ಇಷ್ಟರಲ್ಲಿ ನನ್ನ "ಸೋಬಾನೆ ಚಿಕ್ಕಮ್ಮನ ಪದಗಳು" ಎಂಬ ಗ್ರಂಥದ ಮುದ್ರಣ ಆರಂಭವಾಗಿತ್ತು. ಅದನ್ನು ಸಾಹಿತ್ಯ ಪರಿಷತ್ತಿನ ಮೂಲಕ ಏಕೆ ಪ್ರಕಟಿಸಬಾರ ದೆಂದು ಕೇಳಿದರು. ನಾನು ಆಗಲಿ ಎಂದೆ. ಆ ಪುಸ್ತಕದ ಪ್ರಕಟಣೆ ಮತ್ತು ಬಿಡುಗಡೆ ಆದುವು. ಆ ಸಂದರ್ಭದಲ್ಲಿ ಸೋಬಾನೆ ಚಿಕ್ಕಮ್ಮನನ್ನು ಬೆಂಗಳೂರಿಗೆ ಕರೆಸಿ ಆಕೆಯನ್ನು ಪರಿಷತ್ತಿನ ವತಿಯಿಂದ ಸನ್ಮಾನಿಸಿದರು. ಚಿಕ್ಕಮ್ಮ ಒಬ್ಬ ಹಳ್ಳಿಯ ಹೆಂಗಸು. ಅಂಥವಳನ್ನು ಸನ್ಮಾನಿಸುವಾಗ ನಾರಾಯಣ ಅವರು ಮಾಡಿದ ವ್ಯವಸ್ಥೆ ಆಕೆಯನ್ನು ನೋಡಿಕೊಂಡ ರೀತಿ ಕಂಡು ನಾನು ಆಶ್ಚರ್ಯಪಟ್ಟೆ. ಆ ಹಳ್ಳಿಯ ಗಮಾರಳನ್ನು ಒಬ್ಬ ಮಹಾಮಹಿಳೆಯೋ ಎಂಬಂತೆ ಕಂಡುದು ನಾರಾಯಣ ಅವರ ಹಿರಿಮೆಯನ್ನು ಎತ್ತಿ ತೋರಿಸಿತು. ಜನರಲ್ ಕಾರಿಯಪ್ಪ ಅವರನ್ನು ಸತ್ಕರಿಸಲಿ ಹಳ್ಳಿಯ ಹೆಂಗ ಸೊಬ್ಬಳನ್ನು ಸತ್ಕರಿಸಲಿ ಅವರು ವಹಿಸುತ್ತಿದ್ದ ಶ್ರದ್ಧೆ ಆಸಕ್ತಿ ಪ್ರೀತಿ ವಿಶ್ವಾಸಗಳು ಒಂದೇ ಬಗೆ.

ಸೋಬಾನೆ ಚಿಕ್ಕಮ್ಮನಿಂದ ಸಾಹಿತ್ಯ ಪರಿಷತ್ತಿಗೆ ಜಾನಪದದ ಮತ್ತು ಜನಪದ ಕಲಾವಿದರ ಪ್ರವೇಶ ಆಯಿತೆನ್ನಬಹುದು. ಅಲ್ಲಿಯವರೆಗೆ ಸಾಹಿತ್ಯ ಸಮ್ಮೇಳನ ಗಳಲ್ಲಿ ಅಲ್ಲಷ್ಟು ಇಲ್ಲಷ್ಟು ಮಾತಿಗೆ ಮಾತ್ರ ವಸ್ತುವಾಗಿದ್ದ

ಜಾನಪದ ನಾರಾಯಣರ ಕಾಲದಲ್ಲಿ ಪ್ರವಾಹದಂತೆ ಸಾಹಿತ್ಯ ಪರಿಷತ್ತನ್ನು ಹೊಕ್ಕಿತು. ನಾನೊಂದು ಯೋಜನೆ ತಯಾರಿಸಿಕೊಟ್ಟೆ. ಜಾನಪದದ ಬಗೆಗೆ ಏನೇನು ಕೆಲಸಗಳನ್ನು ಪರಿಷತ್ತು ಮಾಡಬಹುದೆಂದು ಹೇಳಿದೆ. ಈ ಯೋಜನೆಗಳನ್ನು ಕೈಗೆತ್ತಿಕೊಂಡು ಜಿಲ್ಲಾಮಟ್ಟದ ಮತ್ತು ರಾಜ್ಯಮಟ್ಟದ ಜನಪದ ಕಲಾ ಮೇಳ, ಗೋಷ್ಠಿ, ಚಿತ್ರೀಕರಣ, ಜನಪದ ಕಲೆಗಳನ್ನು ಕುರಿತು ಗಂಥ ಪ್ರಕಟಣೆ ಆದುವು. ಇವೆಲ್ಲಾ ನಾರಾಯಣರಿಗೆ ಕೀರ್ತಿ ತಂದಂತಹ ಕಾರ್ಯಗಳು.

ಯಾವ ಜಾನಪದ ಕಾರ್ಯಕ್ರಮವಿದ್ದರೂ ನಾರಾಯಣ ಅವರು ನನ್ನನ್ನು ತಪ್ಪದೇ ಕರೆದುಕೊಂಡು ಹೋಗುತ್ತಿದ್ದರು. ಆ ಸಂದರ್ಭದಲ್ಲಿ ಮತ್ತು ಶ್ರೀ ಕೆ. ನಾರಾಯಣಸ್ವಾಮಿ ಅವರ ಅಧ್ಯಕ್ಷತೆಯಲ್ಲಿ ರಚಿಸಲ್ಪಟ್ಟ ಕನ್ನಡ ಭಾಷಾ ಸಮಿತಿಯ ಸದಸ್ಯರಾಗಿ ನಾನೂ ಅವರೂ ಇಡೀ ಕರ್ನಾಟಕದಲ್ಲಿ ಅಡ್ಡಾಡಿದ್ದೇವೆ. ಆಗೆಲ್ಲಾ ಅವರ ಒಳ ಹೊರಗನ್ನು ಚೆನ್ನಾಗಿ ಅರಿತುಕೊಂಡೆ. ಅನೇಕ ಗಣ್ಯವ್ಯಕ್ತಿಗಳಲ್ಲಿ ನಾವು ಕಾಣುವುದು ದ್ವಿಮುಖ ವರ್ತನೆ. ಒಳಗೊಂದು, ಹೊರಗೊಂದು; ಆಡುವುದೊಂದು, ಮಾಡುವುದೊಂದು. ಇವು ನಾರಾಯಣ ಅವರಿಂದ ದೂರ. ಅವರ ಕೈ ಬಾಯಿ ಶುದ್ಧ. ಯಾರಿಗೂ ಸಂದೇಹ ಬರದ ರೀತಿಯಲ್ಲಿ ಅವರ ವರ್ತನೆ. ಒಮ್ಮೆ ನಾನೂ ಅವರೂ ಒಂದೇ ಕೋಣೆಯಲ್ಲಿದ್ದಾಗ—ಯಾವಾಗಲೂ ನಾವಿಬ್ಬರೂ ಒಟ್ಟಿಗೆ ಇರುತ್ತಿದ್ದುದು. ನೀರು ತುಂಬಿದ್ದ ಒಂದು ವಿಸ್ಕಿ ಬಾಟ್‌ಲನ್ನು ನೋಡಿದರು. ಆ ಬಾಟ್‌ಲಿನ ಮೇಲೆ ಇದ್ದ ಲೇಬಲ್ ಹಾಗೇ ಇತ್ತು. ನಾರಾಯಣ ಅವರು ಆ ಬಾಟ್‌ಲನ್ನು ನೀರಿನ ಮನೆಗೆ ತೆಗೆದುಕೊಂಡು ಹೋಗಿ ಲೇಬಲ್ ನೆನೆಸಿ ಅದನ್ನು ತೆಗೆದುಹಾಕಿ ಹೊರಗಡೆ ತಂದಿಟ್ಟರು. ಇದು ಸಣ್ಣ ವಿಷಯ, ನಿಜ. ಆದರೆ ಲೇಬಲ್ ಇದ್ದ ಬಾಟ್‌ಲ್ ನೋಡಿದವರಿಗೆ ಸಂದೇಹ ಬರಿಸುವಂತಹ ವಿಷಯ. ಶುದ್ಧ ಬಾಳಿನ ಅವರಲ್ಲಿ ವೈಯಕ್ತಿಕ ಜೀವನಕ್ಕೂ ಸಾರ್ವಜನಿಕ ಜೀವನಕ್ಕೂ ವ್ಯತ್ಯಾಸವಿಲ್ಲ. ಅದೇ ಅವರ ಬಾಳಿನ ಗುಟ್ಟು.

ಇನ್ನೊಂದು ಅವರಲ್ಲಿ ಕಂಡ ಮಹಾಗುಣ ಎಂದರೆ, ಎಂಥದೇ ಪ್ರಸಂಗ ಬಂದರೂ ಅದನ್ನು ಅಲ್ಲಿಗೆ ಮರೆತು ಅದು ನಡೆದಿಲ್ಲವೋ ಎನ್ನುವಂತೆ ವರ್ತಿಸುವುದು. 1977 ರಲ್ಲಿ ಶಿವಮೊಗ್ಗೆಯ ಸಾಹಿತ್ಯ ಸಮ್ಮೇಳನ. ಅಷ್ಟು ಹೊತ್ತಿಗಾಗಲೇ ನಾನು ಸಾಹಿತ್ಯ ಪರಿಷತ್ತಿನ ಸುವರ್ಣ ಮಹೋತ್ಸವದ ಸಂದರ್ಭದಲ್ಲಿ (ಆಗ ನಾನು ರಾಜ್ಯದ ಲೋಕಸೇವಾ ಆಯೋಗದಲ್ಲಿದ್ದೆ) ಜಾನಪದದ ಪುನರುಜ್ಜೀವನಕ್ಕೆ ಒಂದು ನೀಲ ನಕಾಸೆಯನ್ನು (Blue Print) ತಯಾರಿಸಿ ಅದನ್ನು ಸಾರ್ವಜನಿಕರ ಮುಂದೆ ಇಟ್ಟಿದ್ದೆ. ಬೇರೆಲ್ಲಾ ಅಕಾಡೆಮಿಗಳಿದ್ದರೂ, ಇಡೀ ಗ್ರಾಮೀಣರ ಜೀವಸತ್ವವಾದ ಜಾನಪದದ ಸಂರಕ್ಷಣೆಗೆ ಮತ್ತು ಜನಪದ ಕಲಾವಿದರ ಯೋಗಕ್ಷೇಮಕ್ಕೆ ಒಂದು ಅಕಾಡೆಮಿ ಇಲ್ಲವಲ್ಲ ಎಂದು ಅದರ ರಚನೆಯಾಗಬೇಕೆಂದು ಬಹು ಜೋರಾಗಿ ವಾದಿಸಿದ್ದೆ. ಶಿವಮೊಗ್ಗ ಸಾಹಿತ್ಯ ಸಮ್ಮೇಳನದಲ್ಲಿ ಆ ಬಗ್ಗೆ ಒಂದು ನಿರ್ಣಯ ಆಗಬೇಕೆಂದು ಆಗ ನಡೆದ ಜಾನಪದ ಗೋಷ್ಠಿಯ ಅಧ್ಯಕ್ಷನಾಗಿ ಪ್ರತಿಪಾದಿಸಿದೆ. ಆದರೆ ಬಹಿರಂಗ ಸಭೆಯಲ್ಲಿ ಆ ಬಗ್ಗೆ ನಿರ್ಣಯ ಬರಲೇ ಇಲ್ಲ. ಆಗ ಗೊತ್ತಾಯಿತು ವಿಷಯ ನಿಯಾಮಕ ಸಮಿತಿಯಲ್ಲಿ ಆ ನಿರ್ಣಯದ ಕತ್ತುಮುರಿದು ಹಾಕಿದರು ಎಂದು. ಇದನ್ನು ಕೇಳಿ ನನಗಾದ ಆಕ್ರೋಶ ಅಷ್ಟಿಷ್ಟಲ್ಲ.

ಮಾರನೇ ದಿನ ನನ್ನನ್ನು ಕರೆದುಕೊಂಡು ಬೆಂಗಳೂರಿಗೆ ಹೊರಡಲು ನಾನಿದ್ದ ಕಡೆಗೆ ಬಂದ ನಾರಾಯಣ ಅವರ ಮೇಲೆ ನಾನು ರೇಗಾಡಿದೆ. "ನಿಮ್ಮಂತಹ ಜಾನಪದ ದ್ರೋಹಿಗಳು ಬೇಕಿಲ್ಲ. ನೀವೂ.................ಅವರೆಲ್ಲ ಸೇರಿ ಭಾರಿ ಮೋಸ ಮಾಡಿದಿರಿ. ಜನಪದರಿಗೆ ಸಂಬಂಧಪಟ್ಟ ಚಟುವಟಿಕೆಗಳು ಸಾಹಿತ್ಯ ಪರಿಷತ್ತಿನಿಂದ ಬೇರೆಯಾದರೆ ನಿಮ್ಮ ಪ್ರತಿಷ್ಠೆಗೆ ಕುಂದು ಬರುವುದೆಂದು ನೀವೆಲ್ಲಾ ಭಾವಿಸಿ ನಿರ್ಣಯವೇ ಬಹಿರಂಗ ಸಭೆಯಲ್ಲಿ ಬರದಂತೆ ಮಾಡಿದಿರಿ...."—ಹೀಗೆಲ್ಲಾ ನಾನು ಸಿಟ್ಟನ್ನು ಹೇಳಿಕೊಂಡೆ. ನಾರಾಯಣ ಹುಸಿನಗುತ್ತಲೇ ಎಲ್ಲವನ್ನೂ ಕೇಳಿದರು. ಒಂದಿಷ್ಟೂ ಬೇಜಾರುಮಾಡಿಕೊಳ್ಳದೆ 'ಬನ್ನಿ ಹೇಳ್ತೀನೆ ದಾರಿಯಲ್ಲಿ' ಎಂದು ಉಪಾಯ ಮಾಡಿ ನನ್ನನ್ನು ಕರೆದುಕೊಂಡು ಹೊರಟರು. ದಾರಿಯಲ್ಲಿ ಅವರು ಏನು ಹೇಳಿದರೂ ನನ್ನ ರೋಷವನ್ನು ಇಳಿಸಲು ಸಾಧ್ಯವಾಗಲಿಲ್ಲ. ಆದರೂ ಅವರು ನನ್ನಿಂದ ದೂರ ಆಗಲಿಲ್ಲ. ಇಂಥವಕ್ಕೆಲ್ಲಾ ಒಬ್ಬರಿಂದ ದೂರ ಆಗುವ ವ್ಯಕ್ತಿ ಅಲ್ಲ ನಾರಾಯಣ.

ಈಚೆಗೊಮ್ಮೆ ನಾರಾಯಣ ಅವರನ್ನು ಕೇಳಿದೆ, ಎಂತೆಂತಹ ಜನರನ್ನು ಕಟ್ಟಿಕೊಂಡು ನೀವು ಒದ್ದಾಡುತ್ತಿದ್ದೀರಲ್ಲ; ನಾನಾಗಿದ್ದರೆ ಅವರನ್ನು ಹತ್ತಿರ ಸೇರಿಸುತ್ತಿರಲಿಲ್ಲ ಎಂದು. ಅದಕ್ಕೆ ನಾರಾಯಣ ಕೊಟ್ಟ ಉತ್ತರ 'ನೋಡಿ, ಒಂದು ಹಣ್ಣಿದೆ ಎಂದು ಇಟ್ಟುಕೊಳ್ಳಿ. ಆ ಹಣ್ಣಿನ ಒಂದು ಭಾಗ ಕೆಟ್ಟಿದೆ ಅನ್ನಿ. ನಾವು ಆ ಹಣ್ಣಿನ ಕೆಟ್ಟ ಭಾಗ ತೆಗೆದುಹಾಕಿ ಚೆನ್ನಾಗಿರುವುದನ್ನು ತಿನ್ನುತ್ತೇವೆ. ಹಾಗೆಯೇ ಎಲ್ಲರಲ್ಲೂ ಒಳ್ಳೆಯದು ಕೆಟ್ಟದು ಎರಡೂ ಇರುತ್ತವೆ. ನಾವು ಅವರ ಒಳ್ಳೆಯದನ್ನು ಮಾತ್ರ ಗಮನಿಸಿ ಅವರನ್ನು ಅವರವರಿಗೆ ತಕ್ಕ ಕೆಲಸದಲ್ಲಿ ತೊಡಗಿಸಿ ನಮ್ಮ ಕೆಲಸ ಮಾಡಿಕೊಂಡು ಹೋಗಬೇಕೇ ಹೊರತು ಇಡೀ ಮನುಷ್ಯನನ್ನೇ ದೂರ ಇಡುವುದು ಸರಿಯಲ್ಲ' ಎಂದರು. ಸಾ ಹಿ ತ್ಯ ಕ, ಸಾಮಾಜಿಕ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಕೆಲಸ ಮಾಡುವವರಿಗೆ ಅವರು ಹೇಳಿದ್ದು ಮುತ್ತಿನಂಥ ಮಾತು. ಈಸಬೇಕು, ಇದ್ದು ಜಯಿಸಬೇಕು—ಇದು ನಾರಾಯಣರ ಒಂದು ಮಹಾ ಗುಣ. ಈ ಕಾರಣದಿಂದಲೇ ಅವರು ತಮ್ಮ ಸುತ್ತ ಮುತ್ತ ಅನೇಕ ಕಾರ್ಯಕರ್ತರ ಒಂದು ದೊಡ್ಡ ಬಳಗವನ್ನೇ ಕಟ್ಟಿಕೊಂಡಿದ್ದಾರೆ. ಅವರನ್ನೆಲ್ಲಾ ಒಂದೊಂದು ಕೆಲಸಕ್ಕೆ ಹಚ್ಚಿ ಮಾಡಬೇಕಾದ ಕೆಲಸವನ್ನು ಸೈ ಎನ್ನುವಂತೆ ಮಾಡಿ ಮುಗಿಸುತ್ತಾರೆ. ದ್ವೇಷ ಸಾಧಿಸುವುದು, ಗುಂಪುಗಾರಿಕೆ, ಜಾತೀಯತೆ-ಇವುಗಳಿಂದ ನಾರಾಯಣ ಬಹು ದೂರ.

ಬೆಂಗಳೂರಿನಲ್ಲಿ ಯಾರಿಗೆ ಸನ್ಮಾನ ನಡೆದರೂ ಅವಕ್ಕೆಲ್ಲಾ ನಾರಾಯಣರ ಹಿರಿತನ ಇಲ್ಲದೆ ಆಗುವುದಿಲ್ಲ. ನನಗೆ ನಡೆದ ಸನ್ಮಾನ ಸಮಾರಂಭ, ಡಾ|| ಸಿದ್ಧಯ್ಯ ಪುರಾಣಿಕರಿಗೆ ನಡೆದ ಸನ್ಮಾನ ಸಮಾರಂಭ, ಇನ್ನೂ ಹತ್ತಾರು ಸನ್ಮಾನ ಸಮಾರಂಭಗಳಿಗೆಲ್ಲಾ ಅವರೇ ಯಜಮಾನರು. ಅವನ್ನು ನಡೆಸುವ ರೀತಿಯೂ ಅವರದೇ ಆದ ವಿಶಿಷ್ಟತೆಯಿಂದ ಕೂಡಿರುತ್ತದೆ. ಏನೋ ಕಾಟಾಚಾರಕ್ಕೆ ಮಾಡುವ ರೀತಿಯಲ್ಲ ಅವರದು. ತಮ್ಮ ಮನೆಯ ಲಗ್ನಕ್ಕಿಂತ ಹೆಚ್ಚಿನ ಮುತುವರ್ಜಿ, ಶ್ರದ್ಧೆ. ಹೀಗಾಗಿ ಅವರಿಲ್ಲದೆ ಅಚ್ಚುಕಟ್ಟಾಗಿ ಯಾವ ಸಮಾರಂಭವು ನಡೆಯಲಾರದೋ ಎನ್ನಬಹುದು.

ನಾರಾಯಣ ನೋಡುವುದಕ್ಕೆ ಮೆತ್ತನೆ ವ್ಯಕ್ತಿಯೆಂದು ಕಂಡು ಬಂದರೂ ಸಮಯ ಬಂದಾಗ ಸಿಡಿದೇಳಬಲ್ಲರು. ಪರಿಷತ್ತಿನ ವಜ್ರಮಹೋತ್ಸವದ ಸಂದರ್ಭ ಎಂದು ಕಾಣುತ್ತೆ. ಆಗ ಅವರ ಮೇಲೆ ಒಂದು ಗುಂಪಿನವರಿಂದ ಸಣ್ಣ ಚಳುವಳಿ. ಹಗಲೂ ರಾತ್ರಿ ದುಡಿದು ದುಡಿದು ಆರೋಗ್ಯ ಕೆಡಿಸಿಕೊಂಡಿದ್ದ ನಾರಾಯಣ ಅವರು ಕುಳಿತುಕೊಂಡೇ ಆ ಚಳುವಳಿಕಾರರಿಗೆ ಕೊಟ್ಟ ಉತ್ತರ ಇನ್ನೂ ನನ್ನ ಕಿವಿಯಲ್ಲಿದೆ: 'ನಾನು ರಾಜಕೀಯ ಗರಡಿಯಲ್ಲಿ ಪಳಗಿದವನು. ನನಗೂ ಅದರ ಅನೇಕ ಪಟ್ಟುಗಳು ಗೊತ್ತಿವೆ. ಗೊತ್ತಿಲ್ಲ ಎಂದು ಕುಸ್ತಿಗೆ ಬರಬೇಡಿ. ಎಚ್ಚರ ಇರಲಿ' ಎಂದು ಗುಡುಗಿದರು. ಸ್ವಚ್ಛ ಬಾಳು ಬಾಳಿದ ವ್ಯಕ್ತಿಯ ಬಾಯಿಂದಲ್ಲದೆ ಬೇರೆಯವರ ಬಾಯಿಂದ ಈ ಮಾತುಗಳು ಬರಲಾರವು.

ಬೆಂಗಳೂರು ನಗರದಲ್ಲಷ್ಟೇ ಅಲ್ಲದೆ ಹೊರಗಡೆಯೂ ನಾರಾಯಣರ ಬಗ್ಗೆ ಗೌರವ ಇದೆ. ಎಲ್ಲಾ ರಾಜಕೀಯ ಪಕ್ಷಗಳೂ ಸರ್ಕಾರವೂ ಅವರನ್ನು ಬಹು ವಿಶ್ವಾಸದಿಂದ ಕಾಣುತ್ತಿವೆ. ಆದರೆ ಆ ವಿಶ್ವಾಸವನ್ನು ನಾರಾಯಣ ಅವರು ಇಲ್ಲಿಯವರೆಗೆ ದುರುಪಯೋಗಪಡಿಸಿಕೊಂಡಿಲ್ಲ. ರಾಜಕೀಯದ ಆಶೆ ಆಮಿಷಗಳಿಗೆ ಅವರೆಂದೂ ಬಲಿಯಾದವರಲ್ಲ. ರಾಜಕೀಯಕ್ಕಿಂತ ಬೇರೆ ಕ್ಷೇತ್ರಗಳಲ್ಲಿ ಮಾಡಬಹುದಾದ ಕೆಲಸ ದೊಡ್ಡದೆಂದು ಅವರ ಭಾವನೆ. ಇಂತಹ ಭಾವನೆ ಎಷ್ಟು ಜನಕ್ಕುಂಟು ? ಅದಕ್ಕೇ ಹೇಳುವುದು 'ಎಲ್ಲರಂಥವರಲ್ಲ ನಮ್ಮ ನಾರಾಯಣ' ಎಂದು.

ಸಮತೆಯನ್ನೊಳಗೊಂಡ ವೀರನ ಮನೋಧರ್ಮವು ಕಾಲ, ದೈವ ಚಕ್ರಗಳಿಂದ ದುರ್ಬಲಗೊಂಡರೂ ಅವನ ಇಚ್ಛಾಶಕ್ತಿಯು ಹೋರಾಡಲು, ಹುಡುಕಲು, ಪಡೆಯಲು ಮತ್ತು ಹಿಂದೆಗೆಯದಿರಲು ಸಹಾಯಕವಾಗುತ್ತದೆ.

—ಟೆನ್ನಿಸನ್

ಸೌಜನ್ಯಮೂರ್ತಿ

ಕೆ. ದೊಡ್ಡನಗೌಡ

ಶ್ರೀ ಜಿ. ನಾರಾಯಣರು ಕನ್ನಡ ಸಾಹಿತ್ಯ ಪರಿಷತ್ತಿಗೆ ಅಧ್ಯಕ್ಷರಾಗಿ ಬಂದಾಗ ಕೆಲವು ಸಾಹಿತಿಗಳು ಮೂಗು ಮುರಿದುದುಂಟು. ಅಯ್ಯೋ, ಕನ್ನಡ ಸರಸ್ವತಿ ಇಂತಹ ಅವಿದ್ಯಾವಂತರ ಕೈಸೆರೆಯಾಗಬೇಕಾಯಿತೆ? ಎಂಬ ಆಕ್ಷೇಪಣೆಗಳು ಸರಿದಾಡಿದ್ದುಂಟು.

ಅದುವರೆಗೂ ಸರಸ್ವತಿಯ ಹಿರಿಯ ಪುತ್ರರಿಂದ ಪರಿಷತ್ತು ಬೆಳೆದುದುಂಟು, ಅಳಿದುದುಂಟು. ಅದರ ವೃದ್ಧಿ ಕ್ಷಯಗಳಿಗೆ ವ್ಯಾಪಕತೆ ಇಲ್ಲದೆ ಇದ್ದಲ್ಲಿಯೇ ಇತ್ತು. ಆಹೊತ್ತಿನಲ್ಲಿ ಕರ್ನಾಟಕ ದಿಕ್ಕುಗಳ ಸಾಲಾಗಿ ಆಯಾ ಪ್ರದೇಶಗಳ ಹೆಸರಿನಿಂದ ತುಂಡು ತುಂಡಾಗಿ ಅಖಂಡತೆಗೆ ದೂರಾಗಿತ್ತು.

ನಾರಾಯಣರು ಪರಿಷತ್ತಿಗೆ ಬಂದಾಗ ಹಿಂದಿನವರಿಗಿದ್ದ ತೊಂದರೆಗಳಿರಲಿಲ್ಲ. ಆದರೆ ಆರ್ಥಿಕವಾಗಿ ತೀರ ಬಡತನ ಕಟ್ಟಿಕೊಂಡಿತ್ತು. ಆಗಿದ್ದವರಲ್ಲಿ ಕೇವಲ ಸಾಹಿತ್ಯ ಧುರೀಣರೇ ಅಲ್ಲದೆ ಆಡಳಿತೆಯ ದಕ್ಷರೂ ಇದ್ದರು. ಆದರೆ ಸರಕಾರದ ಸಹಾಯಹಸ್ತ ಅಷ್ಟೊಂದು ಉದಾರವಾಗಿ ರಲಿಲ್ಲ. ಅದರಂತೆ ಕನ್ನಡಿಗರ ಸಹಕಾರವು ಸರಿಯಾಗಿ ರಲಿಲ್ಲ. ಸಾಹಿತಿಗಳಲ್ಲಿಯೂ ಪರಸ್ಪರ ಮಾತ್ಸರ್ಯ ಅಸೂಯೆಗಳು ಗೂಡು ಕಟ್ಟಿಕೊಂಡದ್ದವು. ಇಷ್ಟಕ್ಕೂ ಅಖಿಲ ಕರ್ನಾಟಕದ ಹೆಸರು ಯಾಜಮಾನ್ಯ ವಹಿಸಿರಲಿಲ್ಲ.

ಅಂದು ಕರ್ನಾಟಕ ಪರಿಷತ್ತು ಬಯಸುತ್ತಿದ್ದುದು ಉತ್ತಮ ಕಾರ್ಯ ನಿರ್ವಹಿಸುವ ಕಾರ್ಯಕರ್ತನನ್ನು. ಜಿ. ನಾರಾಯಣರು ಬೆಂಗಳೂರು ಮೇಯರಾಗಿದ್ದವರು. ಮೇಯರಾದವರೆಲ್ಲ ಇಂತಹ-ಅದರಲ್ಲಿ ಸಾಹಿತ್ಯ ಕ್ಷೇತ್ರದಲ್ಲಿ ಕಾರ್ಯಮಾಡಲು ಸಾಧ್ಯವೆ? ಅದೇ ಬೇರೆ; ಇದೇ ಬೇರೆ. ಆ ಕಾರ್ಯಾನುಭವ ಈ ಸಾಹಿತ್ಯ ರಂಗಕ್ಕೆ ಕೊಂಚ ಉಪ ಯೋಗವಾಗಿರಬೇಕು. ಅವರೊಂದು ಪತ್ರಿಕಾ ಸಂಪಾದಕ ರೆಂಬುದು ಬಹಳ ಜನರಿಗೆ ತಿಳಿಯದು. ನನಗವರ ಪರಿಚಯಕ್ಕೆ ಮುಂಚೆ ನಾನು ಅವರ 'ವಿನೋದ' ಮಾಸ ಪತ್ರಿಕೆಯ ಚಂದಾದಾರ.

ಕನ್ನಡ ಪರಿಷತ್ತು ಆರ್ಥಿಕ ಸಂಪತ್ತನ್ನು ಸರಕಾರ ದಿಂದ ಧಾರಾಳವಾಗಿ ಪಡೆಯುವಲ್ಲಿ ಎಂತಹ ಗಾರುಡಿಗ ತನವನ್ನು ಉಪಯೋಗಿಸುತ್ತಿದ್ದರೋ ಅದು ಸೋಜಿಗ.

ಮುಖ್ಯವಾಗಿ ಅವರ ಯಾಜಮಾನ್ಯದಲ್ಲಿ ಏನೇನಾಯಿ ತೆಂಬುದನ್ನು ಕನ್ನಡಿಗರು ಬಲ್ಲರು. ಪರಿಷತ್ತಿನ ಕಾರ್ಯರಂಗ ರಾಜ್ಯದ ಪ್ರತಿಯೊಂದು ಜಿಲ್ಲೆಗೂ ವ್ಯಾಪಿಸುವಂತೆ ಮಾಡಿ ಆ ಜಿಲ್ಲಾ ಪರಿಷತ್ತುಗಳು ಕೇಂದ್ರ ಪರಿಷತ್ತಿಗೆ ಅಂಗಸಂಸ್ಥೆಗಳಾಗಿ ಕೆಲಸ ಮಾಡುವಂತಾಯಿತು.

ಯಾವುದೇ ಸರಕಾರ ಬಂದರೂ ಕನ್ನಡ ಸರಕಾರ ತಾನೆ? ಸರಕಾರದ ಗಮನವನ್ನು ಪರಿಷತ್ತಿನ ಕಡೆ ತಮ್ಮ ಕಾರ್ಯ ವೈಖರಿಯಿಂದಸೆಳೆದು ಪರಿಷತ್ತಿನ ಅಂತರಂಗ ಬಹಿರಂಗಗಳ ಸೌಂದರ್ಯವನ್ನು ನಿರ್ಮಿಸುವ ಕಲಾಶಿಲ್ಪಿಯಾದರು.

ಮುಖ್ಯವಾಗಿ ಅವರ ಯಾಜಮಾನ್ಯದಲ್ಲಿ ಏನೇನಾಯಿತೆಂಬುದನ್ನು ಕನ್ನಡಿಗರು ಬಲ್ಲರು. ಪರಿಷತ್ತಿನ ಕಾರ್ಯರಂಗ ರಾಜ್ಯದ ಪ್ರತಿಯೊಂದು ಜಿಲ್ಲೆಗೂ ವ್ಯಾಪಿಸುವಂತೆ ಮಾಡಿ ಆ ಜಿಲ್ಲಾ ಪರಿಷತ್ತುಗಳು ಕೇಂದ್ರ ಪರಿಷತ್ತಿಗೆ ಅಂಗ ಸಂಸ್ಥೆಗಳಾಗಿ ಕೆಲಸ ಮಾಡುವಂತಾಯಿತು.

ಅದುವರೆಗೂ ನಾನು ಪರಿಷತ್ತಿನ ಸಾಮಾನ್ಯ ಚಂದಾದಾರನೂ ಆಗಿರಲಿಲ್ಲ. ಪರಿಷತ್ತಿನ ಅಧಿಕಾರವರ್ಗದಲ್ಲಿ ನನ್ನ ಮಿತ್ರರಿದ್ದರೂ, ಕೆಲವು ಸಲ ನನ್ನ ಕಾವ್ಯ ವಾಚನ ಕಾರ್ಯಕ್ರಮುಗಳಾದರೂ ಸದಸ್ಯನಾಗಿರಲಿಲ್ಲ.

ಒಂದು ಸಲ, ಎಂದೆಂಬುದು ನನಗೆ ನೆನಪಿಲ್ಲ. ಅವರನ್ನು ಕಂಡಾಗ ನಾನು ಆಕರ್ಷಿತನಾದೆ. ಅವರ ಮಂದಹಾಸ, ಹಿತ ಮಿತ ಮಾತು, ತೋರಿದ ವಿನಯ ಸೌಜನ್ಯಗಳು ಬಹುಕಾಲದ ಸಂಬಂಧವಿದ್ದಂತೆ ಸರಳವಾಗಿ ವ್ಯಕ್ತವಾದಾಗ ಆ ಆಕರ್ಷಿತ ವ್ಯಕ್ತಿತ್ವವೇ ಸಾರಸ್ವತ ರಂಗಾಭಿವೃದ್ಧಿಗೆ ಕಾರಣವಾಗಿರಬೇಕೆಂದು ತಿಳಿದೆ. ಅದು ನಿಜವಾಗಿತ್ತು. ಸಂಸ್ಕಾರಯುಕ್ತ ವ್ಯಕ್ತಿಗೆ ಮಾತ್ರ ಆ ಸೌಜನ್ಯ ಸಹಜ ಸರಳತೆಗಳು ಲಭ್ಯ.

ನನ್ನ ಅಂತರಂಗದಲ್ಲಿ ಎಂದೂ ಮರೆಯಾಗದ ನನ್ನ ಮಿತ್ರರ ಬಗ್ಗೆ ಹೇಳಲು ಸಂಕೋಚವೆನಿಸುತ್ತೆ. ಇತ್ತೋ ಇಲ್ಲೋ, ನನ್ನಲ್ಲಿ ನಾರಾಯಣರು ಕಂಡ ಹಿರಿತನಕ್ಕೆ ನಾನು ಅವರಿಗೆ ಶಿರಬಾಗಿ ಅವರು ಕಂಡ ಹಿರಿತನಕ್ಕೆ ಕುಂದಾಗ ಬಾರದೆಂದು ಯತ್ನಿಸುತ್ತಿರುವೆ.

ಯಾವುದೇ ಕಾರ್ಯರಂಗದ ಆಧಿಪತ್ಯದಲ್ಲಿ ಅಪವಾದದಿಂದ ಪಾರಾಗಿ ನಿರ್ಮಲತೆಯಿಂದ ತಮ್ಮ ಕಾರ್ಯರಂಗವನ್ನುಳಿಸಿಕೊಂಡು ಬರುವುದು ಕಷ್ಟಸಾಧ್ಯ. ನಾರಾಯಣರ ನಂತರ ಯಾರು? ಎನ್ನುವಷ್ಟು ಪರಿಷತ್ತನ್ನು ನಾನಾ ಮುಖವಾಗಿ ಮೇಲೆತ್ತಿ ನಿಲ್ಲಿಸಿದ ಅವರೇ ಚಾತುರ್ಯ ದಕ್ಷತೆಯಿಂದ ವಾದವಿವಾದಕ್ಕೆಡೆ ನೀಡದೆ ಮೆತ್ತಗೆ ಜಾರಿ, ಬೃಹತ್ತಾಗಿ ನಿಂತ ಸಾಹಿತ್ಯ ಪರಿಷತ್ತಿನಿಂದ ಹೊರ ಬಂದುದು ಅವರ ಸತ್ಯ ಪ್ರಾಮಾಣಿಕತೆ ಪರಿಷತ್ತಿಗಿಂತ ಎತ್ತರವಾಗಿ ಸಹೃದಯರಿಗೆ ತೋರುತ್ತದೆ.

ಬೆಂಗಳೂರಿನಲ್ಲಿ ಅಪವಾದಮುಕ್ತ ವ್ಯಕ್ತಿಯಾಗಿ, ಯಾರು ಯಾವ ಸಂಸ್ಥೆ ಕಟ್ಟಿ ನಿರ್ವಹಿಸಲೂ ನಾರಾಯಣರ ಯಾಜಮಾನ್ಯವಿಲ್ಲದಾಗದು. ಅವರ ಸಾಮಾಜಿಕ ಕಾರ್ಯದೊಡ್ಡದು. ಕಾರ್ಯದಕ್ಷತೆ ಹಿರಿದು. ಅಂತಹ ಸಾರ್ವಜನಿಕ ಸೇವಾರಂಗದಲ್ಲಿ ಒಂದು ಸಂಸ್ಥೆಯಂತೆ ಕೆಲಸಮಾಡಿದವರೀಗ ಯಾರ ಗಮನವಿಲ್ಲದೆ ಅರವತ್ತು ವರುಷ ದಾಟಿದ್ದಾರೆ.

ಜಿ. ನಾರಾಯಣರ ಸೇವೆ ಎಂದೂ ವಿಶ್ರಾಂತಿಯನ್ನು ಬಯಸಿಲ್ಲ. ಆದರೆ ಈಗಿನ ಸನ್ಮಾನ ಸಮಾರಂಭದಲ್ಲಿ ಸಂಭಾವನಾ ಗ್ರಂಥ ನೀಡುವುದರೊಂದಿಗೆ ವಿಶ್ರಾಂತಿ ವಿನೋದಗಳನ್ನು ನೀಡಲು ಬಯಸಿ ಇನ್ನರವತ್ತು ಮುಂದೆ ಸಾಗಲೆಂದು ಹಾರೈಸುವೆ.

ಗೌರವ ಮತ್ತು ಅಗೌರವಗಳು ಯಾವದೇ ಕಾರಣದಿಂದ ಉಂಟಾಗುವದಿಲ್ಲ. ನಿನ್ನ ಪಾತ್ರವನ್ನು ಚೆನ್ನಾಗಿ ನಿರ್ವಹಿಸು ; ಸರ್ವ ಗೌರವವೂ ನಿನ್ನದಾಗುತ್ತದೆ.

—**ಸುಭಾಷಿತ**

ಸಾತ್ವಿಕ ಶಕ್ತಿಯ ಪ್ರತೀಕ

ಕೆ. ಎಸ್. ನಾರಾಯಣ ಸ್ವಾಮಿ

ಕನ್ನಡ ಸಾಹಿತ್ಯ ಸೇವೆಯ ಕ್ಷೇತ್ರದಲ್ಲಿ ನಾರಾಯಣರ ಪ್ರವೇಶದಿಂದ ಒಂದು ಹೊಸ ಆಯಾಮ ಸೃಷ್ಟಿಯಾದುದು ಸ್ಪಷ್ಟ. ಕನ್ನಡನಾಡಿನ ಶ್ರೀ ಸಾಮಾನ್ಯ ಯಾವ ಸಾಮಾಜಿಕ ಮತ್ತು ಸಾಂಸ್ಕೃತಿಕ ವಿಕಾಸಕ್ಕಾಗಿ ಹಂಬಲಿಸಿ ಪ್ರಯತ್ನಶೀಲನಾಗಿದ್ದಾನೋ ಅವನೆಡೆಗೆ ಸಾಹಿತ್ಯ ಪರಿಷತ್ತಿನಂತಹ ಪ್ರತಿಷ್ಠಿತ ಸಂಸ್ಥೆ ಧಾವಿಸುವುದು ಹೇಗೆ ಎಂಬ ಹೊಸ ದೃಷ್ಟಿಯನ್ನು ತಂದುಕೊಟ್ಟ ಶ್ರೇಯಸ್ಸು ನಾರಾಯಣರದು.

ಕತ್ತಲೆಯನ್ನು ಶಪಿಸುವ ಬದಲು ಒಂದು ಪುಟ್ಟ ಹಣತೆಯನ್ನು ಹೊತ್ತಿಸು ಎಂಬ ಒಂದು ನಾಣ್ಣುಡಿ ಇದೆ. ಜೀವನ-ಅದು ವ್ಯಕ್ತಿಯದಾಗಲಿ ರಾಷ್ಟ್ರದ್ದಾಗಲಿ ಒಂದು ಸತತ ಚಲನೆ. ಕತ್ತಲು ಬೆಳಕುಗಳ ಅವಿಚ್ಛಿನ್ನ ಸರಣಿ. ಆ ಚಲನೆಯ ಅವಿಭಾಜ್ಯ ಅಂಗ. ಈ ಶತಮಾನ ಕಂಡ ಬೆಳಕಿನ ಕಾಲ ಗಾಂಧೀಯುಗ. ಒಂದು ವಿಶಿಷ್ಟ, ಸರ್ವಗ್ರಾಹ್ಯ ನೈತಿಕಶಕ್ತಿ ಅಲೆ ಅಲೆಯಾಗಿ ಸರ್ವಕ್ಷೇತ್ರಗಳನ್ನು ಆವರಿಸಿ ನಿಲ್ಲುತ್ತಿದ್ದ ಆ ಕಾಲದಲ್ಲಿ ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಂಡು, ಸೇವೆಯ ದೀಕ್ಷೆತೊಟ್ಟು, ಸಾರ್ವಜನಿಕ ಜೀವನದಲ್ಲಿ ಮಾನವೀಯ ಸುಸಂಸ್ಕೃತ ಮೌಲ್ಯಗಳನ್ನು ಸ್ಥಿರಗೊಳಿಸಲು ಶ್ರಮಿಸಿದ ಸಾಧನ ನಿಷ್ಠರಲ್ಲಿ ನಮ್ಮ ಜಿ. ನಾರಾಯಣ ನನಗೆ ಒಬ್ಬ ಅಪೂರ್ವ ವ್ಯಕ್ತಿಯಾಗಿ ಕಾಣುತ್ತಾರೆ. ಬೆಳಕಿನ ಕಾಲದಲ್ಲಿ ಹಿರಿದು ಹಿಗ್ಗಿ ಮೇಲಕ್ಕೇರಿ ಕತ್ತಲು ಅಡರಿದೊಡನೆ ಆ ಮೌಲ್ಯಗಳನ್ನೇ ಗಾಳಿಗೆ ತೂರಿ ದಿಕ್ಕುಗೆಡುವ ತರಗೆಲೆಯ ಜಾತಿ ಅಲ್ಲ ಅವರದು. ಅನುಭವದ ಜಾಡಿನಲ್ಲಿ ಹಣತೆ, ಎಣ್ಣೆ, ಬತ್ತಿ, ಬೆಂಕಿಕಡ್ಡಿಗಳನ್ನು ಕತ್ತಲಲ್ಲೂ ಗುರುತಿಸಿಕೊಂಡು ಸಣ್ಣ ಬೆಳಕನ್ನು ಹೊತ್ತಿಸಿಡುವ ಕೆಲವೇ ಸಾಮಾಜಿಕ ಕಾರ್ಯಕರ್ತರಂತೆ ಈ ನಾಲ್ಕು ದಶಕಗಳಲ್ಲಿ ಅವರನ್ನು ನಡೆಸಿಕೊಂಡಿರುವುದು ಅವರ ಅಸಾಮಾನ್ಯ ಸಾತ್ವಿಕ ಶಕ್ತಿಯ ಪ್ರಭಾವ.

ದೇಶಹಳ್ಳಿಯ ಮಣ್ಣಿನ ಸ್ಫೂರ್ತಿಯನ್ನೂ, ರೈತ ಸಂಸ್ಕೃತಿಯ ಓಘವನ್ನೂ, ನಗರದ ಆಧುನಿಕತೆಯನ್ನೂ ಹಿತಮಿತವಾಗಿ ಬೆರೆಸಿಕೊಂಡಿದ್ದಾರೆ ಶ್ರೀ ನಾರಾಯಣ. ಜಳ್ಳನ್ನೂ ಕಾಳನ್ನೂ ತಮ್ಮ ಕೈ ಚಳಕದಿಂದ ಬೇರ್ಪಡಿಸುವ ಗ್ರಾಮೀಣ ಒಕ್ಕಲುತನದ ಕುಶಲ ಗೃಹಿಣಿಯಂತೆ ಕೇರಿ ತೂರಿ ಗಟ್ಟಿಕಾಳನ್ನು ಸಂಗ್ರಹಿಸಿಕೊಳ್ಳುವ ಕಲೆ ಅನುಭವದ ಶಾಲೆಯಿಂದಲೇ ಅವರಿಗೆ ಕೈಗೂಡಿದೆ. ಅವರು ಕೈಗೊಳ್ಳುವ ಯಾವ ಕೆಲಸಕ್ಕೇ ಆಗಲಿ ಅವರು ಸಂಘಟಿಸಿಕೊಳ್ಳುವ ಮಿತ್ರವ್ಯೂಹ ಆರಂಭದಲ್ಲೇ ಅರ್ಥ ಯಶಸ್ಸನ್ನು ಗಳಿಸುವಂತಿರುತ್ತದೆ. ಸ್ವಾತಂತ್ರ್ಯ ಸಂಗ್ರಾಮ ಕಾಲದ ಭಾರತ ರಾಷ್ಟ್ರೀಯ ಕಾಂಗ್ರೆಸ್ ಗಾಂಧೀ ಪ್ರಣೀತ ಸತ್ಯಾಗ್ರಹ ಸಂದೇಶದ ಸ್ಫೂರ್ತಿಪಡೆದು ನಾಡಿನ ದಾಸ್ಯವಿಮೋಚನೆಗೆ ಹೋರಾಟ ಹೂಡಿದಾಗ ಸ್ವಯಂಸೇವಕನಾಗುವುದು ದೇಶಭಕ್ತಿಯ ಪ್ರತೀಕವೆನಿಸಿತ್ತು. ಸೇವೆ, ತ್ಯಾಗ ಮತ್ತು ಸತತ ಕಷ್ಟ

ಸಹಿಷ್ಣುತೆಗಳೇ ರಾಷ್ಟ್ರೀಯ ಕಾರ್ಯದ ಬೇಡಿಕೆಗಳಾಗಿದ್ದಾಗ ಅನಾಸಕ್ತಿಯೋಗಕ್ಕಾಗಿ ಗಾಂಧೀಜಿಯ ಕರೆ ಅಪ್ರತಿಹತವಾದಾಗ ಸಮರ್ಪಣ ಭಾವದಿಂದ ಬಾಳಿನ ಬಟ್ಟೆಯನ್ನು ಖಚಿತಪಡಿಸಿಕೊಂಡ ನಾರಾಯಣ ಇಂದಿಗೂ ಸ್ವಚ್ಛ ಧವಳ ವ್ಯಕ್ತಿತ್ವದ ಮುದ್ರೆಯನ್ನೊತ್ತುವ ಅಪೂರ್ವ ಕಾರ್ಯಕರ್ತ. ನಿರ್ಮಲ ಪ್ರಾಮಾಣಿಕ ಪ್ರೇಮನಿಷ್ಠ ಮಾರ್ಗವೇ ಅತ್ಯಂತ ಯಶಸ್ವಿಯಾಗುವ ಮಾರ್ಗ ಎಂದು ಭರವಸೆ ತಂದುಕೊಡುವಂತಹ ಈ ಮೃದುಮಾತಿನ ಸಮಾಜಸೇವಕ ಬೆಂಗಳೂರಿನ ನಾಗರಿಕ ಜೀವನಕ್ಕೆ ಗಂಧದ ಕೊರಡಿನಂತೆ ತಾನು ತೇದು ಪರಿಮಳವನ್ನು ಹಂಚಿದ್ದಾರೆ.

ಕನ್ನಡ ಸಾಹಿತ್ಯ ಸೇವೆಯ ಕ್ಷೇತ್ರದಲ್ಲಿ ನಾರಾಯಣರ ಪ್ರವೇಶದಿಂದ ಒಂದು ಹೊಸ ಆಯಾಮ ಸೃಷ್ಟಿಯಾದುದು ಸ್ಪಷ್ಟ. ಕನ್ನಡನಾಡಿನ ಶ್ರೀ ಸಾಮಾನ್ಯ ಯಾವ ಸಾಮಾಜಿಕ ಮತ್ತು ಸಾಂಸ್ಕೃತಿಕ ವಿಕಾಸಕ್ಕಾಗಿ ಹಂಬಲಿಸಿ ಪ್ರಯತ್ನಶೀಲನಾಗಿದ್ದಾನೋ ಅವನೆಡೆಗೆ ಸಾಹಿತ್ಯ ಪರಿಷತ್ತಿನಂಥಹ ಪ್ರತಿಷ್ಠಿತ ಸಂಸ್ಥೆ ಧಾವಿಸುವುದು ಹೇಗೆ ಎಂಬ ಹೊಸ ದೃಷ್ಟಿಯನ್ನು ತಂದುಕೊಟ್ಟ ಶ್ರೇಯಸ್ಸು ನಾರಾಯಣರದು. ಬರಹಗಾರರು, ಕಲಾವಿದರು ಕನ್ನಡದ ಅಂತಃಶಕ್ತಿಯನ್ನು ಹೆಚ್ಚಿಸಬಲ್ಲರು. ಆದರೆ ಅದನ್ನು ಆಸ್ವಾದಿಸಿ ಬೆಳೆಸಿ ರಕ್ಷಿಸಿಕೊಳ್ಳುವುದು ಸಾರ್ವಜನಿಕರ ಕೆಲಸ, ಸರ್ಕಾರದ ಕೆಲಸ. ಭಾಷೆಯ ಬೆಳವಣಿಗೆ ಎಂದರೆ ನಾಡಿನ ಜನಜೀವನದ ಸಮಗ್ರ ಸಮೃದ್ಧ ವಿಕಾಸ ಯೋಜನೆ. ಗಾಂಧೀಜಿ ತಮ್ಮ ಹದಿನೆಂಟು ರಚನಾತ್ಮಕ ಕಾರ್ಯಕ್ರಮದಲ್ಲಿ ದೇಶ ಭಾಷೆಯ ಬಳಕೆ ಮತ್ತು ಬೆಳವಣಿಗೆಯನ್ನು ಒಂದು ಮುಖ್ಯ ಭಾಗವಾಗಿ ಜೋಡಿಸಿದ್ದರು. 1938 ರಲ್ಲಿ ಹರಿಜನ ಪತ್ರಿಕೆಯಲ್ಲಿ ಬರೆಯುತ್ತಾ,

"ಬುದ್ಧಿ ಜೀವಿಗಳೆನಿಸಿಕೊಳ್ಳುವ ವಿದ್ಯಾವಂತ ವರ್ಗ ತಾಯ್ನುಡಿಯ ಬಗ್ಗೆ ಯಾವುದೇ ಅಸಡ್ಡೆಯ ಚೆಲ್ಲಾಟವಾಡಿದರೆ ನಮ್ಮ ಕನಸಿನ ಸ್ವತಂತ್ರ ಶಕ್ತಿಯುತ ಭಾರತವನ್ನೆಂದೂ ಕಟ್ಟಲಾರೆವು. ನಮ್ಮ ದಾಸ್ಯಶೃಂಖಗಳನ್ನು ಕಳಚಿಕೊಂಡು ಬೆಳೆಯಲು ದೃಢವಾದ ಪ್ರಬಲ ಪ್ರಯತ್ನ ಬೇಕು. ಶೈಕ್ಷಣಿಕ, ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ದಾಸ್ಯ ವಿಮೋಚನೆಗೆ ಮಾತೃಭಾಷಾ ಪ್ರೇಮ ಅಗತ್ಯ. ಈ ಪ್ರಯತ್ನದಲ್ಲೇ ನಮ್ಮ ಹೋರಾಟದ ಮುಕ್ಕಾಲು ಭಾಗದ ಯಶಸ್ಸು ಸಿದ್ಧಿಸಿರುತ್ತದೆ" ಎಂದಿದ್ದಾರೆ.

ನಾಳಿನ ಜಗತ್ತಿನಲ್ಲಿ ವರ್ಗ ವರ್ಣ ಜಾತಿ ಮತ್ತು ಪಕ್ಷಗಳ ಸಂಘರ್ಷಗಳನ್ನು ಮೆಟ್ಟಿನಿಂತು ಶೋಷಣಮುಕ್ತ ಸರ್ವಸಮಾನತೆಯ ಸಮಾಜ ನಿರ್ಮಿಸಲು ಒಂದು ನಿರ್ವೈರ, ನಿಷ್ಪಕ್ಷ, ನಿರ್ಭಯ ಮನೋಧರ್ಮದ ವಿಚಾರಶೀಲ ಸಾತ್ವಿಕರ ಸಂಘಟನೆ ಪ್ರಭಾವಯುತವಾಗಿ ಕೆಲಸ ಮಾಡಬೇಕು ಎಂದಿದ್ದಾರೆ ಆಚಾರ್ಯ ವಿನೋಬ ಭಾವೆ. ಅದಕ್ಕವರು "ಆಚಾರ್ಯಕುಲ" ಎಂದು ಕರೆದಿದ್ದಾರೆ. ಸಾಮಾಜಿಕ ಹೊಣೆಗಾರಿಕೆಯನ್ನು ಅಂಗೀಕರಿಸಿ, ಸ್ವಾರ್ಥ ಸಾಧನೆಗೆ ಎಡೆಕೊಡದೆ, ಹಣ ಮತ್ತು ಅಧಿಕಾರಗಳ ಸ್ಪರ್ಧೆಯಲ್ಲಿ ನಿರತರಾಗದೆ ಪಕ್ಷಾತೀತವಾಗಿ ನಿಲ್ಲುವ ಚಿಂತನಶೀಲ ಸುಸಂಸ್ಕೃತ ವಿದ್ವಜ್ಜನ ಶಕ್ತಿಯನ್ನು ಈ ನಾಡು ರೂಢಿಸಿಕೊಳ್ಳಬೇಕಾದುದು ಅಗತ್ಯ. ಜನಜೀವನದ ಸಮಸ್ಯೆಗಳಲ್ಲಿ ನಿರ್ಭಯವಾಗಿ ಪ್ರವೇಶಿಸಿ ಪರಿಹಾರ ಮಾರ್ಗಗಳನ್ನು ಶೋಧಿಸಿ, ತಾವೇ ಜನತೆಯೊಡನೆ ಕಾರ್ಯೋನ್ಮುಖರಾಗುವ ಕ್ರಿಯಾಶೀಲ ಸಮಾಜಸೇವಕರಿಂದಲೇ ಇಂಥ ಸಂಘಟನೆ ರೂಪುಗೊಳ್ಳಬೇಕು. ಅಂಥವರನ್ನು ಗುರುತಿಸ ಹೊರಟಾಗ ನಮ್ಮ ಮನಸ್ಸಿಗೆ ಪ್ರಥಮವಾಗಿ ಸೂಚಿತವಾಗುವ ಕೆಲವೇ ಸಾರ್ವಜನಿಕ ನಾಯಕರಲ್ಲಿ ಶ್ರೀ ನಾರಾಯಣ ಅವರ ಹೆಸರು ಸೇರುತ್ತದೆ. ಜಗತ್ತಿನಲ್ಲೇ ಇಂದು ಒಂದು ಶಾಂತಿಯುತ ಅಹಿಂಸಾತ್ಮಕ ಸರ್ವೋದಯ ಸಮಾಜಕ್ಕಾಗಿ ಹಂಬಲ ಅಂಕುರಿಸುತ್ತಿದೆ. ಆ ದಿಸೆಯಲ್ಲಿ ಹೆಜ್ಜೆಯಿಡಲು ಲೋಕ ತವಕಿಸುತ್ತಿದೆ. ಸಜ್ಜನಶಕ್ತಿ ಮಾರ್ಗದರ್ಶನ ಮಾಡಬೇಕು. ನಾರಾಯಣರಂತಹ ಜನಸೇವಕರು ಒಗ್ಗೂಡಿ ಕನ್ನಡನಾಡಿನಲ್ಲಿ ಈ ಹೊಸಯುಗದ ಕಿರುಬೆಳಕು ಪ್ರಜ್ವಲಿಸುವಂತಾಗಲಿ ಎಂದು ಹಾರೈಸೋಣ.

ಶತಾಯುಗಳಾಗಲಿ

ಡಾ|| ಗೊರೂರು ರಾಮುಸ್ವಾಮಿ ಅಯ್ಯಂಗಾರ್

ನಾರಾಯಣರು ಸದಾ ಸೇವಾತತ್ಪರರು. ಜನಸೇವೆಯಲ್ಲಿ ಅವರು ಬಿಡುವನ್ನೇ ಬಯಸಿದವರಲ್ಲ. ಅವರು ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದುದು ಅನಿರೀಕ್ಷಿತವೂ ಅಲ್ಲ. ಅವರು ಸಾಹಿತಿಗಳು ಮತ್ತು ಸಾಹಿತ್ಯಾಭಿಮಾನಿಗಳು. ಸಾಹಿತ್ಯ ಜನ ಸೇವೆಗೆ ನೇರವಾದ ಮತ್ತು ನಿಕಟವಾದ ಮಾರ್ಗವೆಂಬುದನ್ನು ಅವರು ಅರಿತರು. ಅವರ ಪ್ರವೇಶದಿಂದ ಸಾಹಿತ್ಯಪರಿಷತ್ತಿಗೆ ಹೊಸ ಚೇತನ ಮೂಡಿತು.

ಶ್ರೀಮಾನ್ ಜಿ ನಾರಾಯಣರು, ನಾಡು ನುಡಿ ಜನಜೀವನದಲ್ಲಿ ಕಳೆದ ಮುವತ್ತೈದು ವರುಷಗಳಿಗಿಂತಲೂ ಹೆಚ್ಚುಕಾಲ ಅವಿಶ್ರಾಂತವಾಗಿ ಆತ್ಮಶುದ್ಧಿಯಿಂದ ದುಡಿದವರು. ಅವರು ತಮ್ಮ ಜೀವನವನ್ನೇ ನಾಡಸೇವೆಗೆ ಮುಡುಪಾಗಿ ಇಟ್ಟಿದ್ದಾರೆ. ಅವರು ಸದಾ ಚಿಂತಿಸುತ್ತಿರುವುದು ಕರ್ನಾಟಕ ಕನ್ನಡನುಡಿ ಭಾರತದ ಭವಿಷ್ಯದ ಕನಸುಗಳು ಮತ್ತು ಕಾರ್ಯ. ಅವರ ಮನಸ್ಸು ಬುದ್ಧಿ ಒಂದು ಕ್ಷಣವೂ ದೇಶಕಾರ್ಯದಿಂದ ವಿಮುಖವಾಗುವುದಿಲ್ಲ ಮತ್ತು ಅವರು ಹಿಡಿದ ಕಾರ್ಯವನ್ನು ಸಾಧಿಸುವ ಛಲವುಳ್ಳವರೂ ಆಗಿದ್ದಾರೆ. ನಮ್ಮ ದೇಶ, ಜನತೆಯ ಚಟುವಟಿಕೆಗಳು, ದೇಶಹಿತ ಕಾರ್ಯಗಳು ಯಾವ ಮಾರ್ಗದಲ್ಲಿ ಹೋಗಬೇಕೆಂಬುದನ್ನೂ ಅವರು ದೀರ್ಘಾಲೋಚನೆ ಮತ್ತು ಪರಿಶ್ರಮದಿಂದ ನಿರ್ಣಯಿಸಿಕೊಂಡಿದ್ದಾರೆ.

ನಾರಾಯಣರು ಗ್ರಾಮಾಂತರ ಪ್ರದೇಶದವರು. ನಮ್ಮ ದೇಶದ ಗ್ರಾಮಜೀವನದ ಸೊಗಸು ಪ್ರಕೃತಿರಮ್ಯತೆ ಈ ನೆಲ ನೀರು ಗಾಳಿ ಕಾಡುಗಳು, ಜನರಲ್ಲಿ ಅಡಗಿರುವ ಸ್ವಾಭಾವಿಕ ಸಂಸ್ಕೃತಿ ಒಳ್ಳೆಯತನ ಇವುಗಳನ್ನೆಲ್ಲ ಅವರು ಬಲ್ಲವರು, ಅನುಭವಿಸಿದವರು. ಬೆಂಗಳೂರಿನಲ್ಲಿದ್ದರೂ ಅವರು ಗ್ರಾಮೀಣರಂತೆಯೇ ಇದ್ದಾರೆ. ಆಧುನಿಕ ಯಾಂತ್ರೀಕೃತ ಜೀವನ ಹೇಗೆಯೇ ಇದ್ದರೂ ನಮ್ಮ ಜನತೆ ಪ್ರಾಚೀನ ಭಾರತ ಸಂಸ್ಕೃತಿಯ ಉತ್ತಮ ಅಂಶಗಳನ್ನು ಮರೆಯದಿರಬೇಕೆಂಬುದು ಅವರ ಇಚ್ಛೆ. ನಾರಾಯಣರೂ ನನ್ನಂತೆ, ಹೆಚ್ಚು ಆಧುನಿಕ ವಿದ್ಯಾಭ್ಯಾಸವನ್ನು ಹೊಂದಿದವರಲ್ಲ. ಆದರೆ ಜನಜೀವನದ ಅನುಭವ ವ್ಯಾಸಂಗ, ಜವಾಬ್ದಾರಿ ಕಾರ್ಯಗಳ ಹೊಣೆಗಾರಿಕೆ, ಉತ್ತಮಧ್ಯೇಯ, ಸತತ ಕಾರ್ಯತತ್ಪರತೆ ಇವುಗಳಿಂದ ಅವರು, ದೇಶದ ಯಾವುದೇ ಉನ್ನತ ಸ್ಥಾನವನ್ನೂ ಹೊಂದಿ ನಿರ್ವಹಿಸುವ ಸಾಮರ್ಥ್ಯವನ್ನು ಸಂಪಾದಿಸಿಕೊಂಡಿದ್ದಾರೆ.

ನಾರಾಯಣರಿಗೆ ತಮ್ಮ ಯವ್ವನ ಕಾಲ್ಲದಲ್ಲಿಯೇ, ಹಿರಿಯರಾದ ಡಿ.ವಿ.ಜಿಯವರ ಮಾರ್ಗದರ್ಶನವೂ ಸಂಪರ್ಕವೂ ದೊರಕಿತು. ನಾರಾಯಣರು ಸ್ವಾತಂತ್ರ್ಯ ಹೋರಾಟದಲ್ಲಿಯೂ ಭಾಗವಹಿಸಿದರು. ಅದು ನಿಜವಾಗಿ ಬಹುಕಷ್ಟದ ಕಾಲವಾಗಿತ್ತು. ಇವರೂ ವೀರಣ್ಣಗೌಡರೂ ರೈಲು ಸ್ಟೇಶನ್ ಹೋಟಲಿನಿಂದ ಎರಡಾಣೆ ಅನ್ನದ ಪೊಟ್ಟಣಗಳನ್ನು ತಂದು ಜೀವಿಸುತ್ತಿದ್ದರು. ನಾರಾಯಣರಿಗೆ

ಬಾಲ್ಯದಿಂದಲೇ ಸಾಹಿತ್ಯ ಪತ್ರಿಕೋದ್ಯಮ ಇವುಗಳಲ್ಲಿಯೂ ಆಸಕ್ತಿ. ಕನ್ನಡಿಗರಿಗೆ ನಗು ಮರತೇ ಹೋಗಿದೆ. ಅವರು ಏನು ಮಾಡಿದರೂ ನಗುವುದಿಲ್ಲ. ಈ ದುಗುಡದ ಗೊಂಬೆಗಳನ್ನು ನಗಿಸಲು ನಾರಾಯಣರು 'ವಿನೋದ' ಎಂಬ ಮಾಸಪತ್ರಿಕೆಯನ್ನು ಹೊರಡಿಸಿದರು. ಒಂದು ತಿಂಗಳಿಗೆ ಎರಡು ಆಣೆ ಚಂದಾ ಇಟ್ಟಿದ್ದರು. ಪತ್ರಿಕೆಗಳನ್ನು ನಡೆಸುವುದು ನಿಜವಾಗಿ ಕಷ್ಟ. 'ಕೊರವಂಜಿ' ಇಪ್ಪತ್ತೈದು ವರುಷಗಳಿಗೆ ನಿಂತುಹೋಯಿತು. ಆದರೆ ನಾರಾಯಣರು ದೃಢವ್ರತರು. ಹಿಡಿದ ಕೆಲಸವನ್ನು ಬಿಡುವವರಲ್ಲ. ವಿನೋದಕ್ಕೆ 25 ವರ್ಷಗಳಾದಾಗ ಅವರು "ಪತ್ರಿಕೆ ನಿಲ್ಲಿಸಿಬಿಡುತ್ತೇನೆ" ಎಂದರು. ಆಗ ಡಿ.ವಿ.ಜಿ. ಯವರು "ಇನ್ನೂ ನಡೆಸಿ" ಎಂದರು. ಲಾಭವೋ ನಷ್ಟವೋ ನಾರಾಯಣರು ಪತ್ರಿಕೆ ನಡೆಸುತ್ತಿದ್ದಾರೆ. ಈಗ ಅದು 33-34ನೇ ವರುಷದಲ್ಲಿ ಇರಬಹುದು. ಅದರ ಮೂಲಕ ಅವರು ಅನೇಕ ಹಾಸ್ಯ ಲೇಖಕರನ್ನು ಬೆಳಕಿಗೆ ತಂದಿದ್ದಾರೆ. ತಿಂಗಳಿಗೆ ಒಂದು ಗಂಟೆಯಾದರೂ ಶುಭ್ರವಾದ ತಿಳಿನಗೆಗೆ ಅವಕಾಶಮಾಡಿಕೊಡುತ್ತಾರೆ.

ನಾರಾಯಣರು ಸಮಾಜದಲ್ಲಿ ರಾಜಕೀಯದಲ್ಲಿ ಪರಿಶುದ್ಧ ಜೀವನಕ್ಕೆ, ಪ್ರಾಮಾಣಿಕ ನಡತೆಗೆ ಬೆಲೆ ಕೊಡುವವರು. ಬೆಂಗಳೂರು ಪೌರಜೀವನದಲ್ಲಿ ಅವರು ಅನೇಕ ಅವಧಿಗಳು ಪೌರಸಭಾ ಸದಸ್ಯರಾಗಿ ಸೇವೆ ಸಲ್ಲಿಸಿದರು. ಅವರು ಒಂದೇ ಸಲವೂ ಪರಾಭವವನ್ನು ಅನುಭವಿಸಲಿಲ್ಲ. ಅವರ ಕಾಲದಲ್ಲಿ ಪೌರಸಭಾ ಕಾರ್ಯಗಳು ಪೌರರಿಗೆ ಅನುಕೂಲಗಳು ರಸ್ತೆ ಬೆಳಕು ನೀರು ಮನೆ ಎಲ್ಲವೂ ಸಮೃದ್ಧವಾಗಿತ್ತು. ಅವರು ಬೆಂಗಳೂರು ನಗರದ ಮೇಯರ್‌ರೂ ಆಗಿದ್ದರು. ಆ ಕಾಲದ ಸೌಖ್ಯ ಜೀವನವನ್ನು ಬೆಂಗಳೂರಿನ ಹಿರಿಯ ನಾಗರಿಕರು ಇಂದೂ ಆಸೆ ಮತ್ತು ಕೃತಜ್ಞತೆಯಿಂದ ನೆನೆಯುತ್ತಾರೆ. ಈಗ ಕೆಲವು ವರುಷಗಳ ಕೆಳಗೆ ವಿಧಾನಸೌಧದ ಸಭಾಭವನದಲ್ಲಿ ಬೆಂಗಳೂರಿನ ನಾಗರಿಕರೂ ಶಾಸಕರೂ ಶ್ರೀಮಾನ್ ವೀರಣ್ಣಗೌಡರಿಗೂ ನಾರಾಯಣರಿಗೂ ಒಂದು ಸನ್ಮಾನ ಸಮಾರಂಭವನ್ನು ಏರ್ಪಡಿಸಿ ತಮ್ಮ ಆದರವನ್ನೂ ಪ್ರೀತಿಯನ್ನೂ ವ್ಯಕ್ತಪಡಿಸಿದರು.

ನಾರಾಯಣರು ಸದಾ ಸೇವಾತತ್ಪರರು. ಜನಸೇವೆಯಲ್ಲಿ ಅವರು ಬಿಡುವನ್ನೇ ಬಯಸಿದವರಲ್ಲ. ಅವರು ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದುದು ಅನಿರೀಕ್ಷಿತವೂ ಅಲ್ಲ. ಅವರು ಸಾಹಿತಿಗಳು ಮತ್ತು ಸಾಹಿತ್ಯಾಭಿಮಾನಿಗಳು. ಸಾಹಿತ್ಯ ಜನಸೇವೆಗೆ ನೇರವಾದ ಮತ್ತು ನಿಕಟವಾದ ಮಾರ್ಗವೆಂಬುದನ್ನು ಅವರು ಅರಿತರು. ಅವರ ಪ್ರವೇಶದಿಂದ ಸಾಹಿತ್ಯಪರಿಷತ್ತಿಗೆ ಹೊಸ ಜೀವನ ಚೇತನ ಮೂಡಿತು. ಸಾಹಿತ್ಯ ಜನಜೀವನದ ನಿಕಟವರ್ತಿಯಾಯಿತು. ಅದರ ತಳಹದಿ ವಿಶಾಲವಾಯಿತು. ಪರಿಷತ್ತು ಎಲ್ಲರ ಮನೆ ಬಾಗಿಲಿಗೆ ಹೋಯಿತು. ಜಿಲ್ಲಾ ಪರಿಷತ್ತು ತಾಲ್ಲೂಕು ಪರಿಷತ್ತು ಹೀಗೆ ಪರಿಷತ್ತಿನ ಸಾರ್ವತ್ರೀಕರಣವಾಯಿತು. ಅದು ಒಂದು ಪ್ರಜಾಸಂಸ್ಥೆಯಾಯಿತು. ಅದರ ಬುಡ ಬೆಂಗಳೂರಿನಲ್ಲಿದ್ದರೂ ಅದರ ಕೊಂಬೆ ರೆಂಬೆ ಹೂವು ಹೀಚು ಹಣ್ಣು ಕಾಯಿ ದೇಶದ ಎಲ್ಲೆಡೆ ಹರಡಿದವು.

ನಾರಾಯಣರು ಪರಿಷತ್ತನ್ನು ಒಂಬತ್ತು ವರುಷ ನಡೆಸಿದರು. ಅದರ ಭವಿಷ್ಯಕ್ಕಾಗಿ ಅನೇಕ ಯೋಜನೆಗಳನ್ನು ಹಾಕಿದರು. ಪ್ರಕಟನಾಕಾರ್ಯ ಹೊಸ ಉತ್ಸಾಹದಿಂದ ಮುಂದುವರಿಯಿತು. ಮಹಿಳೆಯರು ಮಕ್ಕಳಿಗಾಗಿಯೇ ವಿಶಿಷ್ಟವಾದ ಅನೇಕ ಕಾರ್ಯಕ್ರಮಗಳ ನಿರ್ಮಾಣವಾಯಿತು ಮಹಿಳೆಯರ ಸಾಹಿತ್ಯ ರಚನೆಗೆ ವಿಶೇಷವಾದ ಕಾರ್ಯಕ್ರಮವೇ ಏರ್ಪಾಡಾಯಿತು. ಮನೆ ಮನೆಗೆ ಪುಸ್ತಕಗಳನ್ನು ಕೊಂಡು ಒಯಿದು ಮಾರುವ ವ್ಯವಸ್ಥೆಯೂ ಆಯಿತು. ಜಾನಪದ ಕಲೆಗಳಿಗೆ ವಿಶೇಷವಾದ ಪ್ರೋತ್ಸಾಹ ಅವುಗಳ ಚಿತ್ರೀಕರಣ, ವಜ್ರಮಹೋತ್ಸವ, ಸಮ್ಮೇಳನಗಳ ಚಿತ್ರೀಕರಣ ಎಲ್ಲವುಗಳಿಗೂ ನಾರಾಯಣರೇ ಅಡಿಪಾಯವನ್ನು ಹಾಕಿದರು. ಆ ಕಾರ್ಯಗಳನ್ನೂ ಇನ್ನೂ ಅನೇಕ ಕಾರ್ಯಗಳನ್ನೂ ಈಚಿನ ಅಧ್ಯಕ್ಷರು ಉತ್ಸಾಹದಿಂದಲೂ ದಕ್ಷತೆಯಿಂದಲೂ ಮುಂದುವರಿಸುತ್ತಿದ್ದಾರೆ. ಪರಿಷತ್ತಿನ ಹುದ್ದೆಯಿಂದ ನಿವೃತ್ತರಾದರೂ ನಾರಾಯಣರು ಸಾಹಿತ್ಯ ಮತ್ತು ಸಮಾಜಸೇವೆಯ ಕಾರ್ಯಗಳನ್ನು ಮುಂದುವರಿಸುತ್ತಲೇ ಇದ್ದಾರೆ. ಅವರಿಗೆ ನಿವೃತ್ತಿಯೂ ಇಲ್ಲ. ಜನಸೇವೆಯಲ್ಲಿ ಆಯಾಸವೂ ಇಲ್ಲ. ಯಾವುದೇ ಉತ್ತಮವಾದ ಕಾರ್ಯಕ್ಕೂ ಅವರ ಪ್ರೋತ್ಸಾಹ ಬೆಂಬಲ ಇದ್ದೇ ಇದೆ. ಅವರು ಎಷ್ಟು ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿದ್ದಾರೆಯೋ ಅವರಿಗೇ ತಿಳಿಯದು. ಗಮಕ ಕಲಾ ಪರಿಷತ್ತಿಗೆ ಹೊಸ ಚೈತನ್ಯವನ್ನು ತುಂಬಿ ಅದಕ್ಕೆ ಒಂದು ಆಕಾರವನ್ನು ಕೊಟ್ಟವರೇ ನಾರಾಯಣರು.

ನಾರಾಯಣರು ನಮ್ಮ ನಾಡಿನ ಜನ ಜೀವನದಲ್ಲಿ ಎಲ್ಲ ಕ್ಷೇತ್ರಗಳಲ್ಲಿಯೂ ಎಲ್ಲ ಮಟ್ಟಗಳಲ್ಲಿಯೂ ಉನ್ನತ ಮೌಲ್ಯವನ್ನು ಬಯಸುವವರು. ಸರ್ಕಾರ, ಪ್ರಜೆಗಳು, ವಿದ್ಯಾರ್ಥಿಗಳು, ವ್ಯಾಪಾರಿಗಳು, ನೌಕರರು, ರಾಜಕೀಯ ವ್ಯಕ್ತಿಗಳು ಎಲ್ಲರಲ್ಲಿಯೂ ಪ್ರಾಮಾಣಿಕತೆ ದಕ್ಷತೆ ನಾಡಿಗಾಗಿ ಉತ್ತಮ ಸೇವೆಗಳನ್ನು ನಿರೀಕ್ಷಿಸುವವರು. ಆ ವಿಷಯದಲ್ಲಿ ಅವರದು ತುಂಬ ಖಡಾಖಂಡಿತ. ಎಷ್ಟೇ ಕಷ್ಟವಾದರೂ ಋಜುಮಾರ್ಗವನ್ನು ಬಿಡಕೂಡದು. ಎಲ್ಲವೂ ಭ್ರಷ್ಟಗೊಂಡಿರುವ ಈಚಿನ ದಿನಗಳಲ್ಲಿ ಅವರಿಗೆ ಸಾತ್ವಿಕ ಅತೃಪ್ತಿ ಬಹಳವಾಗಿದೆ. ಜನತೆ ಎಚ್ಚರಗೊಳ್ಳಬೇಕು. ದೇಶಪ್ರೇಮ ಪ್ರಾಮಾಣಿಕತೆ ದುಡಿತ ಭಾಷಾಪ್ರೇಮ ಬಡವರಲ್ಲಿ ಅನುಕಂಪ ಇನ್ನೆಲ್ಲ ನಮ್ಮಲ್ಲಿ ಬರಬೇಕು. ನಮ್ಮ ಗಡಿಗಳಿಗೆ ಅಪಾಯ ಒದಗದಂತೆ ನಾವು ಕಾಯಬೇಕು. ಈ ಸತ್‌ಪ್ರೇರಣೆ ಸತ್‌ಜಾಗೃತಿ ಜನರಲ್ಲಿ ಸದಾ ಎಚ್ಚರವಾಗಿರುವಂತೆ ಪ್ರೇರಿಸಲು ಉದ್ಬೋಧಿಸಲು ಅವರು ಜಾಗೃತಿ ಪರಿಷತ್ ಎಂಬ ಒಂದು ಸಂಸ್ಥೆಯನ್ನೇ ಸ್ಥಾಪಿಸಿ ನಡೆಸಿಕೊಂಡು ಬರುತ್ತಿದ್ದಾರೆ.

ನಾರಾಯಣರು ಇಷ್ಟೊಂದು ಸಾರ್ವಜನಿಕ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿದ್ದರೂ ತಮ್ಮ ಉಲ್ಲಾಸವನ್ನೂ ಉತ್ಸಾಹವನ್ನೂ ಕಳೆದುಕೊಂಡಿಲ್ಲ. ಯವ್ವನ ಅವರನ್ನು ಕೈಬಿಡಲು ಹಿಂದೆಗೆಯುತ್ತಿದೆ. ಧೃಡಸಿಶ್ಚಯದಿಂದ ಅವರು ಹಿಡಿದ ಕಾರ್ಯದಲ್ಲಿ ಮುಂದುವರಿಯುತ್ತಾರೆ. ಅವರಲ್ಲಿ ಯಾವುದೇ ವ್ಯಸನವೂ (ಚಟ ಅಭ್ಯಾಸ) ಇಲ್ಲ.

ಈಗ ಕಳೆದಿರುವಷ್ಟೇ ಕಾಲ, ಇನ್ನೂ ಅವರ ಮುಂದೆ ಇದೆ. ಅವರ ಮಾರ್ಗದರ್ಶನ—ಈ ಕಷ್ಟಕರವಾದ ದಿನಗಳಲ್ಲಿ ನಮಗೆ ಸದಾ ದೊರೆಯುತ್ತಿರುವುದು ನಮ್ಮ ಸೌಭಾಗ್ಯ. ಅವರು ಇನ್ನೂ ಅನೇಕ ಕಾಲ ನಮ್ಮೊಡನೆ ಇದ್ದು ನಮ್ಮನ್ನು ನಡೆಸಲಿ ಎಂದು ಪ್ರಾರ್ಥಿಸುತ್ತೇನೆ.

ನಾನು ಮಾನವಜಾತಿಗೆ ಸೇರಿದವನಾದುದರಿಂದ ಯಾರೊಬ್ಬರ ಸಾವು ಕೂಡ ನನಗೆ ದುಃಖವನ್ನುಂಟುಮಾಡುತ್ತದೆ. ಆದ್ದರಿಂದ ಗಂಟೆ ಯಾರಿಗಾಗಿ ಬಾರಿಸುತ್ತದೆ ಎಂದು ಕೇಳದಿರು ; ಅದು ನಿನಗಾಗಿ ಬಾರಿಸುತ್ತದೆ.

—ಜಾನ್‌ಡೋನ್

ಅಜಾತ ಶತ್ರು

ಡಾ. ರಾ. ಯ. ಧಾರವಾಡಕರ

ಜಿ. ನಾರಾಯಣರು ಪರಿಷತ್ತನ್ನು ಕಟ್ಟಿದರು; ವೈಭವಶೈಲಿ ಯಾಗಿ ಕಟ್ಟಿದರು. ಅದರಿಂದ ನಿರ್ಗಮಿಸಬೇಕೆಂದೆನಿಸಿದಾಗ, ನಗುನಗುತ್ತ ಹಿಂದೆ ಸರಿದರು. ಅಷ್ಟೇ ಅಲ್ಲ; ಪರಿಷತ್ತಿನ ಅಧ್ಯಕ್ಷಸ್ಥಾನವನ್ನು ಬಿಟ್ಟನಂತರವೂ ಸಹ, ಪರಿಷತ್ತಿಗೆ ತಮ್ಮ ಸಹಾಯ ಹಸ್ತವನ್ನು ಮುಂದುವರಿಸಿದರು. ಸೇವಾದಲ ಸಂಸ್ಕೃತಿ ಯನ್ನು ಆತ್ಮಸಾತ್ ಮಾಡಿಕೊಂಡವರಿಗೇ ಇಂಥ ಮನೋ ಭಾವ ಬರುವುದು.

ಮಾನ್ಯ ಜಿ. ನಾರಾಯಣರನ್ನು ನೆನೆದಾಗಲೆಲ್ಲ ಕಣ್ಣೆದುರಿಗೆ ಕಟ್ಟುವುದು ಅವರ ಸಾದಾ-ಸೀದಾ ವೇಷ, ನುಡಿ, ನಡೆ. ಹಳೆಯ ಕಾಲದ ಕಾಂಗ್ರೆಸಿಗರಂತೆ ಅವರು ಯಾವಾಗಲೂ ಉರುಟು ಖಾದಿಬಟ್ಟೆಯನ್ನೇ ತೊಟ್ಟಿರುತ್ತಾರೆ. ಆ ಖಾದಿ ನಯವಾದುದಲ್ಲ; ಹಿಟ್ಟಿಸ್ತ್ರಿಯದಲ್ಲ. ತೀರ ಸಾದಾ. ಅವರ ನುಡಿಯೂ ಸಹ ಅಷ್ಟೇ ಮೃದುವಾದುದು. ತಾವು ಏನು ಮಾಡಬೇಕೆಂಬುದನ್ನು ಅವರು ಸ್ಪಷ್ಟವಾಗಿ ತಿಳಿದುಕೊಂಡಿರುತ್ತಾರೆ, ಅದನ್ನು ನಯವಾಗಿ ತಮ್ಮ ಸಹಕಾರ್ಯಕರ್ತರಿಗೆ ತಿಳಿಸಿ ಹೇಳುತ್ತಾರೆ. ಅವರ ಮಾತಿನಲ್ಲಿ ಕಾಠಿಣ್ಯವಿಲ್ಲ, ರೋಷವಿಲ್ಲ. ಅವರ ನಡೆಯೂ ಅಷ್ಟೇ ನೇರ. ಮನಸ್ಸು ಒಪ್ಪಿದರೆ ಹೌದೆನ್ನುತ್ತಾರೆ; ಇಲ್ಲವಾದರೆ, 'ಆಗದು' ಎನ್ನುತ್ತಾರೆ.

ತಾವು ಗಳಿಸಿದ ಪುಣ್ಯವನ್ನೆಲ್ಲ ನಾರಾಯಣರು ಕನ್ನಡ ಸಾಹಿತ್ಯ ಪರಿಷತ್ತಿಗಾಗಿ ಧಾರೆ ಎರೆದರು. ರಚನಾತ್ಮಕ ಕಾರ್ಯಕರ್ತರಾಗಿ, ಸಂಘ ಸಂಸ್ಥೆಗಳ ಅಧಿಕಾರ ಸ್ಥಾನದಲ್ಲಿದ್ದವರಾಗಿ, ಬೆಂಗಳೂರು ಪುರಸಭೆಯ ಮೇಯರರಾಗಿ ಅವರು ಯಾವ ಯಾವ ವ್ಯಕ್ತಿಗಳ ಕೂಡ ಸಂಪರ್ಕದಲ್ಲಿ ಬಂದಿದ್ದರೋ, ಅವರೆಲ್ಲ ಅಧಿಕಾರ ಸ್ಥಾನದಲ್ಲಿದ್ದಾಗ, ಅವರಿಂದ ಸಾಹಿತ್ಯ ಪರಿಷತ್ತಿಗಾಗಿ ತುಂಬಾ ಕೆಲಸ ಮಾಡಿಸಿಕೊಂಡರು. ಸರ್ಕಾರದ ವಿಶ್ವಾಸವನ್ನು ಸಂಪಾದಿಸಿಕೊಂಡು, ನಾರಾಯಣರು ಪರಿಷತ್ತಿನ ಮೂಲಕ ಹತ್ತಾರು ಯೋಜನೆಗಳನ್ನು ಹಾಕಿಕೊಂಡರು. ಆ ಯೋಜನೆಗಳೆಲ್ಲ ಯಶಸ್ವಿಯಾದಾಗ, ಆ ಯಶಸ್ಸಿನ ಮುತ್ತು ಅವರ ತಲೆಗೇರಲಿಲ್ಲ. ಅವರು ರಚನಾತ್ಮಕ ಕಾರ್ಯಕರ್ತರು. ಸೇವಾದಲದ ಸ್ವಯಂಸೇವಕರಾಗಿದ್ದ ನಾರಾಯಣರು ಸೇವಾದಲ ಸಂಸ್ಕೃತಿಯನ್ನು ಸಂಪೂರ್ಣವಾಗಿ ಅಳವಡಿಸಿಕೊಂಡವರು. ಇತರರು ಯಾವುದೋ ಒಂದು ಸ್ವಾರ್ಥ ದೃಷ್ಟಿಯನ್ನಿಟ್ಟುಕೊಂಡು ಕೆಲಸಮಾಡುತ್ತಿದ್ದರೆ, ಸೇವಾದಲ ಕಾರ್ಯಕರ್ತ ಕೇವಲ ಧ್ಯೇಯಕ್ಕಾಗಿ ಕೆಲಸಮಾಡುತ್ತಾನೆ. ಕೆಲಸ ಮಾಡುವಾಗ ಸಂಪೂರ್ಣವಾಗಿ ಅದರಲ್ಲಿ ಮಗ್ನನಾಗಿರುತ್ತಾನೆ. ಕೆಲಸ ಪೂರ್ತಿಯಾದಾಗ, ಅದರ ಯಶಸ್ಸಿನ ಗುತ್ತಿಗೆಯನ್ನು ತಾನು ಮಾತ್ರ ಇಟ್ಟುಕೊಳ್ಳದೆ, ಅದರ ಫಲಭೋಗವನ್ನು ಅಪೇಕ್ಷಿಸದೆ, ಸ್ಥಿತಪ್ರಜ್ಞನ ಹಾಗೆ ಅದರಿಂದ ದೂರ ಸರಿದುಬಿಡುತ್ತಾನೆ. ನಾರಾಯಣರ ಕಾರ್ಯವಿಧಾನವೂ ಇಂಥದೇ. ಕೆಲಸ ಮಾಡುವುದು ದೊಡ್ಡ ಮಾತಲ್ಲ, ಕೆಲಸದಲ್ಲಿ ಯಶಸ್ಸನ್ನು ಪಡೆಯು

ವುದೂ ದೊಡ್ಡ ಮಾತಲ್ಲ ; ಆದರೆ ಕೆಲಸದಲ್ಲಿ ಯಶಸ್ಸು ದೊರಕಿದ ಮೇಲೆ ಆ ಯಶಸ್ಸನ್ನು ಹತ್ತು ಜನ ಸಹ ಕಾರ್ಯಕರ್ತರ ಕೂಡ ಹಂಚಿಕೊಂಡು, ಹಿಂದೆ ಸರಿಯುವುದು ದೊಡ್ಡ ಮಾತು. ಯಾಕೆಂದರೆ, ಯಾವಾಗಲೂ ಯಶಸ್ಸಿಗೆ ಪಿತೃಗಳು ಬಹಳ ; ಸೋಲು ಅನಾಥರಾಗಿರುತ್ತದೆ. ನಾರಾಯಣರಿಲ್ಲದೆ, ಪರಿಷತ್ತಿನ ಭೌತಿಕ ಬೆಳವಣಿಗೆ ಇಷ್ಟರ ಮಟ್ಟಿಗೆ ಆಗಲು ಸಾಧ್ಯವೇ ಇರಲಿಲ್ಲ.

ಒಂದು ಕಾಲಕ್ಕಂತೂ ನಾರಾಯಣರೆಂದರೆ ಪರಿಷತ್ ; ಪರಿಷತ್ತೆಂದರೆ ನಾರಾಯಣರು ಎಂಬಂತಾಗಿತ್ತು. ಹೋದಲ್ಲಿ, ಬಂದಲ್ಲಿ, ಅವರು ಮಾತನಾಡುವುದು ಪರಿಷತ್ತಿನ ಬಗ್ಗೆಯೇ ; ದುಡಿಯುವುದು ಕೇವಲ ಪರಿಷತ್ತಿಗಾಗಿಯೇ. ಅಂತೆಯೇ, ಅವರ ನಿತಾಂತ ಪರಿಶ್ರಮದ ಮೂಲಕ ಪರಿಷತ್ತಿಗೆ ಇಂಥ ಭೌಮಾಕಾರದ ಕಟ್ಟಡಗಳಾದುವು. ಅನೇಕ ಹಳಗನ್ನಡ ಗ್ರಂಥಗಳ ಹೊಸಗನ್ನಡ ಗದ್ಯಾನುವಾದಗಳಾದುವು. ಕನ್ನಡದ ಜಯಭೇರಿ ಭಾರತದ ರಾಜಧಾನಿ ದಿಲ್ಲಿಯಲ್ಲಿಯೂ ಮೊಳಗಿತು. ಇದೆಲ್ಲ ಅವರ ಕರ್ತೃತ್ವಶಕ್ತಿಯ ನಿದರ್ಶನ. ಒಟ್ಟಿನಲ್ಲಿ ಒಂದು ಕಾಲಕ್ಕೆ, ಕೇವಲ ಚಾಮರಾಜಪೇಟೆಯ ಪರಿಷತ್ತು ಎಂದು ಅನೇಕರ ಟೀಕೆಗೆ ಒಳಗಾಗಿದ್ದ ಪರಿಷತ್ತು ಸಮಗ್ರ ಕನ್ನಡಿಗರ ಸಂಸ್ಥೆಯಾಯಿತು ; ಸೊತ್ತಾಯಿತು ; ಕಣ್ಮಣಿಯಾಯಿತು. ಅಲ್ಲಲ್ಲಿ ಸ್ಥಾಪಿತವಾಗಿದ್ದ ಜಿಲ್ಲಾ ಪರಿಷತ್ತುಗಳು ಕೂಡ ಮಾತೃಸಂಸ್ಥೆಯಷ್ಟೇ ಅದ್ದೂರಿಯಿಂದ ಸಾಹಿತ್ಯ ಸಮ್ಮೇಳನಗಳನ್ನು ನೆರವೇರಿಸಿದುವು. ಇದೆಲ್ಲದರ ಶ್ರೇಯಸ್ಸು ಶ್ರೀಮಾನ್ ನಾರಾಯಣರಿಗೇ ಸಲ್ಲಬೇಕು. ನಮ್ಮ ಸಮಾಜದಲ್ಲಿ ಕಾರ್ಯಕರ್ತರಿಗಿಂತ ಚೇರ್ಮನ್ ಆಗಿರುವ ಜನವೇ ಹೆಚ್ಚು—ಎರಡೂ ಅರ್ಥದಲ್ಲಿ. **ಒಂದು**—ಚೇರ್ಮನ್ನರಾಗಿ ಕುರ್ಚಿಯಲ್ಲಿ ಕುಳಿತು, ಇತರರಿಗೆ ಕೇವಲ ಆರ್ಡರ್ ಕೊಡುವುದು. **ಎರಡು**—ಆ ಕುರ್ಚಿ ಬಿಡಬೇಕಾದ ಸಂದರ್ಭ ಬಂದಾಗ ಚೇರ್‌ಮನ್ ಆಗಿ ಆ ಕುರ್ಚಿಯನ್ನು ತಮ್ಮ ಮನೆಗೆ ಒಯ್ದಾರೇ ಹೊರತು, ಸಲೀಸಾಗಿ, ನಗುನಗುತ್ತ ಆ ಗದ್ದುಗೆಯನ್ನು ಬಿಟ್ಟುಕೊಡುವವರಲ್ಲ. ಇದು ಚಿಕ್ಕಮಕ್ಕಳು ಆಟವನ್ನು ಬಿಟ್ಟು ಹೋಗುವಾಗ, ಇತರರಿಗೆ ಅನುಕೂಲವಾಗದಿರಲೆಂದು, ಆಟವನ್ನೆಲ್ಲ ಒದ್ದು ಕೆಡವಿ ಹೋಗುವ ಬಾಲಿಶ ಪ್ರವೃತ್ತಿ. ನಾರಾಯಣರು ಪರಿಷತ್ತನ್ನು ಕಟ್ಟಿದರು ; ವೈಭವಪೂರ್ಣವಾಗಿ ಬೆಳೆಸಿದರು. ನಿರ್ಗಮಿಸಬೇಕೆಂದೆನಿಸಿದಾಗ, ನಗುನಗುತ್ತ ಅದರಿಂದ ಹಿಂದೆ ಸರಿದರು. ಅಷ್ಟೇ ಅಲ್ಲ ; ಪರಿಷತ್ತಿನ ಅಧ್ಯಕ್ಷ ಸ್ಥಾನವನ್ನು ಬಿಟ್ಟನಂತರವೂ ಸಹ, ಪರಿಷತ್ತಿಗೆ ತಮ್ಮ ಸಹಾಯ ಹಸ್ತವನ್ನು ಮುಂದುವರಿಸಿದರು. ಸೇವಾದಲ ಸಂಸ್ಕೃತಿಯನ್ನು ಆತ್ಮಸಾತ್ ಮಾಡಿಕೊಂಡವರಿಗೇ ಇಂಥ ಮನೋಭಾವ ಬರುವುದು. ಹರಿಹರ ಮಹಾಕವಿಯ ಮಾತಿನಲ್ಲಿ ಹೇಳಬೇಕಾದರೆ, ಅವರಿಗೆ “ಮನದೊಳ್ ಓವರಿಯಿಲ್ಲ ; ಬುದ್ಧಿಯೊಳ್ ವಿಸಂಚವಿಲ್ಲ ; ಅಹಂಕಾರದೋಳ್ ಗರ್ವವಿಲ್ಲ.”

ಯಾರಿಂದ ಯಾವ ಕೆಲಸ ಚೆನ್ನಾಗಿ ಆಗುತ್ತದೆಂಬುದನ್ನು ಸರಿಯಾಗಿ ಬಲ್ಲ ನಾರಾಯಣರು ಆ ಆ ವ್ಯಕ್ತಿಗಳನ್ನು ಆ ಆ ಕೆಲಸಕ್ಕಾಗಿ ಯಥಾಯೋಗ್ಯವಾಗಿ ಉಪಯೋಗಿಸಿಕೊಳ್ಳುತ್ತಿದ್ದರು. ಬೆಂಗಳೂರಲ್ಲಿ ಸಾಹಿತ್ಯ ಸಮ್ಮೇಲನ ನೆರವೇರಿದ ಸಂದರ್ಭದಲ್ಲಿ, ಅಂದಿನ ಆಭಾರಮನ್ನಣೆಯನ್ನು ನಾನು ಮಾಡಬೇಕೆಂದು ನಾರಾಯಣರು ಅರ್ಧಗಂಟೆ ಮೊದಲು ಹೇಳಿದರು. ನಾನು ಆ ಕೆಲಸವನ್ನು ತೃಪ್ತಿಕರವಾಗಿ ಮಾಡಬಲ್ಲೆ ಎಂಬ ವಿಶ್ವಾಸ ಅವರಿಗಿದ್ದಿತು. ಆ ಸಮ್ಮೇಲನದಲ್ಲಿ ಉಪಸ್ಥಿತರಿದ್ದ ರಾಜ್ಯಪಾಲ ಧರ್ಮವೀರ ಅವರೂ ಅಂದು ಕನ್ನಡದಲ್ಲಿಯೇ ಮಾತಾಡಿದರು. ಆಭಾರಮನ್ನಣೆಯ ಕಾಲಕ್ಕೆ ನಾನು “ಈವರೆಗೆ ಮೈಸೂರು ಕನ್ನಡ ಮತ್ತು ಧಾರವಾಡ ಕನ್ನಡ ಎಂಬ ಎರಡು ಕನ್ನಡ ಮಾರ್ಗಗಳ ಬಗ್ಗೆ ಮಾತ್ರ ಪತ್ರಗಳಲ್ಲಿ ಓದುತ್ತಿದ್ದೆವು. ಈಗ ಮಾನ್ಯ ಧರ್ಮವೀರರ ಕನ್ನಡ ಭಾಷಣವನ್ನು ಕೇಳಿದ ಮೇಲೆ, ಅದಕ್ಕೆ ಧರ್ಮವೀರ ಕನ್ನಡ ಎಂಬುದನ್ನು ಸೇರಿಸಬೇಕಾಗುತ್ತದೆ” ಎಂದು ಹೇಳಿದ ನೆನಪು.

ನನ್ನ ಈ ಎನಿಸಿಕೆಗಳಿಗೆ ನಾನು ‘ಅಜಾತಶತ್ರು’ ಎಂದು ಹೆಸರನ್ನು ಕೊಟ್ಟಿರುವೆನಷ್ಟೆ. ಅದು ತುಂಬಾ ಉಚಿತವಾಗಿದೆ. ನಾರಾಯಣರಿಗೆ ವೈರಿಗಳೆಂಬುವರೇ ಇಲ್ಲ. ಯಾಕೆಂದರೆ, ಯಾವುದೇ ಅಭಿಪ್ರಾಯ ಭೇದ ಉಂಟಾದರೂ, ನಾರಾಯಣರು ಅದನ್ನು ಅಷ್ಟೇ ತಾಳ್ಮೆಯಿಂದ, ಸಮಾಧಾನದಿಂದ ಕೇಳುತ್ತಿದ್ದರು. ೧೯೭೨-೭೩ ನೇ ಇಸ್ವಿಯಲ್ಲಿ ಎಂದು ಕಾಣುತ್ತದೆ. ನಾರಾಯಣರ ನೇತೃತ್ವದಲ್ಲಿ ಪರಿಷತ್ತು ಆಗ ಹಳಗನ್ನಡ ಗ್ರಂಥಗಳ ಗದ್ಯಾನುವಾದಗಳನ್ನು ಹೊರತರುವ ಯೋಜನೆಯನ್ನು ಹಾಕಿ

ಕೊಂಡಿತ್ತು. ಆಗ ನಾನು ಕರ್ನಾಟಕ ವಿಶ್ವವಿದ್ಯಾಲಯದ ಪ್ರತಿನಿಧಿಯಾಗಿ ಪರಿಷತ್ತಿನ ಕಾರ್ಯಕಾರಿ ಸಮಿತಿಯಲ್ಲಿ ಇದ್ದೆ. ಸಭೆಯ ಮುಂದೆ ಈ ವಿಷಯ ಬಂದಾಗ, ಅನು ವಾದಕರ ಪಟ್ಟಿಯನ್ನು ನೋಡಿದರೆ, ಅದರಲ್ಲಿ ಕೇವಲ ಒಂದೇ ಭಾಗದ ಲೇಖಕರ ಹೆಸರುಗಳು ಇದ್ದವು. "ಇದು ಸರಿಯಲ್ಲ; ಕರ್ನಾಟಕದ ಇತರ ಭಾಗಗಳಲ್ಲಿರುವ ವಿದ್ವಾಂಸರಿಗೂ ಪರಿಷತ್ತು ಈ ಕೆಲಸವನ್ನು ವಹಿಸಿಕೊಡ ಬೇಕು" ಎಂದು ಮೊದಲಾಗಿ ನಾನು ಸ್ವಲ್ಪ ಖಾರ ವಾಗಿಯೇ ಮಾತಾಡಿದೆ. ಅಧ್ಯಕ್ಷಸ್ಥಾನದಲ್ಲಿದ್ದ ನಾರಾ ಯಣರು ಇದರಿಂದ ಬೇಸರಮಾಡಕೊಳ್ಳಲಿಲ್ಲ. ಕಾಲಾ ನಂತರ ಈ ಯೋಜನೆಗೆ ಪೂರಕವಾದ ಇನ್ನೊಂದು ಯೋಜನೆಯೂ ಹೊರಬಂದಿತು. ನಮ್ಮಿಬ್ಬರಲ್ಲಿಯೂ ಇದರಿಂದ ಯಾವ ಮನಸ್ತಾಪವೂ ಉಳಿಯಲಿಲ್ಲ. ಮಿತ್ರ ಡಾ॥ ಹಾ. ಮಾ. ನಾಯಕರೂ ಆ ಕಾಲದಲ್ಲಿ ಸಮಾ ಧಾನದ ಮಾತುಗಳನ್ನು ಆಡಿದ ನೆನಪು ನನಗಿದೆ.

ಇದರಂತೆಯೇ, ಇನ್ನೊಂದು ಯಾವುದೋ ಸಭೆಯಲ್ಲಿ ಸಮ್ಮೇಲನಾಧ್ಯಕ್ಷರು ಯಾರಾಗಬೇಕೆಂಬ ಬಗ್ಗೆ ಪ್ರಸ್ತಾಪ ಬಂದಾಗ, ನಾನು ಒಂದು ಹೆಸರನ್ನು ಸೂಚಿಸಿದೆ. ಅದರೆ ನಾರಾಯಣರ ಮನಸ್ಸಿನಲ್ಲಿ ಇನ್ನೊಂದು ಹೆಸರಿದ್ದಿತು. ಅಧ್ಯಕ್ಷತೆಗೆ ಸೂಚಿಸಲ್ಪಟ್ಟ ಇಬ್ಬರೂ ವ್ಯಕ್ತಿಗಳೂ ಹಿರಿಯ ಸಾಹಿತಿಗಳೇ; ಇಬ್ಬರೂ ಗಣ್ಯರೇ. ಈ ಸಂದರ್ಭದಲ್ಲಿ ಕೂಡ ನಾರಾಯಣರು ನನ್ನ ಅಭಿ ಪ್ರಾಯವನ್ನು ಕೇವಲ ವಸ್ತುನಿಷ್ಠ ಪ್ರತಿಪಾದನೆ ಎಂದು ಬಗೆದು, ಆ ಮಾತನ್ನು ಹೆಚ್ಚಾಗಿ ಬೆಳೆಸಲಿಲ್ಲ. ವ್ಯಕ್ತಿ ವ್ಯಕ್ತಿಗಳ ಮಧ್ಯ ಅಭಿಪ್ರಾಯ ಭೇದಗಳು ಇರಲು ಸಾಧ್ಯ ವಿದೆ; ಅದು ವೈಯಕ್ತಿಕ ವೈಮನಸ್ಸಲ್ಲ ಎಂಬ ಕಲ್ಪನೆ ಇದ್ದವರೇ ಅ-ಜಾತ ಶತ್ರುಗಳಾಗುತ್ತಾರೆ. ಅಂತೆಯೇ, ಅಜಾತಶತ್ರುಗಳಾದ ಮಾನ್ಯ ಜಿ. ನಾರಾಯಣರು ಎಲ್ಲರ ಗೌರವಕ್ಕೂ ಪಾತ್ರರಾಗಿದ್ದಾರೆ.

೧೯೭೭ರ ಸುಮಾರು ಎಂದು ಕಾಣುತ್ತದೆ. ಹಿರಿಯ ಸ್ವಾತಂತ್ರ್ಯಯೋಧರೂ, ಶ್ರೇಷ್ಠ ರಚನಾತ್ಮಕ ಕಾರ್ಯ ಕರ್ತರೂ, ತ್ಯಾಗಮೂರ್ತಿಗಳೂ ಆಗಿದ್ದ ಡಾ. ಎನ್. ಎಸ್. ಹರ್ಡೀಕರ ಅವರು ಅವರ ರಚನಾತ್ಮಕ ವಿಚಾರ ಗಳಿದ್ದ ಹಲವಾರು ಸ್ವಯಂಸೇವಕರ ಒಂದು ಸಭೆಯನ್ನು ಘಟಪ್ರಭೆಯಲ್ಲಿ ಕರೆದಿದ್ದರು. ಆ ಸಭೆಗೆ ಡಾ. ಎಚ್. ನರಸಿಂಹಯ್ಯ, ಜಿ. ನಾರಾಯಣ ಅವರ ಜೊತೆಗೆ ನನಗೂ ಆಮಂತ್ರಣವಿದ್ದಿತು. ಆದರೆ, ಕಾರಣಾಂತರದಿಂದ ಆ ಸಭೆ ನಡೆಯಲಿಲ್ಲ. ಡಾ. ಹರ್ಡೀಕರರು ಸೂಚಿಸಿದ್ದ ದಿನಾಂಕ ಎಷ್ಟೋ ಜನ ಆಮಂತ್ರಿತರಿಗೆ ಅನುಕೂಲವಾಗಿ ರಲಿಲ್ಲ. ಮುಂದೆ ಸ್ವಲ್ಪೇ ಕಾಲದಲ್ಲಿ ಡಾ. ಹರ್ಡೀಕರರು ದಿವಂಗತರಾದರು. ಆ ಸಭೆ ನಡೆದಿದ್ದರೆ, ಡಾ. ಹರ್ಡೀ ಕರರು ನಾರಾಯಣರಿಗೆ ಮತ್ತೆ ಯಾವ ರಚನಾತ್ಮಕ ಕೆಲಸವನ್ನು ವಹಿಸಿಕೊಡುತ್ತಿದ್ದರೋ, ಹಾಗೆ ವಹಿಸಿ ಕೊಟ್ಟಿದ್ದಾಗ ನಾರಾಯಣರು ಅದನ್ನು ಅಂಗೀಕರಿಸಿದ್ದರೆ, ನಮ್ಮ ರಾಜ್ಯದಲ್ಲಿ, ರಾಷ್ಟ್ರದಲ್ಲಿ ಎಂಥ ಹೆಚ್ಚಿನ ಸೌಹಾರ್ದ ಸೌಮನಸ್ಸುಗಳು ನೆಲಸುತ್ತಿದ್ದವೋ ಈಗ ಊಹಿಸಲೂ ಸಹ ಸಾಧ್ಯವಿಲ್ಲ. ನಾರಾಯಣರಂಥ ರಚನಾತ್ಮಕ ಕಾರ್ಯ ಕರ್ತರು ಬೆಲ್ಲದ ಅಚ್ಚು ಇದ್ದ ಹಾಗೆ. ಅವರಂಥವರನ್ನು ನಾಡು ಅಷ್ಟು ಸರಳವಾಗಿ ಬಿಟ್ಟುಕೊಡಲಾರದು, ಬಿಟ್ಟು ಕೊಡಬಾರದು. ನಾರಾಯಣರಿಗೆ ಭಗವಂತ ಸುದೀರ್ಘ ವಾದ ಆಯುರಾರೋಗ್ಯಗಳನ್ನೂ, ಕೈತುಂಬ ಕೆಲಸವನ್ನೂ ಕೊಡಲೆಂದು ಹಾರೈಸುತ್ತೇನೆ. ಶತಂಜೀವ ಶರದೋ ವರ್ಧಮಾನಂ.

ದುರಂತ ಜೀವನದಲ್ಲಿ ದೇವರಿಲ್ಲ, ಯಾವ ಖಳನ ಅಗತ್ಯವೂ ಇಲ್ಲ; ಮನೋವಿಕಾರಗಳು ಸನ್ನಿವೇಶವನ್ನು ಅಣಿಗೊಳಿಸುತ್ತವೆ. ನಾವು ನಮ್ಮೊಳಗಿನ ಸುಳ್ಳಿಗಾಗಿ ಹೆದರುತ್ತೇವೆ.

—ಜಾರ್ಜ್ ಮೆರೆಡಿತ್

ಅಪೂರ್ವವಾದ ವ್ಯಕ್ತಿತ್ವ

ಕಯ್ಯಾರ ಕಿಞ್ಞಣ್ಣರೈ

ನನ್ನ ಹಳ್ಳಿಯ ಕುಟೀರಕ್ಕೂ ಭೇಟಿನೀಡಿ, ಅಡಿಕೆ ತೋಟದ ನೆರಳಲ್ಲಿ ಸೋಗೆಗರಿಗಳ ಮೇಲೆ ಹಾಯಾಗಿ ವಿಶ್ರಾಂತಿ ಪಡೆದರು. ಬೆಂಗಳೂರಿನಂತಹ ಪ್ರಬುದ್ಧ ನಗರದ ಮೇಯರಾಗಿ ಅಲ್ಲಿಯೇ ಬಹುಕಾಲ ಇದ್ದವರಾಗಿದ್ದರೂ, ಸಾಹಿತ್ಯ ಪರಿಷತ್ತಿನಂತಹ ದೊಡ್ಡ ಸಾಂಸ್ಕೃತಿಕ ಸಂಸ್ಥೆಯ ಕಾರ್ಯಭಾರ ಹೊತ್ತಿದ್ದರೂ ಅವರಿಗೆ ನಮ್ಮ ಹಳ್ಳಿಯ ವಾತಾವರಣ ತುಂಬಾ ಹಿಡಿಸಿದಂತೆ ಕಂಡಿತು.

ಸುಮಾರು ಎರಡು ದಶಕಗಳ ಹಿಂದಿನ ಮಾತು ಭಾರತ ಪ್ರಧಾನಾಮಾತ್ಯೆ ಶ್ರೀಮತಿ ಇಂದಿರಾಗಾಂಧಿ ಬೆಂಗಳೂರಿಗೆ ಆಗಮಿಸಿದ್ದರು; ಕನ್ನಡ ಸಾಹಿತ್ಯ ಪರಿಷದಧ್ಯಕ್ಷ ಶ್ರೀ ಜಿ. ನಾರಾಯಣ ಅವರು ಇಂದಿರಾಗಾಂಧಿಯವರಿಗೆ ಕರ್ನಾಟಕದ ಗಡಿ ಸಮಸ್ಯೆಯನ್ನು ಪರಿಹರಿಸಬೇಕೆಂದು ಮನವಿಯೊಂದನ್ನು ಸಮರ್ಪಿಸಿದರು ಎಂದು ಪತ್ರಿಕೆಗಳಲ್ಲಿ ವರದಿ ಓದಿದೆ; ಸಹಜವಾಗಿ ಕಾಸರಗೋಡು ವಿಚಾರವೂ ಆ ಮನವಿಯಲ್ಲಿ ಇತ್ತು.

ಆ ಸುದ್ದಿ ಓದಿ ನನಗೆ ಶ್ರೀ ಜಿ. ನಾರಾಯಣ ಅವರ ಕುರಿತು ಇನ್ನಷ್ಟು ತಿಳಿದುಕೊಳ್ಳಲು ಆಸಕ್ತಿ ಮೂಡಿತು. ಸಾಹಿತ್ಯ ಕ್ಷೇತ್ರದಲ್ಲಿ ಆಗ ಅವರದು ಅಷ್ಟೊಂದು ಜನಪ್ರಿಯ ಹೆಸರು ಅಲ್ಲವಾದರೂ, ರಾಜಕೀಯ ಕ್ಷೇತ್ರದಲ್ಲಿ ಮುಖ್ಯವಾಗಿ ಬೆಂಗಳೂರು ನಗರದ ಮೇಯರಾಗಿದ್ದುದರಿಂದ ಸಾಕಷ್ಟು ಪ್ರಸಿದ್ಧರಾಗಿದ್ದರು. ರಾಜಕೀಯದವರಿಂದ ಕನ್ನಡದ ಕೆಲಸ, ಅದರಲ್ಲೂ ಸಾಹಿತ್ಯ ಪರಿಷತ್ತಿನಂತಹ ಸಂಸ್ಥೆಯ ನೇತೃತ್ವ ಸಮರ್ಪಕವಾಗಿ ನಡೆದೀತೆ ಎಂದು ಅಲ್ಲಲ್ಲಿ ಕೆಲವರು ಶಂಕಿಸಿದ್ದರು. ಭಾರತದ ಪ್ರಧಾನಾಮಾತ್ಯೆಯರಿಗೆ ಕನ್ನಡದ ಗಡಿ ವಿವಾದ ಪರಿಹರಿಸಲು ಇತ್ತ ಆ ಮನವಿಯಿಂದ, ಆಮೇಲೆ ಇಂತಹ ಹಲವಾರು ಕನ್ನಡ ಹಾಗೂ ಸಾಹಿತ್ಯ ಸಮಸ್ಯೆಗಳಿಗೆ ಸಂಬಂಧಿಸಿ ಅವರು ಹಾಕಿದ ಯೋಜನೆಗಳಿಂದ, ಆ ಯೋಜನೆಗಳನ್ನು ಕ್ರಮಬದ್ಧವಾಗಿ ಕಾರ್ಯಗತಗೊಳಿಸಿದ ಅವರ ಕಾರ್ಯಕೌಶಲ್ಯದಿಂದ ನನಗೆ ಅವರ ಯೋಗ್ಯತೆಯ ಅರಿವಾಯಿತು. ಒಂದು ಸಂಸ್ಥೆಯನ್ನು ಭದ್ರವಾಗಿ ಕಟ್ಟಿ ಮುನ್ನಡೆಸಲು ಅವರಿಗಿದ್ದ ನಿರಂತರ ಶ್ರದ್ಧೆಯನ್ನು ಆಮೇಲೆ ತೀರಾ ಹತ್ತಿರದಿಂದ ಕಂಡ ನನಗೆ ಶ್ರೀ ಜಿ. ನಾರಾಯಣ ಅವರು ಓರ್ವ ಅಪೂರ್ವ ವ್ಯಕ್ತಿಯೆಂಬ ಅಭಿಮಾನ ಉಂಟಾಗುವಂತಾಯಿತು.

ಕಾಸರಗೋಡಿನಲ್ಲಿ ಕನ್ನಡಿಗರ ಇತಿಹಾಸ ಮೇಳವೊಂದನ್ನು ನಾವು ಸಂಘಟಿಸಿದೆವು; ಈ ಬಗೆಗೂ ಶ್ರೀ ನಾರಾಯಣ ಅವರು ಆಸಕ್ತಿ ವಹಿಸಿದರು. ಪರಿಷತ್ತಿನಿಂದ ಸಾಧ್ಯವಾದ ಧನಸಹಾಯವನ್ನು ಒದಗಿಸಿದ್ದು ಮಾತ್ರವಲ್ಲದೆ, ಅದಕ್ಕಿಂತ ಮಿಗಿಲಾಗಿ ಅನೇಕ ಪ್ರಮುಖ ಕನ್ನಡದ ಮುಂದಾಳುಗಳನ್ನು ಕರೆದುಕೊಂಡು ಬಂದರು. ಮೈಸೂರು ವಿಶ್ವವಿದ್ಯಾಲಯದ ಆಗಿನ ಉಪಕುಲಪತಿ

ಶ್ರೀ ಜವರೇಗೌಡರು ಸಮ್ಮೇಳನದ ಅಧ್ಯಕ್ಷತೆಗೆ ಒಪ್ಪಿದರು. ಡಾ|| ರಂ. ಶ್ರೀ ಮುಗಳಿ, ಡಾ|| ಹಾ. ಮಾ. ನಾಯಕರೇ ಮೊದಲಾದ ಪ್ರಮುಖರ ಜತೆಗೂಡಿ ಕಾಸರಗೋಡಿಗೆ ಸಪರಿವಾರ ಸಕುಟುಂಬ ಬಂದಿದ್ದರು. ಬಂದವರು, ನನ್ನ ಹಳ್ಳಿಯ ಕುಟೀರಕ್ಕೂ ಭೇಟಿನೀಡಿ, ಅಡಿಕೆ ತೋಟದ ನೆರಳಲ್ಲಿ ಸೋಗೆಗರಿಗಳ ಮೇಲೆ ಹಾಯಾಗಿ ವಿಶ್ರಾಂತಿ ಪಡೆದರು. ಬೆಂಗಳೂರಿನಂತಹ ಪ್ರಬುದ್ಧ ನಗರದ ಮೇಯರಾಗಿ, ಅಲ್ಲಿಯೇ ಬಹುಕಾಲ ಇದ್ದವರಾಗಿದ್ದರೂ, ಸಾಹಿತ್ಯ ಪರಿಷತ್ತಿನಂತಹ ದೊಡ್ಡ ಸಾಂಸ್ಕೃತಿಕ ಸಂಸ್ಥೆಯ ಕಾರ್ಯಭಾರ ಹೊತ್ತಿದ್ದರೂ ಅವರಿಗೆ ನಮ್ಮ ಹಳ್ಳಿಯ ವಾತಾವರಣ ತುಂಬಾ ಹಿಡಿಸಿದಂತೆ ಕಂಡಿತು. ಆಡಂಬರದ ನಾಗರೀಕ ಜೀವನದಲ್ಲಿಯೆ ಕಾಲ ಕಳೆಯುತ್ತಿದ್ದರೂ, ಗ್ರಾಮ ಜೀವನದ ಸರಳತೆಗೆ ಮೆಚ್ಚುವ ಅವರ ಪ್ರವೃತ್ತಿಯನ್ನು ನಾನು ನೋಡಿ ಗುರುತಿಸಿದೆ. ಡಾ|| ಶಿವರಾಮ ಕಾರಂತರೇ ಮೊದಲಾದ ಪ್ರಮುಖರು ಆಗಮಿಸಿದ ಆ ಸಮ್ಮೇಳನದ ಸನ್ನಿವೇಶವನ್ನು ಕಾಸರಗೋಡಿನ ಜನತೆ ಸದಾ ನೆನಪಿಟ್ಟುಕೊಳ್ಳುವಂತಾಯಿತು.

ಕೇಂದ್ರ ಸರಕಾರಕ್ಕೂ ರಾಜ್ಯಸರಕಾರಕ್ಕೂ ಬಿಕ್ಕಟ್ಟಿನದಾದ ಕಾಸರಗೋಡು ಗಡಿ ಸಮಸ್ಯೆಯನ್ನು ಕುರಿತು ನಿರ್ಣಯವಾಗಲು ಆ ಸಮ್ಮೇಳನದಲ್ಲಿ ಅಧ್ಯಕ್ಷತೆ ವಹಿಸಲು ಒಪ್ಪಿದ ಉಪಕುಲಪತಿ ಶ್ರೀ ದೇ. ಜವರೇಗೌಡರೊಡನೆ, ಅವರಿಗೆ ಜರೂರು ಕಾರ್ಯವೇನಾದರೂ ಇದ್ದರೆ, ಅವರ ಮೊದಲ ದಿನದ ಅಧ್ಯಕ್ಷ ಭಾಷಣದ ಕಾರ್ಯಕ್ರಮ ಪೂರೈಸಿ ಹೋಗಬಹುದೆಂದು ನಾನೇ ಹೇಳಿದ್ದೆ. ನನ್ನೀ ಮಾತಿನ ಸೂಚ್ಯಾರ್ಥವನ್ನು ಸರಿಯಾಗಿ ಗ್ರಹಿಸಿಕೊಂಡ ಶ್ರೀ ದೇಜಗೌ ಅವರು ಸಮ್ಮೇಳನದ ಕೊನೆಯ ತನಕ ನಿಂತು, ತಮ್ಮ ಉಪಸಂಹಾರ ಭಾಷಣದಲ್ಲಿ, ಕಿಸೆಯಲ್ಲಿ ರಾಜೀನಾಮೆ ಪತ್ರ ಇಟ್ಟುಕೊಂಡೇ ತಾನೀಸ್ಥಾನಕ್ಕೆ ಏರಿದ್ದೇನೆಂದೂ, ಕನ್ನಡದ ಕೆಲಸದಲ್ಲಿ ತೊಂದರೆಯಾದರೆ, ಸ್ಥಾನದಿಂದ ಇಳಿದು ಹೋರಾಡಲು ಸದಾ ಸಿದ್ಧನೆಂದೂ ಹೇಳಿದ ಅವರ ಭಾಷಣ, ಎಲ್ಲಾ ಪತ್ರಿಕೆಗಳಲ್ಲೂ ದೊಡ್ಡ ಅಕ್ಷರಗಳಲ್ಲಿ ಮುದ್ರಿತವಾಗಿ ಅವರಿಗೆ ತೊಂದರೆಯೂ ಆಯಿತೆಂದು ಆಮೇಲೆ ತಿಳಿಯಿತು. ಅಂತೂ ಆ ಸಮ್ಮೇಳನ ಕನ್ನಡಿಗರ ಕಣ್ತೆರೆಯಿಸಿತು. ಕಾಸರಗೋಡಿನವರಿಗೆ ಹೆಚ್ಚಿನ ಹುರುಪು ಉಂಟಾಯಿತು, ಕಾಸರಗೋಡಿನ ಕುರಿತು ಸಮ್ಮೇಳನದಲ್ಲಿ ನಿರ್ಣಯ ಮಂಡಿಸುತ್ತಾ ಕಳ್ಳಿಗೆ ಮಹಾಬಲ ಭಂಡಾರಿಗಳು ಮಂಡಿಸಿದ ವಾದಸರಣಿ ಕರ್ನಾಟಕದಿಂದ ಆಗಮಿಸಿದ ಎಲ್ಲಾ ಪ್ರಮುಖರನ್ನೂ ತಲೆದೂಗಿಸಿತ್ತು. ಇದು ಶ್ರೀ ಜಿ. ನಾರಾಯಣ ಅವರಲ್ಲಿ ವಿಶೇಷ ಪರಿಣಾಮವನ್ನು ಉಂಟು ಮಾಡಿದಂತೆ ಕಂಡಿತು.

ಹಾಗಾಗಿಯೇ ಶ್ರೀ ನಾರಾಯಣ ಅವರು ಬೆಂಗಳೂರಲ್ಲಿ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ಕೆಲವೇ ದಿನಗಳಲ್ಲಿ ಗಡಿ ಸಮ್ಮೇಳನವೊಂದನ್ನು ಕರೆದರು. ಬೆಳಗಾವಿಯಿಂದಲೂ ಕಾಸರಗೋಡಿನಿಂದಲೂ ಪ್ರಮುಖರನ್ನೆಲ್ಲಾ ಆಹ್ವಾನಿಸಿದ್ದರು. ಮಹಾರಾಷ್ಟ್ರ, ಬೆಳಗಾವಿ ಕುರಿತು ವಾದವನ್ನು ಎಬ್ಬಿಸಿದಾಗಲೆಲ್ಲ, ಕರ್ನಾಟಕ, ಯಥಾಸ್ಥಿತಿ ವಾದವನ್ನೇ ಮುಂದೊಡ್ಡಿದರೂ, ಕಾಸರಗೋಡು ವಿವಾದದ ಬಗ್ಗೆ ಮತ್ತೊಮ್ಮೆ ಕರ್ನಾಟಕ ಮಹಾಜನ ವರದಿಗೆ ಒಪ್ಪಿಕೊಂಡರೂ, ಆಮೇಲೆಯೂ ಮಹಾಜನ ವರದಿ ಜಾರಿಯಾಗಬೇಕೆಂಬ ಹಠ ತೊಡದೆ, "ಮಹಾಜನ ವರದಿ ಇಲ್ಲವೇ ಯಥಾಸ್ಥಿತಿ" ಎಂಬ ನಿಲುವಿಗೇ ಬಂದಿತ್ತು. ಈ "ಯಥಾಸ್ಥಿತಿವಾದ" ಬೆಳಗಾವಿಯ ಹೊರತು ಕಾಸರಗೋಡಿನ ಪರವಾಗಿಲ್ಲವೆಂಬುದನ್ನು ಕಾಸರಗೋಡು ಸಮ್ಮೇಳನದಲ್ಲಿಯೇ ನಾವು ಸ್ಪಷ್ಟಮಾಡಿದ್ದೆವು. ಈ ನಮ್ಮ ನಿಲುವಿಗೆ ಅಖಿಲ ಕರ್ನಾಟಕ ವ್ಯಾಪ್ತಿಯ ಬೆಂಬಲ ದೊರಕುವಂತಾಗಬೇಕೆಂಬುದೇ ಬೆಂಗಳೂರಲ್ಲಿ ಸಾಹಿತ್ಯ ಪರಿಷತ್ತಿನಲ್ಲಿ ನಡೆದ ಆ ಗಡಿ ಸಮ್ಮೇಳನದಲ್ಲಿ ನಮ್ಮ ಪ್ರಮುಖ ಉದ್ದೇಶವಾಗಿತ್ತು. ಮೊದಲ ದಿನವೇ ಕಾಸರಗೋಡಿನ ಕುರಿತು ಮಹಾಬಲ ಭಂಡಾರಿಗಳು ವಾದ ಮಂಡಿಸಿದರು. ಇತರ ಕಾಸರಗೋಡಿನ ಪ್ರಮುಖರೂ ಅದನ್ನು ಶಕ್ತಿವತ್ತಾಗಿ ಸಮರ್ಥಿಸಿದರು; ಇದರ ಪರಿಣಾಮ ಮರುದಿನ ಎಷ್ಟಾಯಿತೆಂದರೆ, ಬೆಳಗಾವಿಯ ಕನ್ನಡದ ಪ್ರಮುಖರೇ 'ಯಥಾಸ್ಥಿತಿವಾದಕ್ಕೆ ಬಿಡೋಣ, ಮಹಾಜನ ವರದಿ ಜಾರಿಯಾಗಲಿ' ಎಂಬ ನಿಲುವಿಗೆ ಬಂದರು. ಇಂತಹ ಒಂದು ಸ್ಪಷ್ಟವಾದ ದೃಢವಾದ ನಿರ್ಧಾರಕ್ಕೆ ಕರ್ನಾಟಕ ಬರುವಂತೆ ಶ್ರೀ ಜಿ. ನಾರಾಯಣ ಅಂದು ಅಲ್ಲಿ ಗಡಿ ಸಮ್ಮೇಳನ ಕರೆದು ಸಹಾಯಮಾಡಿದ್ದನ್ನು ನಾವು ಎಂದೂ ಮರೆಯಲಾರೆವು.

ಶ್ರೀ ಜಿ. ನಾರಾಯಣರವರು ಪರಿಷದಧ್ಯಕ್ಷರಾಗಿದ್ದ ಕಾಲ, ಪರಿಷತ್ತಿನ ಕಾರ್ಯಕಾರಿ ಸಮಿತಿ ಸದಸ್ಯನಾಗಿ

ಅವರೊಡನೆ ಪೂರ್ಣ ಸಹಕರಿಸಿ ಪರಿಷತ್ತಿಗೆ ನನ್ನ ಅಳಿಲ ಸೇವೆ ಸಲ್ಲಿಸಿದ್ದನ್ನು ಇಲ್ಲಿ ಸ್ಮರಿಸುತ್ತೇನೆ. ಮಹಿಳಾವರ್ಷ ಮುಂತಾದ ಅಂತರ ರಾಷ್ಟ್ರೀಯ ಮಹತ್ವದ ಯೋಜನೆಗಳನ್ನು ಸಾಹಿತ್ಯ ಪರಿಷತ್ತು ತನ್ನ ಕಾರ್ಯಕ್ರಮದಲ್ಲಿ ಅಳವಡಿಸಿಕೊಂಡು ಗೈದ ರಚನಾತ್ಮಕ ಕಾರ್ಯಗಳು ಬಹುಕಾಲ ನೆನಪಿಸತಕ್ಕವುಗಳಾಗಿವೆ; ಪರಿಷತ್ತಿನ ಸುವರ್ಣ ಮಹೋತ್ಸವವನ್ನು ಅತ್ಯಂತ ವಿಜೃಂಭಣೆಯಿಂದ ಬೆಂಗಳೂರಲ್ಲಿ ನೆರವೇರಿಸಿ ಅದರ ಸವಿ ನೆನಪಿಗಾಗಿ ಬೃಹತ್ ಕಟ್ಟಡವೊಂದನ್ನು ಕಟ್ಟಿಸಿದ್ದು ಕೂಡ ಗಣನೀಯವಾದ ಕೆಲಸ. ಅದುವರೆಗೆ ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಳನ ಎಂದು ನಡೆಯುತ್ತಿದ್ದ ಸಮ್ಮೇಳನ ಶ್ರೀ ಜಿ. ನಾರಾಯಣರ ಅಧ್ಯಕ್ಷತೆಯ ಅವಧಿಯಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವೆಂದು ವಿಶಾಲವಾದ ನಾಮಕರಣಗೊಂಡದ್ದು ಒಂದು ಮಹತ್ವದ ಸಿದ್ಧಿ. ಈ ವಿಶಾಲತೆಯ ಸಿದ್ಧಿಯ ಉತ್ಸಾಹವೇ ಡಿಲ್ಲಿಯಲ್ಲೂ ಅದೇ ಪ್ರಥಮವಾಗಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಶ್ರೀ ಜಿ. ಪಿ. ರಾಜರತ್ನಂರವರ ಅಧ್ಯಕ್ಷತೆಯಲ್ಲಿ ಅತ್ಯಂತ ವಿಜೃಂಭಣೆಯಿಂದ ನೆರವೇರಿತು. ಭಾರತದ ಅಂದಿನ ಪ್ರಧಾನಿ ಶ್ರೀ ಮೊರಾರ್ಜಿ ದೇಸಾಯಿಯವರು ಸಮ್ಮೇಳನವನ್ನು ಉದ್ಘಾಟಿಸಿದರು. ದಾಕ್ಷಿಣಾತ್ಯರು ಮಾತ್ರವಲ್ಲ, ಔತ್ತರೇಯರೂ ಕನ್ನಡ ಸಾಹಿತ್ಯದ ಈ ದಿಗ್ವಿಜಯವನ್ನು ಕಂಡು ಮೆಚ್ಚಿಕೊಂಡರು !

ಇತ್ತೀಚೆಗೆ ಬೆಂಗಳೂರಿನ ಚಾಮರಾಜಪೇಟೆಯ ಬದಿಯಲ್ಲಿ ನಡೆದು ಹೋಗುತ್ತಿದ್ದೆ ; ಅಲ್ಲೇ ಬಳಿಯಲ್ಲಿ ಸಾಹಿತ್ಯ ಪರಿಷನ್ಮಂದಿರವೂ ಇದೆ. ಶ್ರೀ ಜಿ. ನಾರಾಯಣರ ಸಂಪಾದಕತ್ವದ 'ವಿನೋದ'ದ ಕಾರ್ಯಾಲಯವೂ ಇದೆ. ನನ್ನನ್ನು ಕಂಡವರೇ, ತುಂಬಾ ಆತ್ಮೀಯತೆಯಿಂದ ಸ್ವಲ್ಪ ಹೊತ್ತು ನಿಲ್ಲಿಸಿ ಮಾತನಾಡಿದರು; ಅಂತೂ ಕನ್ನಡದ್ದೇ ಸದಾ ಕನವರಿಕೆ. ಕರ್ನಾಟಕದ ಮುಖ್ಯಮಂತ್ರಿ ಶ್ರೀ ರಾಮಕೃಷ್ಣ ಹೆಗ್ಡೆಯವರೇ ಮಹಾ
ರಾಷ್ಟ್ರ ಮುಖ್ಯಮಂತ್ರಿಯವರೊಂದಿಗೆ ಗಡಿ ಸಮಸ್
ವಿಚಾರ ಮಾತುಕತೆಗೆ ಹೋಗುತ್ತಾರೆ; ಈ ಸಂದರ್ಭ
ಕಾಸರಗೋಡಿನ ಕುರಿತೂ ಅವರ ಹಾಗೂ ಕೇಂದ್ರ
ಗಮನ ಸೆಳೆವ ಕೆಲಸ ಆಗಬೇಕು; ಬೆಂಗಳೂರಲ್ಲಿಯು
ಆಂದೋಲನ ಪುನಃ ತೊಡಗಬೇಕು.—ಇತ್ಯಾದಿ ವಿಚಾ
ಗಳನ್ನು ಮುಂದಿಟ್ಟರು. ನಾವು ಮಾಡುತ್ತಿರು
ಪ್ರಯತ್ನದ ಕುರಿತೂ ಹೇಳಿದೆ; ಅವರಿಗೆ ಸ್ವಲ್ಪ ಸಮಾ
ಧಾನ ಆದಂತೆ ಕಂಡೆ. ಆದರೂ ಪ್ರಯತ್ನ ಮುಂದು
ವರಿಸುವ ನಮ್ಮ ಸಾಧನೆಗೆ ಬೆಂಬಲ ನೀಡುವ ಭರವಸೆ
ತಿಳಿಸಿದರು. ಸಾಹಿತ್ಯ ಪರಿಷದಧ್ಯಕ್ಷರಾಗಿ ಯಾವ
ವಿಚಾರದಲ್ಲಿ ಮೊತ್ತಮೊದಲು ನನ್ನ ಗಮನ ಅದರ ಕಡೆಗೆ
ಆಕರ್ಷಿತವಾಯಿತೋ ಮತ್ತೆ, ಇಂದು, ಪರಿಷದಧ್ಯಕ್ಷ
ಸ್ಥಾನ ಬಿಟ್ಟದ್ದರೂ, ಕನ್ನಡದ ಕೆಲಸವನ್ನು ಅವರು
ಏನೇನು ಬಿಟ್ಟಿಲ್ಲವೆಂದು ತಿಳಿದುಕೊಂಡೆ; ಕಷ್ಟಪಡು
ತ್ತಿರುವವರ ಕುರಿತು ಅವರಿಗಿರುವ ಈ ಕೆಲ ಮಾನ
ವೀಯ ಸಹಾನುಭೂತಿ ನಿಜವಾಗಿಯೂ ಆದರ್ಶಕರ.

ಸರಳ ಜೀವನ, ಸ್ಪಷ್ಟ ಮಾತು, ಖಾದಿಯ ಸ್ವಚ್ಛ ಶುಭ್ರ ಉಡುಗೆ, ಇಂತಹ ಈ ಗಾಂಧೀವಾದೀ ಕನ್ನಡಿಗ ಇಂದು ಅರುವತ್ತರ ಹರೆಯಕ್ಕೆ ತಲಪಿದ್ದಾರೆನ್ನುವುದು ಅವರ ವ್ಯಕ್ತಿತ್ವದ ಹಿರಿತನಕ್ಕೆ ಮಕುಟಪ್ರಾಯವಾದ ಸಂಗತಿಯಾಗಿದೆ. ಇಂತಹ ಮಂಗಲ ಮುಹೂರ್ತದಲ್ಲಿ ಅವರ ಅಭಿಮಾನಿಗಳು ಮಿತ್ರರು ಕೂಡಿ ಅವರನ್ನು ಅಭಿನಂದಿಸುವ ಸ್ತುತ್ಯ ಕಾರ್ಯ ಮಾಡುತ್ತಾರೆಂಬುದನ್ನು ತಿಳಿದು ಸಂತೋಷಗೊಂಡಿದ್ದೇನೆ. ಈ ಸ್ನೇಹ ಸೇತು ಬಂಧನದ ಕಾರ್ಯದಲ್ಲಿ, ಕನ್ನಡ ನಾಡಿನ ಬಾಹಿರನಾದ ನನ್ನದೂ ಅಳಿಲ ಸೇವೆಯೆಂದು ಈ ಮಾತು ಬರೆದಿದ್ದೇನೆ. ಇಂತು ಬರೆಯಲು ಆದೇಶವಿತ್ತ ಮಿತ್ರರಿಗೆ ಕೃತಜ್ಞತೆ ಸಲ್ಲಿಸುತ್ತೇನೆ. ಶ್ರೀ ಜಿ. ನಾರಾಯಣರು ವಯಸ್ಸಿನಲ್ಲಿ ನನಗಿಂತ ಕಿರಿಯರಾದರೂ, ವ್ಯಕ್ತಿತ್ವದಲ್ಲಿ ದೊಡ್ಡವರು. ಅವರು ಸಾರ್ಥಕ ಜೀವಿತ ನಡೆಸಿ, ನೂರು ವರ್ಷ ಬಾಳಲಿ ಎಂದು ಆಶಿಸುತ್ತೇನೆ.

ಸ್ವಾತಂತ್ರ್ಯ ವೃಕ್ಷವನ್ನು ಕಾಲ ಕಾಲಕ್ಕೆ ಚಿಗುರಿಸಲು ದೇಶಭಕ್ತರು ನೆತ್ತರವನ್ನೆರೆಯಬೇಕು.

—ಥಾಮಸ್ ಜಫರ್‌ಸನ್

ಸಜ್ಜನಿಕೆಗೆ ಮಾದರಿ

ಜಯತೀರ್ಥ ರಾಜಪುರೋಹಿತ

ಬೆಂಗಳೂರಿನ ಹೊರಗಿನವರಿಗೆ ಶ್ರೀ ಜಿ. ನಾರಾಯಣ ಅವರ ಹೆಸರು ಗೊತ್ತಾದುದು ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕರಾದಮೇಲೆಯೇ. ಅದರಂತೆಯೇ, ಕನ್ನಡ ಸಾಹಿತ್ಯ ಪರಿಷತ್ತು ರಾಜ್ಯವ್ಯಾಪ್ತಿಯ ಏಕೈಕ ಕನ್ನಡ ಸಂಸ್ಥೆ, ಅದರ ಮೇಲೆ ಎಲ್ಲ ಕನ್ನಡಿಗರ ಹಕ್ಕೂ ಇರುವಂತೆ, ಕನ್ನಡದ ವಿಚಾರದಲ್ಲಿ ಎಲ್ಲ ಕನ್ನಡಿಗರ ಆತ್ಮೀಯ ಭಾವನೆ, ಸಹಕಾರಗಳನ್ನು ಪಡೆಯುವ ಜವಾಬ್ದಾರಿಯೂ ಸಾಹಿತ್ಯ ಪರಿಷತ್ತಿನದಾಗಿದೆಯೆಂಬ ಪ್ರಜ್ಞೆ ಮೂಡಿಸಿದ ಮೇಲ್ಮೆಯೂ ಜಿ. ನಾರಾಯಣ ಅವರದೇ ಆಗಿದೆ. ಪರಿಷತ್ತಿಗೆ ಈ ಬಗೆಯ ಪ್ರಾತಿನಿಧಿಕ ಸ್ವರೂಪವನ್ನು ತಂದುಕೊಡುವುದು ನಾರಾಯಣರಂಥ, ಸಂಘಟನಾಚತುರ, ದೂರದೃಷ್ಟಿಯುಳ್ಳ ಯೋಜಕ, ಸಜ್ಜನಿಕೆಯ ಸಹಜತೆಯಿಂದ ಮೇಧಾವಿಗಳನ್ನೂ, ಕೆಲಸಗಾರರನ್ನೂ ಒಟ್ಟಿಗೇ ಆಕರ್ಷಿಸುವಂಥ ವ್ಯಕ್ತಿಗೆ ಮಾತ್ರ ಸಾಧ್ಯ.

ನಾರಾಯಣ ಅವರ ರಾಜಕೀಯ ಅನುಭವ ನಿಷ್ಕಲ್ಮಷ ಹಾಗೂ ಸೇವಾಮುಖವಾಗಿದ್ದ ಕಾರಣ ಸಾಹಿತ್ಯ ಪರಿಷತ್ತು ಅವರ ಕಾಲದಲ್ಲಿ ವಿವಾದಗಳಿಂದ ದೂರ ಉಳಿದು ಕಾರ್ಯ ಮಾಡಲು ಸಾಧ್ಯವಾಯಿತೆಂದು ತೋರುತ್ತದೆ.

ಸುಮಾರು ನಲವತ್ತು ವರ್ಷಗಳಿಂದ ಸಾಹಿತ್ಯಾಸಕ್ತಿ ನನ್ನಲ್ಲಿ ಇತ್ತಾದರೂ ಪರಿಷತ್ತಿನ ಸಂಪರ್ಕ ನಾನು ಪಡೆದುದು ಶ್ರೀ ನಾರಾಯಣರು 1968 ರಲ್ಲಿ ಮೊದಲ ಸಲ ರಾಯಚೂರಿನಲ್ಲಿ ನನ್ನನ್ನು ನೋಡಿದಾಗಲೇ. ಮೊದಲ ಭೇಟಿಯಲ್ಲಿಯೇ ಅವರ ಸರಳ ಸಜ್ಜನಿಕೆಯ ಮಾತು, ರೀತಿ, ಪರಿಷತ್ತಿಗಾಗಿ, ಜನಬೆಂಬಲಕ್ಕಾಗಿ ಅವರು ಹಂಬಲಿಸುತ್ತಿದ್ದ ಕಳಕಳಿ—ಎಲ್ಲ ನನ್ನನ್ನು ಸೆಳೆದು ಬಿಟ್ಟವು. ಆಮೇಲಿನ ನಿರಂತರ ಸಂದರ್ಶನಗಳಲ್ಲಿ ಅವರ ವ್ಯಕ್ತಿತ್ವ ಪದರು ಪದರಾಗಿ ನಮ್ಮೆದುರಿಗೆ ತೆರೆದು ಕೊಂಡಿತು. ನಾವು ಆತ್ಮೀಯ ಸ್ನೇಹಿತರಾದೆವು.

ಯಾವಾಗಲೂ, ಕ್ರಿಯಾಶೀಲರಾಗಿ ತಮ್ಮನ್ನು ಕೆಲಸದಲ್ಲಿ ತೊಡಗಿಸಿಕೊಳ್ಳುವ ಶುಚಿಜೀವನದ ಶ್ರೀ ನಾರಾಯಣರಿಗೆ ಅರವತ್ತು ವರ್ಷ ತುಂಬಿದುದು ಕಾಣುವುದಿಲ್ಲ. ಈ ಚೈತನ್ಯಪೂರ್ಣ ಜೀವ ಹೀಗೆಯೇ ನೂರು ವರ್ಷ ಬಾಳಲಿ; ಮುನ್ನಡೆಯಲಿ. 'ನಾರಾಯಣ ಅವರಿದ್ದಲ್ಲಿ, ನಾವೂ ಇದ್ದೇವೆ' ಎನ್ನದವರಾರು ?

ಗುಣಗ್ರಾಹಿತ್ವ ನಾರಾಯಣ ಅವರ ಮತ್ತೊಂದು ಹಿರಿಯ ಗುಣ. 'ಗುಣ ನೋಡಿ ಮತ್ಸರಪಡುವವರೇ ಹೆಚ್ಚಾಗಿರುವ ಸಾಹಿತ್ಯ, ಸಂಗೀತದಂಥ ಕ್ಷೇತ್ರಗಳಲ್ಲಿ ಅಷ್ಟೋ ಇಷ್ಟೋ ಸಾಧನೆ ಮಾಡಿದವರೂ ಸಹ ಹೇಳ ಹೆಸರಿಲ್ಲದೆ ಹೋಗಬಾರದು. ನಾಡವರು ಅಂಥವರನ್ನು ಮರೆಯಬಾರದು' ಇದು ನಾರಾಯಣ ಅವರ ವಿಚಾರ.

ಇತಿಹಾಸ ಪುರುಷ

ಟಿ. ಆರ್. ಮಹಾದೇವಯ್ಯ

ಇಪ್ಪತ್ತನೆಯ ಶತಮಾನದ ಕನ್ನಡನಾಡಿನ ಇತಿಹಾಸವನ್ನು ಬರೆಯುವವರು ತಪ್ಪದೇ ಉಲ್ಲೇಖಿಸುವ ಹೆಸರು ಶ್ರೀ ದೇಶಹಳ್ಳಿ ಜಿ. ನಾರಾಯಣ ಅವರದು. ಬಿರುದು–ಬಾವಲಿಗೆ ಆಸೆಪಡದೆ, ಅಧಿಕಾರ-ಧನಕ್ಕೆ ಮರುಳಾಗದೆ ಕನ್ನಡದ ಕೈಂಕರ್ಯವನ್ನು ದೇವರ ಪೂಜೆಯಷ್ಟೇ ಪವಿತ್ರ ಭಾವನೆಯಿಂದ ಅತ್ಯಂತ ಸಮರ್ಥ ರೀತಿಯಲ್ಲಿ ಆಗುಮಾಡಿದ ಜಿ. ನಾರಾಯಣ ಅವರ ಕಾರ್ಯದಕ್ಷತೆ ಹಾಗೂ ಬಿಡುವು ಕಾಣದ ದುಡಿಮೆಗಳು ನಾಡಿನ ಚರಿತ್ರೆಯಲ್ಲಿ ಸುವರ್ಣಾಧ್ಯಾಯವನ್ನೇ ಸೃಷ್ಟಿಸಿವೆ. ಕನ್ನಡನಾಡು-ನುಡಿಯ ಆರಾಧಕರಿಗೆಲ್ಲಾ ಅವರ ಹೆಸರು 'ನಾರಾಯಣ ಮಂತ್ರ'ವೇ ಆಗಿಬಿಟ್ಟಿದೆ ! ಕನ್ನಡದ ಪ್ರಗತಿಯ ಬಗ್ಗೆ ಮಾತು ಬಂದಾಗ 'ನಾರಾಯಣ ಮಾದರಿ' ಅನುಸರಣ ಯೋಗ್ಯವೆಂದು ಯಾರಾದರೂ ಹೇಳುವಷ್ಟು ಅವರ ಕಾರ್ಯಕ್ಷಮತೆ ನಾಡ ಮನೆಮಾತಾಗಿದೆ. ಇಂಥವರನ್ನು ಕುರಿತು ಕಿರುಲೇಖನವೊಂದನ್ನು ಬರೆಯುವುದೆಂದರೆ ಸಮುದ್ರವನ್ನು ಕೊಕ್ಕಿನಲ್ಲೇ ಮೊಗೆದು ಬತ್ತಿಸುತ್ತೇನೆಂಬ ಗುಬ್ಬಿಯ ಸಾಹಸವೇ ಆಗುತ್ತದೆ.

ಜಿ. ನಾ. ಅವರು ನಮ್ಮ ನಾಡಿನ ಹಿರಿಯ ಮುತ್ಸದ್ದಿ. ನಿಜವಾದ ಅರ್ಥದಲ್ಲಿ ನಾಡು-ನುಡಿಯ ಉಜ್ವಲ ಅಭಿಮಾನಿ. ಒಳ್ಳೆಯ ಚಿಂತನಶೀಲ ; ಪರಿಪಕ್ವ ಮೇಧಾವಿ ; ಸುಸಂಸ್ಕೃತ ಚೇತನ ; ಹೃದಯ ಶ್ರೀಮಂತಿಕೆಯ ಸಿರಿವಂತ ; ನಿಸ್ವಾರ್ಥ ನಿಷ್ಕಳಂಕ ಸೇವಾಕರ್ತ; ಋಜುಜೀವನದ ಗಾಂಧಿ ತತ್ವಾನುಯಾಯಿ; ಹೊಗಳಿಕೆ-ತೆಗಳಿಕೆಗಳಿಗೆ ಅತೀತನಾಗಿ ನಿಂತ ಸ್ಥಿತಪ್ರಜ್ಞ ; ಎಲ್ಲರನ್ನು ನಿಷ್ಕಾಮ ಪ್ರೇಮದಿಂದ ಒಗ್ಗೂಡಿಸುವ ಅಜಾತಶತ್ರು; ...ಇಂಥ ಕೊಂಡಾಟದ ನುಡಿಗಳು ಜಿ. ನಾ. ಅವರ ವಿಷಯದಲ್ಲಿ ಶುಷ್ಕವಾದ ಮುಖಸ್ತುತಿಗಳಲ್ಲ ; ಬೇಡಿಕೆ ಈಡೇರಿಸಿಕೊಳ್ಳಲು ಅಲ್ಪವನ್ನು ಕಲ್ಪ ಮಾಡಿ ಹೇಳುವ 'ಹೊನ್ನ ಶೂಲ'ವಿಡುವ ಡಬಡ್ಡಾಳಿಕೆಯ ಹೊಗಳಿಕೆಯಲ್ಲ ; ಯಥಾರ್ಥದ ಮಾತುಗಳು. ಅವರ ವ್ಯಕ್ತಿತ್ವ, ಜೀವನ, ಸಾಧನೆ, ಸಿದ್ಧಿಗಳು ಇದಕ್ಕೆ ಉತ್ಕೃಷ್ಟ ನಿದರ್ಶನಗಳಾಗಿವೆ.

ಜಿ. ನಾ. ಅವರು ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಅದರ ಯಶಸ್ಸಿಗೆ ಶ್ರಮಿಸಿದ ಕಾರ್ಯಕರ್ತರು ಒಂದು ವಿಶಿಷ್ಟವಾದ ಧನ್ಯತೆಯನ್ನು ಪಡೆಯುತ್ತಾರೆ. ದೇಹ

> ಅವರ ಸಮನ್ವಯ ಗುಣಕ್ಕೆ ಕಾರಣ ಬಹುಶಃ ಅವರು ಬೆಳೆದುಬಂದ ಪರಿಸರವೆನ್ನಬಹುದು. 'ಜನತಾ ವಿಶ್ವವಿದ್ಯಾಲಯ'ದಲ್ಲಿ 'ಲೋಕ ಶಿಕ್ಷಣ' ಪಡೆದು ಕ್ರಮೇಣ ವಿಕಾಸದ ಹಾದಿಯಲ್ಲಿ ಸಾಗಿಬಂದ ಅವರಿಗೆ ಹತ್ತೂನಿಟ್ಟಿನಿಂದ ಬರುವ ವಿಷಯಗಳನ್ನು ಕೇಳಿಸಿಕೊಳ್ಳುವ ಕಿವಿಗಳಿವೆ. ಆದರೆ ಅವನ್ನು ಮಥಿಸಿನೋಡಿ ಸೂಕ್ತವಾದುದನ್ನು ಆರಿಸುವ ವಿವೇಕವಿದೆ.

ದಣಿದರೂ ಮನ ತಣಿಯುವ, ಆತ್ಮ ನಲಿಯುವ ಅಪೂರ್ವ ಅವಕಾಶ ಅಲ್ಲಿರುತ್ತದೆ. ಹೇಗೆಂದರೆ ಕಾರ್ಯ ಕ್ರಮದಲ್ಲಿ ಪಾಲ್ಗೊಂಡವರೆಲ್ಲಾ ಒಂದಲ್ಲ ಒಂದು ಬಗೆ ಯಲ್ಲಿ ತಮ್ಮ ವ್ಯಕ್ತಿತ್ವವನ್ನು ಅರಳಿಸಿಕೊಳ್ಳುತ್ತಾರೆ. ಜಿ. ನಾ. ಅವರ ಕಾರ್ಯ ಕಮ್ಮಟದಲ್ಲಿ ಭಾಗಿಯಾದವರು ಕರ್ತೃತ್ವ ಶಕ್ತಿಯ ಮುದ್ರೆಯೊತ್ತಿಸಿಕೊಂಡು ಚೊಕ್ಕ ನಾಣ್ಯಗಳಾಗಿ ನಾಡ ಸೇವೆಗೆ ಸಲ್ಲುತ್ತಾರೆ.

ಜಿ. ನಾ. ವಟವೃಕ್ಷದಂತೆ ಬೆಳೆದರು. ಜೊತೆಗೆ ತಮ್ಮ ಜೊತೆ ಸೇವೆ ಸಲ್ಲಿಸಿದವರನ್ನೂ ಬೆಳೆಸಿದರು. ಸಾಮಾನ್ಯ ವಾಗಿ ಆಲದ ಮರದ ಕೆಳಗೆ ಏನೂ ಬೆಳೆಯುವುದೇ ಇಲ್ಲ. ದೊಡ್ಡ ವ್ಯಕ್ತಿಯ ಪ್ರಭಾ ವಲಯದಲ್ಲಿ ಉಳಿದವರೆಲ್ಲಾ ಮಸಕಾಗಿ ಹೋಗುವ ಸಂಭವ ಜಾಸ್ತಿ. ಇಲ್ಲಿ ಹಾಗಾಗಲಿಲ್ಲ. ಒಂದು ಸಸಿ ಮಡಿ ಹೇಗೆ ಲಕ್ಷಾಂತರ ಸಸಿಗೆ ಆಶ್ರಯವನ್ನು ನೀಡಿ, ಅವನ್ನು ಬೇರೆಡೆಗೆ ಕೊಂಡೊಯ್ದು ನಾಟಿ 'ಸತ್ಫಲಗಳನ್ನು ಪಡೆಯಲು ಸಾಧ್ಯವೊ' ಹಾಗೆ ನೂರಾರು ಕಾರ್ಯಕರ್ತರು, ನುಡಿ ಸೇವಕರು, ಸಹೃದಯಿಗಳು ಜಿ. ನಾ. ಅವರ ಕಾರ್ಯ ಕ್ಷೇತ್ರದ ಗರಡಿಯಲ್ಲಿ ತಯಾರಾದರು—ಅವರಿಗೇ ಅರಿವಿಲ್ಲ ದಂತೆ. ಒಬ್ಬೊಬ್ಬರೂ ಸ್ವತಂತ್ರವಾಗಿ ಅಂಥ ಕಾರ್ಯ ಕ್ರಮಗಳನ್ನು ರೂಪಿಸಿ ಆಗುಮಾಡುವ ಸಾಮರ್ಥ್ಯ ವನ್ನು ಅನುಭವಪೂರ್ವಕವಾಗಿ ಪಡೆದರು. ಜ್ಯೋತಿ ಮುಟ್ಟಿದ ಪ್ರಣತಿಗಳು ಜ್ಯೋತಿಗಳಾಗಿ ಬೆಳಗಿದುವು ! ಹೀಗೆ ಜಿ. ನಾ ಅವರು ನಾಡಿನ ಯುವಶಕ್ತಿಯನ್ನು ಸಂಘಟಿಸಿ, ಸೂಕ್ತ ತರಬೇತಿ ನೀಡಿ ನಾಡ ಗುಡಿ ಕಟ್ಟುವ ಡಿಂಗರಿಗರನ್ನಾಗಿಸಿ ಅದ್ಭುತವನ್ನೇ ಸಾಧಿಸಿದರು.

ನಮ್ಮ ಅನೇಕ ಯೋಚನೆ-ಯೋಜನೆಗಳು ಅಯ ಶಸ್ಸು ಅಥವಾ ಅರ್ಧ ಯಶಸ್ಸನ್ನು ಗಳಿಸಲು ಕಾರಣ ಮಾನವ ಶಕ್ತಿಸಂಪನ್ಮೂಲಗಳನ್ನು ಸರಿಯಾಗಿ ಗುರುತಿಸಿ, ಸಮರ್ಪಕ ರೀತಿಯಲ್ಲಿ ಬಳಸಿಕೊಳ್ಳದೆ ಇರುವುದು. ದುಡಿಯುವ ಶಕ್ತಿಯುಳ್ಳವರನ್ನು ಚಾತುರ್ಯವುಳ್ಳ ವರನ್ನು ಪತ್ತೆ ಮಾಡುವುದು, ಅವರು ಮಾಡುವ ಕೆಲಸ ವನ್ನು ಆತ್ಮೀಯತೆಯಿಂದ, ಆತ್ಮವಿಶ್ವಾಸದಿಂದ ನಡೆಸಿ ಕೊಡುವಂತೆ ಪ್ರೇರಿಸುವುದು ಬಹಳ ಮುಖ್ಯವಾದುದು. ಜಿ. ನಾ ಅವರು ಸಾರಸ್ವತ-ಸಾಂಸ್ಕೃತಿಕ ಕಾರ್ಯಕ್ರಮ ಗಳನ್ನು ವ್ಯವಸ್ಥೆಗೊಳಿಸುವ ವ್ಯಾಜದಲ್ಲಿ ನಾಡಿಗೆ ಅಪೂರ್ವವಾದ ಭವ್ಯ ಸಂಪತ್ತನ್ನು ಅನುಗೊಳಿಸಿದರು. ಇದು ಸಣ್ಣದಲ್ಲ.

ಇದರ ಜೊತೆಗೇ ಆದ ಇನ್ನೊಂದು ಮಹತ್ವದ ಸಾಧನೆ ಯೆಂದರೆ ಜನಮನವನ್ನು ಅಣಿಗೊಳಿಸಿದ್ದು. ಅವರು ತುಂಬಾ ಜೋಕೆ ತೂಕದಿಂದ, ಸುವ್ಯವಸ್ಥೆಯಿಂದ ಏರ್ಪಡಿಸುತ್ತಿದ್ದ ಕಾರ್ಯಕ್ರಮುಗಳು ಭಿನ್ನ ಅಭಿರುಚಿಯ ಜನತೆಗೆ ವಿನೂತನವಾದ ಅನುಭವವನ್ನೇ ತಂದವು. ಬೃಹತ್ ಪ್ರಮಾಣದಲ್ಲಿ, ಅಷ್ಟೇ ಮಹತ್ವಪೂರ್ಣವಾಗಿ ನಡೆದ ಕಾರ್ಯಕ್ರಮುಗಳು ಜನಮನವನ್ನು ಗೆದ್ದವು ; ಅಷ್ಟೇ ಅಲ್ಲ ತಿದ್ದಿದವು. ಅವರಿಗೆ ಸದಭಿರುಚಿಯನ್ನು, ಸದಭಿಮಾನವನ್ನು ಕಲಿಸಿದವು. ಕಲಾವಿದರಂತೆಯೇ ಸಾಹಿತ್ಯಾಸಕ್ತರ, ಕಲಾರಾಧಕರ, ಸಹೃದಯಿಗಳ ಸಂಖ್ಯೆಯೂ ಹೆಚ್ಚಿ ಲಲಿತ ಕಲೆಗಳು ಅರಳಲು ಸೂಕ್ತ ವಾತಾವರಣವೇರ್ಪಡಲು ಸಾಧ್ಯವಾಯಿತು.

ಸಮನ್ವಯತೆ ಜಿ ನಾ ಅವರ ವ್ಯಕ್ತಿತ್ವದ ಇನ್ನೊಂದು ಗಮನಾರ್ಹ ಗುಣ—ಯಾವುದೇ ಕಾರ್ಯ ಕ್ರಮದ ರೂವಾರಿ, ಸೂತ್ರಧಾರಿ ತಾವೇ ಆದರೂ ಅದಕ್ಕೆ ಎಲ್ಲರ ನೈತಿಕ ಬೆಂಬಲವನ್ನೂ ದೊರಕಿಸಿಕೊಳ್ಳುತ್ತಾರೆ. ಅವರಿಗೆ ಹಿರಿಯರೂ ಬೇಕು, ಕಿರಿಯರೂ ಬೇಕು ; ಅಧಿಕಾರಿಗಳೂ ಬೇಕು, ಕೂಲಿಕಾರರೂ ಬೇಕು ; ಬಡವರೂ ಬೇಕು, ಸಿರಿವಂತರೂ ಬೇಕು ; ಗಂಡಸರು, ಹೆಂಗಸರ ಜೊತೆ ಮಕ್ಕಳೂ ಬೇಕು ; ಕಡೆಗೆ ಮಿತ್ರ ರಂತೆಯೇ ಶತ್ರುಗಳೂ ಬೇಕು. ಎಲ್ಲರನ್ನೂ ಕರೆದು ಅವರ ಅಭಿಪ್ರಾಯಗಳನ್ನು ಕ್ರೋಢೀಕರಿಸಿ, ಪರಿಶೀಲನೆ ಮಾಡಿ ಸರ್ವರ ಹಿತದೃಷ್ಟಿಯಿಂದ ಸೂಕ್ತವಾದುದನ್ನು ತಮ್ಮ ಸುವಿವೇಕದಿಂದ ನೇರ್ಪಡಿಸಿ ಕಾರ್ಯರೂಪಕ್ಕೆ ತರುತ್ತಾರೆ. ಇದರಿಂದ ಎಲ್ಲರ ಸಹಾಯ ಸಹಕಾರಗಳೂ ಅವರ ಯೋಜನೆಗಳಿಗೆ ದೊರಕುತ್ತಾ ಬಂದುವು.

ಅವರ ಸಮನ್ವಯ ಗುಣಕ್ಕೆ ಕಾರಣ ಬಹುಶಃ ಅವರು ಬೆಳೆದು ಬಂದ ಪರಿಸರವೆನ್ನಬಹುದು. 'ಜನತಾ ವಿಶ್ವ ವಿದ್ಯಾಲಯ'ದಲ್ಲಿ 'ಲೋಕ ಶಿಕ್ಷಣ' ಪಡೆದು ಕ್ರಮೇಣ ವಿಕಾಸದ ಹಾದಿಯಲ್ಲಿ ಸಾಗಿ ಬಂದ ಅವರಿಗೆ ಹತ್ತೂ ನಿಟ್ಟಿನಿಂದ ಬರುವ ವಿಷಯಗಳನ್ನು ಕೇಳಿಸಿಕೊಳ್ಳುವ ಕಿವಿಗಳಿವೆ. ಆದರೆ ಅವನ್ನು ಮಥಿಸಿ ನೋಡಿ ಸೂಕ್ತವಾದು

ವನ್ನು ಅರಿಸುವ ವಿವೇಕವಿದೆ. ಇನ್ನೊಬ್ಬರ ಅನಿಸಿಕೆ-ಆಲೋಚನೆಗಳನ್ನು ಸಾವಧಾನವಾಗಿ ಕೇಳಿ ತನ್ನ ಅರಿವಿನ ಬೆಳಕಿನಲ್ಲಿ ತೂಗಿ ತಮ್ಮದೇ ಆದ ತಾತ್ತ್ವಿಕ ನೆಲೆಯಲ್ಲಿ ನಿಲ್ಲುವ ಅವರ ಛಾತಿ ಅನನ್ಯ. ನಾಡ ಕಾರ್ಯದಲ್ಲಿ ಬಹು ಜನರ ಬುದ್ಧಿ-ಮನಗಳನ್ನು ತೊಡಗಿಸಿದ ಅವರ ವಿಧಾನ ವಿನೂತನವೇ ಸರಿ.

ಜಿ. ನಾ ಅವರದು ಮಾತಿಗೆ ನಿಲುಕದ ಮಹಾನ್ ವ್ಯಕ್ತಿತ್ವ. ಇಷ್ಟಾದರೂ ನಾವು ಅವರನ್ನು ಪೂರ್ಣ ಅರ್ಥಮಾಡಿಕೊಳ್ಳಲು ಸಾಧ್ಯವಾಗಿಲ್ಲ. ಜೀವನದ ಮೌಲ್ಯಗಳನ್ನು ಒರೆ ಹಚ್ಚುವ ವಿಧಾನದಲ್ಲಿ ಅವರು ತೋರಿಸಿದ ಬುದ್ಧಿಶಕ್ತಿ, ಸಂಘಟನೆಯಲ್ಲಿ ಅವರು ತೋರಿದ ಚಾತುರ್ಯ, ಯಾವುದೇ ಚರ್ಚೆಯಲ್ಲಿ ಪಾಲ್ಗೊಂಡಾಗ, ಸಮಾಲೋಚನೆಯನ್ನು ಮಾಡುವಾಗ ತತ್‌ಕ್ಷಣ ಪ್ರತಿಕ್ರಿಯಿಸದೆ ಎಲ್ಲರ ಅಭಿಪ್ರಾಯಗಳನ್ನೂ ಕೇಳಿಕೊಂಡು ವಿಷಯ ಮಥನ ಮಾಡಿ ತಮ್ಮ ನಿಲವನ್ನು ಪ್ರತಿಪಾದಿಸುವ ಛಾತಿ ಅನನುಕರಣೀಯ. ಅವರ ಇಂಥ ಹಲವು ಗುಣಗಳಿಗೆ ಕಿರೀಟಪ್ರಾಯ ಅವರ ಸರಳತೆ ಹಾಗೂ ಸರಸಸಜ್ಜನಿಕೆ. ನಾಡಿಗೆ ನಾಡೇ ಅವರನ್ನು ಕೈವಾರಿಸಿದ ಸಂದರ್ಭದಲ್ಲೂ ಅವರು ಬೀಗಲಿಲ್ಲ ; ಬದಲು ಬಾಗಿದರು. ಅದ್ಭುತ ಕಾರ್ಯಗಳನ್ನು ನೆರವೇರಿಸಿ ಮರೆಯಲ್ಲಿ ಮೌನವಾಗಿ ನಿಂತರು. ಅವರು ವಿನಯದಿಂದ ಮರೆಯಾಗಿ ನಿಂತರೂ ಉಪಕೃತವಾದ ನಾಡು, ನಾಡಿನ ಜನ ಅವರನ್ನು ಮರೆತಿಲ್ಲ; ಮರೆಯುವುದಿಲ್ಲ. ಆ ಕೃತಜ್ಞತೆಯ ಕುರುಹೇ ಈ ಷಷ್ಠಿನಮನ !

ಇನ್ನೊಬ್ಬರ ಇಚ್ಛೆಗೆ ಗುಲಾಮನಾಗದವನ, ನಿಷ್ಕಪಟ ಭಾವನೆಯೇ ಕವಚವಾಗಿರುವವನ, ಸರಳ ಸತ್ಯವೇ ಜಾಣ್ಮೆಯಾದವನ-ಹುಟ್ಟು ಬೆಳವಣಿಗೆಗಳು ತುಂಬಾ ಹಿತಕರವಾದವು.

—ಸರ್ ಹೆನ್ರಿ ವಾಟನ್

ಸಹೃದಯಿ ನಾರಾಯಣ

ಟಿ. ಸುನಂದಮ್ಮ

ಮಹಿಳಾ ವರ್ಷದಲ್ಲಿ ಅವರು ನಡೆಸಿದ ವೈವಿಧ್ಯಮಯ ಕಾರ್ಯಕ್ರಮಗಳಲ್ಲಿ ನೂರಾರು ಮಹಿಳೆಯರಿಗೆ ಪಾಲು; ಭಾಷಣ, ಗೋಷ್ಠಿ, ಪುಸ್ತಕ ರಚನೆ-ನಾಡಿನುದ್ದಗಲಕ್ಕೂ ಹಮ್ಮಿಕೊಂಡ ಚಟುವಟಿಕೆಗಳು. ಮಹಿಳಾ ವರ್ಷದ ಪ್ರಾಮುಖ್ಯತೆಯನ್ನು ಹಳ್ಳಿ ಹಳ್ಳಿಗೂ ಪರಿಷತ್ತು ಮುಟ್ಟಿಸಿದಷ್ಟು ಪ್ರಮಾಣದಲ್ಲಿ ಮತ್ತಿನ್ನಾವ ಸಂಸ್ಥೆಯೂ ಮುಟ್ಟಿಸಿರಲಾರದು!

ಕಾರ್ಪೊರೇಷನ್ನಿನ ಸಮಾರಂಭವೊಂದರಲ್ಲಿ ಮೇಯರ್ ಜಿ. ನಾರಾಯಣರವರ ದೂರ ದರ್ಶನವಾಗಿತ್ತು; ಅವರ ಪರಿಚಯ ನನಗಾದದ್ದು ಕೆಲವು ವರ್ಷಗಳ ನಂತರ.

ಆಗಸ್ಟ್ ಹದಿನೈದರ ಸಂಜೆ 'ವಿನೋದ' ಮಾಸ ಪತ್ರಿಕೆಯ ಹುಟ್ಟು ಹಬ್ಬವನ್ನು ಆಚರಿಸುವ ಪದ್ಧತಿಯಿತ್ತು; ಆ ವರ್ಷದ ಕಾರ್ಯಕ್ರಮದಲ್ಲಿ ನಡೆಯಲಿದ್ದ ವಿಚಾರಗೋಷ್ಠಿಯಲ್ಲಿ 'ಹಾಸ್ಯದ ಹಲವು ಒಗೆಗಳು' ಎನ್ನುವ ವಿಷಯವಾಗಿ ಮಾತನಾಡಬೇಕೆಂದು ಪತ್ರಿಕೆಯ ಸಂಪಾದಕರಾದ ಶ್ರೀ ನಾರಾಯಣರವರಿಂದ ಪತ್ರಬಂತು. ವೇದಿಕೆಯಲ್ಲಿ ನಿಂತು ಮಾತನಾಡುವುದು ನನಗೂ ಹೊಸತು; ಉತ್ಸುಕತೆಯಿಂದ ಸಾಕಷ್ಟು ಸಿದ್ಧತೆ ನಡೆಸಿ, ಹೋದೆ. ಶ್ರೀ ನಾರಾಯಣರವರು ನನ್ನನ್ನು ಸಭೆಗೆ ಪರಿಚಯಿಸುವಾಗ 'ಇವರನ್ನು ಮೈಸೂರಿನ ಟಿ. ಸುನಂದಮ್ಮ ಎಂದುಕೊಂಡಿದ್ದೆ; ಆದರೆ ಇವರು ಬೇರೆ ಟಿ. ಸುನಂದಮ್ಮ ಎಂದು ಈಗ ತಿಳಿಯಿತು' ಎಂದು ನಗೆ ಮಾತಾಡಿ, ವಿಶ್ವಾಸದಿಂದ ಸ್ವಾಗತಿಸಿದರು.

ಕನ್ನಡದಲ್ಲಿ ಹಾಸ್ಯ ಸಾಹಿತ್ಯ ಕಡಿಮೆ. 'ವಿಕಟ ವಿನೋದಿನಿ', 'ನಗುವನಂದ' ಮೊದಲಿನ ಹಾಸ್ಯ ಸಾಹಿತ್ಯ ಪತ್ರಿಕೆಗಳು; ಅವು ನಿಂತು ಹೋಗುವ ವೇಳೆಗೆ 'ಕೊರವಂಜಿ' ಜನ್ಮ ತಾಳಿದ್ದಳು. ಉತ್ತಮ ಮಟ್ಟದ ನಗೆ ಸಾಹಿತ್ಯ ಒದಗಿಸಿದ ಆ ಮಾಸಿಕದ್ದು ಸಹ ಇಪ್ಪತ್ತೈದು ವರ್ಷಗಳ ಅಲ್ಪಾಯಸ್ಸು. ಈಗ ಚಾಲನೆಯಲ್ಲಿರುವ ಏಕೈಕ ಹಾಸ್ಯ ಮಾಸಪತ್ರಿಕೆ 'ವಿನೋದ'ಕ್ಕೆ ಮುವ್ವತ್ತಮೂರನೇ ವಯಸ್ಸು ನಡೆಯುತ್ತಿರುವುದು ಅದರ ಧೀಮಂತ ಸಂಪಾದಕ ನಾರಾಯಣರ ದೃಢ ನಿಶ್ಚಯದ ಸಂಕೇತ. ಲಾಭವೋ ನಷ್ಟವೋ? ಅವರೆಂದೂ ಕಷ್ಟವನ್ನು ಓದುಗರೊಂದಿಗೆ ಹಂಚಿಕೊಂಡಿಲ್ಲ; ಪತ್ರಿಕೆಯನ್ನು ಮುಂದುವರಿಸುವ ಏಕೈಕ ಗುರಿ ಅವರದು.

ನಾರಾಯಣರ ನಿಕಟ ಸಂಬಂಧ ನನಗಾದದ್ದು, ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಮೇಲೆ. ಕಾಯಕಲ್ಪ ನಡೆಸಿಕೊಂಡ ಪರಿಷತ್ತು ನನ್ನನ್ನು ಆಕರ್ಷಿಸಿತು; ನಾನು ಸದಸ್ಯಳಾದೆ; ಚಟುವಟಿಕೆಗಳಲ್ಲಿ ಭಾಗ ವಹಿಸಿದೆ. ಸುವರ್ಣ ಮಹೋತ್ಸವ ಹಾಗೂ ವಜ್ರ ಮಹೋತ್ಸವಗಳನ್ನು ಜಯಪ್ರದವಾಗಿ ನಡೆಸಿದ ಕೀರ್ತಿ ನಾರಾಯಣರದು.

ಮಹಿಳಾ ಸಲಹಾ ಸಮಿತಿಯ ಸದಸ್ಯಳಾಗಿದ್ದ ನನಗೆ, ಶ್ರೀ ನಾರಾಯಣರ ಕಾರ್ಯಪಟುತ್ವದ ಪೂರ್ಣ ಪರಿಚಯವಾಯಿತು. ಯಾವುದೇ ಸಮಾರಂಭವಾಗಲಿ, ಯಾವುದೇ ಹೊಸ ಯೋಜನೆಯಾಗಲೀ ನಾರಾಯಣರು ತಾವೇ ಆಲೋಚನೆ ಮಾಡಿಕೊಂಡು ವ್ಯವಸ್ಥೆಯ ಕರಡು ಪ್ರತಿ ಸಿದ್ಧಗೊಳಿಸಿರುತ್ತಿದ್ದರು. ಮೀಟಿಂಗ್‌ನಲ್ಲಿ ಪಾಲ್ಗೊಂಡ ನಮಗೆ ಕೆಲಸವೇನೂ ಉಳಿದಿರುತ್ತಿರಲಿಲ್ಲ. ಅವರ ಯೋಜನೆ ಎಷ್ಟು ಪರಿಪೂರ್ಣವಾಗಿರುತ್ತಿತ್ತೆಂದರೆ, ದೋಷ ಹುಡುಕಲು ಅವಕಾಶವೇ ಸಿಕ್ಕುತ್ತಿರಲಿಲ್ಲ. ಅವರು ಮೀಟಿಂಗನ್ನು ಎಷ್ಟು ಚಾತುರ್ಯದಿಂದ ನಡೆಸುತ್ತಿದ್ದರೆಂದರೆ, ಯೋಜನೆಯ ಇಡೀ ನಕ್ಷೆ ಅವರದು; ಏನನ್ನೋ ಸಾಧಿಸಿದೆವೆನ್ನುವ ತೃಪ್ತಿ ನಮ್ಮದು!

ಕಾರ್ಯಕರ್ತರನ್ನು ಏಕೀಭವಿಸಿಕೊಳ್ಳುವ ಅವರ ಸಾಮರ್ಥ್ಯವೇ ಮನೆಮನೆಗೆ ಪುಸ್ತಕ ಭಂಡಾರವನ್ನು ಒಯ್ಯುವ ಪಾದಯಾತ್ರೆ ಕಾರ್ಯಕ್ರಮದಲ್ಲಿ ಬರಹಗಾರರನ್ನು ತೊಡಗಿಸಿಕೊಂಡದ್ದು. ಬಡಾವಣೆಯ ರಸ್ತೆಗಳಲ್ಲಿ ಮುಂಗಡವಾಗಿ ಧ್ವನಿವರ್ಧಕದ ಮೂಲಕ ಸಾಹಿತ್ಯ ಭಕ್ತರ ಆಗಮನದ ಘೋಷಣೆ, ಪುಸ್ತಕಗಳ ಚೀಲ ಹೊತ್ತ ಕನ್ನಡ ಕಾರ್ಯಕರ್ತರೊಂದಿಗೆ ಹಿಂದೆ ನಡೆದ ಮುಂದಾಳು ಸಾಹಿತಿ. ಭಾಗವಹಿಸಿದ ನಮ್ಮ ಲೇಖಕಿ ಬಳಗಕ್ಕಂತೂ 'ಪಾದಯಾತ್ರೆ'ಯಲ್ಲ, 'ಜೈತ್ರಯಾತ್ರೆ' ನಡೆಸಿದಂತಹ ಹೆಮ್ಮೆಯ ಅನುಭವ!

ಹೆಣ್ಣುಮಕ್ಕಳ ಬಗ್ಗೆ ಶ್ರೀ ನಾರಾಯಣರಿಗೆ ತುಂಬ ಕಳಕಳಿ. ಮಹಿಳಾ ವರ್ಷದಲ್ಲಿ ಅವರು ನಡೆಸಿದ ವೈವಿಧ್ಯಮಯ ಕಾರ್ಯಕ್ರಮಗಳಲ್ಲಿ ನೂರಾರು ಮಹಿಳೆಯರಿಗೆ ಪಾಲು; ಭಾಷಣ, ಗೋಷ್ಠಿ, ಪುಸ್ತಕ ರಚನೆ,—ನಾಡಿನುದ್ದಗಲಕ್ಕೂ ಹಮ್ಮಿಕೊಂಡ ಚಟುವಟಿಕೆಗಳು. ಮಹಿಳಾ ವರ್ಷದ ಪ್ರಾಮುಖ್ಯತೆಯನ್ನು ಹಳ್ಳಿಹಳ್ಳಿಗೂ ಪರಿಷತ್ತು ಮುಟ್ಟಿಸಿದಷ್ಟು ಪ್ರಮಾಣದಲ್ಲಿ ಮತ್ತಿನ್ನಾವ ಸಂಸ್ಥೆಯೂ ಮುಟ್ಟಿಸಿರಲಾರದು!

ಬರಹಗಾರ್ತಿಯರ ಸಂಘಟನೆಯ ಅವಶ್ಯಕತೆಯನ್ನು ಕಂಡುಕೊಂಡ ಕೆಲವು ಸೋದರಿಯರು ಸಂಘವೊಂದನ್ನು ಸ್ಥಾಪಿಸುವ ಉದ್ದೇಶ ಸೂಚಿಸಿದಾಗ, ಬೆನ್ನಾಸರೆಯಾಗಿ ನಿಂತವರು ಶ್ರೀ ನಾರಾಯಣ. ಹಲವು ಮಹಿಳೆಯರನ್ನು ತಮ್ಮ ಮನೆಗೆ ಆಹ್ವಾನಿಸಿ, ಉಪಹಾರಾದಿಗಳಿಂದ ಉಪಚರಿಸಿ, ಸೂಕ್ತ ಸಲಹೆಗಳನ್ನು ಕೊಟ್ಟು, ಇಂದು ಐದು ವರ್ಷ ಬೆಳೆದು ಸುಭದ್ರತೆ ಪಡೆದಿರುವ 'ಕರ್ನಾಟಕ ಲೇಖಕಿಯರ ಸಂಘ'ದ ಅಸ್ತಿತ್ವಕ್ಕೆ ಕಾರಣರಾದರು.

ರಾಜಕೀಯದಲ್ಲಿದ್ದು, ಸಮಾಜ ಸೇವಕರಾಗಿ, ಸ್ವತಃ ಸಾಹಿತಿಯಾಗಿಲ್ಲದಿದ್ದರೂ ಸಾಹಿತ್ಯಾಸಕ್ತಿ ಹೊಂದಿದ್ದಲ್ಲದೆ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಕನ್ನಡ ಸಾಹಿತ್ಯಕ್ಕೆ ಸಕಲ ಚೇತನವನ್ನೂ ತುಂಬಿಕೊಟ್ಟ ಅಪರೂಪದ ವ್ಯಕ್ತಿ. ಪ್ರಚಾರಪ್ರಿಯರಲ್ಲ; ಕ್ರಿಯಾವಂತ, ಕಾರ್ಯನಿರತ; ಸಹನೆ, ತಾಳ್ಮೆಗಳ ಮೂರ್ತಿ, ಮಿತಭಾಷಿ, ಸಹೃದಯಿ ಜಿ. ನಾರಾಯಣ.

ಗುಬ್ಬಿ ಬೀಳುವುದರಲ್ಲಿಯೂ ವಿಶೇಷ ವಿಧಿಯಾಟವಿದೆ! ಈಗ ನಡೆದದ್ದು ಹಿಂದೆ ನಡೆದಿರಬಹುದು. ಮುಂದೆ ನಡೆಯದೇ ಇರುವುದು ಇಂದಿಗೇ ನಡೆಯಬಹುದು. ಈಗ ನಡೆಯದ ಸಂಗತಿ ಮುಂದೆ ನಡೆಯುವದು ಖಂಡಿತ. ಸಕಲಕ್ಕೂ ಸಿದ್ಧವಾಗಿರುವುದೇ ಲೇಸು!

—ಷೇಕ್‌ಸ್ಪಿಯರ್

ನಿಷ್ಕಾಮ ಕರ್ಮಯೋಗಿ

ಎ. ಪಂಕಜ

ಕ. ಸಾ. ಪರಿಷತ್ತಿನ ಅಧ್ಯಕ್ಷಸ್ಥಾನದಿಂದ ದೂರ ಸರಿದರೂ ಸಹ ಇವರ ಕನ್ನಡಾಭಿಮಾನಕ್ಕೆ ಇತಿಮಿತಿಗಳಿಲ್ಲ. 'ಕೊರವಂಜಿ' ಇಲ್ಲವೆಂದು ಬೇಸರಬೇಡ ಎಂದು 'ವಿನೋದ' ಮಾಸಪತ್ರಿಕೆಯನ್ನು ನಡೆಸುತ್ತಿದ್ದಾರೆ. ಕನ್ನಡ ರಾಜ್ಯೋತ್ಸವ ಸಮಿತಿ, ಕನ್ನಡ ಜಾಗೃತ ಪರಿಷತ್ತುಗಳನ್ನು ಕಟ್ಟಿದ್ದಾರೆ.

ಕನ್ನಡನಾಡ ನುಡಿ, ಸಾಹಿತ್ಯ, ಕಲೆ, ಸಂಸ್ಕೃತಿ ಮತ್ತು ಜನಪದಗಳ ಉಳಿವಿಗಾಗಿ, ಅದರ ರಕ್ಷಣೆಗಾಗಿ ಹೋರಾಡಿ, ಅದಕ್ಕಾಗಿ ದುಡಿಯುವ ಮಹಾನ್ ವ್ಯಕ್ತಿಗಳು ಶ್ರೀ ಜಿ. ನಾರಾಯಣ ಅವರು. ವೈಕುಂಠಕ್ಕೆ ಶ್ರೀಮನ್ನಾರಾಯಣನಂತೆ, ನಮ್ಮ ಕರ್ನಾಟಕಕ್ಕೆ, ಕನ್ನಡ ಸಾರಸ್ವತ ಲೋಕಕ್ಕೆ ಈ ನಾರಾಯಣ ಅವರು ಎಂದರೆ ಪ್ರಾಯಶಃ ತಪ್ಪಾಗಲಾರದು.

ಇವರು ಮೇಯರ್ ಆಗಿದ್ದಾಗಲೇ ಕಾರ್ಪೊರೇಷನ್ ಆಫೀಸಿನ ಮೇಲೆ ಕನ್ನಡದ ನಾಮಫಲಕವನ್ನು ಹಾಕಿಸುವ ದಿಟ್ಟ ಹೆಜ್ಜೆಯನ್ನಿಟ್ಟರು. ಇಂದಿಗೂ ಕಾರ್ಪೊರೇಷನ್ ಆಫೀಸಿನ ಎದುರು ಆವರಣದಲ್ಲಿ ನಿಂತಿರುವ ಕೆಂಪೇಗೌಡನ ಪ್ರತಿಮೆ (Statue) ಇವರ ಕಾರ್ಯಸಾಧನೆ ಆಗಿದೆ.

ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ತ್ರೈವಾರ್ಷಿಕ ಯೋಜನೆ, ಪಂಚವಾರ್ಷಿಕ ಯೋಜನೆಗಳನ್ನು ನಿರೂಪಿಸಿ ಆ ಮೂಲಕ ಕನ್ನಡದ ಏಳಿಗೆಗಾಗಿ, ಸರ್ಕಾರದ ಬೊಕ್ಕಸದಿಂದ ಲಕ್ಷಾಂತರ ರೂಗಳನ್ನು ಕನ್ನಡ ಸಾಹಿತ್ಯ ಪರಿಷತ್ತಿಗೆ ತರಿಸಿಕೊಟ್ಟಂತಹ ಯೋಜನಾ ಪುರುಷ ಈತ. ಅವರು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿದ್ದ ಒಂಬತ್ತು ವರ್ಷಗಳಲ್ಲಿ ತೊಂಬತ್ತು ಲಕ್ಷದಷ್ಟು ಮೊತ್ತವನ್ನು ಸರ್ಕಾರದಿಂದ ಕನ್ನಡದ ಕೆಲಸಕ್ಕಾಗಿ ಒದಗಿಸಿದರೆಂದರೆ ಸಾಮಾನ್ಯ ವಿಚಾರವಲ್ಲ.

'ಬಾರಿಸು ಕನ್ನಡ ಡಿಂಡಿಮವ' ಎಂಬ ಕವಿವಾಣಿಯಂತೆ, ಜಿ. ನಾರಾಯಣ ಅವರು ಕರ್ನಾಟಕ, ಮಾತ್ರವಲ್ಲ ಹೊರನಾಡುಗಳಲ್ಲಿಯೂ ಕನ್ನಡದ ಡಿಂಡಿಮವನ್ನು ಬಾರಿಸಿದಂತಹ ಶಕ್ತಿಸ್ವರೂಪರು.

ಇವರು ನಡೆಸಿದ ಮತ್ತು ಇಂದಿಗೂ ನಡೆಸುತ್ತಿರುವ ಸಾಹಿತ್ಯ ಗೋಷ್ಠಿಗಳು, ಸಮ್ಮೇಳನಗಳು, ಸರಿಯಾದ ವ್ಯಕ್ತಿಗಳನ್ನೇ ಗುರ್ತಿಸಿ ಅವರಿಗೆ ಸನ್ಮಾನ ಸಮಾರಂಭಗಳು, ಅದರಲ್ಲಿ ಅವರ ಕೆಲಸದ ಶಿಸ್ತು, ಸುವ್ಯವಸ್ಥೆ, ಅಚ್ಚುಕಟ್ಟುತನ ಇವುಗಳನ್ನೆಲ್ಲಾ ಹೇಳುತ್ತಾ ಹೋದರೆ ಬೃಹತ್ ಗ್ರಂಥವೇ ಆದೀತು. ಗಮಕ ಕಲಾಪರಿಷತ್ತಿಗೆ, ಲೇಖಕಿಯರ ಸಂಘಕ್ಕೆ ಮಾರ್ಗದರ್ಶಕರೂ, ಸಲಹೆ

ಗಾರರೂ ಇವರಾಗಿದ್ದಾರೆ. ಜಿ. ನಾರಾಯಣ ಅವರ ಸಹಕಾರವಿಲ್ಲದಿದ್ದರೆ ಕನ್ನಡ ಸಾರಸ್ವತ ಲೋಕಕ್ಕೆ ಮಹಿಳೆಯರ ಹೆಸರು ಹೆಚ್ಚಾಗಿ ಸೇರ್ಪಡೆಯೇ ಆಗುತ್ತಿರಲಿಲ್ಲವೇನೋ! ಉದಯೋನ್ಮುಖ ಲೇಖಕಿಯರ ಶಿಬಿರವನ್ನು ಪರಿಷತ್ತಿನಲ್ಲಿ ಆರಂಭಿಸಿದ್ದು ಇವರು. ಅಂತರ ರಾಷ್ಟ್ರೀಯ ಮಹಿಳಾವರ್ಷ ಹಳ್ಳಿಯಿಂದ ದಿಲ್ಲಿಯವರೆಗೆ ಎನ್ನುವಂತೆ ಎಲ್ಲಾ ಸಣ್ಣ ಊರು, ಕೇರಿ, ಗ್ರಾಮಗಳಿಂದ ಹಿಡಿದು ಇಡೀ ಕರ್ನಾಟಕದಲ್ಲಿ ಅತ್ಯಂತ ಚೈತನ್ಯ ಪೂರ್ವಕವಾಗಿ ನಡೆಸಲು ಕಾರಣ ಇವರೇ. ಮಕ್ಕಳ ವರ್ಷವನ್ನು ಪರಿಷತ್ತಿನಲ್ಲಿ ಆರಂಭಿಸಿದವರೂ ಇವರೇ.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸ್ಥಾನದಿಂದ ದೂರ ಸರಿದರೂ ಸಹ, ಇವರ ಕನ್ನಡಾಭಿಮಾನಕ್ಕೆ ಇತಿಮಿತಿಗಳಿಲ್ಲ. 'ಕೊರವಂಜಿ' ಇಲ್ಲವೆಂದು ಬೇಸರ ಬೇಡ ಎಂದು "ವಿನೋದ" ಮಾಸಪತ್ರಿಕೆಯನ್ನು ನಡೆಸುತ್ತಿದ್ದಾರೆ. ಕನ್ನಡ ರಾಜ್ಯೋತ್ಸವ ಸಮಿತಿ, ಕನ್ನಡ ಜಾಗೃತ ಪರಿಷತ್ತುಗಳನ್ನು ಕಟ್ಟಿದ್ದಾರೆ.

ಇವರ ಹಿರಿಮೆ ಗರಿಮೆಗಳನ್ನು ಬಣ್ಣಿಸುವ ಶಕ್ತಿ ಈ ಲೇಖನಿಗೆ ಸಾಲದಾಗಿದೆ.

ಇಂತಹ ನಿಸ್ಪೃಹ, ನಿಷ್ಠಾವಂತ, ನಿಸ್ವಾರ್ಥಿ' ನಿರಹಂಕಾರಿ, ನಿರುಪದ್ರವಿ, ನಿಷ್ಕಾಮ ಕರ್ಮಯೋಗಿಗೆ ನಾಡ ನಡೆ, ನುಡಿ, ಸಂಸ್ಕೃತಿ, ಕಲೆಗಳ ಪ್ರಗತಿಗಾಗಿ, ಅಭಿವೃದ್ಧಿಗಾಗಿ ದಿನದ ವೇಳೆಯೇ ಸಾಲದಾಗಿದೆ. ಹೀಗಾಗಿ ತಮ್ಮ ಗೃಹಕೃತ್ಯಗಳ ಸಂಸಾರದಲ್ಲಿ ಅಂಟೂ ಅಂಟದಂತೆ ಇದ್ದುಕೊಂಡಿರುವ ಈ ವ್ಯಕ್ತಿಯ ಸ್ಫೂರ್ತಿಯ ಚಿಲುಮೆ ಆಗಿ, ಅವರ ಎಲ್ಲಾ ಕೆಲಸ ಕಾರ್ಯಕ್ಕೂ ಅವಕಾಶ ಮಾಡಿಕೊಟ್ಟು ಮನೆಯಲ್ಲಿ ಶಾಂತಿ, ನೆಮ್ಮದಿಗಳನ್ನು ಒದಗಿಸಿಕೊಟ್ಟು, ಅನುಕೂಲ ಮಾಡಿಕೊಟ್ಟಿರುವ ಶ್ರೀಮತಿ ಯಶೋದಮ್ಮ ಜಿ. ನಾರಾಯಣ ಅವರನ್ನು (ಅವರ ಪತ್ನಿ) ಮತ್ತು ಅವರ ಮಕ್ಕಳನ್ನು ಈ ಸಂದರ್ಭದಲ್ಲಿ ನೆನೆಯಬೇಕಾದದ್ದು ಮಹಿಳೆ ಆಗಿ ನನ್ನ ಕರ್ತವ್ಯವಾಗಿದೆ.

ಅತ್ಯಂತ ಗೌರವಾನ್ವಿತ, ಪ್ರತಿಭಾವಂತ, ಗಾಂಧೀವಾದಿ, ಕನ್ನಡದ ಚೇತನವಾದ ಶ್ರೀ ಜಿ. ನಾರಾಯಣರು ಶತಾಯುಗಳಾಗಲಿ. ಅವರಿಂದ ಇನ್ನೂ ಹೆಚ್ಚು ಹೆಚ್ಚಾಗಿ ಕನ್ನಡದ ಕೆಲಸವಾಗಲಿ ಎಂದು ಭಗವಂತನಲ್ಲಿ ಪ್ರಾರ್ಥಿಸಿ.

ಇತರರು ನಮ್ಮನ್ನು ತಿಳಿಯುವ ಹಾಗೆ ನಮ್ಮನ್ನೇ ನಾವು ತಿಳಿಯುವ ಅಗಾಧ ಶಕ್ತಿಯನ್ನು ನಾವು ಪಡೆದರೆ, ನಮ್ಮಲ್ಲಿರುವ ಎಷ್ಟೋ ದುರ್ಗುಣಗಳಿಂದ ನಾವು ಮುಕ್ತರಾಗುತ್ತಿದ್ದೆವು.

—ರಾಬರ್ಟ್ ಬರ್ನ್ಸ್

ಅಮೃತ ಹಸ್ತ

ಎಂ. ಕೆ. ಇಂದಿರಾ

'ಇಳೆಯಿಂದ ಮೊಳಕೆಯೊಗೆವಂದು ತಮಟೆಗಳಿಲ್ಲ, ಫಲ ಮಾಗುವಂದು ತುತ್ತೂರಿ ದನಿಯಿಲ್ಲ, ಬೆಳಕೀವ ಸೂರ್ಯ ಚಂದ್ರರದೊಂದು ಸದ್ದಿಲ್ಲ, ಹೊಲಿ ನಿನ್ನ ತುಟಿಗಳನು-ಮಂಕು ತಿಮ್ಮ' ಎಂಬಂತೆ ಸದ್ದಿಲ್ಲದೆ ನಾರಾಯಣ ಅವರು ತಮ್ಮ ಸೇವಾ ಕಾರ್ಯಗಳನ್ನು ಮಾಡುತ್ತ ನಡೆದು ಬಂದಿದ್ದಾರೆ.

ನನ್ನ ಮೊದಲ ಕೃತಿ 'ತುಂಗ-ಭದ್ರ.' ಮನೋಹರ ಗ್ರಂಥಮಾಲೆಯಲ್ಲಿ ಪ್ರಕಟವಾದದ್ದು. ೧೯೬೩ನೇ ಇಸವಿಯಲ್ಲಿ. ಆಗಲೇ ಕಾದಂಬರಿಕಾರ್ತಿ ತ್ರಿವೇಣಿಯವರು ತೀರಿಕೊಂಡದ್ದು. ತ್ರಿವೇಣಿಯವರು ಮಂಡ್ಯದಲ್ಲಿದ್ದಾಗ ನನ್ನ ಹಿಂದಿ ಸಹಪಾಠಿ. ಆಗಿನ್ನೂ ಅವರು ಕಾದಂಬರಿ ಬರೆದಿರಲಿಲ್ಲ. ನನ್ನ ಒಂದು ಬರಹವನ್ನು ನೋಡಿದ ಅವರು "ನಿಮಗೆ ಕಥನಕಲೆ ಕರಗತವಾಗಿದೆ. ನೀವು ಕತೆಗಳನ್ನೇಕೆ ಬರೆಯಬಾರದು ?" ಅಂದಿದ್ದರು. ಆ ವಿಷಯ ಅಲ್ಲಿಗೇ ನಿಂತಿತು. ಮುಂದೆ ಅನಸೂಯ ಮದುವೆಯಾಗಿ, 'ತ್ರಿವೇಣಿ'ಯೆಂಬ ಕಾವ್ಯನಾಮದಿಂದ ಇಪ್ಪತ್ತೆರಡು ಕೃತಿಗಳನ್ನು ಬರೆದು ಮಹಿಳಾಲೋಕಕ್ಕೆ ಬುನಾದಿ ಹಾಕಿಕೊಟ್ಟು ತೀರಿಕೊಂಡರು. ೧೯೬೨ ರಲ್ಲಿ ಅವರು ಹೇಳಿದ್ದಕ್ಕೆ ೧೯೬೩ರಲ್ಲಿ ನಾನು ಮೊದಲ ಕೃತಿ ಬರೆದೆ. ನನ್ನ ದುರ್ದೈವ. ಅವರಿಗೆ ಕೃತಿ ಕಳಿಸಲಾಗಲಿಲ್ಲ. ಆದರೆ ೧೯೬೪ನೇ ಇಸವಿಯಲ್ಲಿ ವೈಯ್ಯಾಲಿಕಾವಲಿನ ಕನ್ನಡ ಮಿತ್ರವೃಂದ ಜನ್ಮ ತಳೆದು 'ತ್ರಿವೇಣಿ' ಕಾದಂಬರಿ ಸ್ಪರ್ಧೆಯನ್ನು ಏರ್ಪಡಿಸಿತು. ಅದರ ನಿಯಮ ಹೀಗಿತ್ತು :

"ಲೇಖಕಿಯ ಮೊದಲ ಕೃತಿಯಾಗಿರಬೇಕು. ಹಿಂದಿನ ವರ್ಷ ಪ್ರಕಟವಾಗಿರಬೇಕು. ಅಂಥವು ಪ್ರವೇಶಕ್ಕೆ ಯೋಗ್ಯ. ಅವುಗಳಲ್ಲಿ ಯಾವುದಾದರೂ ಒಂದು ಉತ್ತಮ ಕೃತಿಗೆ ಬಹುಮಾನ ಕೊಡುತ್ತೇವೆ."

ಪತ್ರಿಕೆಯ ಈ ಜಾಹೀರಾತನ್ನು ನೋಡಿದರೂ ಅದನ್ನು ನನ್ನ ಗಮನಕ್ಕೆ ತೆಗೆದುಕೊಳ್ಳಲಿಲ್ಲ. ಆದರೆ ನನ್ನ ಪರಿಚಯದವರೊಬ್ಬರು, "ನಿಮ್ಮ 'ತುಂಗ-ಭದ್ರ' ಸ್ಪರ್ಧೆಯ ನಿಯಮಕ್ಕೆ ಅನುಸಾರವಾಗಿದೆ. ಕಳಿಸಿಕೊಡಿ, ನಿಮಗೇ ಪ್ರಶಸ್ತಿ ಬರುತ್ತದೆ" ಎಂದರು. ಆದರೂ ನನಗೆ ಸಮಾಧಾನವಾಗದೆ 'ಕನ್ನಡ ಮಿತ್ರವೃಂದಕ್ಕೆ' ಪತ್ರ ಬರೆದೆ. ಪಾಪ! ಆ ಯುವಕರೇ ನಮ್ಮ ಮನೆಗೆ ಬಂದು ಕಾದಂಬರಿ ತೆಗೆದುಕೊಂಡು ಹೋದರು. ಕೆಲವೇ ದಿನಗಳಲ್ಲಿ ಫಲಿತಾಂಶ ಪ್ರಕಟವಾಯಿತು. ನನ್ನ ಕೃತಿಗೇ ಬಹುಮಾನ ಬಂದಿತ್ತು. ಹತ್ತು ಹನ್ನೆರಡು ಹೊಸ ಕೃತಿಗಳಲ್ಲಿ ನನಗೇ ಬಂದಿತ್ತು ಬಹುಮಾನ. ಜಾಗ್ರತೆ ಕಾರ್ಯಕ್ರಮ ಇಟ್ಟುಕೊಂಡರು. ಇನ್ನೂ ಹೊಸ ಸಂಘ ; ಸ್ವಲ್ಪ ಹಣ ಮತ್ತು ಕರಂಡ, ಪ್ರಶಸ್ತಿಪತ್ರ. ತೀರ್ಪುಗಾರರು ಶ್ರೀ ಸೂರ್ಯನಾರಾಯಣ ಚಡಗ,

ಶ್ರೀ ತ್ರಿವಿಕ್ರಮ, ಇನ್ನೊಬ್ಬರು ಮಹಿಳೆ. ಸರಿಯಾಗಿ ನೆನಪಿಲ್ಲ. ಮಲ್ಲೇಶ್ವರದ ಮಹಿಳಾ ಸಮಾಜದಲ್ಲಿ ಸಮಾರಂಭ.

ಪ್ರಶಸ್ತಿ ಪ್ರದಾನ ಮಾಡುವವರು ಆಗ ಕಾರ್ಪೊರೇಷನ್ ಮೇಯರಾಗಿದ್ದ ಶ್ರೀ ಜಿ. ನಾರಾಯಣ ಅವರು. ನನ್ನನ್ನು ಕಾರಿನಲ್ಲಿ ಕರೆದೊಯ್ದರು. ಮುಖ್ಯ ಅತಿಥಿಗಳಾಗಿ ಅ. ನ. ಕೃ. ಬಂದಿದ್ದರು. ವಿಪರೀತ ಜನ. ಎಷ್ಟು ಹೊತ್ತಾದರೂ ಮೇಯರ್ ಬರಲಿಲ್ಲ. ಪ್ರಾರ್ಥನೆ, ಸ್ವಾಗತ ಭಾಷಣ ಎಲ್ಲಾ ಮುಗಿಯಿತು. 'ಮೇಯರ್ ಯಾವುದೋ ಊರಿನಿಂದ ಬರಬೇಕು. ತಡವಾಗಬಹುದು. ಅ. ನ. ಕೃ. ಅವರೇ ಪ್ರಶಸ್ತಿ ಕೊಟ್ಟುಬಿಡಲಿ' ಎಂಬ ತೀರ್ಮಾನಕ್ಕೆ ಬಂತು. ಅ. ನ. ಕೃ. ಎದ್ದು ನಿಂತು ಪ್ರಶಸ್ತಿ ಕೈಗೆ ತೆಗೆದುಕೊಳ್ಳುವುದರಲ್ಲಿ ಕೋಲಾಹಲ—"ಮೇಯರ್ ಬಂದ್ರು, ಬಂದ್ರು" ಎಂದು. ಅಂದೇ ಮೊದಲು ನಾನು ಶ್ರೀ ಜಿ. ನಾರಾಯಣ ಅವರನ್ನು ನೋಡಿದ್ದು. ಕೂಡಲೇ ಪ್ರಶಸ್ತಿ ಮೇಯರ್ ಹಸ್ತ ಸೇರಿತು. ಅದು ಅಮೃತಹಸ್ತವಿರಬಹುದು; ನಾನು ಎರಡೂ ಕೈಯೊಡ್ಡಿ ಸ್ವೀಕರಿಸಿದೆ. ನಾನು ಕಲ್ಪಿಸಿಕೊಂಡ ಮೇಯರ್ ಆಗಿರಲಿಲ್ಲ ಅವರು. ಪ್ರಚಂಡ ಕರತಾಡನವಾಯತು.

ಈಗಿನಂತೆಯೇ ಇದೇ ಖಾದಿ ಉಡುಪು; ಟೊಪ್ಪಿ, ಸಾದಾ ಚಪ್ಪಲಿ. ಮುಂದೆ ಒಂದೆರಡು ಭಾಷಣಗಳಾದವು. ಕಾರ್ಯಕ್ರಮ ಯಶಸ್ವಿಯಾಯಿತು. ಅದು ಅಮೃತಗಳಿಗೆ, ಅಮೃತ ಹಸ್ತ ಇರಬಹುದು. ಅಂದಿನಿಂದ ಇಂದಿನವರೆಗೆ—ಅಂದರೆ ಇಪ್ಪತ್ತು ವರ್ಷಗಳಲ್ಲಿ ನನ್ನ ನಾಲ್ಕಾರು ಪುಸ್ತಕಗಳಿಗೆ ರಾಜ್ಯ ಅಕಾಡೆಮಿ ಪ್ರಶಸ್ತಿಗಳು ಬಂದವು. ಗೆಜ್ಜೆಪೂಜೆ, ಫಣಿಯಮ್ಮ ಚಿತ್ರಗಳಿಗೆ ಪ್ರಶಸ್ತಿ ಬಂದಿತು. ಸನ್ಮಾನಗಳಿಗಂತೂ ಲೆಕ್ಕವೇ ಇಲ್ಲ. ನೂರಾರಲ್ಲ, ಸಾವಿರಾರು ಸನ್ಮಾನಗಳಾಗಿವೆ. ನಾನು ಕನ್ನಡನಾಡಿನ ಉದ್ದಗಲಕ್ಕೂ ಹರಡಿಕೊಂಡಿದ್ದೇನೆ. ಮುಂದೆ ಜಿ. ನಾರಾಯಣ ಅವರು ಪರಿಷತ್ತಿನ ಅಧ್ಯಕ್ಷರಾದರು. ಅವರ ದಕ್ಷ ಕಾರ್ಯಕ್ರಮ ಸರ್ವ ವಿದಿತ. ಇಂದಿಗೂ ಅವರದು ಅದೇ ಕಂದನ ನಗೆ; ಮೆಲ್ಲುಲಿ, ಗೌರವಾನ್ವಿತ ಕಣ್ಣುಗಳು. ಲೇಖಕಿಯರೆಂದರೆ ಅಪಾರ ಗೌರವ. 'ಕರ್ನಾಟಕ ಲೇಖಕಿಯರ ಸಂಘ'ದ ತೆರೆಮರೆಯ ಬೆನ್ನೆಲುಬು. ಅವರಿಗೆ ಸರಿಯಾದ ಪತ್ನಿ, ಹಸೆಯ ಮೇಲೆ ಕುಳಿತಿದ್ದರೆ ಲಕ್ಷ್ಮೀನಾರಾಯಣ!

ಉದ್ವೇಗ, ಉದ್ರೇಕ, ಆತುರ, ಸಿಟ್ಟು, ಹಠ ಯಾವುದೂ ಇಲ್ಲದ ಬುದ್ಧಚೈತನ್ಯ. ವಿಶ್ವಕಾವ್ಯವನ್ನು ಬರೆದ ನಮ್ಮ ಡಿ. ವಿ. ಜಿ. ಯವರು ಹೇಳಿಲ್ಲವೇ—

ಇಳೆಯಿಂದ ಮೊಳಕೆಯೊಗೆವಂದು ತಮಟೆಗಳಿಲ್ಲ
ಫಲವಾಗುವಂದು ತುತ್ತೂರಿ ದನಿಯಿಲ್ಲ
ಬೆಳಕೀವ ಸೂರ್ಯ ಚಂದ್ರರದೊಂದು ಸದ್ದಿಲ್ಲ
ಹೊಲಿ ನಿನ್ನ ತುಟಿಗಳನು – ಮಂಕುತಿಮ್ಮ

ಎಂಬಂತೆ ಸದ್ದಿಲ್ಲದೇ ತಮ್ಮ ಸೇವಾಕಾರ್ಯಗಳನ್ನು ಮಾಡುತ್ತ ನಡೆದು ಬಂದಿದ್ದಾರೆ. ಅದು ಅವರ ಜನ್ಮದತ್ತ ಗುಣ. ಹಿತ-ಮಿತವಾದ ಕುಟುಂಬ. ತೃಪ್ತ ಜೀವನ. ಇದೇ ಅವರ ಶಾಶ್ವತ ಸಂಪತ್ತು. ಅವರೇ ನಿರ್ಮಿಸಿಕೊಂಡಿರುವ ಅವರ ಪ್ರಶಾಂತ ಪರಿವೇಷದಲ್ಲಿ ಅವರು ಅವರ ಕುಟುಂಬ ಸುಖವಾಗಿರಲಿ ಎಂದು ಮನತುಂಬಿ ಹಾರೈಸುವೆ.

ಭಾವನೆಗಳ ಗುಲಾಮನಾಗದೇ ಇರುವ ಯಾವಾತನೊಬ್ಬನಿದ್ದರೆ ನನಗೆ ತೋರಿಸು. ಆತನನ್ನು ನಾನು ನನ್ನ ಹೃದಯದಲ್ಲಿ ಇರಿಸಿಕೊಳ್ಳುತ್ತೇನೆ.

—ಷೇಕ್‌ಸ್ಪಿಯರ್

ಪೆಣ್ಣಲ್ಲವೆ ನಮ್ಮನೆಲ್ಲ ಪೊರೆದ ತಾಯಿ...

ಚಿ. ನ. ಮಂಗಳಾ

ಅರವತ್ತು ತುಂಬಿರುವ ಮಾನ್ಯ ಶ್ರೀ ಜಿ. ನಾರಾಯಣ ಅವರನ್ನು ಕುರಿತು ಅಭಿಮಾನ ವಿಶ್ವಾಸ ಕೃತಜ್ಞತೆಯ ನಾಲ್ಕು ಮಾತು ಹೇಳಲು ಬರೆದ ಈ ಲೇಖನಕ್ಕೆ ಇದೇನು ತಲೆಬರಹ ಎನಿಸಬಹುದು. ನನ್ನ ಮಟ್ಟಿಗಂತೂ ಸಂಚಿಯ ಹೊನ್ನಮ್ಮನ ಸಾಂಗತ್ಯದ ಸತ್ವವನ್ನರಿತು ತಮ್ಮ ನಡೆ ನುಡಿಯಲ್ಲೂ ಕಾರ್ಯಕ್ಷೇತ್ರದಲ್ಲೂ ಹೆಣ್ಣು ಮಕ್ಕಳಿಗೆ ಸ್ಫೂರ್ತಿಯ ಸೆಲೆಯಾಗಿರುವ ಕೆಲವೇ ಗಣ್ಯರಲ್ಲಿ ಶ್ರೀ ಜಿ. ನಾರಾಯಣ ಅವರು ಪ್ರಮುಖರು.

ಶ್ರೀಯುತರು ನಗರದ ಮೇಯರ್ ಆಗಿದ್ದಾಗ ಅವರನ್ನು ನಾನು ಮೊದಲು ನೋಡಿದ್ದು. ಆದರೆ ಅವರ ಸಜ್ಜನಿಕೆಯ, ಕಾರ್ಯತತ್ಪರತೆಯ, ಎಲ್ಲದಕ್ಕಿಂತ ಹೆಚ್ಚಾಗಿ ಹೆಣ್ಣುಮಕ್ಕಳ ವ್ಯಕ್ತಿತ್ವದ ವಿಕಾಸದಲ್ಲಿ ಅವರಿಗಿರುವ ಆಸ್ಥೆ, ಆಸಕ್ತಿ, ಅಭಿಮಾನಗಳ ನಿಕಟ ಪರಿಚಯವಾದುದು ಅವರು ಕನ್ನಡ ರಾಜ್ಯೋತ್ಸವ ಸಮಿತಿಯನ್ನು ರಚಿಸಿ ಅದರ ಅಂಗವಾಗಿ ಮನೆ ಮನೆಗೆ ಕನ್ನಡ ಪುಸ್ತಕಗಳ ಮಾರಾಟವನ್ನು ಏರ್ಪಡಿಸಿದಾಗ.

ನೂಕುವ ಗಾಡಿಗಳಲ್ಲಿ ಪುಸ್ತಕಗಳನ್ನು ಜೋಡಿಸಿಕೊಂಡು ಮನೆ ಮನೆಗೆ ಹೋಗಿ ಕನ್ನಡ ಸಾರಸ್ವತ ಸಂಪತ್ತಿನ ಪರಿಚಯಮಾಡಿಕೊಡುವ ಕಾರ್ಯಕ್ರಮದಲ್ಲಿ ನಾನೂ ಸಕ್ರಿಯವಾಗಿ ಭಾಗವಹಿಸಿದೆ. ನನ್ನಂತೆಯೇ ಭಾಗವಹಿಸಿದವರು ಅನೇಕರು. ಮಹನೀಯರಷ್ಟೇ ಉತ್ಸಾಹದಿಂದ ಈ ಕಾರ್ಯಕ್ರಮದಲ್ಲಿ ಮಹಿಳೆಯರೂ ಭಾಗಿಗಳಾಗಲು ಕಾರಣ ಶ್ರೀ ನಾರಾಯಣ. ಅವರು ಮಾಡುವ ಎಲ್ಲ ಕಾರ್ಯದಲ್ಲೂ ಅಚ್ಚುಕಟ್ಟು. ಅದರಲ್ಲಿ ಅಪ್ಪಿ ತಪ್ಪಿಯೂ ಒಂದು ಎಳೆಯೂ ತಪ್ಪುವುದಿಲ್ಲ. ಈ ಅಚ್ಚುಕಟ್ಟಿನ ಆಯಕಟ್ಟಿನಲ್ಲಿ ಮಹಿಳೆಯರಿಗೆ ದೊರೆತ, ದೊರಕುತ್ತಿರುವ ಪ್ರೋತ್ಸಾಹ ಅಪಾರ.

ಮಹಿಳೆಯೊಬ್ಬಳನ್ನು ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷೆಯಾಗಿಸಿದ ಕೀರ್ತಿ ನಾರಾಯಣರದ್ದು. ಕನ್ನಡ ಸಾಹಿತ್ಯ ಪರಿಷತ್ತು ತಾನು ಹುಟ್ಟಿದಂದಿನಿಂದ ಐವತ್ತೇಳು ಸಮ್ಮೇಳನಗಳನ್ನು ನಡೆಸಿದ್ದರೂ ಸಮ್ಮೇಳನದ ಅಧ್ಯಕ್ಷ ಸ್ಥಾನಕ್ಕೆ ಮಹಿಳೆ ಆಯ್ಕೆಯಾದದ್ದು ಮೊದಲ ಬಾರಿ, ನಾರಾಯಣರು ಪರಿಷತ್ತಿನ ಅಧ್ಯಕ್ಷರಾಗಿದ್ದಾಗ. ಅಲ್ಲದೆ ಅಂತರರಾಷ್ಟ್ರೀಯ ಮಹಿಳಾ ವರ್ಷದಲ್ಲಿ, ನಾರಾಯಣರ ಮಹಿಳೆಯರ ಸಾಹಿತ್ಯಕ್ಕಾಗಿ ವಿಶೇಷ ಬಹುಮಾನ ಯೋಜನೆಯೊಂದನ್ನು ಆರಂಭಿಸಿದರು. ನಾರಾಯಣ ಅವರು ಪರಿಷತ್ತಿನ ಅಧ್ಯಕ್ಷರಾಗಿದ್ದಾಗ ಮಹಿಳೆಯರ ಸಂಘಟನೆ ಒಂದು ಹೊಸ ಆಯಾಮವನ್ನೇ ಪಡೆಯಿತು. ಮಹಿಳೆಯರಲ್ಲಿ ಕಾರ್ಯಕರ್ತರ ಒಂದು ಹೊಸ ಪೀಳಿಗೆಯೇ ಆರಂಭವಾಯಿತು.

ಅಧ್ಯಕ್ಷತೆಯಲ್ಲಿ, ಕನ್ನಡ ಸಾಹಿತ್ಯ ಪರಿಷತ್ತು ಮಹಿಳೆಯರಿಗೆ ನೀಡಿದ ವಿಶೇಷಾವಕಾಶಗಳು ಅಪಾರ. ನಾರಾಯಣರು ಪರಿಷತ್ತಿನ ಅಧ್ಯಕ್ಷರಾಗಿದ್ದರಿಂದ ಮಾತ್ರವೇ ಈ ಕಾರ್ಯ ಸಾಧ್ಯವಾಯಿತೆನ್ನಬಹುದು. ಮಹಿಳೆಯರ ಚಿಂತನಶೀಲತೆ ಹೆಚ್ಚಬೇಕೆಂದು ಒಂದು ಪುಸ್ತಕಮಾಲೆಯನ್ನು ಆರಂಭಿಸಿದರು. ಅದರ ಮೂಲಕ ಎಷ್ಟೋ ಲೇಖಕಿಯರು ಬೆಳಕಿಗೆ ಬಂದರು. ಮಹಿಳೆಯರ ಸಾಹಿತ್ಯಕ್ಕಾಗಿ ವಿಶೇಷ ಬಹುಮಾನ ಯೋಜನೆಯೊಂದನ್ನು ಆರಂಭಿಸಿದರು. ಲೇಖಕಿಯರ ಸಮ್ಮೇಳನವನ್ನು ನಡೆಸಿದರು. ನಾರಾಯಣ ಅವರು ಪರಿಷತ್ತಿನ ಅಧ್ಯಕ್ಷರಾಗಿದ್ದಾಗ ಮಹಿಳೆಯರ ಸಂಘಟನೆ ಒಂದು ಹೊಸ ಆಯಾಮವನ್ನೇ ಪಡೆಯಿತು. ಮಹಿಳೆಯರಲ್ಲಿ ಕಾರ್ಯಕರ್ತರ ಒಂದು ಹೊಸ ಪೀಳಿಗೆಯೇ ಆರಂಭವಾಯಿತು. ಶ್ರದ್ಧೆ, ಶಿಸ್ತು ಬೆಳೆಯಿತು.

'ಕರ್ನಾಟಕ ಲೇಖಕಿಯರ ಸಂಘ' ನಾರಾಯಣರ ನೆಚ್ಚಿನ ಪುತ್ರಿ. ಲೇಖಕಿಯರ ಸಂಘಟನೆಗಾಗಿ, ಹೊಸ ಬರಹಗಾರ್ತಿಯರಿಗೆ ಪ್ರೋತ್ಸಾಹದ ಚಿಲುಮೆಯಾಗಿ ಬೆಳೆಯುತ್ತಿರುವ ಈ ಸಂಘದ ಅಂತಃಸತ್ವ ನಾರಾಯಣ ಅವರೆ. ಕಣ್ವರು ಶಕುಂತಲೆಯನ್ನು ಪೋಷಿಸಿದಂತೆ, ವಾಲ್ಮೀಕಿಗಳು ಸೀತೆಯನ್ನು ಪೊರೆದಂತೆ ಕನ್ನಡ ನಾಡಿನ ಮಹಿಳಾ ಚೇತನವನ್ನು ಪೊರೆದು ಪೋಷಿಸುತ್ತಿರುವ ಮಾನ್ಯ ಶ್ರೀ ನಾರಾಯಣ ಅವರು ನೂರಕ್ಕೂ ಹೆಚ್ಚಿನ ವಸಂತಗಳನ್ನು ಕಾಣುವಂತೆ ಶ್ರೀಮಾತೆ ಅನುಗ್ರಹಿಸಲಿ.

ಮಾನವರು, ಈ ಲೋಕಕ್ಕೆ ಬರುವುದನ್ನು ಹೇಗೋ ಹಾಗೆಯೇ ಇಲ್ಲಿಂದ ತೆರಳುವದನ್ನೂ ಸಹನೆಯಿಂದ ಕಾಣಬೇಕು. ಪರಿಪಕ್ವತೆಯೇ ಇಲ್ಲಿ ಪ್ರಧಾನ!

—ಷೇಕ್‌ಸ್ಪಿಯರ್

ನಾ ಕಂಡ ಜಿ. ನಾರಾಯಣ

ಹೊ. ಶ್ರೀನಿವಾಸಯ್ಯ

ವಿನೋದ ಪತ್ರಿಕೆಯನ್ನು ನೋಡಿದ್ದೆ. ಅದರ ಸಂಪಾದಕರಾರು ಎಂಬುದು ತಿಳಿದಿರಲಿಲ್ಲ. ಒಂದು ದಿನ ಅಂಚೆಯಲ್ಲಿ ವಿನೋದ ಪತ್ರಿಕೆ ಬಂದಾಗ ನನಗೇಕೆ ಬಂತು ಎಂದು ಯೋಚಿಸಿ ಹಿಂದೆ ಮುಂದೆ ಪತ್ರಿಕೆಯನ್ನು ತಿರುಗಿಸಿ ನೋಡಿದೆ. ಜಿ. ನಾರಾಯಣ ಅವರೇ ಅದರ ಸಂಪಾದಕರಾಗಿ ಎಲ್ಲರನ್ನೂ ನಗಿಸಿ, ತಾವೂ ಸಂತೋಷಪಡುವ ಅವರ ಸಾಹಿತ್ಯ ಸೇವೆ ನನಗೆ ಸಂತೋಷವನ್ನುಂಟುಮಾಡಿತು.

ಒಂದು ದಿನ ಸಂಜೆ, ನನ್ನ ಆಪ್ತ ಮಿತ್ರರಾದ ಶ್ರೀ ವಿ. ಎಸ್. ಕೃಷ್ಣಯ್ಯರ್‌ರವರು ನಮ್ಮ ಮನೆಗೆ ಬಂದರು. ಜೊತೆಯಲ್ಲಿ ಖಾದಿ ವೇಸ್ಟ್‌ಕೋಟ್, ಗಾಂಧಿ ಟೋಪಿ, ದಟ್ಟಿಪಂಚೆ ಧರಿಸಿದ ವ್ಯಕ್ತಿ ಬಂದರು. ನೋಡಿದ್ದ ವ್ಯಕ್ತಿಯೇ ಆದರೂ ಪರಿಚಯವಿರಲಿಲ್ಲ. ಶ್ರೀ ಕೃಷ್ಣಯ್ಯರ್‌ರವರು "ನಾರಾಯಣರವರೇ, ನಮ್ಮ ಗಾಂಧೀ ಸಾಹಿತ್ಯ ಸಂಘದ ಶ್ರೀನಿವಾಸಯ್ಯನವರ ಮನೆಯಿದು. ನಿಮ್ಮ ಪರಿಚಯ ಇದೆಯೋ ಇಲ್ಲವೋ ಕಾಣೆ. ನಿಮ್ಮ ಜಿಲ್ಲೆಯವರೇ ಇರಬೇಕು" ಅಂತ ಹೇಳಿ ಕರೆದುಕೊಂಡು ಬಂದರು. ಆಗಲೇ ಶ್ರೀ ಜಿ. ನಾರಾಯಣರವರ ಪರಿಚಯ ಆಗಿದ್ದು.

ಅನೇಕ ಸಭೆಗಳಲ್ಲಿ ನೋಡಿದ್ದರೂ ಜೊತೆಯಲ್ಲಿ ಮಾತನಾಡಿರಲಿಲ್ಲ. ಹಸನ್ಮುಖರಾಗಿ ನಗುನಗುತ್ತಾ ಮನೆಗೆ ಬಂದು ಕುಳಿತು "ನೀವು ಯಾವ ಊರಿನವರು ? ಎಲ್ಲಿದ್ದೀರಾ ?" ಎಂದು ವಿಚಾರಿಸಿದರು. ಮಾತು ಎಷ್ಟು ಬೇಕೋ ಅಷ್ಟು ನಿಧಾನ. ಅವಸರದ ಕೆಲಸವಿಲ್ಲ. ಯಾವಾಗಲೂ ಏನೋ ಯೋಜನೆ-ಯೋಚನೆ ಮಾಡುವ ಹಾಗೆ ಕಾಣುತ್ತಿದ್ದರು. ಆ ದಿನ ಕಂಡ ನಾರಾಯಣರಿಗೂ ಇಂದು ಕಾಣುವ ನಾರಾಯಣರಿಗೂ ಏನೂ ವ್ಯತ್ಯಾಸ ಕಾಣಲಿಲ್ಲ. ಅದೇ ತಾಳ್ಮೆ, ಅದೇ ಸಹನೆ, ಅಷ್ಟೇ ಸ್ನೇಹಭಾವ. ಎಲ್ಲಿ ಯಾರೇ ಸಿಕ್ಕಲಿ, ಅವರ ಕ್ಷೇಮ ಸಮಾಚಾರ ವಿಚಾರಿಸುವುದೇ ಇವರ ಮೊದಲ ಮಾತು.

ಶ್ರೀ ನಾರಾಯಣರವರು 'ಕನ್ನಡ ಸಾಹಿತ್ಯ ಪರಿಷತ್ತಿ'ನ ಅಧ್ಯಕ್ಷರಾಗಿ ಬಂದಾಗ ಅನೇಕ ಬುದ್ಧಿಜೀವಿಗಳು ಸಾಹಿತ್ಯ ಪರಿಷತ್ತಿನ ಸಾಹಿತ್ಯ ಸೇವೆಯ ಬಗ್ಗೆ ಶಂಕಿಸಿ ಗುಸು ಗುಸು ಮಾತಿನಲ್ಲಿ ಸೂಚಿಸುತ್ತಿದ್ದರು. ನಾನು ಸಿದ್ದವನಹಳ್ಳಿ ಕೃಷ್ಣಶರ್ಮರನ್ನ ಇದೇ ಪ್ರಶ್ನೆ ಕೇಳಿದೆ. ಶರ್ಮಾಜಿಯವರು ದೇಹ ಸ್ವಾಸ್ಥ್ಯವಿಲ್ಲದೆ ಹಾಸಿಗೆ ಹಿಡಿದಿದ್ದರು. ಅವರು ಹೇಳಿದ ಮಾತು ಈಗಲೂ ಜ್ಞಾಪಕಕ್ಕೆ ಬರುತ್ತದೆ: "ಕನ್ನಡ ಸಾಹಿತ್ಯ ಪರಿಷತ್ ಬರೀ ಸಾಹಿತಿಗಳಿಗೆ ಮಾತ್ರವಲ್ಲ; ಕನ್ನಡನಾಡಿಗೆ, ಕನ್ನಡನುಡಿಗೆ ದುಡಿಯುವ ಎಲ್ಲಾ ಕನ್ನಡಿಗರಿಗೂ ಸೇರಿದ್ದು. ಯಾರು ಬೇಕಾದರೂ ನಾಡಿಗಾಗಿ ಸೇವೆ ಮಾಡಬಹುದು. ಸಾಹಿತಿಗಳೇ ಸೇರಿದರೆ ಅವರ ಸಾಹಿತ್ಯ ಅದರ ಪ್ರಚಾರ ಅವರ ದೃಷ್ಟಿಕೋನದ ಕಡೆಗೇ ಒಲವು ಮತ್ತು ಪ್ರಭಾವವನ್ನು ಬೀರಲು ಪ್ರಯತ್ನಿಸುತ್ತಾರೆ.

ಸಾಮಾನ್ಯ ಜನರ ಸಂಪರ್ಕ ಇರುವುದಿಲ್ಲ. ಪರಿಷತ್ತು ಕೇವಲ ಕೆಲವರಿಗಾಗಿ ಉಳಿಯುತ್ತದೆ. ಇದು ನನ್ನ ಅನುಭವ. ನಾನು ಪರಿಷತ್ತಿನ ಕಾರ್ಯದರ್ಶಿಯಾಗಿದ್ದಾಗ, ನಾನು ರಾಜಕಾರಣಿ ಎಂಬ ಮಾತು ಬಂದರೂ ಜನಸಂಪರ್ಕ ಇದ್ದುದರಿಂದ, ಅನೇಕ ಹಿರಿಯರನ್ನು ಜನಸಾಮಾನ್ಯರನ್ನು ಆಜೀವ ಸದಸ್ಯರನ್ನಾಗಿ ಮಾಡಿದೆ. ಎಲ್ಲರ ಅಭಿಮಾನವನ್ನು ಗಳಿಸಲು ಪ್ರಯತ್ನಪಟ್ಟೆ. ಆದ್ದರಿಂದ ಶ್ರೀ ನಾರಾಯಣರವರು ಅಧ್ಯಕ್ಷರಾಗಿರುವುದು ಕಾರ್ಯಕರ್ತರಿಗೆ, ನಾಡು-ನುಡಿಯ ಸೇವೆ ಮಾಡುವ ಜನಗಳಿಗೆ ಹೆಮ್ಮೆ ತರುವ ವಿಷಯ. ನಿಜವಾಗಿಯೂ ಅವರು ಪರಿಷತ್ತಿನ ಕಾರ್ಯವನ್ನು ಚೆನ್ನಾಗಿ ನಿರ್ವಹಿಸಿ ಹೆಸರು ಗಳಿಸುವರು" ಎಂದು ಶರ್ಮಾಜಿ ಹೇಳಿದ ಮಾತಿಗೆ ನಾರಾಯಣರು ಸುಮಾರು ಒಂಬತ್ತುವರ್ಷ ಪರಿಷತ್ತಿನಲ್ಲಿ ಸುವ್ಯವಸ್ಥಿತವಾದ ಕಾರ್ಯಸಾಧನೆ ಮಾಡಿರುವುದೇ ಸಾಕ್ಷಿ.

ಪರಿಷತ್ತಿನ ಕಾರ್ಯ ನಿರ್ವಾಹಕ ಸಮಿತಿಯಲ್ಲಿ ಅವರ ಜೊತೆಯಲ್ಲಿ ಕೆಲಸ ಮಾಡುವ ಅವಕಾಶ ನನಗೆಸಿಕ್ಕಿತ್ತು. ಮೂರು, ನಾಲ್ಕು ಗಂಟೆಗಳ ಕಾಲ ಸಭೆಗಳು ನಡೆದರೂ ಸಮಾಧಾನವಾಗಿ ಎಲ್ಲರಿಗೂ ಉತ್ತರ. ಯಾರು ವಿರೋಧಿಸುತ್ತಾರೆ ಎಂದು ಗೊತ್ತಾದ ತಕ್ಷಣ ಅವರನ್ನೇ ಅದರ ವಿಚಾರವಾಗಿ ಮಾತನಾಡಲು ಕೇಳಿಕೊಳ್ಳುವ ಸ್ವಭಾವ. ಅವರ ತಾಳ್ಮೆಯೇ ಕನ್ನಡ ಸಾಹಿತ್ಯ ಪರಿಷತ್ತಿನ ಸಾಧನೆಗೆ ಕಾರಣ.

ಶ್ರೀ ಜಿ. ನಾರಾಯಣರವರು ಯಾವ ಕೆಲಸವನ್ನೇ ನಿರ್ವಹಿಸಲಿ, ನಾಯಕರಾಗಿ ನಿಂತು, ಕೆಲಸಗಾರರನ್ನು ಒಟ್ಟುಗೂಡಿಸಿ, ಕೆಲಸವನ್ನು ಹಂಚಿ ಎಲ್ಲದರಲ್ಲೂ ಭಾಗ ವಹಿಸಿ ಹೆಮ್ಮೆಪಡುವುದು ಸ್ವಭಾವ. ದೆಹಲಿಯಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ನಡೆದಾಗ ಬೆಂಗಳೂರಿನಿಂದ ಒಂದು ವಿಶೇಷ ರೈಲು ಹೊರಟಿತು. ಬೆಂಗಳೂರಲ್ಲಿ ರೈಲನ್ನು ಬೀಳ್ಕೊಟ್ಟು, ದೆಹಲಿಯಲ್ಲಿ ಸ್ವಾಗತಿಸಲು ಏರ್ಪಾಡು ಮಾಡಿದರು. ಟ್ರೈನು ಬರಲು ನಿಧಾನವಾಯಿತು. ಅಧ್ಯಕ್ಷರಾಗಿದ್ದ ನಾರಾಯಣರವರಿಗೆ ಎಲ್ಲ ಕೆಲಸಗಳಿಗಿಂತ ಬೆಂಗಳೂರಿನಿಂದ ಬರುತ್ತಿರುವ ಜನಗಳ ಚಿಂತೆ. ಪ್ರತಿ ನಿಮಿಷವೂ ಟ್ರೈನು ಎಲ್ಲಿ ಬರುತ್ತಿದೆ. ಎಂಬುದನ್ನು ವಿಚಾರಿಸುತ್ತಿದ್ದರು. ಸಮ್ಮೇಳನ ನಡೆಯುವ ಹಿಂದಿನ ರಾತ್ರಿ ಆಗ್ರಾದಲ್ಲಿ ಬರುತ್ತಿದೆ, ನಮ್ಮ ಜನ ಟ್ರೈನಿನಲ್ಲಿ ಊಟ ತಿಂಡಿಗಳಿಲ್ಲದೆ ಬರುತ್ತಿದ್ದಾರೆ ಎಂದು ಗೊತ್ತಾಗಿ, ಅವರಿಗಾಗಿ ಒಂದು ಲಾರಿಯಲ್ಲಿ ಊಟ ಕಳಿಸುವ ಏರ್ಪಾಡಿನ ಯೋಜನೆ ಹಾಕಿದರು. ಆದರೆ 'ಅಲ್ಲಿಂದ ಹೊರಟರೆ ಏನು ಮಾಡುವುದು' ಎಂದು ಕೆಲವರು ಪ್ರಶ್ನಿಸಿದಾಗ ಅದನ್ನು ಕೈಬಿಟ್ಟರು. ಟ್ರೈನು ಬೆಳಿಗ್ಗೆ 6 ಗಂಟೆಗೆ ಬರುತ್ತದೆ ಎಂದು ಗೊತ್ತಾದಾಗ 5 ಗಂಟೆಗೇ ರೈಲ್ವೆ ನಿಲ್ದಾಣದಲ್ಲಿ ಹಾಜರಿದ್ದರು. ಟ್ರೈನು ಬಂದ ತಕ್ಷಣವೇ ಕನ್ನಡಿಗರನ್ನು ಸ್ವಾಗತಿಸಿ, ಕುಶಲವನ್ನು ಪ್ರಶ್ನಿಸಿ, ಅವರಿಗೆಲ್ಲ ಬಸ್ಸಿನ ವ್ಯವಸ್ಥೆ ಮಾಡಿ "ವಸತಿಗೆ ಸೇರಿ, ಸ್ನಾನ ಮತ್ತು ತಿಂಡಿ ಮಾಡಿಕೊಂಡು ಸಮ್ಮೇಳನಕ್ಕೆ ಬನ್ನಿ. ನಿಧಾನವಾದರೂ ಚಿಂತೆಯಿಲ್ಲ. ಸಮ್ಮೇಳನದ ವೇಳೆ ಮುಂದೂಡೋಣ" ಎಂದರು. ಕೂಗಾಡುವವರೆಲ್ಲ ಕೂಗಾಡಿ, ಕಡೆಗೆ ನಾರಾಯಣರವರ ಉಪಚಾರದ ಮಾತುಗಳನ್ನು ಕೇಳಿ ಸುಮ್ಮನಾದರು. ಅಧ್ಯಕ್ಷರೇ ರೈಲ್ವೆ ನಿಲ್ದಾಣಕ್ಕೆ ಬಂದು ಕನ್ನಡ ಪ್ರತಿನಿಧಿಗಳನ್ನು ಸ್ವಾಗತಿಸಿದುದನ್ನು ಎಲ್ಲರೂ ಮೆಚ್ಚಿದರು. ಕನ್ನಡ ಜನ ದೆಹಲಿಯಲ್ಲಿ ಸಮ್ಮೇಳನ ಮಾಡುವುದೆಂದರೆ ಬರೀ ಸಮ್ಮೇಳನ ಕೂಟ ಮಾತ್ರವಲ್ಲ. ಈ ದೆಸೆಯಲ್ಲಿ ದೇಶದ ಜನರ ಪರಿಚಯ ಬಹಳ ಮುಖ್ಯ ಎಂಬುದು ಅವರ ಉದ್ದೇಶ. ದೆಹಲಿಯಿಂದ ನಾನಾ ಕಡೆಗೆ ಪ್ರವಾಸ ಏರ್ಪಡಿಸಿದರು. ಅತ್ಯಲ್ಪ ಖರ್ಚಿನಲ್ಲಿ ಕನ್ನಡ ನಾಡಿನ ಜನ ದೆಹಲಿಯ ಸುತ್ತಮುತ್ತಲ ಪರಿಚಯ ಮಾಡಿಕೊಂಡರು.

ನನ್ನ ಕೆಲವು ಮಿತ್ರರು, ಕಾರ್ಮಿಕ ಬಂಧುಗಳು ನನಗೆ ಸನ್ಮಾನ ಮಾಡಬೇಕೆಂದು ಯೋಚಿಸಿ ಶ್ರೀ ಜಿ. ನಾರಾಯಣರವರನ್ನು ಅಧ್ಯಕ್ಷರಾಗಲು ಕೇಳಿದರು. ಈಗಾಗಲೇ ಅನೇಕ ಸನ್ಮಾನ ಸಮಿತಿಗಳಿಗೆ ಅಧ್ಯಕ್ಷರಾಗಿದ್ದುದರಿಂದ ಮೊದಲು ಆಗುವುದಿಲ್ಲವೆಂದು ಹೇಳಿದರೂ ನನ್ನ ಮೇಲಿನ ಪ್ರೀತಿ ವಿಶ್ವಾಸಕ್ಕಾಗಿ ಒಪ್ಪಿಕೊಂಡರು. ಅವರು ಒಪ್ಪಿಕೊಳ್ಳುವುದೇ ಕಷ್ಟ. ಒಪ್ಪಿಕೊಂಡ ಮೇಲೆ ಎಲ್ಲ ಕೆಲಸದಲ್ಲೂ ಅಚ್ಚುಕಟ್ಟು. ಯುವಕರಿಗೆ ಮಾರ್ಗದರ್ಶನ ನೀಡಿ ಒಂದು ಕಾರ್ಯಕ್ರಮ ಹಾಕಿಕೊಟ್ಟು ಸಂಭಾವನಗ್ರಂಥ ಹಾಗೂ ನೆನಪಿನ ಸಂಚಿಕೆಯನ್ನು ಹೊರತಂದರು. ಕಾರ್ಯಕ್ರಮ ಏರ್ಪಡಿಸುವುದರಲ್ಲಿ ಬಹು ಮುಂದಾಲೋಚನೆ.

ಶ್ರೀಲಂಕಾಗೆ ನಾನು ಹೋಗಿ ಬಂದಮೇಲೆ, ಶ್ರೀಲಂಕಾವನ್ನು ಕನ್ನಡಿಗರಿಗೆ ಪರಿಚಯ ಮಾಡಿಕೊಡುವ ಉದ್ದೇಶದಿಂದ ಒಂದು ಪುಸ್ತಕವನ್ನು ಬರೆದು ಅದರ ಹಸ್ತಪ್ರತಿಯನ್ನು ಜಿ. ನಾರಾಯಣರವರಿಗೆ ಕೊಟ್ಟೆ. ಅಭಿಪ್ರಾಯ ಸೂಚಿಸಲು ಕೋರಿದೆ. ನಾಲ್ಕೇ ದಿನಗಳಲ್ಲಿ ನನಗೆ ದೂರವಾಣಿಯ ಮೂಲಕ ತಿಳಿಸಿದರು. "ವಿಷಯ ಚೆನ್ನಾಗಿದೆ. ಪ್ರಕಟಿಸಲು ಪ್ರಯತ್ನಿಸಿ" ಎಂದು ಉತ್ತೇಜಿಸಿದರು. ಇದಾದನಂತರ 'ಶಶಿ ಕಂಡ ಜರ್ಮನಿ' ಮಕ್ಕಳಿಗಾಗಿ ಬರೆದ ಪುಸ್ತಕದ ಹಸ್ತಪ್ರತಿಯನ್ನೂ ಅವರಿಗೆ ತೋರಿಸಿದೆ. ಅದನ್ನು ಓದಿ ಕೆಲವು ಕಡೆ ವಿವರಣೆ ಕೊಡಬೇಕೆಂದು ಸಲಹೆ ನೀಡಿ, ಈ ಪುಸ್ತಕವನ್ನು ಕನ್ನಡ ಸಾಹಿತ್ಯ ಪರಿಷತ್ತಿಗೆ ಕೊಡಿ, ಸುಲಭ ಬೆಲೆಗೆ ಮಕ್ಕಳು ಓದಲು ಅನುಕೂಲವಾಗಲಿ ಎಂದರು. ಅದೇ ರೀತಿ ಪರಿಷತ್ತಿನವರು ಪ್ರಕಟಿಸಿದರು.

ಬಿ. ಎಂ. ಶ್ರೀ ಜನ್ಮಶತಾಬ್ದಿಯ ಕಾರ್ಯಾಧ್ಯಕ್ಷರಾಗಿ, ಎಲ್ಲ ಕಾರ್ಯಕ್ರಮಗಳನ್ನು ಯೋಜಿಸಿ, ಇದುವರೆಗೂ ಕರ್ನಾಟಕದಲ್ಲಿ ಎಲ್ಲಿಯೂ ಆಗದಂತಹ, ಕವಿಯ ಜನ್ಮ ಶತಾಬ್ದಿಯನ್ನು ಶ್ರೀ ಆದಿಚುಂಚನಗಿರಿ ಕ್ಷೇತ್ರದ ಶ್ರೀ ಸ್ವಾಮೀಜಿ ಅವರ ಸಹಕಾರದೊಂದಿಗೆ ಕವಿ ಜನಿಸಿದ ಊರಿನಲ್ಲೇ ಪ್ರಪ್ರಥಮವಾಗಿ ಆಚರಿಸಿ ಯಶಸ್ವಿಯಾದರು. ಹಿರಿಯ ಸಾಹಿತಿಗಳಾದ ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ್, ಶ್ರೀ ಪು. ತಿ. ನರಸಿಂಹಾಚಾರ್, ಪ್ರೊ॥ ಎಂ. ವಿ. ಸೀತಾರಾಮಯ್ಯ, ಶ್ರೀ ನಿಟ್ಟೂರು ಶ್ರೀನಿವಾಸ ರಾವ್ ಒಂದು ದಿನ ಮುಂಚಿತವಾಗಿ ಶ್ರೀ ಆದಿಚುಂಚನಗಿರಿ ಪುಣ್ಯಕ್ಷೇತ್ರದಲ್ಲಿ ತಂಗಿದ್ದರು. ನಾನು ಮತ್ತು ಶ್ರೀ ಜಿ. ನಾರಾಯಣರು ಹಿಂದಿನ ದಿನವೇ ಬೆಳ್ಳೂರಿಗೆ ಹೋಗಿದ್ದೆವು. ಪ್ರತಿಯೊಂದು ಕಾರ್ಯವನ್ನೂ ವಿವರವಾಗಿ ಪರಿಶೀಲಿಸಿ ಎಲ್ಲರಿಗೂ ಸೂಕ್ತ ಸಲಹೆ ನೀಡಿದರು. ಮಾರನೇ ದಿನ ಅಂದರೆ 3-1-84ರ ಸಮಾರಂಭಕ್ಕೆ ಬೆಂಗಳೂರಿನಿಂದ 6 ಬಸ್ಸಿನ ಜನ ಭಾಗವಹಿಸಿದರು. ಪುಸ್ತಕ ಪ್ರದರ್ಶನವೂ ಏರ್ಪಟ್ಟಿತ್ತು. ಬಹಳ ವೈಭವದಿಂದ ಜನ್ಮಶತಾಬ್ದಿ ಆಚರಿಸಲಾಯಿತು.

'ಕನ್ನಡದ ಕಣ್ವ ಬಿ. ಎಂ. ಶ್ರೀ' ಪುಸ್ತಕ ಬರೆಯಲು ಜಿ. ನಾರಾಯಣರೇ ಕಾರಣ. ಈ ಪುಸ್ತಕ ಸಮಾರಂಭದಲ್ಲಿ ಬಿಡುಗಡೆಯಾಯಿತು. ಒಂದು ದಿನ ನಾವಿಬ್ಬರೂ ಯಾವುದೋ ಕಾರ್ಯಕ್ರಮದಲ್ಲಿ ಭಾಗವಹಿಸಬೇಕಾಗಿತ್ತು. ಅಲ್ಲಿಗೆ ಹೋಗುವಾಗ ನನ್ನನ್ನು ಕೇಳಿದರು, 'ನೀವು ಬರೆದ ಮಕ್ಕಳ ಪುಸ್ತಕಗಳನ್ನು ನೋಡಬೇಕು' ಅಂದರು. ಆಗಲೇ ಅವರಿಗೆ ಪುಸ್ತಕಗಳನ್ನು ಕೊಟ್ಟೆನು. ಅಂದು ರಾತ್ರಿ ದೂರವಾಣಿ ಮೂಲಕ ಮಾತನಾಡಿ 'ನೀವು ಬರೆದ ಮಕ್ಕಳ ಸಾಹಿತ್ಯ ಶೈಲಿ ತುಂಬಾ ಚೆನ್ನಾಗಿದೆ. ನೀವು ಬಿ. ಎಂ. ಶ್ರೀ ನೋಡಿದ್ದೀರಾ, ಪರಿಚಯವಿದೆಯೋ, ಎಂದು ಕೇಳಿದರು. 'ಪರಿಚಯ ಹೆಚ್ಚು ಇಲ್ಲದಿದ್ದರೂ ಅವರ ಭಾಷಣಗಳನ್ನು ಕೇಳಿದ್ದೇನೆ. ಸಿದ್ದವನಹಳ್ಳಿ ಕೃಷ್ಣಶರ್ಮರು ಅವರ ವಿಚಾರವನ್ನು ತಿಳಿಸುತ್ತಿದ್ದರು. ಅವರ ಕನ್ನಡ ಸೇವೆಯನ್ನು ತಿಳಿದಿದ್ದೇನೆ' ಅಂದೆ. 'ಹಾಗಾದರೆ ಮಕ್ಕಳಿಗಾಗಿ ಬಿ. ಎಂ. ಶ್ರೀ ವಿಚಾರದಲ್ಲಿ ಪುಸ್ತಕವನ್ನು ಬರೆಯಬಾರದೇಕೆ' ಎಂದು ಹೇಳಿದರು. 'ಆಗಲಿ' ಎಂದೆ. ಮೂರೇ ದಿವಸಕ್ಕೆ ಎಂ. ವಿ. ಸೀತಾರಾಮಯ್ಯನವರಿಂದ ಒಂದು ಕಾಗದ ಬಂದಿತು. ಬರೆದುಕೊಟ್ಟದ್ದಾಯಿತು. ಪ್ರೊ- ಎಂ. ವಿ. ಸೀತಾರಾಮಯ್ಯನವರು 'ಚೆನ್ನಾಗಿದೆ' ಎಂದು ನನ್ನ ಬೆನ್ನು ತಟ್ಟಿ ಪುಸ್ತಕವನ್ನು ಪ್ರಕಟಿಸಿದರು.

ಪರಿಷತ್ತಿನ ಅಧ್ಯಕ್ಷಸ್ಥಾನವನ್ನು ಬಿಟ್ಟನಂತರ ನಾರಾಯಣರಿಗೆ ಆದಷ್ಟು ಸನ್ಮಾನಗಳು ಮತ್ಯಾರಿಗೂ ಆಗಿಲ್ಲವೆಂದು ನನ್ನ ಭಾವನೆ. ಅಧಿಕಾರದಲ್ಲಿದ್ದವರಿಗೆ ಸನ್ಮಾನವನ್ನು ಮಾಡಿ, ಕೆಲಸ ಸಾಧಿಸಿಕೊಳ್ಳುತ್ತಾರೆ. ಆದರೆ ಅಧಿಕಾರ ಬಿಟ್ಟ ಮೇಲೆ ಸನ್ಮಾನ ಮಾಡಿದರೆ ಅದು ಅವರ ಸೇವೆ ಮತ್ತು ಸಾಧನೆಗೆ. ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ನಾಡು-ನುಡಿ ಈ ವಿಚಾರಗಳನ್ನು ಬಿಟ್ಟರೆ ಬೇರೆ ಮಾತೇ ಇಲ್ಲ. ಕೆಲಸಗಾರರನ್ನು ಹುರಿದುಂಬಿಸಿ ಕೆಲಸ ಮಾಡಿಸಿ ಅದನ್ನು ನೋಡುವುದರಲ್ಲಿ ಸಂತೋಷ. ಇಂತಹ ಮಹಾನ್ ವ್ಯಕ್ತಿ, ಸಮಾಜ ಸೇವಕರಿಗೆ, ಬರಹಗಾರರಿಗೆ, ಕಾರ್ಯಕರ್ತರಿಗೆ ಒಬ್ಬ ಮಾರ್ಗದರ್ಶಿ.

ಗೌರವಾನ್ವಿತ ವ್ಯಕ್ತಿ

ಆರ್. ಎಸ್. ಆರಾಧ್ಯ

ನಾರಾಯಣರವರು ವೇದಿಕೆಯ ಮೇಲೆ ಭಾಷಣ ಮಾಡಲು ನಿಂತರೆ ಗಂಟೆಗಟ್ಟಲೆ ಮಾತನಾಡಬಲ್ಲರು. ಅವರ ಭಾಷಣದಲ್ಲಿ ಭೋರ್ಗರೆವ ಜಲಪಾತದ ರಭಸವೇನೂ ಇರುವುದಿಲ್ಲ. ನಿಧಾನವಾಗಿ ವಿಂಗಡಿಸಿ ವಿವರವಾಗಿ ಮಾತನಾಡುತ್ತಾರೆ. ಪ್ರೇಕ್ಷಕರನ್ನು ಆಕರ್ಷಿಸುವ ಮತ್ತು ಒಲಿಸಿಕೊಳ್ಳುವ ಸಾಮರ್ಥ್ಯವಿದೆ.

ಅವರದು ಜನರ ಮನಸೆಳೆವ ಮೋಹಕ ವದನವಲ್ಲ. ಹೆಮ್ಮೆಯನ್ನು ತೋರುವ ದಿಟ್ಟತನದ ಮೋರೆಯೂ ಅಲ್ಲ. ಅದರಲ್ಲಿ ಕುಡಿನೋಟದ ಮುಗುಳ್ನಗೆಯು ಸೂಸುವುದಿಲ್ಲ. ಅದೊಂದು ಗಾಂಭೀರ್ಯ ತುಂಬಿದ, ಸರಳತೆ, ನಿರಾಡಂಬರ ಮತ್ತು ಸಜ್ಜನಿಕೆಗಳನ್ನು ಹೊತ್ತು ತುಂಬಿರುವ ಮುಖಮುದ್ರೆ ; ಅದರಲ್ಲಿ ಸಂಕೋಚವಿಲ್ಲ. ಸೌಜನ್ಯತೆ ಇದೆ. ಸಿಡಿಮಿಡಿ ಇಲ್ಲ; ಶಾಂತಿ ಇದೆ. ಅದೊಂದು ನಿರಹಂಕಾರ ನಿಷ್ಕಪಟತೆಗಳನ್ನು ಸೂಚಿಸುವ ಮುಖಭಂಗಿ. ಎಲ್ಲರನ್ನೂ ನಗುನಗತ್ತಾ "ಸೌಖ್ಯವೆ ? ಯಾವಾಗ ಬಂದಿರಿ ? ಹೇಗಿದ್ದೀರಿ ?" ಎಂದು ಆತ್ಮೀಯತೆಯಿಂದ ಬರಮಾಡಿಕೊಳ್ಳುವ ಮೂರ್ತಿ.

ಅವರ ಪರಿಚಯ ನನಗೆ ಆದದ್ದು ಸುಮಾರು 25 ವರ್ಷಗಳ ಹಿಂದೆ. ಆದರೆ ಹೆಚ್ಚು ಸಂಪರ್ಕ ಬೆಳೆದದ್ದು 15 ವರ್ಷಗಳ ಹಿಂದೆ. ಅದೂ 9 ವರ್ಷಗಳ ಕಾಲ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಕಾಲದಲ್ಲಿ. ಅವರೊಡನೆ ಕಾರ್ಯಕಾರಿ ಮಂಡಲಿಯಲ್ಲಿ 9 ವರ್ಷಕಾಲ ನನ್ನ ನಿಕಟ ಬಾಂಧವ್ಯ. ಜೊತೆಗೂಡಿ ಕೆಲಸಮಾಡುವ ಸದವಕಾಶ. ಅಂದಿನಿಂದ ಇಂದಿನವರೆಗೂ ಯಾವಾಗಲೂ ಶಾಂತಿ, ಸಮಾಧಾನ, ಸಂತೃಪ್ತಿ, ಮೃದುಹಾಸದ ಮುಖವನ್ನು ಕಾಣುತ್ತಲೇ ಇದ್ದೇನೆ. ಅವರ ಸರಳತೆ, ಶಾಂತತೆಗಳು ಅವರ ಜೀವನಕ್ಕೆ ಮೆರುಗುಕೊಟ್ಟಿವೆ. ಅವರಲ್ಲಿ ಸಂಶಯವಿಲ್ಲ.

ಸಾಹಿತ್ಯ ಪರಿಷತ್ತಿನ ಕಾರ್ಯಗಳನ್ನು ಬೃಹದಾಕಾರವಾಗಿ ಬೆಳೆಸಿದರು. ಬೆಳೆಯಿತು. ನಾಡಿನ ಮೂಲೆ ಮೂಲೆಗೂ ತಲ್ಪಿತು. ಕೆಲಸ ಬಹಳ ಹೆಚ್ಚಾಯಿತು. ಪರಿಷತ್ತಿನ ಅಧ್ಯಕ್ಷರಾಗಿದ್ದ ನಾರಾಯಣರವರಿಗೆ ಪ್ರತಿದಿನ ನಸುಕಿನಿಂದ ಮುಸುಕಿನವರೆಗೂ ಕೆಲಸ. ಓಡಾಡಲು ವಾಹನವಿಲ್ಲ. ಬೀದಿಯಲ್ಲಿ ಓಡಾಡುವ ಬಸ್ಸು ಮತ್ತು ಆಟೋಗಳಲ್ಲೇ ಓಡಾಟ. ಇದನ್ನು ನೋಡಿ ಕಾರ್ಯಕಾರಿ ಸಮಿತಿಯ ಸದಸ್ಯರೆಲ್ಲರೂ ಒಕ್ಕೊರಲಿನಿಂದ 'ಪರಿಷತ್ತಿನ ಹಣದಲ್ಲಿ ಒಂದು ಕಾರನ್ನು ಇಟ್ಟುಕೊಂಡು ಅದರಲ್ಲಿ ಅಧ್ಯಕ್ಷರು ಓಡಾಡಬೇಕು ಮತ್ತು ಕೆಲಸವನ್ನು ಹೆಚ್ಚು ಮಾಡಬೇಕು. ಇದರಿಂದ ಸಮಯದ ಸದುಪಯೋಗ, ಅಧ್ಯಕ್ಷರ ಆರೋಗ್ಯಕ್ಕೆ ಸ್ವಲ್ಪ ನೆರವು ಎಲ್ಲವೂ ಇರುತ್ತೆ. ಸಾಹಿತ್ಯ ಪರಿಷತ್ತಿನಂತಹ ದೊಡ್ಡ ಸಂಸ್ಥೆಯ

ಅಧ್ಯಕ್ಷರು ಬಸ್ಸಿನಲ್ಲಿ ಪ್ರಯಾಣ ಮಾಡುವುದು ನಮಗೆ ಒಪ್ಪಿಗೆಯಿಲ್ಲ. ಇನ್ನೂ ಹೆಚ್ಚು ಕೆಲಸ ಮಾಡಲು ಅವಕಾಶವಾಗುತ್ತೆ' ಎಂದು ಹಲವಾರು ವಿಧದಿಂದ ವಿನಂತಿಸಿಕೊಂಡೆವು. ಗಂಟೆಗಟ್ಟಲೆ ಚರ್ಚೆಯಾಯಿತು. ಆದರೆ ನಾರಾಯಣರವರು 'ನಾರಾಯಣ' ಎಂದರೇ ಹೊರತು 'ಗೋವಿಂದ' ಎನ್ನಲಿಲ್ಲ. "ನನ್ನ ಕಾಲು ಗಟ್ಟಿ ಇವೆ. ಮನೆಯಿಂದ ನಡೆದು ಬರುತ್ತೇನೆ. ನಡೆದು ವಾಪಸ್ಸು ಹೋಗುತ್ತೇನೆ. ಅಥವ ಬಸ್ಸು ಹಿಡಿಯುತ್ತೇನೆ. ಬೇಕಾದಷ್ಟು ಬಸ್ಸುಗಳಿವೆ. ಅವಸರದ ಕೆಲಸಗಳು, ಕಾಲ ಉಳಿಸಬೇಕಾದ ಸಂದರ್ಭ ಬಂದಾಗ ಆಟೋಗಳನ್ನು ಉಪಯೋಗಿಸಿಕೊಳ್ಳುತ್ತೇನೆ. ಹೊರಗೆ ಹೋಗುವಾಗ ಟ್ಯಾಕ್ಸಿ ಮಾಡೋಣ. ಪರಿಷತ್ತಿಗೆ ಒಂದು ಕಾರು ಕೊಂಡುಕೊಳ್ಳುವುದಕ್ಕೆ, ಅದನ್ನು ನಾನು ಉಪಯೋಗಿಸುವುದಕ್ಕೆ ಖಂಡಿತ ಇಂದಿನ ಸ್ಥಿತಿಯಲ್ಲಿ ಒಪ್ಪುವುದಿಲ್ಲ" ಎಂದು ಹಟ ತೊಟ್ಟರು.

ಇವೆಲ್ಲಾ ಅವರ ನಿಸ್ವಾರ್ಥ ಸೇವೆ, ನಿಷ್ಕಳಂಕ ಮನೋಭಾವ, ಪ್ರಾಮಾಣಿಕ ವ್ಯಕ್ತಿತ್ವದ ಗುರುತುಗಳು. ಅವು ಎಲ್ಲರಲ್ಲೂ ಇರುವುದಿಲ್ಲ. ಎಲ್ಲರಿಗೂ ಬರುವುದಿಲ್ಲ.

ನಾರಾಯಣರವರು ವೇದಿಕೆಯ ಮೇಲೆ ಭಾಷಣ ಮಾಡಲು ನಿಂತರೆ ಗಂಟೆಗಟ್ಟಲೆ ಮಾತನಾಡಬಲ್ಲರು. ಅವರ ಭಾಷಣದಲ್ಲಿ ಭೋರ್ಗರೆವ ಜಲಪಾತದ ರಭಸವೇನೂ ಇರುವುದಿಲ್ಲ. ನಿಧಾನವಾಗಿ ವಿಂಗಡಿಸಿ ವಿವರವಾಗಿ ಮಾತನಾಡುತ್ತಾರೆ. ಪ್ರೇಕ್ಷಕರನ್ನು ಆಕರ್ಷಿಸುವ ಮತ್ತು ಒಲಿಸಿಕೊಳ್ಳುವ ಸಾಮರ್ಥ್ಯ ಅವರಿಗಿದೆ.

ಯಾವುದೇ ಕೆಲಸವನ್ನು ಅವರು ಎತ್ತಿಕೊಂಡರೂ ಪರಿಪಕ್ವವಾಗಿ, ಪರಿಪೂರ್ಣವಾಗಿ ಮಾಡಬಲ್ಲ ಸಾಹಸಿ. ಜೊತೆಗೆ ಅಂತಹ ಮಿತ್ರ ಮಂಡಳಿಯನ್ನು ಸಂಪಾದಿಸಿಕೊಂಡಿದ್ದಾರೆ. ಯಾವ ವಿಷಯವನ್ನೇ ಆಗಲಿ ತುಲನ ಮಾಡಿ ನೋಡುವುದು ಹೆಚ್ಚು. ದುಡುಕಿನ ಸ್ವಭಾವವಿಲ್ಲ. ದೂರದೃಷ್ಟಿ ಇದೆ. ಸಿಟ್ಟಿಲ್ಲ ; ಶಾಂತತೆ ಇದೆ. ಬಿಡುವಿಲ್ಲದೆ ದುಡಿಯಬೇಕೆಂಬ ಇಚ್ಛೆ ಇದೆ. ಅವರ ಸ್ವಾರ್ಥ ರಹಿತ ಸೇವಾ ಮನೋಭಾವ, ಹಿರಿದಾದುದು. ಆ ಬಗ್ಗೆ ಯಾರೂ ಬೆರಳು ತೋರಿಸುವಂತಿಲ್ಲ; ಬೆರಳು ತೋರಿಸಲು ಸಾಧ್ಯವೂ ಇಲ್ಲ.

ನೀನು ಹೇಳುವುದನ್ನು ನಾನು ಒಪ್ಪಲೊಲ್ಲೆ ; ಆದರೆ ಅದನ್ನು ಹೇಳಲು ನಿನಗಿರುವ ಹಕ್ಕಿಗಾಗಿ ಹರಣ ಹೋಗುವವರೆಗೂ ಹೋರಾಡಬಲ್ಲೆ !

—ವಾಲ್ಟೇರ್

ಶಶಿಕಲಾವಿದರು

ಜಿ. ಕೆ. ಗುಂಡುರಾವ್

ಪರಿಷತ್ತಿನ ಒಳಗಾಗಲಿ, ಹೊರಗಾಗಲಿ, ನಾರಾಯಣರು ಒಂದು ಸಂಸ್ಥೆ; ವ್ಯಕ್ತಿಯಲ್ಲ. ಅವರೊಡನೆ ಎಂದೂ ಅವರನ್ನು ಮೆಚ್ಚಿ ಆಶೀರ್ವಾದ ಮಾಡುತ್ತಿರುವ ಹಿರಿಯರ ಬಳಗ ಅವರೊಡನೆ 'ನಿಮ್ಮ ಕೆಲಸಕ್ಕೆ ನಮ್ಮ ಸಂಪೂರ್ಣ ಬೆಂಬಲ' ಎನ್ನುವ ಸಮಕಾಲೀನರ ದೊಡ್ಡಗುಂಪು. 'ನೀವು ಹೇಳಿ ಮಾರ್ಗದರ್ಶನ ನೀಡಿ, ಯಾವ ಕೆಲಸವನ್ನಾದರೂ ನೀವು ಮತ್ತು ಜನತೆ ಮೆಚ್ಚುವಂತೆ ಮಾಡುತ್ತೇವೆ' ಎಂದು ಒಕ್ಕೊರಲಿನಿಂದ ಹೇಳುವ ಬೃಹತ್ ಕಾರ್ಯಕರ್ತರ ತಂಡ, ಈ ಎಲ್ಲರ ಸೌಭಾಗ್ಯ ನಾರಾಯಣರದು.

ನಮ್ಮ ಅಧ್ಯಕ್ಷರು—ಇದು ನಮಗೆಲ್ಲ ಅತ್ಯಂತ ಪ್ರಿಯವಾದ ಆತ್ಮೀಯ ಸಂಭೋದನೆ. ಇದು ಶ್ರೀ ಜಿ. ನಾರಾಯಣರನ್ನು ಕುರಿತದ್ದೇ ಎಂದು ನಮ್ಮ ಸಂಸ್ಥೆಯವರಿಗೆಲ್ಲಾ ಗೊತ್ತು. ಅಷ್ಟೇ ಅಲ್ಲ, ಹಲವಾರು ಹಿರಿಯರು, ಕಿರಿಯರು ಪರಿಚಿತ ಪರಿಸರದಲ್ಲಿ ಅವರನ್ನು ಇಂದು ಕರೆಯುವುದು ಅಧ್ಯಕ್ಷರೆಂದೇ. ಶಶಿಕಲಾವಿದರು ಬಳಗದವರಿಗೆ ಶ್ರೀ ಜಿ. ನಾ ಅವರ ಪರಿಚಯ 28 ವರ್ಷಗಳಷ್ಟು ಹಿಂದಿನದು. ಕೇವಲ ಸಂದರ್ಭ-ಅವಕಾಶ ಸಿಕ್ಕಾಗ ನಾಟಕವಾಡಿ ತೃಪ್ತಿಪಟ್ಟುಕೊಳ್ಳುತ್ತಿದ್ದ ಸಂಸ್ಥೆಯೊಂದು ಬೆಳೆದು ಸಮಾಜಕ್ಕೆ ಮಾಡಬಹುದಾದ ಸೇವೆಯ ಅರಿವನ್ನಿತ್ತು ಅಂದಿನಿಂದ ಇಂದಿನವರೆಗೆ ಅವರು ನಮ್ಮ ಸಂಸ್ಥೆಯ ಅಧ್ಯಕ್ಷರಾಗಿದ್ದಾರೆ. ಸಂಸ್ಥೆಯ ಗಾತ್ರ-ಆರ್ಥಿಕ ಅನುಕೂಲತೆಗಿಂತ ಅದರಲ್ಲಿರುವವರ ಶಕ್ತಿ-ಪ್ರತಿಭೆಗಳಿಗನುಗುಣವಾಗಿ ಯೋಜನಾಬದ್ಧ ಕಾರ್ಯಗಳನ್ನು ರೂಪಿಸಿ, ಅದನ್ನು ಕಾರ್ಯಗತಗೊಳಿಸಿದರೆ ಸಂಸ್ಥೆ ಉಳಿಯಬಲ್ಲದು ಎಂಬ ನಂಬಿಕೆ ನಮ್ಮ ಅಧ್ಯಕ್ಷರದು. ನಾಟಕ ಸ್ಪರ್ಧೆ, ಹಿರಿಯ ಕಲಾವಿದರ ಸನ್ಮಾನ, ಹಲವಾರು ಜನಸಂಪರ್ಕ ಕಾರ್ಯಗಳು ನಾರಾಯಣರ ಯೋಜನಾ ಮೂಸೆಯಲ್ಲಿ ಪುಟವಿಟ್ಟು ಬಂದ ಕಾರ್ಯಕ್ರಮಗಳು. ಇವೇ ಇಂದೂ ನಮ್ಮ ಸಂಸ್ಥೆಯ ಜನಾದರಣೆಗೆ ಅಡಿಪಾಯವಾಗಿ ನಿಂತಿವೆ.

ಅಂದಿನ ನಮ್ಮ ಅಧ್ಯಕ್ಷರು-ಚಾಮರಾಜಪೇಟೆ ಕ್ಷೇತ್ರದ ಸಮಾಜಸೇವಕ, ನಂತರ ಜನಪ್ರಿಯ ಕಾರ್ಪೊರೇಟರ್ ಆಗಿ ತಮ್ಮ ಕ್ಷೇತ್ರದ ಬಗ್ಗೆ ಹಲವಾರು ಜನೋಪಯೋಗಿ ಕೆಲಸಗಳನ್ನು ಯೋಜನಾಬದ್ಧವಾಗಿ ಮಾಡಿದವರು. ಪ್ರತಿನಿಧಿಸಿದ್ದ ಜನರೊಡನೆ ಇದ್ದ ಇವರ ಸಂಪರ್ಕ, ನಗರಸಭೆಯಲ್ಲಿ, ಕಛೇರಿಯಲ್ಲಿ ಇವರು ಗಳಿಸಿದ್ದ ದಕ್ಷತೆ, ಕಾಂಗ್ರೆಸ್ ಸಂಸ್ಥೆ ಮತ್ತು ಅದರ ತತ್ವಗಳಲ್ಲಿ ಇವರಿಗಿದ್ದ ಅಚಲ ನಂಬಿಕೆ, ಸಂಸ್ಥೆಯ ಹಿರಿಯರಿಗೆ ಇವರಲ್ಲಿದ್ದ ವಿಶ್ವಾಸ, ಹಂತಹಂತವಾಗಿ ಇವರ ಸ್ಥಾನ-ಜವಾಬ್ದಾರಿಗಳನ್ನು ಹೆಚ್ಚಿಸಿದವು. 9 ವರ್ಷ ಕಾರ್ಪೊರೇಷನ್ ವರ್ಕ್ಸ್ ಕಮಿಟಿಯ ಅಧ್ಯಕ್ಷರಾಗಿದ್ದಾಗ ಇಡೀ ಬೆಂಗಳೂರು ಇವರ ಯೋಜನೆಗಳ ಫಲ ಪಡೆಯಿತು. ಬೆಂಗಳೂರು ನಗರಕ್ಕೆ ಇಂದಿನಂತೆ ಅಂದೂ ಮೇಯರ್ ಆಯ್ಕೆಯಲ್ಲಿ ಮಾತ್ರ ಸಂಸ್ಥೆ (ಕಾಂಗ್ರೆಸ್) ಯ ಪದಾಧಿಕಾರಿಗಳದ್ದೇ ಕೊನೆ ನಿರ್ಣಯ. ಇಂತಹ ಒಂದು ಸಂದರ್ಭದಲ್ಲಿ ನಾರಾ

ಯಣರಿಗೆ ಅವಕಾಶ-ಒತ್ತಾಯ. ಆದರೆ ನಾರಾಯಣರ ಉತ್ತರ-ನನಗಿಂತ ಕಾರ್ಪೊರೇಷನ್ನಿನಲ್ಲಿ ಕಾಂಗ್ರೆಸ್ ಸಂಸ್ಥೆಯಲ್ಲಿ ಹೆಚ್ಚು ಸೇವೆ ಸಲ್ಲಿಸಿದವರಿದ್ದಾರೆ ಎಂದು ವರಿಷ್ಟರಿಗೆ ತಿಳಿಸಿ, ಒಪ್ಪಿಸಿ, ಸಹ ಕಾರ್ಪೊರೇಟರುಗಳ ಮನವೊಲಿಸಿ ತಾವು ಸೂಚಿಸಿದವರನ್ನು ಆ ವರ್ಷ ಮೇಯರ್ ಆಗಿ ಆಯ್ಕೆಮಾಡಿ, ಅದರ ಮುಂದಿನ ವರ್ಷ ತಾವು ಮೇಯರ್ ಆದ ಹೆಗ್ಗಳಿಕೆ ನಮ್ಮ ಅಧ್ಯಕ್ಷರದು. ಅಧಿಕಾರ ನೆರಳಿನಂತೆ ಅಟ್ಟಿಸಿಕೊಂಡು ಹೋದರೆ ಎಂದೂ ಕೈಗೆ ಸಿಕ್ಕುವುದಿಲ್ಲ.ನಾವು ಮುಂದೆ ಹೋದರೆ ನಮ್ಮ ಹಿಂದೆ ಬರುತ್ತದೆ ಎಂಬ ತತ್ವ ಅವರದು. ಇದರಂತೆಯೇ ಅಧಿಕಾರ ಸ್ವೀಕರಿಸುವಾಗ ಇರುವ ಆತುರ ಅಧಿಕಾರ ಬಿಡುವಾಗಲೂ ಇರಬೇಕು. ಅಧಿಕಾರ ವ್ಯಾಮೋಹ ಎಂದೂ ಇವರನ್ನು ಬಾಧಿಸಲಿಲ್ಲ. ನಗರದ ಮೇಯರ್ ಆಗಿ ಅಧಿಕಾರ ಸ್ವೀಕರಿಸಿದ ದಿನದಿಂದ ಸರಿಯಾಗಿ 365 ದಿನ ಲೆಕ್ಕ ಹಾಕಿ ಅಂದು ಯಾವುದೋ ಬೇರೆ ಸಂದರ್ಭಕ್ಕೆ ಏರ್ಪಾಟಾಗಿದ್ದ (ಇವರೇ ಏರ್ಪಾಟುಮಾಡಿದ್ದ) ಸಮಾರಂಭದಲ್ಲಿ ಸಾಂದರ್ಭಿಕವಾಗಿ ವಿಷಯ ಪ್ರಸ್ತಾಪಿಸಿ ಆ ದಿನ ಬರಮಾಡಿಕೊಂಡಿದ್ದ ಕಾರ್ಪೊರೇಷನ್ ಹಿರಿಯ ಅಧಿಕಾರಿಗಳಿಗೆ ತಮ್ಮ ಅಧಿಕಾರವನ್ನು ಸಂತೋಷದಿಂದ ವಹಿಸಿಕೊಟ್ಟು ಅಲ್ಲೇ ತರಿಸಿಕೊಂಡಿದ್ದ ಆಟೋದಲ್ಲಿ ಮನೆಗೆ ಬಂದವರು ಇವರು. ಮನೆಯವರಿಗೆ "ಇಂದಿನಿಂದ ನಾನು ಮೇಯರಲ್ಲ" ಎಂದಾಗಲೇ ತಿಳಿದದ್ದು. ಸಣ್ಣ ನೌಕರರಿಂದ ಆಫೀಸಿನ ಇತರ ಎಲ್ಲರಿಗೂ ತಮ್ಮೊಡನೆ ಕೆಲಸಮಾಡಿದ ನೆನಪಿಗೆ ಅವರಿಗೆ ಉಪಯೋಗವಾಗಬಹುದಾದ ಕಾಣಿಕೆಗಳನ್ನು ಆ ವೇಳೆಗಾಗಲೇ ಕೊಟ್ಟಿದ್ದಂತೂ ಆಶ್ಚರ್ಯಕರ. ಈ ಘಟನೆಯಂತೂ ಮೇಯರ್ ಶ್ರೀ ಜಿ. ನಾರಾಯಣರನ್ನು ಎಲ್ಲರ ದೃಷ್ಟಿಯಲ್ಲೂ ಹಿರಿಯ ಸ್ಥಾನಕ್ಕೇರಿಸಿ, ಜನಪ್ರಿಯ 'ಮಾಜಿ ಮೇಯರ್' ಮಾಡಿತು.

ಶಶಿಕಲಾವಿದರ ಸಂಸ್ಥೆಗೆ ಕಾರ್ಯಕ್ರಮಗಳನ್ನು ಯೋಜಿಸುವ ಹೊಣೆ ಹೊತ್ತು ಅವರು ಹಾಕಿಕೊಟ್ಟ ಕಾರ್ಯಕ್ರಮಗಳು ಅವರಿಗಿದ್ದ ಸಾಹಿತ್ಯಾಭಿಮಾನ, ಕನ್ನಡದ ಬಗ್ಗೆ ಕಳಕಳಿಯನ್ನು ಎತ್ತಿ ತೋರಿಸುವಂತದು. ಗಾಂಧಿ ಜಯಂತಿಯಂದು ಶಶಿಕಲಾವಿದರಿಂದ ನಾರಾಯಣರು ಮಾಡಿಸಿದ "ಗಾಂಧಿ ಸಾಹಿತ್ಯ-ಮನೆ ಮನೆಗೆ" ಮುಟ್ಟಿಸುವ ಕಾರ್ಯಕ್ರಮ ಮುಂದೆ ನಾವು ಕಂಡ ಈ ಬಗೆಯ ಬೃಹತ್ ಕಾರ್ಯಕ್ರಮಗಳ "ಮಿನಿ" ಎನ್ನಬಹುದು. ಚಾಮರಾಜಪೇಟೆಯ ಭಜನೆ ಮನೆಗಳವರನ್ನೆಲ್ಲ ಸೇರಿಸಿ ವೈಭವದಿಂದ ನಡೆಸಿದ "ಪುರಂಧರೋತ್ಸವ" ನಂತರ ನಾರಾಯಣರು ಯೋಜಿಸಿ ರೂಪಿಸಿದ ಹರಿಕಥೆ-ಗಮಕ ಇತರ ಬೃಹತ್ ಸಮ್ಮೇಳನಗಳ "ಮಿನಿ" ಕೂಡ. ಇವರ ಆಲೋಚನೆಗಳು ಯಾವಾಗಲೂ ರಾಜ್ಯ, ದೇಶ ಈ ಮಟ್ಟದ್ದು. ಭಾಷೆ-ಜನತೆ ಇವರಿಗೆ ಸಂಬಂಧಿಸಿದ್ದು.

ಇಂತಹ "ಯೋಜನಾ ಬ್ರಹ್ಮ"ರಿಗೆ ಯೋಜನೆಗಳನ್ನು ಕಾರ್ಯರೂಪದಲ್ಲಿ ಜನತೆಯ ಮುಂದಿಡಲು ದೊರೆತ ಸದವಕಾಶ ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದಾಗ. ಇವರು ಪರಿಷತ್ತಿನಲ್ಲಿ ಮಾಡಿದ ಎಲ್ಲ ಕೆಲಸವೂ ಶ್ಲಾಘ್ಯ. ಸುವರ್ಣಾಕ್ಷರದಲ್ಲಿ ಬರೆಯಬಹುದಾದ್ದು. ಶಶಿಕಲಾವಿದರಿಗೆ ಈ ಸಂದರ್ಭದಲ್ಲಿ ಉಂಟಾದ ಮಹದಾನಂದವೆಂದರೆ ನಮ್ಮ ಅಧ್ಯಕ್ಷರು ಇಡೀ ಕರ್ನಾಟಕದ ಜನತೆಗೆ ಅಚ್ಚು ಮೆಚ್ಚಿನ ಅಧ್ಯಕ್ಷರಾದದ್ದು. ಹೂವಿನೊಡನೆ ನಾರಿನಂತೆ ನಮ್ಮಲ್ಲೂ ಕೆಲವರಿಗೆ ಸೇವೆಗೆ ಅವಕಾಶ ಮಾಡಿಕೊಟ್ಟದ್ದಂತೂ ನಮ್ಮ ಪುಣ್ಯ. ನಾರಾಯಣರ ಅಧ್ಯಕ್ಷ ಅವಧಿಯಲ್ಲಿ ಎಲ್ಲರೂ ಮೆಚ್ಚಿದ ಅಂಶ, ಸಾಹಿತಿಗಳನ್ನೆಲ್ಲ ತಮ್ಮೊಡನೆ ಕನ್ನಡ ಸೇವೆಗೆ ತೊಡಗಿಸಿದ್ದು. ಆಗಲೇ ಅವರಲ್ಲಿದ್ದ "ಅಜಾತ ಶತೃ" ಗುಣ ಎದ್ದು ಕಾಣಿಸಿದ್ದು. ಪರಿಷತ್ತಿನ ಅಧಿಕಾರ ಬಿಟ್ಟುಕೊಟ್ಟಾಗಲೂ ಅವರ ಹಿರಿತನ ಮೆಚ್ಚುವಂತಹುದೇ.

ಪರಿಷತ್ತಿನ ಒಳಗಾಗಲಿ, ಹೊರಗಾಗಲಿ, ನಾರಾಯಣರು ಒಂದು ಸಂಸ್ಥೆ; ವ್ಯಕ್ತಿಯಲ್ಲ. ಅವರೊಡನೆ ಎಂದೂ ಅವರನ್ನು ಮೆಚ್ಚಿ ಆಶೀರ್ವಾದ ಮಾಡುತ್ತಿರುವ ಹಿರಿಯರ ಬಳಗ ಅವರೊಡನೆ ಸೇರಿ 'ನಿಮ್ಮ ಕೆಲಸಕ್ಕೆ ನಮ್ಮ ಸಂಪೂರ್ಣ ಬೆಂಬಲ' ಎನ್ನುವ ಸಮಕಾಲೀನರ ದೊಡ್ಡ ಗುಂಪು, "ನೀವು ಹೇಳಿ-ಮಾರ್ಗದರ್ಶನ ನೀಡಿ, ಯಾವ ಕೆಲಸವನ್ನಾದರೂ ನೀವು ಮತ್ತು ಜನತೆ ಮೆಚ್ಚುವಂತೆ ಮಾಡುತ್ತೇವೆ" ಎಂದು ಒಕ್ಕೊರಲಿನಿಂದ ಹೇಳುವ ಬೃಹತ್ ಕಾರ್ಯಕರ್ತರ ತಂಡ, ಈ ಎಲ್ಲರ ಸೌಭಾಗ್ಯ ನಾರಾಯಣರದು.

ನಾರಾಯಣರು 'ವಿನೋದ' ಪತ್ರಿಕೆಯ ಸಂಪಾದಕರು ಎಂಬುದು ಎಲ್ಲರಿಗೂ ಪರಿಚಯದ ವಿಷಯ. ಅದರಲ್ಲೂ

ಒಂದು ವೈಶಿಷ್ಟ್ಯ. ಇಲ್ಲಿಯವರೆಗೂ ಪ್ರಾರಂಭದಿಂದ ವಿನೋದದ ಒಂದು ಸಂಚಿಕೆಯೂ ತಪ್ಪಿಲ್ಲ. ಪ್ರತಿ ವರ್ಷದ ಸ್ವಾತಂತ್ರ್ಯೋತ್ಸವ ವಿಶೇಷ ಸಂಚಿಕೆಯೂ ತಪ್ಪದೆ ಬಂದಿದೆ. ಬಹಳ ಹಿಂದಿನ ಮಾತು. ಆರೋಗ್ಯ ಸರಿಯಿಲ್ಲದೆ ಆಸ್ಪತ್ರೆಯಲ್ಲಿದ್ದ ನಾರಾಯಣರು ಸಂಚಿಕೆಗೆ ಲೇಖನ ಆಯ್ಕೆಮಾಡಿ ಸಂಪಾದಕೀಯ ಬರೆದು ಕರಡು ತಿದ್ದಿ ಸಂಚಿಕೆ ಹೊರತಂದರಂತೆ. ಇದರ ಹಿಂದಿನ ಅವರ ಕರ್ತವ್ಯ ಪ್ರಜ್ಞೆ ನಮಗೆ ದಾರಿದೀಪ.

ಶಶಿಕಲಾವಿದರು ರಜತ ಮಹೋತ್ಸವ ಮುಗಿಸಿ ಸ್ವರ್ಣ ದತ್ತ ಮುನ್ನಡೆಯುತ್ತಿದ್ದಾರೆ ನಿಜ. ಬಹಳಷ್ಟನ್ನೇನೂ ಸಾಧಿಸಿಲ್ಲ. ಆದರೆ ಮಾಡಿರುವುದನ್ನು ಅಚ್ಚುಕಟ್ಟಾಗಿ ಮಾಡಿದ್ದೇವೆ. ಇದರ ಸಂಪೂರ್ಣ ಯಶಸ್ಸು ನಾರಾಯಣರದ್ದು. ಅವರ ಮಾರ್ಗದರ್ಶನ ನಮಗೆ ಎಂದೆಂದೂ ಇರಲಿ. ಅದೇ ನಮ್ಮೆಲ್ಲರ ಆಶಯ. ಬಿ. ಎಂ. ಶ್ರೀ ಪ್ರತಿಷ್ಠಾನ, ಬಿ. ಎಂ. ಶ್ರೀ ಜನ್ಮ ಶತಮಾನೋತ್ಸವ ಸಮಿತಿ, ಕರ್ನಾಟಕ ಗಮಕ ಕಲಾ ಪರಿಷತ್ತು, ಕರ್ನಾಟಕ ಲೇಖಕಿಯರ ಸಂಘ-ಮುಂತಾದ ಹಲವಾರು ಸಂಸ್ಥೆಗಳ ನಿಕಟ ಸಂಪರ್ಕ. ಕೈ ತುಂಬಾ ಕೆಲಸ, ರಾಜ್ಯಾದ್ಯಂತ ಓಡಾಟ - ನಾರಾಯಣರದು. ಎಲ್ಲರ ಮಿತ್ರರು, ಮಾರ್ಗದರ್ಶಿಗಳು, ಹಿತ ಚಿಂತಕರು —ನಮ್ಮ ಅಧ್ಯಕ್ಷರು.

ಮಹಾವ್ಯಕ್ತಿಗಳು, ಸಾಧಿಸಿದ ಎತ್ತರಗಳೆಲ್ಲವೂ ಒಂದೆ ನೆಗೆತಕ್ಕೆ ಸಾಧ್ಯವಾದವುಗಳಲ್ಲ; ಒಡನಾಡಿಗಳು ಮಲಗಿ ನಿದ್ರಿಸುತಿದ್ದಾಗ ಅವರು ದುಡಿದು ಪಡೆದಂತಹವು.

—ಹೆಚ್. ಡಬ್ಲ್ಯೂ. ಲಾಂಗ್ ಫೆಲೋ

ಅಂಶ ಮಾತ್ರವಾದ ಸತ್ಯವು ಒಮ್ಮೊಮ್ಮೆ ಸುಳ್ಳಿಗಿಂತಲೂ ಹೆಚ್ಚು ಅಪಾಯಕಾರಕ. ಹಿಂದಿನ ಸತ್ಯವು ಇಂದಿನ ವಾಸ್ತವಿಕತೆಯ ಬಗೆಗೆ ನಮ್ಮನ್ನು ಒಮ್ಮೊಮ್ಮೆ ಅಂಧರನ್ನಾಗಿ ಮಾಡುತ್ತದೆ.

—ನೆಹರು

ಗಮಕ ಕಲೆಯ ಕಟ್ಟಭಿಮಾನಿ

ಎಂ. ರಾಘವೇಂದ್ರರಾವ್

ಕನ್ನಡ ಸಾಹಿತ್ಯ ಪರಿಷತ್ತಿನ ಸಾಮಾನ್ಯ ಸದಸ್ಯರಲ್ಲೊಬ್ಬನಾಗಿ ನಾನು, ಕನ್ನಡಮ್ಮನ ದೇಗುಲದಲ್ಲಿ ಒಬ್ಬ ಗಮಕ ಕಲೆಯ ಸೇವಕನಾಗಿ, ಪೂಜ್ಯರಾದ ಸರ್ವಶ್ರೀ ಬಿ. ಎಂ. ಶ್ರೀ, ಡಿ. ವಿ. ಜಿ., ತಿ. ತಾ. ಶರ್ಮ, ಮಾಸ್ತಿ, ಚನ್ನಪ್ಪ ಉತ್ತಂಗಿ, ಎಂ. ಆರ್. ಶ್ರೀ. ಮುಂತಾದ ಮಹನೀಯರು ಗಮಕ ಕಲೆಯ ಶಿಕ್ಷಣ ಮತ್ತು ಪ್ರಚಾರಕ್ಕೆ ನೀಡುತ್ತಾ ಬಂದ ಪ್ರೋತ್ಸಾಹ ಮತ್ತು ಗಮಕ ಕಲೆಯ ಬೆಳವಣಿಗೆಗೆ ಕೈಕೊಂಡ ಕಾರ್ಯಕ್ರಮಗಳನ್ನು ಗುರುತಿಸುತ್ತಾ ಬಂದಿದ್ದೇನೆ. ಅಷ್ಟೇ ಅಲ್ಲದೆ, ಅವರೆಲ್ಲರೂ ಗಮಕ ಕಲೆಯ ವಿಚಾರದಲ್ಲಿ ತೋರಿದ ಒಲವಿನ ಪರಿಣಾಮದಿಂದಲೇ ಈ ಕಲೆ ಮತ್ತು ಕಲಾವಿದರು ನಮ್ಮ ನಾಡಿನಲ್ಲಿ ನಮ್ಮ ಸಮಾಜದಲ್ಲಿ ಸಾಹಿತ್ಯ ಕ್ಷೇತ್ರದಲ್ಲಿ ಒಂದು ಮಾನ್ಯತೆಯನ್ನು ಪಡೆಯಲು ಹೇಗೆ ಅವಕಾಶವಾಯಿತೆಂಬುದನ್ನೂ ಚೆನ್ನಾಗಿ ಮನಗಂಡಿದ್ದೇನೆ.

ಆದರೆ, ಇಷ್ಟು ಮಾತ್ರದಿಂದಲೇ ಗಮಕ ಕಲೆಯು ಸರ್ವತೋಮುಖವಾಗಿ ಬೆಳೆಯಲು ಹೇಗೆ ಸಾಧ್ಯವಾದೀತೆಂಬ ಶಂಕೆಯು ತಲೆದೋರಿ, ಎಷ್ಟೋ ವೇಳೆ ನಾನು ಇದಕ್ಕೆ ಸ್ವಲ್ಪ ತಲೆಕೆಡಿಸಿಕೊಂಡುದೂ ಉಂಟು. ಅಂತೆಯೇ ಸ್ವಲ್ಪ ಯೋಚಿಸಿ, “ಹಿಂದೆ ಬಿದ್ದಿರುವ ಈ ಪುರಾತನ ಕಲೆಗೆ ಇಂದು ಅಷ್ಟಿಷ್ಟಾದರೂ ಪ್ರೋತ್ಸಾಹ ಸಿಕ್ಕುತ್ತಿದೆಯಲ್ಲಾ” ಎಂದು ಸಮಾಧಾನವನ್ನು ಕಂಡುಕೊಂಡದ್ದೂ ಉಂಟು.

ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ನನಗೆ ಶ್ರೀ ಜಿ. ನಾರಾಯಣ ಅವರ ಪರಿಚಯವಾಯಿತು. ಅವರು ಪರಿಷತ್ತಿನ ಅಧ್ಯಕ್ಷರಾದರು. ಅವರನ್ನು ಸ್ವಾಗತಿಸುವ ಒಂದು ಸಣ್ಣ ಸಮಾರಂಭ ಪರಿಷತ್ತಿನಲ್ಲಿ ನಡೆಯಿತು. ದೊಡ್ಡವರು ಮಾತನಾಡಿದರು. ಅಲ್ಲಿ ನನ್ನ ಮಿತ್ರರು ‘ನೀವೂ ಮಾತನಾಡಿ’ ಎಂದರು. ನಾನೂ ಮಾತನಾಡಿದೆ. ನನ್ನ ವಿಚಾರ ಸರಣಿ ಹೀಗಿತ್ತು : “ನಾನೊಬ್ಬ ಗಮಕಿ, ಗಮಕ ಪಕ್ಷಪಾತಿ, ಗಮಕಕ್ಕೆ ಪರಿಷತ್ತಿನಲ್ಲಿ ಒಂದು ಸ್ವಲ್ಪ ಸ್ಥಳವಿದೆ. ಇದು ಇವರ ಕಾಲದಲ್ಲಿ ಏಕೆ ವಿಸ್ತಾರಗೊಳ್ಳಬಾರದು ? ಇವರು ಹೆಸರು ಜಿ. ನಾರಾಯಣ, ನಮ್ಮ ಕಲೆಗೆ ಗದುಗಿನ ನಾರಾಯಣನೇ ಅಧಿದೇವತೆ ! ಆದುದರಿಂದ ‘ಜಿ’ ಎಂದರೆ ‘ಗದಗು’ ಎಂದೇ ವ್ಯಾಖ್ಯಾನ ಮಾಡಿ, ಇವರ ಕಾಲದಲ್ಲಿ ಪರಿಷತ್ತಿನಲ್ಲಿ ಗಮಕ ಕಲೆಗೆ ಹೆಚ್ಚಾಗಿ

ಇವರು ಪರಿಷತ್ತಿಗೆ ಅಧ್ಯಕ್ಷರಾಗಿ ಬರುತ್ತಿದ್ದಂತೆಯೆ ಪರಿಷತ್ತಿನ ಕೆಲಸ ಕಾರ್ಯಯಗಳು ಒಂದು ನಿರ್ದಿಷ್ಟ ಮಾರ್ಗದಲ್ಲಿ, ಗುರಿಯಲ್ಲಿ ಸಾಗತೊಡಗಿದವು. ಅವುಗಳಿಗೆ ಒಂದು ಕಾಯ ಕಲ್ಪವೇ ಬಂದಿತು ; ತ್ರೈಮಾಸಿಕ ಯೋಜನೆ ಮೊದಲಾಗಿ ಕನ್ನಡ ಸಾಹಿತ್ಯದ ಸರ್ವಾಂಗೀಣ ಪ್ರಗತಿಗೆ ಯೋಜನೆಗಳೇ ಸಿದ್ಧವಾದವು.

ಪ್ರೋತ್ಸಾಹ ದೊರೆಯಲೆಂದು ಆಶಿಸುತ್ತೇನೆ” ಎಂದು ಹೇಳಿ ಕಾಫಿ ತಿಂಡಿಯನ್ನು ಗಿಟ್ಟಿಸಿದೆ. ಈ ದೃಶ್ಯ ಇತರರು ಮರೆತಿರಬಹುದಾದರೂ, ನನಗಂತೂ ಇಂದಿಗೂ ಕಣ್ಣಿಗೆ ಕಟ್ಟಿದೆ.

ಇವರು ಪರಿಷತ್ತಿಗೆ ಅಧ್ಯಕ್ಷರಾಗಿ ಬರುತ್ತಿದ್ದಂತೆಯೆ ಪರಿಷತ್ತಿನ ಕೆಲಸ ಕಾರ್ಯಗಳು ನಿರ್ದಿಷ್ಟ ಮಾರ್ಗದಲ್ಲಿ, ಗುರಿಯಲ್ಲಿ ಸಾಗತೊಡಗಿದವು. ಅವುಗಳಿಗೆ ಒಂದು ಕಾಯಕಲ್ಪವೇ ಬಂದಿತು! ತ್ರೈವಾರ್ಷಿಕ ಯೋಜನೆ, ಪಂಚವಾರ್ಷಿಕ ಯೋಜನೆ, ಹೀಗೆ ಕನ್ನಡ ಸಾಹಿತ್ಯದ ಸರ್ವಾಂಗೀಣ ಪ್ರಗತಿಗೆ ಯೋಜನೆಗಳೇ ಸಿದ್ಧವಾದವು. ಆ ಯೋಜನೆಗಳು ಕೇವಲ ಕಾಗದದ ಮೇಲೆ ಜಡವಾಗಿ ನಿಲ್ಲಲಿಲ್ಲ ; ಕಾರ್ಯಗತವಾಗತೊಡಗಿದವು.

ಶ್ರೀ ಜಿ. ನಾರಾಯಣ ಅವರು ಪರಿಷತ್ತಿನ ಅಧ್ಯಕ್ಷ ಸ್ಥಾನವನ್ನು ಬಿಟ್ಟುಕೊಟ್ಟರು. ತಾತ್ಕಾಲಿಕವಾಗಿ ಬಿಡಬೇಕಾಯಿತು. ಇಷ್ಟಾದರೂ, ನಾನು ಅವರನ್ನು ಬಿಡಲಿಲ್ಲ. ಕರ್ನಾಟಕ ಗಮಕ ಕಲಾ ಪರಿಷತ್ತು ಸ್ಥಾಪನೆ ಆಯಿತು. ಶ್ರೀ ಜಿ. ನಾರಾಯಣ ಅವರು ಅದರ ಅಧ್ಯಕ್ಷರಾದರು. ಗಮಕಕ್ಕೂ ಒಂದು ಯೋಜನೆ ಸಿದ್ಧವಾಯಿತು. ಅವರ ಮಾರ್ಗದರ್ಶನದಲ್ಲಿ ಗಮಕ ಕಲಾ ಪರಿಷತ್ತು ಕಳೆದ ಎರಡು ವರ್ಷಗಳಿಂದಲೂ ಯೋಜನಾಬದ್ಧವಾಗಿ ಕೆಲಸ ಮಾಡುತ್ತಿದೆ. ನಾನು ಮೊದಲು ಅಂದುಕೊಂಡಂತೆ, (ವ್ಯಾಖ್ಯಾನ ಮಾಡಿದಂತೆ) ಶ್ರೀ ಜಿ. ನಾರಾಯಣ ಅವರು ಗಮಕ ಕಲೆಯ ಕಟ್ಟಭಿಮಾನಿಗಳಾಗಿ ಗಮಕ ಲೋಕಕ್ಕೇ ಇಂದು ಪ್ರಿಯರಾಗಿದ್ದಾರೆ.

ಜಗತ್ತಿನ ಎಲ್ಲ ಧರ್ಮಗಳು ಅನೇಕ ಅಂಶಗಳಲ್ಲಿ ಭಿನ್ನವಾಗಿದ್ದರೂ, ಸತ್ಯವೊಂದನ್ನು ಬಿಟ್ಟು ಇನ್ನಾವುದೂ ಜಗತ್ತಿನಲ್ಲಿ ಇಲ್ಲ ಎಂಬ ಮಾತನ್ನು ಒಂದಾಗಿ ಸಾರುತ್ತವೆ.

—ಗಾಂಧಿ

ಸತ್ಯವು ಎಷ್ಟೇ ಸುಳ್ಳುಗಳಿಂತಲೂ ಶ್ರೇಷ್ಠವಾದುದಲ್ಲವೆ ? ಮಾಡಿದ ತಪ್ಪನ್ನೇ ನಾನು ಪುನಃ ಮಾಡಿದ ಮಾತ್ರಕ್ಕೆ ಆ ತಪ್ಪೇ ನೆಲೆಯೂರಬೇಕೆ ?

—ಟಾಗೂರ್

ಜಿ. ನಾರಾಯಣ-
ಕರ್ನಾಟಕ ಲೇಖಕಿಯರ ಸಂಘ

ಗೀತಾ ದೇಸಾಯಿ

"ಉದಾರ ಚರಿತಾನಾಂ ತು ವಸುಧೈವ ಕುಟುಂಬಕಮ್''

—ಸುಭಾಷಿತ.

ಕರ್ನಾಟಕ ಲೇಖಕಿಯರ ಸಂಘವು ಐದು ವಾರ್ಷಿಕೋತ್ಸವಗಳನ್ನಾಚರಿಸಿ ಆರನೆಯ ವರ್ಷದಲ್ಲಿ ಕಾಲಿರಿಸಿದೆ. ಲೇಖಕಿಯರ ಸಂಘದ ಹುಟ್ಟು, ಬೆಳವಣಿಗೆ ಹಾಗೂ ಅದರ ಯಶಸ್ವಿ ಮುನ್ನಡೆಯಲ್ಲಿ ಶ್ರೀ ಜಿ. ನಾರಾಯಣ ಅವರ ಪಾತ್ರ ಹಿರಿದಾದುದು.

ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಎಷ್ಟೋ ವರ್ಷಗಳಿಂದ ಹೆಸರಿಗೆ ಮಾತ್ರ ಇದ್ದ ಮಹಿಳಾ ಶಾಖೆಯನ್ನು ಜಿ. ನಾರಾಯಣ ಅವರು ಪರಿಷತ್ತಿನ ಅಧ್ಯಕ್ಷರಾದೊಡನೆ ಪುನಶ್ಚೇತನಗೊಳಿಸಿ ಅದಕ್ಕೊಂದು ವ್ಯವಸ್ಥಿತ ರೂಪ ಕೊಟ್ಟರು. ಪುಸ್ತಕ ಮಾರಾಟಕ್ಕಾಗಿ ಲೇಖಕಿಯರ ಪಾದಯಾತ್ರೆಯ ಕಾರ್ಯಕ್ರಮವನ್ನೇರ್ಪಡಿಸಿ ಬೆಂಗಳೂರು ಹಾಗು ಸುತ್ತಮುತ್ತಲಿನ ವಾರುಳಿಳಲ್ಲಿದ್ದ ಲೇಖಕಿಯರನ್ನು ಒಂದುಗೂಡಿಸಿದ ಶ್ರೇಯಸ್ಸು ಶ್ರೀ ನಾರಾಯಣ ಅವರಿಗೇ ಸಲ್ಲುತ್ತದೆ. 1975ರಲ್ಲಿ ಅಂತರ್‌ರಾಷ್ಟ್ರೀಯ ಮಹಿಳಾ ವರ್ಷದ ಸಂದರ್ಭದಲ್ಲಿ ಕರ್ನಾಟಕದ ವಿವಿಧ ಭಾಗಗಳಿಂದ ಹಿರಿ-ಕಿರಿಯ ಲೇಖಕಿಯರನ್ನು ಆಹ್ವಾನಿಸಿ, ನಾಡಿನ ಮೂಲೆ-ಮೂಲೆಯಲ್ಲಿರುವ ಲೇಖಕಿಯರು ಒಂದೆಡೆ ಸೇರಿ ಪರಸ್ಪರ ಪರಿಚಯ, ವಿಚಾರ ವಿನಿಮಯಮಾಡಲು ಅವಕಾಶ ಕಲ್ಪಿಸಿಕೊಟ್ಟವರು ಶ್ರೀ ನಾರಾಯಣ ಅವರೇ. ಅಷ್ಟೇ ಅಲ್ಲ, ಶ್ರೀಮತಿ ಎಂ. ಕೆ. ಇಂದಿರಾ, ಸುನಂದಮ್ಮನವರಂಥ ಹಿರಿಯ ಲೇಖಕಿಯರನ್ನು ಹಳ್ಳಿ-ಹಳ್ಳಿಗಳಿಗೆ ಭಾಷಣಕ್ಕಾಗಿ ಕರೆದೊಯ್ದು ಗ್ರಾಮಾಂತರ ಪ್ರದೇಶಗಳಲ್ಲಿ ಸಾಹಿತ್ಯ ಸರಸ್ವತಿಯ ಸಂದೇಶವನ್ನು ಬೀರಲು ನೆರವಾದರು.

ಇದೇ ವರ್ಷದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಮಹಿಳೆಯರಿಗೆ ಸಂಬಂಧಪಟ್ಟ ಶೈಕ್ಷಣಿಕ, ಸಾಮಾಜಿಕ, ರಾಜಕೀಯ ಮುಂತಾದ ವಿಷಯಗಳನ್ನು ಕುರಿತ ಪುಸ್ತಕ ಬರೆಯಲು ಒಂದು ಸ್ಪರ್ಧೆಯನ್ನೇರ್ಪಡಿಸಿತು. ಈ ಸ್ಪರ್ಧೆ ಅನೇಕ ಪ್ರಜ್ಞಾವಂತ ಮಹಿಳೆಯರನ್ನು ಬರವಣಿಗೆಗೆ ಪ್ರೇರೇಪಿಸಿತು. ಸ್ಪರ್ಧೆಯಲ್ಲಿ ವಿಜಯಿಗಳಾದ ಲೇಖಕಿಯರ ಸುಮಾರು 27 ಪುಸ್ತಕಗಳನ್ನು ಕ.ಸಾ. ಪರಿಷತ್ತು ಪ್ರಕಟಿಸಿತು. ಮಹಿಳೆ ಮತ್ತು ಶಿಕ್ಷಣ, ರಾಜಕಾರಣದಲ್ಲಿ

ಸಂಘಟನಾಚತುರರಾದ ಶ್ರೀ ನಾರಾಯಣ ಅವರು ಕಾರ್ಯೋನ್ಮುಖರಾಗಿ ಹನುಮಂತನಗರದ ತಮ್ಮ ಮನೆಯಲ್ಲಿ ಸುಮಾರು ೨೫-೩೦ ಜನ ಸಾಹಿತ್ಯಾಸಕ್ತರಲ್ಲಿ ವಿವರಿಸಿದರು. ಈ ವಿಚಾರ ವಿನಿಮಯದ ಫಲವಾಗಿ ಜನವರಿ ೨೬, ೧೯೭೩ ರಂದು ಕರ್ನಾಟಕ ಲೇಖಕಿಯರ ಸಂಘ ಜನ್ಮ ತಳೆಯಿತು.

ಮಹಿಳೆಯರು, ಮಹಿಳೆ ಮತ್ತು ವಿವಾಹ ಇತ್ಯಾದಿ ವಿಚಾರ ಪ್ರಚೋದಕವಾದ ವಿಷಯಗಳನ್ನು ಈ ಪುಸ್ತಕಗಳು ಒಳಗೊಂಡಿವೆ. ಇವುಗಳಲ್ಲದೆ ಅಧ್ಯಕ್ಷ ಶ್ರೀ ಜಿ. ನಾರಾಯಣ ಅವರ ಸಲಹೆಯ ಮೇರೆಗೆ ಪ್ರಸಿದ್ಧ ಲೇಖಕಿಯರಿಂದ ಲಲಿತಸಾಹಿತ್ಯ, ಕಾವ್ಯ, ನಾಟಕ ಮುಂತಾದ ವಿಷಯಗಳ ಬಗ್ಗೆ ವಿಮರ್ಶಾತ್ಮಕ ಲೇಖನಗಳನ್ನು ಬರೆಯಿಸಿ ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿತು. ಈ ರೀತಿ ಶ್ರೀ ನಾರಾಯಣ ಅವರು ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಕಥೆ-ಕಾದಂಬರಿಗಳಿಗೆ ಮಾತ್ರ ಮೀಸಲಾಗಿದ್ದ ಮಹಿಳೆಯರ ಲೇಖನಿ ಅವರ ಪ್ರೇರಣೆ-ಪ್ರೋತ್ಸಾಹಗಳಿಂದ ವೈಚಾರಿಕ ನೆಲೆಯಲ್ಲಿ ಸಾಹಿತ್ಯ ಸೃಷ್ಟಿಸುವಂತಾದುದು ಸ್ತ್ರೀ ಸಾಹಿತ್ಯದಲ್ಲಿ ಒಂದು ಮಹತ್ವದ ಮೈಲಿಗಲ್ಲು ಎಂದರೆ ಅತಿಶಯೋಕ್ತಿಯಾಗಲಾರದು.

ಅಂತರರಾಷ್ಟ್ರೀಯ ಮಹಿಳಾ ವರ್ಷದಲ್ಲಿ ಜರುಗಿದ ಸಭೆ-ಸಮ್ಮೇಳನಗಳಲ್ಲಿ ಲೇಖಕಿಯರು ಕಾಲ-ಕಾಲಕ್ಕೆ ಒಂದೆಡೆ ಸೇರುವ ಸಂದರ್ಭಗಳು ಒದಗಿದ್ದುವು. ಹೀಗೆ ಹಂಗಾಮಿಯಾಗಿ ಸೇರುವ ಬದಲು ಅಖಿಲ ಕರ್ನಾಟಕ ವ್ಯಾಪ್ತಿಯ ಒಂದು ಖಾಯಂ ಸ್ವರೂಪದ ಸಂಸ್ಥೆಯನ್ನು ಸ್ಥಾಪಿಸಬಾರದೇಕೆ ಎಂಬ ಯೋಚನೆ ಅನೇಕ ಸಾಹಿತ್ಯಾಭಿಮಾನಿಗಳ ಮನದಲ್ಲಿ ಮೂಡಿತು. ಈ ವಿಚಾರ ಬರುವದೇ ತಡ, ಸಂಘಟನಾಚತುರರಾದ ಶ್ರೀ ನಾರಾಯಣ ಅವರು ಕಾರ್ಯೋನ್ಮುಖರಾಗಿ ಹನುಮಂತನಗರದ ತಮ್ಮ ಮನೆಯಲ್ಲಿ ಸುಮಾರು ೨೫-೩೦ ಜನ ಸಾಹಿತ್ಯಾಸಕ್ತರನ್ನು ಬರಮಾಡಿಕೊಂಡು ಕರ್ನಾಟಕ ಲೇಖಕಿಯರ ಸಂಘದ ರೂಪ-ರೇಖೆಗಳನ್ನು ವಿವರಿಸಿದರು. ಈ ವಿಚಾರ ವಿನಿಮಯದ ಫಲವಾಗಿ ಜನವರಿ ೨೭, ೧೯೭೯ರಂದು ಕರ್ನಾಟಕ ಲೇಖಕಿಯರ ಸಂಘ ಜನ್ಮ ತಳೆಯಿತು.

ಕನ್ನಡ ಭಾಷೆ, ಸಾಹಿತ್ಯ, ಕಲೆ, ಸಂಸ್ಕೃತಿಗಳ ರಕ್ಷಣೆ ಮತ್ತು ಅಭಿವೃದ್ಧಿ ಕಾರ್ಯದಲ್ಲಿ ಮಹಿಳೆಯರಿಗೆ ಹೆಚ್ಚಿನ ಅವಕಾಶ ಹಾಗೂ ಪ್ರೋತ್ಸಾಹಗಳನ್ನು ಒದಗಿಸಿಕೊಡುವುದು, ಮಹಿಳೆಯರ ಕೃತಿಗಳ ಪ್ರಕಟಣೆ ಹಾಗೂ ವಿತರಣೆಯ ಕಾರ್ಯ ಕೈಕೊಳ್ಳುವದು, ನಿಯತಕಾಲಿಕೆಯೊಂದನ್ನು ಪ್ರಕಟಿಸುವದು-ಇವೇ ಮುಂತಾದ ಉದ್ದೇಶಗಳನ್ನಿಟ್ಟುಕೊಂಡು ಅಸ್ತಿತ್ವಕ್ಕೆ ಬಂದ ಕರ್ನಾಟಕ ಲೇಖಕಿಯರ ಸಂಘದ ಪ್ರಥಮ ಅಧ್ಯಕ್ಷೆಯಾಗಿ ಶ್ರೀಮತಿ ಟಿ. ಸುನಂದಮ್ಮನವರೂ, ಕಾರ್ಯದರ್ಶಿಗಳಾಗಿ ಎಚ್. ಎಸ್. ಪಾರ್ವತಿ ಹಾಗೂ ನಿರುಪಮಾ ಮತ್ತು ಖಜಾಂಚಿಗಳಾಗಿ ನಾಗಮಣಿ ಎಸ್. ರಾವ್ ಅವರೂ ನಿಯುಕ್ತರಾಗಿ ಸಂಘಕ್ಕೆ ಭದ್ರ ಬುನಾದಿ ಹಾಕಿದರು. ಸಂಸ್ಥೆಗೆ ಅಗತ್ಯವಾದ ಅಂಗರಚನೆ ಸಿದ್ಧವಾಗಿ ದಿ. ೧೫-೪-೭೯ರಂದು ಸೇರಿದ್ದ ಸಂಘದ ಸರ್ವಸದಸ್ಯರ ಸಭೆಯಲ್ಲಿ ಸರ್ವಾನುಮತದಿಂದ ಸ್ವೀಕೃತವಾಯಿತು.

ನಮ್ಮ ಸಂಘದ ಧ್ಯೇಯೋದ್ದೇಶಗಳಿಗನುಗುಣವಾಗಿ ಕಳೆದ ಐದು ವರ್ಷಗಳ ಅವಧಿಯಲ್ಲಿ ಲೇಖಕಿಯರ ಸಂಘವು ಅನೇಕ ವಿಚಾರ ಸಂಕಿರಣಗಳು, ಸಾಹಿತ್ಯ ಗೋಷ್ಠಿ-ಕವಿಗೋಷ್ಠಿ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನೇರ್ಪಡಿಸುತ್ತಾ ಬಂದಿದೆಯಲ್ಲದೆ ಪ್ರತಿ ವರ್ಷ ವಾರ್ಷಿಕೋತ್ಸವದ ಸಮಾರಂಭದಲ್ಲಿ ಗಣ್ಯ ಲೇಖಕಿಯೊಬ್ಬರನ್ನು ಸನ್ಮಾನಿಸುವ ಸತ್‌ಸಂಪ್ರದಾಯವನ್ನು ಇಟ್ಟುಕೊಂಡಿದೆ. ಸಂಘದ ಪ್ರಕಟಣೆಗಳಾಗಿ ಅರಳುವ ಮೊಗ್ಗು, ಕಥಾಲೋಕ, ಕಥಾಸೌರಭ, ಕವನಸೌರಭ, ಅಜ್ಞಾನ ಕವಯಿತ್ರಿಯರು—ಹೀಗೆ ಇದುವರೆಗೂ ಐದು ಪುಸ್ತಕಗಳು ಬೆಳಕು ಕಂಡಿವೆ. ಲೇಖಕಿಯರ ಸಂಘವು ಅಖಿಲ ಕರ್ನಾಟಕ ವ್ಯಾಪ್ತಿಯ ಸಂಸ್ಥೆಯಾದುದರಿಂದ ಅದರ ಕಾರ್ಯಕ್ರಮಗಳನ್ನು ಬೆಂಗಳೂರು ನಗರಕ್ಕಷ್ಟೇ ಸೀಮಿತಗೊಳಿಸದೆ ಹರಿಹರ, ಚಿತ್ರದುರ್ಗ, ಬೆಳಗಾವಿ, ರಾಣೆಬೆನ್ನೂರು, ಗುಡಿಬಂಡೆ-ಹೀಗೆ ನಾಡಿನ ವಿವಿಧ ಭಾಗಗಳಲ್ಲಿ ಸಾಹಿತ್ಯಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನೇರ್ಪಡಿಸಿ ಅಲ್ಲಿನ ಮಹಿಳೆಯರಲ್ಲಿ ವಿಚಾರ ಜಾಗೃತಿಯನ್ನುಂಟುಮಾಡಲು ಸಂಘವು ಶ್ರಮಿಸಿದೆ. ಈ ಎಲ್ಲ ಕಾರ್ಯಕ್ರಮಗಳನ್ನು ಯೋಜಿಸುವಲ್ಲಿ ಹೆಜ್ಜೆ-ಹೆಜ್ಜೆಗೂ ನಾವು ಶ್ರೀ ನಾರಾಯಣ ಅವರ ಅಮೂಲ್ಯ ಸಲಹೆ-ಸಹಕಾರಗಳನ್ನು ಪಡೆದಿರುವುದನ್ನು ಕೃತಜ್ಞತೆಯಿಂದ ಸ್ಮರಿಸಬಹುದು. ಅವರ ಉತ್ತೇಜನ-ಮಾರ್ಗದರ್ಶನಗಳಿಲ್ಲದಿದ್ದರೆ ಲೇಖಕಿಯರ ಸಂಘವು ಇಷ್ಟು ವ್ಯಾಪಕವಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವದು ಸಾಧ್ಯವಾಗುತ್ತಿರಲಿಲ್ಲೆಂಬುದು ನಿರ್ವಿವಾದ.

ನಮ್ಮ ಸಂಘಕ್ಕೆ ಸ್ವಂತ ಕಟ್ಟಡ ಹೋಗಲಿ, ಬಾಡಿಗೆ ಕಟ್ಟಡವೂ ಇಲ್ಲ! ಆದರೂ ನಮಗೆ ಅದರ ಕೊರತೆ

ಭಾಸವಾಗದಂತೆ ಶ್ರೀ ನಾರಾಯಣ ಅವರು ತಮ್ಮ ಸ್ವತಂತ್ರ ಮುದ್ರಣಾಲಯದ ಒಂದು ಭಾಗದಲ್ಲಿಯೇ ನಮ್ಮ ಕಾರ್ಯ ಚಟುವಟಿಕೆಗಳನ್ನು ಸಮಾಲೋಚಿಸಲು ಸ್ಥಳಾವಕಾಶ ಮಾಡಿಕೊಟ್ಟಿದ್ದಾರೆ. ಅರಬನ ಒಂಟೆಯ ಲೆಕ್ಕದಂತೆ ನಾವು ಅವರ ಪ್ರೆಸ್ಸಿನ ಜಾಗವಷ್ಟೇ ಅಲ್ಲದೆ ಅವರದೇ ಒಂದು ಬೀರುವನ್ನು ಸಹ ಸಂಘದ ಕಾಗದ ಪತ್ರಗಳನ್ನಿಡಲು ಉಪಯೋಗಿಸುತ್ತಿದ್ದೇವೆ!

ಲೇಖಕಿಯರಿಗಾಗಿಯೇ ಪ್ರತ್ಯೇಕವಾದ ಸಂಸ್ಥೆಯ ಸ್ಥಾಪನೆಗೆ ವಿರೋಧಿಸುತ್ತಿದ್ದ ಡಾ. ಅನುಪಮ ನಿರಂಜನ ಚಿ. ನ. ಮಂಗಳಾ ಅವರಂಥ ಪ್ರಜ್ಞಾವಂತ ಲೇಖಕಿಯರು ಇದೀಗ ಇಂಥದೊಂದು ಸಂಘಟನೆಯ ಮಹತ್ವವನ್ನು ಮನಗಂಡಿರುವದು ಶುಭ ಸಂಕೇತ.

ಸಾಹಿತ್ಯ ಸಮ್ಮೇಳನಗಳಲ್ಲಿ, ಅಕೆಡಮಿಗಳಲ್ಲಿ ಮಹಿಳಾ ಸಾಹಿತಿಗಳಿಗೆ ಯೋಗ್ಯ ಪ್ರಾತಿನಿಧ್ಯ ದೊರಕುವಂತೆ ಹೋರಾಡಲು ಕರ್ನಾಟಕ ಲೇಖಕಿಯರ ಸಂಘ ಒಂದು ಉತ್ತಮವಾದ ವೇದಿಕೆಯನ್ನೊದಗಿಸುವದರಿಂದ ಈ ಸಂಸ್ಥೆಯ ಬೆನ್ನು ತಟ್ಟಿ, ಪ್ರೋತ್ಸಾಹಿಸಿ ಬೆಳೆಸುವದವಶ್ಯ. ಸುದೈವದಿಂದ ಶ್ರೀ ಜಿ. ನಾರಾಯಣ ಅವರಂಥ ಹಿರಿಯರ ಮಾರ್ಗದರ್ಶನ ಈ ಸಂಸ್ಥೆಗೆ ಲಭಿಸಿದೆ. ಅವರ ಧೈರ್ಯದ ನುಡಿಗಳಿಂದಲೇ ಸಂಘವು ಕಳೆದ ಐದು ವರ್ಷಗಳಲ್ಲಿ ಅನೇಕ ಅಡೆ-ತಡೆಗಳನ್ನು ಎದುರಿಸಿ, ಬಾಲಗ್ರಹದ ಪೀಡೆಯನ್ನು ನಿವಾರಿಸಿಕೊಂಡು ಪ್ರಗತಿ ಪಥದತ್ತ ಮುನ್ನಡೆಯುತ್ತಿದೆ. ಇನ್ನು ಮುಂದೆಯೂ ಕರ್ನಾಟಕ ಲೇಖಕಿಯರ ಸಂಘ ಒಂದು ಪ್ರಭಾವಶಾಲಿ ಸಂಘಟನೆಯಾಗಿ ರೂಪುಗೊಳ್ಳಲು ಶ್ರೀ ಜಿ. ನಾರಾಯಣ ಅವರ ನಿರಂತರ ಪ್ರೋತ್ಸಾಹ ದೊರಕಲಿ ಎಂದು ಹಾರೈಸುತ್ತೇನೆ.

ಕೆಲಕಾಲ ಎಲ್ಲರನ್ನೂ ಮೋಸಗೊಳಿಸಬಹುದು. ಎಲ್ಲ ಕಾಲದಲ್ಲೂ ಕೆಲವರನ್ನು ಮೋಸಗೊಳಿಸಬಹುದು. ಆದರೆ ಎಲ್ಲ ಕಾಲದಲ್ಲಿ ಎಲ್ಲರನ್ನೂ ನೀವು ಮೋಸಗೊಳಿಸಲಾರಿರಿ.

—ಅಬ್ರಹಾಂ ಲಿಂಕನ್

ದಿವ್ಯ ತತ್ವಜ್ಞಾನವದೆಷ್ಟು ಚೇತೋಹಾರಿ ! ಅದು ಮುಂದಮತಿ ಮೂರ್ಖರೆಣಿಸುವಂತೆ ಜಟಿಲ, ಕರ್ಕಶವಾಗಿರದೆ ಅಪೊಲೋನ ವೇಣುಸದೃಶವಾಗಿ ಕರ್ಣಮಧುರವಾಗಿರುತ್ತದೆ.

—ಜಾನ್ ಮಿಲ್ಟನ್

ಕಾರ್ಯಕರ್ತನ ಸಾಹಿತ್ಯ ಸಂಪತ್ತು

ಎನ್. ಎಸ್. ರಾಮಸ್ವಾಮಿ ಅಯ್ಯರ್

ಸಮಾಜ ಪ್ರಜ್ಞೆಯಿಂದ ಸಾಮಾಜಿಕ ಸಮಸ್ಯೆಗಳನ್ನು ವಸ್ತುವನ್ನಾಗಿಟ್ಟುಕೊಂಡು ರಚಿಸಿದ ಅವರ ಹಾಡುಗಳು ಅವುಗಳ ಗುರಿಸಾಧನೆಯನ್ನು ಯಶಸ್ವಿಯಾಗಿ ಸಾಧಿಸಿದವಲ್ಲದೆ, ಜನರಲ್ಲಿ ಕಾಲಪ್ರಜ್ಞೆಯನ್ನು ಉಂಟುಮಾಡಿದವೆಂದು ಹೇಳುವುದರಲ್ಲಿ ಸಂಶಯವಿಲ್ಲ.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಶ್ರೀ ಜಿ. ನಾರಾಯಣ ಅವರು ಹೆಚ್ಚು ಕಡಮೆ ಏಳು ವರ್ಷಗಳ ಕಾಲ ಕನ್ನಡ ಸಾಹಿತ್ಯದ ಅಭಿವೃದ್ಧಿಗಾಗಿ ಅಹರ್ನಿಶಿ ದುಡಿದರು. ಕನ್ನಡ ಭಾಷೆ ಸಾಹಿತ್ಯಗಳ ಪ್ರಸಾರವನ್ನು ನಾಡಿನಾದ್ಯಂತ ನಡೆಸಿದರು. ಅವರ ಸಾಹಿತ್ಯ ಪ್ರೇಮ ಅಪಾರವಾದುದು. ಅವರು ಕರ್ನಾಟಕದ ಜನತೆಯಲ್ಲಿ ಸಾಹಿತ್ಯ, ಸಂಸ್ಕೃತಿಯನ್ನು ಬೆಳಸುವುದರಲ್ಲಿ ಅತಿಶಯವಾಗಿ ದುಡಿದರು. ಅವರು ಪರಿಷತ್ತಿನ ಅಧ್ಯಕ್ಷ ಸ್ಥಾನಕ್ಕೆ ಅಭ್ಯರ್ಥಿಯಾಗಿ ನಿಂತಾಗ ಪ್ರತಿಸ್ಪರ್ಧಿಗಳು ಅವರು ಸಾಹಿತಿಯಲ್ಲ, ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸ್ಥಾನಕ್ಕೆ ಅಭ್ಯರ್ಥಿಯಾಗಲು ಅವರಿಗೆ ಅರ್ಹತೆಯಿಲ್ಲ ಎಂದು ಆಕ್ಷೇಪಣೆ ಎತ್ತಿದರು. ಚುನಾವಣಾಧಿಕಾರಿಗಳು ಆಕ್ಷೇಪಣೆಯನ್ನು ತಳ್ಳಿಹಾಕಿದರು. ಅವರ ಅಭ್ಯರ್ಥಿತನ ಸ್ವೀಕಾರವಾಯಿತು. ಚುನಾವಣೆಯಲ್ಲಿ ಗೆದ್ದು ಬಂದರು.

ಚುನಾವಣಾಧಿಕಾರಿಗಳು ಪ್ರತಿಪಕ್ಷದ ಅಥವಾ ವಿರೋಧಿ ಅಭ್ಯರ್ಥಿಯ ಆಕ್ಷೇಪಣೆಗಳನ್ನು ತಳ್ಳಿ ಹಾಕುವುದಕ್ಕೆ ಕೊಟ್ಟ ಕಾರಣಗಳೇನು ? ಶ್ರೀ ಜಿ. ನಾರಾಯಣ ಸಾಹಿತಿ ಎಂದು ಸಾಬೀತಾಯಿತೆ ? ಎಂಬ ಪ್ರಶ್ನೆಗಳನ್ನು ಚುನಾವಣಾಧಿಕಾರಿಗಳು ಕೂಲಂಕಷವಾಗಿ ವಿಚಾರ ಮಾಡಿ ಅವರು ಸಾಹಿತಿ ಎಂದು ಒಪ್ಪಿಕೊಂಡರು. ಆಗ ಅವರಿಗೆ ಆ ನಿರ್ಧಾರಕ್ಕೆ ಬರಲು ಅನೇಕ ಸಂಗತಿಗಳು ಮನದಟ್ಟಾಗಿರಬಹುದು. ಅವುಗಳಲ್ಲಿ ಒಂದು ಅವರು ವಿನೋದ ಪತ್ರಿಕೆಯ ಸಂಪಾದಕರಾಗಿ ಹಾಸ್ಯ ಸಾಹಿತ್ಯಕ್ಕೆ ಮೀಸಲಾದ ಒಂದು ಪತ್ರಿಕೆ ಹೊರಡಿಸಿದ್ದುದು. ಅವರು ಕಾರ್ಪೊರೇಷನ್ ಮೇಯರ್ ಆಗಿ ನೀಡಿದ ಅರ್ಥಪೂರ್ಣವಾದ ಭಾಷಣಗಳು. ಇದರ ಜೊತೆಗೆ ಅವರು ಕಾಂಗ್ರೆಸ್‌ನ ಮುಖವಾಣಿಯಾದ 'ವಾರ್ತಾ' ಪತ್ರಿಕೆಯ ವ್ಯವಸ್ಥಾಪಕರಾಗಿದ್ದರು ಮತ್ತು ಆ ವೇಳೆಗೆ ಅವರು ಅನಕ್ಷರತೆಯ ನಿವಾರಣೆಗೆ, ಕಬ್ಬು ಬೆಳೆಯುತ್ತಿದ್ದ ರೈತರ ಸಂಘಟನೆಗೆ, ಮಲೇರಿಯಾ ಜ್ವರದ ಘೋರ ಸ್ವರೂಪದ ಬಗ್ಗೆ ವಿವರಿಸಿ ಹೇಳುವ ಸಾಹಸಕ್ಕೆ ಶ್ರಮಿಸುತ್ತಿದ್ದಾಗ ಬರೆದು ಪ್ರಕಟಿಸಿದ ಕೆಲವು ಸಣ್ಣ ಸಣ್ಣ ಹೊತ್ತಿಗೆಗಳು.

ಈ ಪುಸ್ತಕಗಳ ಪರಿಚಯ ಈಗ ಅನೇಕರಿಗೆ ತಿಳಿದಿಲ್ಲ. ಬಹುಶಃ ಲೇಖಕರಿಗೂ ಇವನ್ನು ನಾನು ಬರೆದಿದ್ದೆನೇ

ಎನ್ನುವ ಸಂಶಯವೂ ಬರುವಷ್ಟು ಅವು ಹಳೆಯವಾಗಿವೆ. ಅವುಗಳ ಪ್ರತಿಗಳು ಇಂದು ದೊರಕುತ್ತಿಲ್ಲ. ಅವರು 'ಅಕ್ಷರವ ನೀವ್ ಕಲಿಯಿರಿ.' 'ಮಲೇರಿಯಾ ಹಾವಳಿ' 'ಕಬ್ಬಿನ ಕಥಾಂತರ' 'ರಾಷ್ಟ್ರೀಯ ಪದಗಳು' 'ಹೆಚ್ಚು ಬೆಳೆಯನು ಬೆಳೆಯಿರಿ' ಎಂಬ ವಿಷಯವಾಗಿ ನವೋದಯ ಸಾಹಿತ್ಯದಲ್ಲಿ ಬಳಕೆಯಲ್ಲಿದ್ದ ಛಂದಸ್ಸಿನಲ್ಲಿ ಪದ್ಯಗಳನ್ನು ಬರೆದು ಸಣ್ಣ ಸಣ್ಣ ಹೊತ್ತಿಗೆಗಳಾಗಿ ಪ್ರಕಟಿಸಿ ತಮ್ಮ ಗುರಿಯನ್ನು ಸಾಧಿಸಿಕೊಂಡಿದ್ದಾರೆ. ಈ ಕವಿತಾ ರಚನೆಯ ಉದ್ದೇಶ ಕಾವ್ಯದ ಆನಂದವನ್ನು ಉಣಿಸುವುದಲ್ಲವಾದರೂ ಜನರಿಗೆ ತಿಳಿವಳಿಕೆ ಹೇಳುವುದು, ಸಮಸ್ಯೆಯನ್ನು ಅವರಿಗೆ ಅರ್ಥವಾಗುವಂತೆ ವಿವರಿಸುವುದು. ಇದೊಂದು ರೀತಿಯ ಪ್ರಚಾರ ಸಾಹಿತ್ಯ. ಸ್ವಾತಂತ್ರ್ಯ ಹೋರಾಟದಲ್ಲಿ 'ಲಾವಣಿ'ಗಳ ಪಾತ್ರ ಎಂಥದಿತ್ತೋ ಅಂಥ ಪಾತ್ರವನ್ನು ನಿರ್ವಹಿಸುವ ಪ್ರಯತ್ನವೇ ಈ ಬರಹದ್ದೂ ಕೂಡ. ಅವರ ಪುಸ್ತಕಗಳು ತಲೆಬರಹವೇ ಹೇಳುವಂತೆ ವಿಷಯಗಳು ಅಂದಿನ ಸಮಾಜದ ಜೀವಂತ ಸಮಸ್ಯೆಗಳಾಗಿದ್ದವು. ಅವುಗಳನ್ನು ವಿಶ್ಲೇಷಿಸಿ, ಅದರ ಪರಿಹಾರೋಪಾಯವನ್ನು ಕಂಡುಕೊಳ್ಳುವಂತೆ ಮಾಡಿದ ಯತ್ನ ಸಾಧಾರಣವಾದುದೇನೂ ಅಲ್ಲ. ಅವರೇ ಹೇಳುವಂತೆ ಈ ಹೊತ್ತಿಗೆಗಳಲ್ಲಿರುವ ಪದ್ಯಗಳನ್ನೆಲ್ಲ ಅವರು ರಾಗವಾಗಿ ನೂರಾರು ಜನ ಸೇರಿದ ಸಭೆಗಳಲ್ಲಿ ಓದಿ ಅವರಿಂದ ಭೇಷ್ ಎನ್ನಿಸಿಕೊಂಡರಂತೆ. ಜನ ಮತ್ತು ಸರ್ಕಾರ ಅವರ ಪುಸ್ತಕಗಳನ್ನು ಕೊಂಡು ಅವರಿಗೆ ಲಾಭವನ್ನು ತಂದುಕೊಟ್ಟರಂತೆ. ಜನ ಮನದ ತಳವನ್ನು ಮುಟ್ಟುವ ಬರಹ ಸಾಹಿತ್ಯವಾಗದೆ ಮತ್ತಾವ ಬರವಣಿಗೆ ಸಾಹಿತ್ಯವಾದೀತು ?

'ಅಕ್ಷರವ ನೀವ್ ಕಲಿಯಿರಿ' ನೂರು ಪದ್ಯದ ಒಂದು ಸಂಕಲನ. ಸಾಹಿತ್ಯಶಾಸ್ತ್ರದ ಪ್ರಕಾರ ಹೇಳುವುದಾದರೆ ಇದೊಂದು ಶತಕ. ದೊಡ್ಡ ದೊಡ್ಡ ಕವಿಗಳು ಶತಕವನ್ನು ರಚಿಸಿದ್ದಾರೆ. ಅವುಗಳಲ್ಲಿ ಆತ್ಮ ನಿವೇದನೆ ಇರಬಹುದು. ದೇವತಾಮಹಿಮೆ ಅಥವಾ ಸ್ತೋತ್ರವಿರಬಹುದು. ಪ್ರಾರಂಭದಲ್ಲಿ ಕಡೆಯಲ್ಲಿ ದೇವತಾಸ್ತುತಿಯಿರಬಹುದು. ಆದರೆ ಇಲ್ಲಿ ಪ್ರಾರ್ಥನಾ ಅಥವಾ ಮಂಗಳ ಪದ್ಯ ಇಲ್ಲ. ನೇರವಾಗಿ ವಿಷಯಕ್ಕೆ ಪ್ರವೇಶಿಸುತ್ತಾರೆ. ಅವರ ಕಿರು ಪದ್ಯಗಳು ಆಗ ಜನಪ್ರಿಯವಾಗಿದ್ದ ಗೋವಿನ ಹಾಡಿನ ಧಾಟಿಯಲ್ಲಿವೆ. ಈ ಚೌಪದಿ ಗೋವಿನ ಹಾಡಿನಿಂದ ಜನಾಕರ್ಷಣೀಯವಾಗಿತ್ತು. ಅದನ್ನೇ ಇವರು ಬಳಸಿಕೊಂಡರು. ಪದ್ಯದ ನಾಲ್ಕನೆಯ ಪಾದ ಎಲ್ಲ ಪದಗಳಲ್ಲೂ ಒಂದೇ. ಲೇಖಕರು ಸಭೆಯಲ್ಲಿ ಅದನ್ನು ವಾಚನಮಾಡುವಾಗ, ಪದ್ಯದ ಮೂರು ಸಾಲನ್ನು ತಾವು ಹಾಡಿ, ನಾಲ್ಕನೆಯ ಸಾಲನ್ನು ಸಭಿಕರು ಹೇಳುವಂತೆ ಮಾಡುತ್ತಿದ್ದರಂತೆ. 'ಅಕ್ಷರವ ನೀವ್ ಕಲಿಯಿರಿ' ಎಂದು ಒಬ್ಬ ಇನ್ನೊಬ್ಬನಿಗೆ ಹೇಳಿದಂತೆ. ಪದ್ಯಗಳ ಓಟ ತೊಡರಿಲ್ಲದಂತೆ ಹರಿದು ಬರುತ್ತದೆ.

ಈ ಶತಕದ ಮೊದಲ ಪದ್ಯ ಹೀಗಿದೆ. :

ಓದು ಬರಹದ ಜ್ಞಾನ ಪಡೆಯಲು
ಭೇದಬಾವವನಳಿದು ಬದುಕಲು
ಸ್ವದೇಶ ಸೇವೆಯ ಕಾರ್ಯ ನಡೆಸಲು
ಅಕ್ಷರವ ನೀವ್ ಕಲಿಯಿರಿ !

ಇಲ್ಲಿ 'ಓದು ಬರಹ'ದ ಬಗ್ಗೆ ತಿಳಿವಳಿಕೆ ನೀಡುವುದೇ ಸಂಕಲನದ ಪದ್ಯಗಳ ಗುರಿ. ಇಲ್ಲಿ ಅನಕ್ಷರತೆಯಿಂದ ಒದಗುವ ಕಷ್ಟ ಸಂಕಟಗಳನ್ನು ವಿವರಿಸುತ್ತಾ ಅಕ್ಷರ ಕಲಿಕೆಯಿಂದ ಓದು, ಓದಿನಿಂದ ಜ್ಞಾನ ಸಂಪಾದನೆ, ಜ್ಞಾನದಿಂದ ಬದುಕಿನಲ್ಲಿ ಸುಖ ಎಂಬ ವಿಚಾರಗಳನ್ನು ಹಳ್ಳಿಗರ ಮಾತಿನಲ್ಲೇ ವಿವರಿಸುತ್ತಾರೆ.

ಸಮಾಜ ಸಾಗುತ್ತಿರುವ ದಾರಿ ಎತ್ತ ಕಡೆಗೆ ನಡೆದಿದೆ ? ನೀತಿ ಲೋಕದಿ ಮೀರುತಿರುವುದು। ಕೂತಜಾಗವೆ ಕದಲುತಿರುವುದು। ಭೀತಿ ಲೋಕದಿ ಹೆಚ್ಚುತಿರುವುದು। ಅಕ್ಷರವ ನೀವು ಕಲಿಯಿರಿ !

ಪ್ರತಿಯೊಬ್ಬನೂ ವಿದ್ಯಾವಂತನಾಗಬೇಕು. ವಿದ್ಯೆಯು ನಮ್ಮನ್ನು ಉದ್ಧಾರ ಮಾಡುವ ತಾಯಿತಂದೆ, ಬಂಧುಬಳಗ.

ವಿದ್ಯೆಯೇ ನಮ್ಮ ತಾಯಿತಂದೆ। ವಿದ್ಯೆಯೇ ನಮ್ಮ ಬಂಧುಬಳಗ। ವಿದ್ಯೆಯೇ ನಮ್ಮ ಸರ್ವಸಾಧನ। ಅಕ್ಷರವ ನೀವು ಕಲಿಯಿರಿ !

'ಸತ್ಯವೇ ನಮ್ಮ ತಾಯಿ ತಂದೆ' ಎಂಬ ಗೋವಿನ ಪದ್ಯವೇ ಇಲ್ಲಿ ರೂಪಾಂತರಗೊಂಡು ಬಂದಿರಬಹುದು. ವಿದ್ಯೆ ಸತ್ಯಕ್ಕೆ ಸಮ ಎಂದು ಹೇಳುವುದು ಒಂದಾದರೆ, ಆ ಪದ್ಯ ಜನರಿಗೆ ಬಹುಬೇಗ ಅರ್ಥವಾಗುತ್ತದೆ ಎಂಬುದು ಇನ್ನೊಂದು.

ವಿಷಯದ ನೇರ ನಿರೂಪಣೆ ಈ ಪದ್ಯದಲ್ಲಿದೆ: ಅನಕ್ಷರತೆಗಿಂ ಶತ್ರುವಿಲ್ಲವು। ಅನಕ್ಷರತೆಗಿಂ ನರಕ ವಿಲ್ಲವು। ಅನಕ್ಷರತೆಯೆ ಭಾರಿ ಶತ್ರುವು। ಅಕ್ಷರವ ನೀವು ಕಲಿಯಿರಿ!

ಜಾಡಮಾಲಿಗು ಬೇಕು ವಿದ್ಯೆಯು। ಬೂಟು ಹೊಲಿ ವಗು ಬೇಕು ವಿದ್ಯೆಯು। ನಾಟ್ಯವಾಡಲು ಬೇಕು ವಿದ್ಯೆಯು। ಅಕ್ಷರವ ನೀವು ಕಲಿಯಿರಿ!

ಶ್ರೀ ನಾರಾಯಣ ಅವರು ಬೆಳಗಾಂ ಜೈಲಿನಲ್ಲಿ ಕೆಲವು ತಿಂಗಳು ಸ್ವಾತಂತ್ರ್ಯ ಹೋರಾಟದಲ್ಲಿ ಪಡೆದ ಶಿಕ್ಷೆಯನ್ನು ಅನುಭವಿಸುತ್ತಿದ್ದಾಗಲೂ ಕೆಲವು ಪದ್ಯಗಳನ್ನು ರಚಿಸಿದರು. ಅವನ್ನು ರಾಷ್ಟ್ರೀಯ ಪದಗಳೆಂದು ಕರೆದಿದ್ದಾರೆ. ಅವು 'ಪರಮಾತ್ಮಾ ಹರೆ' 'ಶ್ರೀ ಮಾಧವ ದೇವ ಬಾ ಕೇಳು ದೇವ' 'ಹಾ ಪ್ರಿಯ ಪ್ರಶಾಂತಹೃದಯ, 'ಪಾವನ ನಾಮ' ಎಂಬ ಪ್ರಸಿದ್ಧ ಹಾಡುಗಳ ಧಾಟಿಯಲ್ಲಿವೆ. ಇಂಥ ಹಾಡುಗಳು ನಾಟಕದ ಹಾಡುಗಳಾಗಿ ಪ್ರಸಿದ್ಧವಾಗಿದ್ದುವು. ಇಲ್ಲಿ ಕವಿಯ ಉದ್ದೇಶ 'ದೇಶಭಕ್ತಿ'ಯ ಮಹತ್ವವನ್ನು ತಮ್ಮ ಸಹವಾಸಿಗಳಿಗೆ ಮತ್ತು ತಾವು ಯಾರ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದರೋ ಅವರಿಗೆ ರಾಷ್ಟ್ರದ ಪಾರತಂತ್ರ್ಯದ ಸ್ಥಿತಿಯನ್ನು ಅರಿವುಮಾಡಿಕೊಡುವುದೇ ಆಗಿತ್ತು.

'ವೀರ ಜವಹರ ಶೂರ ಸುಭಾಷ ಧೀರ ಮೋಹನ ಗಾಂಧಿಯರು। ಹೋರುತ ಬಿಳಿಯರೊಳ್ ಸಾರಿ ಸ್ವರಾಜ್ಯವ ಸೇರಿ ಬಂದರು। ಸೆರೆಮನೆಯ ಎಂದು ಲೋಕದ ಜನಗಳ ಹೃದಯದಿ ನಿನ್ನ ಮಹಿಮೆಯ ಚಲ್ವೆ। ಇಂದಿರಾಪತಿ ಗೋವಿಂದನೆ ಸಲಹೊ ಬಂಧ ಹರಿಸಿ ಭಾರತಿಯ ॥

ಮತ್ತೊಂದು ಗೀತೆ ಲಾವಣಿಯ ರೂಪದಲ್ಲುಂಟು. 'ನಾವು ಮತ್ತು ನಮ್ಮವರು' ಎಂದು ಅದರ ತಲೆಕಟ್ಟು. ಅದರ ರಚನೆಯ ಸೊಗಸು ಹೀಗಿದೆ:

ದೇಶ ಸೇವೆ ಮಾಡ್ವರಾರ್ ।
ಈಶ ಸೇವೆ ಗೈಯ್ವರಾರ್ ।
ದೇಶಕಾಗಿ ಸಾಯ್ವರಾರ್ ।
ನಾವಲ್ಲವೇ ನಮ್ಮ ಜನರಲ್ಲವೇ ?

* * *

ಆಗು ಹೋಗು ಜೇಡ್ವರಾರ್ ।
ಭೋಗ ದಿನವು ಪಡುವರಾರ್ ।
ರಾಗದಿಂದ ಮೆರೆವರಾರ್ । ನಾವಲ್ಲವೇ... ... ?

* * *

ಲಂಚ ಲಂಚವೆನ್ನುವರಾರ್ ।
ಲಂಚಕ್ಕೈಯ್ಯ ಒಡ್ಡುವರಾರ್ ।
ಲಂಚು ಕೊಟ್ಟು ಕೆಟ್ಟವರಾರ್ । ನಾವಲ್ಲವೇ... ... ?

ಇವರು ಹೀಗೆ ಜನದ ಅಂದಿನ ಬದುಕಿನ ನಿಜಸ್ಥಿತಿಯನ್ನು ತಮ್ಮ ಈ ಸುಡಿಗಳಲ್ಲಿ ಮನಮುಟ್ಟುವಂತೆ ಚಿತ್ರಿಸಿದ್ದಾರೆ. ಮಂಡ್ಯ ಸಕ್ಕರೆಕಂಪೆನಿಯಿಂದ ಕಬ್ಬುಬೆಳೆಗಾರರಿಗೆ ಆಗಿದ್ದ ಅನ್ಯಾಯ ತೊಂದರೆ, ಮಂಡ್ಯದ ಜನ ಅನುಭವಿಸುತ್ತಿದ್ದ ಮಲೇರಿಯಾ ರೋಗದ ಹಾವಳಿ, 'ಹೆಚ್ಚು ಬೆಳೆ ಬೆಳೆಯಿರಿ' ಮೊದಲಾದ ವಿಷಯಗಳನ್ನು ಕುರಿತು ಕವಿತೆಗಳನ್ನು ರಚಿಸಿದ್ದಾರೆ. 'ಅಕ್ಷರವ ನೀವ್ ಕಲಿಯಿರಿ' ಧಾಟಿಯಲ್ಲೇ ರಚಿತವಾಗಿರುವ ಪದ್ಯ 'ಹೆಚ್ಚು ಬೆಳೆಯನು ಬೆಳೆಯಿರಿ'.

ಅನ್ನಾಭಾವವೆ ಎಲ್ಲ ಕಲಹವು
ಅನ್ನಾಭಾವವೆ ಎಲ್ಲ ಇಸಂಗಳು
ಅನ್ನಾಭಾವವೆ ಭಾರಿ ಕ್ಷಾಮವು
ಹೆಚ್ಚು ಬೆಳೆಯನು ಬೆಳೆಯಿರಿ!

ಓದಿ ಬಂದವರೆಲ್ಲ ಪದವಿಯ। ಮಾಡಬೇಕೆಂಬಾಸೆ ಬಿಟ್ಟು। ಮೋದದಿಂದಲಿ ಹಳ್ಳಿ ಸೇರಿ। ಹೆಚ್ಚು ಬೆಳೆಯನು ಬೆಳೆಯಿರಿ!

ಹೊರಗಿನಿಂದ ತರುವ ದವಸಕೆ। ತೆರುವ ಹಣವದು ಕಡಮೆಯಲ್ಲವು। ಸರಿದು ಹೋಗ್ವದು ಕೋಟಿಗಟ್ಟಲೆ। ಹೆಚ್ಚು ಬೆಳೆಯನು ಬೆಳೆಯಿರಿ!

ಸಮಾಜ ಪ್ರಜ್ಞೆಯಿಂದ ಸಾಮಾಜಿಕ ಸಮಸ್ಯೆಗಳನ್ನು ವಸ್ತುವನ್ನಾಗಿಟ್ಟುಕೊಂಡು ರಚಿಸಿದ ಅವರ ಹಾಡುಗಳು ಅವುಗಳ ಗುರಿಸಾಧನೆಯನ್ನು ಯಶಸ್ವಿಯಾಗಿ ಸಾಧಿಸಿದವಲ್ಲದೆ, ಜನರಲ್ಲಿ ಕಾಲಪ್ರಜ್ಞೆಯನ್ನು ಉಂಟುಮಾಡಿದವೆಂದು ಹೇಳುವುದರಲ್ಲಿ ಸಂಶಯವಿಲ್ಲ. ಸಾಹಿತ್ಯದ ಒಂದು ಗುರಿ ಇಲ್ಲಿ ಸಾರ್ಥಕವಾಗಿ ಸಫಲಗೊಂಡಿದೆ ಎಂಬುದು ನಿರ್ವಿವಾದ.

ಜಾಹೀರಾತು

ಜಿ. ನಾರಾಯಣ ಅವರ ಅಭಿನಂದನ ಸಮಾರಂಭಕ್ಕೆ

ಹಾರ್ದಿಕ ಶುಭಾಶಯಗಳು

ಜಿ. ನಾರಾಯಣ ಅವರ ಅಭಿನಂದನ ಸಮಾರಂಭಕ್ಕೆ
ಹಾರ್ದಿಕ ಶುಭಾಶಯಗಳು

○

ಕಲಾಭಿಮಾನಿಗಳಾದ

ಶ್ರೀ ಡಿ. ದಾಸಪ್ಪ, ಡಾ|| ಡಿ. ರಾಮಚಂದ್ರಪ್ಪ

ಮತ್ತು

ಶ್ರೀ ಡಿ. ಜಯರಾಜು

○

ಪಾಲುದಾರರು :

ಮೆಜೆಸ್ಟಿಕ್ ಚಿತ್ರಮಂದಿರ

ಮೆಜೆಸ್ಟಿಕ್ ಸರ್ಕಲ್, ಬೆಂಗಳೂರು–560 009

ಜಿ. ನಾರಾಯಣ ಅಭಿನಂದನ ಸಮಾರಂಭಕ್ಕೆ
ಹಾರ್ದಿಕ ಶುಭಾಶಯಗಳು

○

ಕಲಾಭಿಮಾನಿಗಳಾದ

ಶ್ರೀ ಡಿ. ದಾಸಪ್ಪ, ಡಾ|| ಡಿ. ರಾಮಚಂದ್ರಪ್ಪ

ಮತ್ತು

ಶ್ರೀ ಡಿ. ಜಯರಾಜು

○

ಪಾಲುದಾರರು :

ಆದರ್ಶ ಚಿತ್ರಮಂದಿರ

ಅಲಸೂರು, ಬೆಂಗಳೂರು–560 008

ಜಿ. ನಾರಾಯಣ ಅವರ ಅಭಿನಂದನ ಸಮಾರಂಭಕ್ಕೆ

ಹಾರ್ದಿಕ ಶುಭಾಶಯಗಳು

●

ಕಲಾಭಿಮಾನಿಗಳಾದ

ಶ್ರೀ ಡಿ. ದಾಸಪ್ಪ, ಡಾ|| ಡಿ. ರಾಮಚಂದ್ರಪ್ಪ

ಮತ್ತು

ಶ್ರೀ ಡಿ. ಜಯರಾಜು

●

ಪಾಲುದಾರರು :

ಶ್ರೀ ವಿನಾಯಕ ಚಿತ್ರಮಂದಿರ

ಮತ್ತು

ಶ್ರೀ ರಂಗನಾಥ (ಮಿನಿ) ಚಿತ್ರಮಂದಿರ

ನ್ಯೂಸೂರು ರಸ್ತೆ, ಬೆಂಗಳೂರು-560 018

ಜಿ. ನಾರಾಯಣ ಅಭಿನಂದನ ಸಮಾರಂಭಕ್ಕೆ

ಹಾರ್ದಿಕ ಶುಭಾಶಯಗಳು

•••

ಸೊಂಡೂರು ಮ್ಯಾಂಗನೀಸ್
ಅಂಡ್
ಅಯರ್ನ್ ಓರ್ಸ್ ಲಿ.,

ಸೊಂಡೂರು, ಬಳ್ಳಾರಿ ಜಿಲ್ಲೆ

ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗೆ ವ್ಯಾಪಕ ಕಾರ್ಯಕ್ರಮ

ಕರ್ನಾಟಕದಲ್ಲಿ ಸಣ್ಣ ಕೈಗಾರಿಕೆ, ಗುಡಿ ಕೈಗಾರಿಕೆ, ಕೈಮಗ್ಗ ಮತ್ತು ಕರಕುಶಲ ಕೈಗಾರಿಕೋದ್ಯಮಗಳ ಅಭಿವೃದ್ಧಿಗಾಗಿ ಹೊಸ ಉತ್ತೇಜಕ ವಾತಾವರಣ ಕಲ್ಪಿತವಾಗಿದೆ.

1984-85ನೇ ಸಾಲಿಗಾಗಿ ಸಣ್ಣ ಹಾಗೂ ಗೃಹ ಕೈಗಾರಿಕೆಗಳ ಅಭಿವೃದ್ಧಿ ಸಾಧಿಸಲು ಅನೇಕ ಆಶಾದಾಯಕವಾದ ಹೊಸ ಯೋಜನೆಗಳನ್ನು ರೂಪಿಸಲಾಗಿದೆ.

ಯೋಜನೆಗಳು, ಆಸಕ್ತ ಕೈಗಾರಿಕೋದ್ಯಮಿಗಳಿಗೆ ಆರ್ಥಿಕ ಸಹಾಯ ಮತ್ತು ತಾಂತ್ರಿಕ ಜ್ಞಾನವನ್ನು ಸಹ ಒದಗಿಸುತ್ತವೆ.

ಈ ಯೋಜನೆಗಳು :

1. 1985ನೇ ಡಿಸೆಂಬರ್ ತಿಂಗಳ ವೇಳೆಗೆ 36 ಕೋಟಿ ರೂ. ವೆಚ್ಚದಲ್ಲಿ 1510 ಕೈಗಾರಿಕಾ ಷೆಡ್ಡುಗಳನ್ನು ನಿರ್ಮಿಸಲಾಗುವುದು. ಕಳೆದ 20 ವರ್ಷಗಳಲ್ಲಿ 120 ಕೋಟಿ ರೂ. ವೆಚ್ಚದಲ್ಲಿ 2000 ಕೈಗಾರಿಕಾ ಷೆಡ್ಡುಗಳನ್ನು ಮಾತ್ರ ನಿರ್ಮಿಸಲಾಗಿತ್ತು.
2. ಔಷಧಿಗಳು, ಚರ್ಮ ಮತ್ತು ಕೈಗಾರಿಕಾ ಸಲಕರಣೆಗಳು ಮುಂತಾದವುಗಳಿಗೆ ಸಕ್ರಿಯ ಕೈಗಾರಿಕಾ ಎಸ್ಟೇಟುಗಳನ್ನು ಸ್ಥಾಪಿಸಲಾಗುವುದು.
3. ಸಣ್ಣ ಕೈಗಾರಿಕೆಗಳ ಮಾರಾಟ ನಿಗಮದ ನಿರ್ಮಾಣ.
4. ಕೈಮಗ್ಗ ತಾಂತ್ರಿಕ ಸಂಸ್ಥೆಯ ಸ್ಥಾಪನೆ.
5. ರಾಜ್ಯದ ನಾರು ಅಭಿವೃದ್ಧಿ ನಿಗಮದ ಸ್ಥಾಪನೆ.
6. ಚರ್ಮ ತಾಂತ್ರಿಕ ಸಂಸ್ಥೆಯ ಸ್ಥಾಪನೆ.
7. ಪ್ರಾಥಮಿಕ ಸಹಕಾರಿ ಕೈಮಗ್ಗ ಸಂಘಗಳ ಎಲ್ಲ ನೇಕಾರ ಸದಸ್ಯರುಗಳಿಗೂ ಈಗ ಅನ್ವಯವಾಗುತ್ತಿರುವ ಉಳಿತಾಯ ಕಾಣಿಕೆ ನಿಧಿ ಯೋಜನೆಯನ್ನು (Contributory thrift fund scheme) ಕೈಗಾರಿಕಾ ಅಭಿವೃದ್ಧಿ ನಿಗಮಕ್ಕೆ ವಿಸ್ತರಿಸುವುದು.
8. ವಿದೇಶಗಳಲ್ಲಿ ವಾಸಿಸುತ್ತಿರುವ ಭಾರತೀಯರಿಗಾಗಿಯೇ ಪ್ರತ್ಯೇಕ ಕೈಗಾರಿಕಾ ವಲಯಗಳ ಅಭಿವೃದ್ಧಿ.

ಕರ್ನಾಟಕ ವಾರ್ತೆ

ಎಸ್. ಜಿ. ಎಂ. ಮುದ್ರಣ (ಪ್ರೈ.) ಲಿಮಿಟೆಡ್ ಬಿ.27 ಫೋನ್ : 226469